ವಿಶ್ವವಾಣಿ

ವಿಶ್ವಾಸವೇ ವಿಶ್ವ

ಬಿಡುವು

ಬಲಿಪಾಡ್ಯಮಿ ನಿಮಿತ್ತ ನವೆಂಬರ್ 2 ರಂದು ನಮ್ಮ ಕಾರ್ಯಾಲಯಕ್ಕೆ ಬಿಡುವು ಇರುವುದರಿಂದ ಭಾನುವಾರದ ಸಂಚಿಕೆ ಪ್ರಕಟಗೊಳ್ಳುವುದಿಲ್ಲ, ವಾರಾಂತ್ಯಕ್ಕೆ ಪತ್ರಿಕೆ ಇಲ್ಲ ಎಂದು ಚಿಂತಿಸಬೇಡಿ, ಕ್ಷಣಕ್ಷಣದ ಸುದ್ದಿಗಳು, ವಿಡಿಯೊಗಳು www.vishwavani.news ಹಾಗೂ vishwavanitv ಯುಟ್ಯೂಬ್ ಚಾನೆಲ್ ಮೂಲಕ ಲಭ್ಯ.

ಶುಭಾಶಯಗಳು

ನಮ್ಮೆಲ್ಲ ಓದುಗರು, ಜಾಹೀರಾತುದಾರರು, ಏಜೆಂಟರು ಹಾಗೂ ಹಿತೈಷಿಗಳಿಗೆ ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು.

ವಿಧಾನಸೌಧದ ಮುಂಭಾಗದಲ್ಲಿ ಶುಕ್ರವಾರ ನಡೆದ 69ನೇ ಕರ್ನಾಟಕ ರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಡಾ.ಜಿ.ಪರಮೇಶ್ವರ್, ಶಿವರಾಜ್ ತಂಗಡಗಿ ಮತ್ತಿತರರು ಇದ್ದರು.

ಪುಟ ತೆರೆದಂತೆ...

ಭಾರತದ ಶ್ರೀಮಂತ ಧರ್ಮ ಇಸ್ಲಾಂ

ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ

ಸಂ.ಪುಟ | 6

ಪ್ರಾಣಾಯಾಮವೆಂಬ ಪಯಣದ ಪ್ರಾರಂಭ

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ
ಡಾ.ಸಾಧನಶ್ರೀ

ಸಂ.ಗಮ | 7

ಮಾತಂದ್ರೆ ಮಾತು

ಕೇಂದ್ರ ಸರಕಾರದ ಅವೈಜ್ಞಾನಿಕ ತೆರಿಗೆ ನೀತಿಯಿಂದಾಗಿ 100 ರು. ತೆರಿಗೆ ಕಟ್ಟುವ ಪ್ರದೇಶಕ್ಕೆ ವಾಪಸ್ 333 ರು. ಹೋಗುತ್ತಿದೆ. ಕರ್ನಾಟಕಕ್ಕೆ 12 ಪೈಸೆ ಮಾತ್ರ ವಾಪಸ್ ಬರುತ್ತಿದೆ. ಕೇಂದ್ರದಿಂದ ವಾಪಸ್ ಬರುವ ಹಣದ ವಿಚಾರದಲ್ಲಿ ಮಲತಾಯಿ ಧೋರಣೆ ಮಾಡುತ್ತಿದೆ. ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆಯಾದರಂತೂ ದಕ್ಷಿಣದ ರಾಜ್ಯಗಳು ತಮ್ಮ ಧ್ವನಿಯನ್ನೇ ಕಳೆದುಕೊಳ್ಳಲಿವೆ.

– ಪ್ರಿಯಾಂಕ್ ಖರ್ಗೆ
ಸಚಿವ

ಕಲ್ಯಾಣ ಕರ್ನಾಟಕ: ಪ್ರತ್ಯೇಕ ರಾಜ್ಯ ಧ್ವಜಾರೋಹಣ ಯತ್ನ

ವಿವರಪುಟ → 4

ದಾರಿದೀಪೋಕ್ತಿ

ಜೀವನದಲ್ಲಿ ಅಪರೂಪಕ್ಕೊಮ್ಮೆ ಸೋಲುವುದು ಹಿನ್ನಡೆಯೇನಲ್ಲ. ನಿಮ್ಮನ್ನು ಅರಿತುಕೊಳ್ಳಲು, ನಿಮ್ಮ ಸುತ್ತಲಿನವರನ್ನು ಇನ್ನೂ ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಇದು ಸಹಾಯಕ. ನಿಮ್ಮ ಸ್ಥಾನ ಯಾವುದು ಎಂಬುದನ್ನು ಸುತ್ತಲಿನವರು ನಮಗೆ ಚೆನ್ನಾಗಿ ಅರ್ಥ ಮಾಡಿಸುತ್ತಾರೆ.

ವಕ್ರತುಂಡೋಕ್ತಿ

ದೇವರು ಎರಡು ಆಯ್ಕೆಗಳನ್ನು ಕೊಟ್ಟರೆ, ಗ್ಲಾಸ್ ತುಂಬಾ ವೈನ್ ಕೊಡು ಎಂದು ಕೇಳಬೇಕು. ಅದು ಸಾಧ್ಯವಿಲ್ಲ ಅಂದ್ರೆ, ಬಾಟಲಿ ತುಂಬಾ ವೈನ್ ಕೊಡು ಎನ್ನಬೇಕು.

ಫನ್‌ತರಂಗ

- ರಘುಪತಿ ಶೃಂಗೇರಿ -

ಪುಡಾರಿ ಮನೆಯಲ್ಲಿ ಪಟಾಕಿ



ಕನ್ನಡ ರಾಜ್ಯೋತ್ಸವ ದಿನಾಚರಣೆಯಲ್ಲಿ ಸಿಎಂ ಗುಡುಗು

ನಾಡದ್ರೋಹ ಸಹಿಸಲ್ಲ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಕರ್ನಾಟಕದಲ್ಲಿ ಕನ್ನಡಿಗನೇ ಸಾರ್ವಭೌಮ. ನಾಡು-ನುಡಿಗೆ ಅವಮಾನ, ಅವಹೇಳನ ಮಾಡುವವರ ವಿರುದ್ಧ ಯಾವುದೇ ಮುಲಾಜಿಲ್ಲದೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು. ಪರಭಾಷಿಕರಿಗೂ ನಮ್ಮ ಭಾಷೆ ಕಲಿಸಿ ಕನ್ನಡ ವಾತಾವರಣ ನಿರ್ಮಿಸೋಣ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಶಿಕ್ಷಣ ಇಲಾಖೆ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವದ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾಡು-ನುಡಿ, ನೆಲ-ಜಲ ರಕ್ಷಣೆಗೆ ಸರಕಾರ ಸದಾ ಬದ್ಧವಾಗಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಕನ್ನಡಿಗರನ್ನು, ಕನ್ನಡವನ್ನು ಹೀಯಾಳಿಸುವ ಪ್ರವೃತ್ತಿ ಬೆಳೆಯುತ್ತಿದ್ದು, ಇದು ನಾಡದ್ರೋಹ. ಕನ್ನಡಿಗರನ್ನು ಅವಹೇಳನ ಮಾಡುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಗುಡುಗಿದರು.

ಕನ್ನಡ ಬದುಕಿನ ಭಾಷೆ ಮಾಡಿಕೊಳ್ಳಿ: ಡಿಸಿಎಂ ಡಿ.ಕೆ.ಶಿವಕುಮಾರ್ ಮಾತನಾಡಿ, ಕನ್ನಡ ಭಾಷೆ ಬದುಕಿನ ಭಾಷೆಯಾಗಿ ಮಾಡುವುದೇ ನಮ್ಮ ಗುರಿ. ತಾಯಿ ನಾಡಿಗೆ ಗೌರವ ಸಲ್ಲಿಸುವುದರ ಜತೆಗೆ ಈ ನೆಲಕ್ಕೆ ಕೃತಜ್ಞತೆ ಸಲ್ಲಿಸಿ ಕನ್ನಡದ ಕೀರ್ತಿ ಪತಾಕೆ ಹಾರಿಸಬೇಕು. ಕರ್ನಾಟಕವೇ ನಮ್ಮ ಸ್ವರ್ಗ. ಕನ್ನಡವೇ ನಮ್ಮ ದೇವ ಭಾಷೆ, ತುಂಗೆ, ಭದ್ರೆ, ಕಾವೇರಿ, ಕೃಷ್ಣೆ ನದಿಯೇ ನಮಗೆ ಪುಣ್ಯ ತೀರ್ಥ ಎಂದರು. ರಾಜ್ಯ ಸರಕಾರ ಜಾರಿಗೆ ತಂದಿರುವ ಗ್ಯಾರಂಟಿಯಂತಹ ಜನಪರ ಯೋಜನೆಗಳನ್ನು ಪ್ರತಿಪಕ್ಷಗಳಿಗೆ ಅಧಿಕಾರದಲ್ಲಿದ್ದಾಗ ಜಾರಿ ಮಾಡಲು ಆಗಲಿಲ್ಲ. ಅಕ್ಕ-ತಂಗಿ, ತಂದೆ-ಮಗ, ಅಪ್ಪ-ಮಕ್ಕಳ ನಡುವೆ ಜಗಳ ತಂದಿಟ್ಟು, ಭಾವನೆಗಳ ಮೇಲೆ ಆಟವಾಡುವುದೇ ಅವುಗಳ ಕೆಲಸ. ಹೀಗೆ ಮಾಡಿ ಎಷ್ಟೋ ಮನೆ ಒಡೆದು ಹಾಕಿವೆ. ಪ್ರತಿಪಕ್ಷದವರಿಗೆ ರಾಜಕೀಯ ಹೊರತಾಗಿ ಯಾವ ವಿಚಾರಗಳೂ ಸಿಗುತ್ತಿಲ್ಲ. ಗ್ಯಾರಂಟಿ ಯೋಜನೆ ಸಂಸಾರ ಹಾಳು ಮಾಡುತ್ತವೆ ಎಂದು ಹೇಳಿದ್ದರು. ಆದರೆ ಅವರು ಹೇಳಿದಂತೆ ಆಗಲಿಲ್ಲ. ನಮ್ಮ ಕೆಲಸ ನೋಡಿ, ಹೊಟ್ಟೆಕಿಚ್ಚು ಪಡುತ್ತಿದ್ದಾರೆ ಎಂದರು.

ಸಿಎಂ ಭಾಷಣದ ಮುಖ್ಯಾಂಶಗಳು

- ಕರ್ನಾಟಕ ಮುಂದುವರಿದ ರಾಜ್ಯ. ಹಾಗೆಂದು ರಾಜ್ಯಕ್ಕೆ ಅನ್ಯಾಯ ಮಾಡಬಾರದು. ಹಸು ಹಾಲು ಕೊಡುತ್ತದೆ ಎಂದು ಪೂರಾ ಕರೆದುಕೊಳ್ಳಬಾರದು.
- ನಾವು ಒಕ್ಕೂಟ ವ್ಯವಸ್ಥೆಯಲ್ಲಿ ಇದ್ದೇವೆ ಮತ್ತು ಅದನ್ನು ಒಪ್ಪಿಕೊಂಡಿದ್ದೇವೆ. ಸಂವಿಧಾನವನ್ನೂ ಒಪ್ಪಿಕೊಂಡಿದ್ದೇವೆ. ಹಾಗೆಂದು ನಮಗೆ ಅನ್ಯಾಯವಾದಾಗ ಅದನ್ನು ಎದುರಿಸದೇ ಇರಲಾಗದು.
- 15ನೇ ಹಣಕಾಸು ಆಯೋಗ ರಾಜ್ಯಕ್ಕೆ ಅನ್ಯಾಯ ಮಾಡಿದೆ. ಅದನ್ನು ಸರಿಪಡಿಸಿ ಎಂದು ಕೇಂದ್ರ ಸರಕಾರವನ್ನು ಹಲವು ಬಾರಿ ಕೇಳಿಕೊಂಡರೂ, ನ್ಯಾಯ ದೊರೆಯುತ್ತಿಲ್ಲ.
- ನ್ಯಾಯಯುತವಾದ ಪಾಲನ್ನು ಕೊಡಿ ಎಂದು ಕೇಳುವ ಶಕ್ತಿ ಬೆಳೆಸಿಕೊಂಡಾಗ ಮಾತ್ರ, ಇದೆಲ್ಲಾ ಪರಿಹಾರವಾಗುತ್ತದೆ. ರಾಜ್ಯದಿಂದ ಲೋಕಸಭೆ ಮತ್ತು ರಾಜ್ಯಸಭೆಗೆ ಚುನಾಯಿತರಾಗಿರುವವರು, ಈ ಅನ್ಯಾಯದ ವಿರುದ್ಧ ಸಂಸತ್ತನಲ್ಲಿ ಒಕ್ಕೊರಲಿನಿಂದ ದನಿ ಎತ್ತಬೇಕು.
- ನಮ್ಮ ನಾಡು-ನುಡಿಯನ್ನು ಬಲಿಕೊಟ್ಟು ಉದಾರಿಗಳಾಗಬಾರದು. ಭಾಷಾ ವ್ಯಾಮೋಹ ಅತಿಯಾಗಬಾರದು, ಆದರೆ ಅಭಿಮಾನವನ್ನು ನಾವು ಬಿಟ್ಟುಕೊಡಬಾರದು.

ಕೇಂದ್ರ ಸರಕಾರದಿಂದ ತೆರಿಗೆ ಪಾಲು ಹಂಚಿಕೆಯಲ್ಲಿ ಅನ್ಯಾಯವಾಗುತ್ತಿದ್ದು, ಇದರ ವಿರುದ್ಧ ನಾವೆಲ್ಲರೂ ಒಗ್ಗೂಡಿ ಹೋರಾಟ ನಡೆಸಿ ನ್ಯಾಯ ಪಡೆಯಬೇಕಿದೆ. ಕರ್ನಾಟಕ ರಾಜ್ಯ ಪ್ರತಿ ವರ್ಷ ಕೇಂದ್ರ ಸರಕಾರಕ್ಕೆ 4 ಲಕ್ಷ ಕೋಟಿಗೂ ಹೆಚ್ಚು ತೆರಿಗೆ ನೀಡುತ್ತಿದೆ. ತೆರಿಗೆ ಪಾಲಿನಲ್ಲಿ ಸುಮಾರು 60 ಸಾವಿರ ಕೋಟಿ ಮಾತ್ರ ಬರುತ್ತಿದ್ದು, ತೆರಿಗೆ ಹಂಚಿಕೆಯಲ್ಲಿ ಅನ್ಯಾಯ ಮಾಡುವುದು ಸರಿಯಲ್ಲ. ಅದರೆ ತೆರಿಗೆ ಪಾಲು ಮತ್ತು ಅನುದಾನ ತಾರತಮ್ಯದ ವಿರುದ್ಧ ಹೋರಾಟಕ್ಕೆ ಮುಂದಾದರೆ ಅದಕ್ಕೆ ರಾಜಕೀಯ ಬಣ್ಣ ಕೊಡುತ್ತಾರೆ.

– ಸಿದ್ದರಾಮಯ್ಯ, ಸಿಎಂ

ಅರ್ಥಶಾಸ್ತ್ರಜ್ಞ ಬಿಬೇಕ್ ದೆಬರಾಯ್ ನಿಧನ



ದೆಹಲಿ: ಖ್ಯಾತ ಅರ್ಥಶಾಸ್ತ್ರಜ್ಞ, ಪ್ರಧಾನಿ ನರೇಂದ್ರ ಮೋದಿ ಅವರ ಆರ್ಥಿಕ ಸಲಹಾ ಮಂಡಳಿ ಅಧ್ಯಕ್ಷ ಡಾ.ಬಿಬೇಕ್ ದೆಬರಾಯ್ ಶುಕ್ರವಾರ ಬೆಳಗ್ಗೆ 7 ಗಂಟೆಗೆ (69) ವಿಧಿವಶರಾ ದರು. ಅವರು ಕರುಳಿಗೆ ಸಂಬಂಧಿಸಿದ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದರು ಎಂದು ಮೂಲಗಳು ತಿಳಿಸಿವೆ. ಬಿಬೇಕ್ ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಸೇರಿ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

ವಾಣಿಜ್ಯ ಬಳಕೆ ಸಿಲಿಂಡರ್ 62ರು. ತುಟ್ಟಿ

ದೆಹಲಿ: ಇಂಧನ ಕಂಪನಿಗಳು ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು 62 ರು. ಗಳಷ್ಟು ಏರಿಕೆ ಮಾಡಿವೆ. ಕಳೆದ 4 ತಿಂಗಳಲ್ಲಿ ವಾಣಿಜ್ಯ ಬಳಕೆಯ 19 ಕಿಲೊ ಗ್ಯಾಸ್ ಸಿಲಿಂಡರ್ ದರ ಏರಿಕೆಯಾಗಿರುವುದು ಇದು 4 ಬಾರಿ. ನವೆಂಬರ್ 1ರಿಂದಲೇ ಸಿಲಿಂಡರ್ ಬೆಲೆ ಏರಿಕೆ ಜಾರಿಗೊಂಡಿದೆ. ಬೆಂಗಳೂರಲ್ಲಿ ವಾಣಿಜ್ಯ ಬಳಕೆಯ 19 ಕೆಜಿ ಎಲ್‌ಪಿಜಿ ಸಿಲಿಂಡರ್ ದರ 1,879 ರು.ಗಳಿಗೆ ಏರಿದೆ.

ವಾಡಿಕೆಗಿಂತ 41% ಹೆಚ್ಚು ಮಳೆ

ಬೆಂಗಳೂರು: ರಾಜ್ಯದಲ್ಲಿ ನಿರಂತರ ಮಳೆಯಾದ ಪರಿಣಾಮ ಅಕ್ಟೋಬರ್‌ನಲ್ಲಿ ವಾಡಿಕೆಗಿಂತ ಶೇ.41ರಷ್ಟು ಹೆಚ್ಚು ಮಳೆಯಾಗಿದೆ. ಅಕ್ಟೋಬರ್ 1 ರಿಂದ 31ರ ನಡುವೆ 131 ಮಿ.ಮೀ..ವಾಡಿಕೆ ಮಳೆ ಪ್ರಮಾಣವಿದೆ. ಈ ಅವಧಿಯಲ್ಲಿ 184.8 ಮಿ.ಮೀ.ನಷ್ಟು ಮಳೆಯಾಗಿದ್ದು, ವಾಡಿಕೆಗಿಂತ ಶೇ.41ರಷ್ಟು ಹೆಚ್ಚಾಗಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ ಮಾಹಿತಿ ನೀಡಿದೆ.

ಸಪ್ನ ಬುಕ್‌ಹೌಸ್ ಪುಸ್ತಕ ಜಾತ್ರೆ

ಸಾರಸ್ವತ ಸಂಭ್ರಮ

ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಬೆಂಗಳೂರಿನ ಪ್ರತಿಷ್ಠಿತ ಪುಸ್ತಕ ಮಳಿಗೆ ಸಪ್ನ ಬುಕ್ ಹೌಸ್ ಶುಕ್ರವಾರ ಗಾಂಧಿನಗರದ ಶಾಖೆಯಲ್ಲಿ ಆಯೋಜಿಸಿದ್ದ 'ಪುಸ್ತಕ ಜಾತ್ರೆ'ಗೆ ರಾಜ್ಯಸಭಾ ಸದಸ್ಯೆಸುಧಾಮೂರ್ತಿ ಚಾಲನೆ ನೀಡಿದರು. ವಿಶ್ವವಾಣಿ ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್, ಸಾಹಿತಿಗಳಾದ ಎಸ್.ಜಿ.ಸಿದ್ದರಾಮಯ್ಯ, ಹಂಪಾ ನಾಗರಾಜಯ್ಯ, ಸಪ್ನ ಬುಕ್ ಹೌಸ್ ಮುಖ್ಯಸ್ಥ ಆರ್.ದೊಡ್ಡೇಗೌಡ ಮತ್ತಿತರರು ಭಾಗವಹಿಸಿದ್ದರು.

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ಭಾಷೆಗೆ ಯಾವುದೇ ಗಡಿ ಇಲ್ಲ. ಎಲ್ಲ ಎಲ್ಲೆಗಳನ್ನು ಮೀರಿ ಬೆಳೆಯುತ್ತದೆ. ರಾಜ್ಯದ ವಿವಿಧ ಪ್ರದೇಶಗಳಿಗೆ ಅನುಗುಣವಾಗಿ ಕನ್ನಡವೂ ಭಿನ್ನವಾಗಿದೆ ಎಂದು ರಾಜ್ಯಸಭಾ ಸದಸ್ಯೆ ಡಾ.ಸುಧಾಮೂರ್ತಿ ಅವರು ಅಭಿಪ್ರಾಯಪಟ್ಟರು.

ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಬೆಂಗಳೂ ರಿನ ಪ್ರತಿಷ್ಠಿತ ಪುಸ್ತಕ ಮಳಿಗೆ ಸಪ್ನ ಬುಕ್ ಹೌಸ್ ಶುಕ್ರವಾರ ಗಾಂಧಿನಗರದ ಶಾಖೆಯಲ್ಲಿ ಆಯೋಜಿಸಿದ್ದ 'ಪುಸ್ತಕ ಜಾತ್ರೆ'ಗೆ ಚಾಲನೆ ನೀಡಿ ಮಾತನಾಡಿದ ಅವರು, ಕನ್ನಡಿಗರನ್ನು ಒಗ್ಗೂಡಿಸಿ ಕನ್ನಡದ ಹಬ್ಬ ಹಾಗೂ ಪುಸ್ತಕ ಜಾತ್ರೆ ಆಯೋಜಿಸುವುದು ನಿಜಕ್ಕೂ ಅರ್ಥಪೂರ್ಣ. ಸಪ್ನ ಬುಕ್‌ಹೌಸ್ ಪುಸ್ತಕ ಜಾತ್ರೆ ಆಯೋ ಜಿಸುವ ಮೂಲಕ ಕನ್ನಡದ ಮೇಲೆ ಇರುವ ಅವರ ಪ್ರೇಮ ಮಾದರಿಯಾಗಿದೆ ಎಂದರು.

ಸಾಹಿತಿ ಹಂಪಾ ನಾಗರಾಜಯ್ಯ ಮಾತನಾಡಿ, ಅಪರೂಪಕ್ಕೆ ದೀಪಾವಳಿ, ರಾಜ್ಯೋತ್ಸವ ಒಟ್ಟಿಗೆ ಬಂದಿದೆ. ರಾಜ್ಯೋತ್ಸವೇ ದೀಪಾವಳಿ ಹಬ್ಬ. ಪುಸ್ತಕ ದೇಶದ ಸಂಪತ್ತು. ಪುಸ್ತಕ ಜಾತ್ರೆ, ಪುಸ್ತಕ ಸಂಸ್ಕೃತಿ ಮೂಲಕ ಕನ್ನಡ ಪ್ರಜ್ಞೆ ಬೆಳೆಸಲಾಗುತ್ತಿದೆ. ಸಪ್ನ ಪುಸ್ತಕ ಭಂಡಾರವು ಪುಸ್ತಕ ಲೋಕದ ಶ್ರೀಮಂತಿಕೆ ಹೆಚ್ಚಿಸುತ್ತಿದೆ. ಪುಸ್ತಕ ಭಂಡಾರ ಬೆಳೆದರೆ ಕನ್ನಡ ಶ್ರೇಯಸ್ಸು ಹೆಚ್ಚಾಗುತ್ತದೆ ಎಂದರು.

- ಪುಸ್ತಕ ಖರೀದಿದಾರರಿಗೆ ನವೆಂಬರ್‌ನಲ್ಲಿ ವಿಶೇಷ ರಿಯಾಯಿತಿ
- ಕಾರ್ಯಕ್ರಮದಲ್ಲಿ ಭಾಗವಹಿಸಿದವರಿಗೆ ಒಂದು ಕನ್ನಡ ಪುಸ್ತಕ ಕೊಡುಗೆ
- ಪುಸ್ತಕ ಜಾತ್ರೆಯಲ್ಲಿ ಕನ್ನಡ ಬರಹಗಾರರ ಸಮ್ಮಿಲನ
- ರಾಜ್ಯೋತ್ಸವ ವೇಳೆ ಪುಸ್ತಕ ಜಾತ್ರೆ ಆಯೋಜಿಸಿದ್ದಕ್ಕೆ ಸಾಹಿತಿಗಳ ಶ್ಲಾಘನೆ

ಕನ್ನಡ ಪುಸ್ತಕ ಪ್ರಪಂಚವನ್ನೇ ಪರಿಚಯಿಸು ವಂತಹ ಇಂತಹ ವಿನೂತನ ಕಾರ್ಯಕ್ರಮ ಮೆಚ್ಚುಗೆಗೆ ಪಾತ್ರವಾಗಿದೆ. ಪುಸ್ತಕಗಳನ್ನು ಓದುವ ಮೂಲಕ ಸಂತೋಷ ಪಡುವುದರ ಜತೆಗೆ ಓದಿನ ಪ್ರೀತಿ ಮಕ್ಕಳಲ್ಲೂ ಬೆಳೆಸಿ.

– **ಸುಧಾಮೂರ್ತಿ,** ರಾಜ್ಯಸಭಾ ಸದಸ್ಯೆ

ಸಾಹಿತಿ ಎಸ್.ಜಿ.ಸಿದ್ದರಾಮಯ್ಯ ಮಾತನಾಡಿ, ಪುಸ್ತಕಗಳು ಕನ್ನಡ ಸಂಸ್ಕೃತಿ ಪ್ರಜ್ಞೆ ಹೆಚ್ಚಿಸುತ್ತವೆ. ಸಪ್ನ ಪುಸ್ತಕ ಭಂಡಾರದಲ್ಲಿ ಕನ್ನಡದ ಸಂಸ್ಕೃತಿ ಬಿಂಬಿಸುವ ಹಾಗೂ ಪ್ರಜ್ವಲಿಸುವ ಕೃತಿಗಳು ಇವೆ. ರಿಯಾಯಿತಿ ರೂಪದಲ್ಲಿ ಪುಸ್ತಕ ಮಾರಾಟ ಮಾಡುವ ಮೂಲಕ ಕನ್ನಡ ಸಂಸ್ಕೃತಿ ಬೆಳೆಸುವ ಕೈಂಕರ್ಯದಲ್ಲಿ ಸಪ್ನ ಬುಕ್‌ಹೌಸ್ ತೊಡಗಿದೆ.

→ 4

ಗ್ಯಾರಂಟಿಗಳು ಚುನಾವಣಾ ತಂತ್ರವಲ್ಲ ಆರ್ಥಿಕ ಶಕ್ತಿ ತುಂಬುವ ಅಕ್ಷಯ ಪಾತ್ರೆ

ದೇಶದ ಪ್ರತಿ ನಾಗರಿಕರ ಬದುಕಿನ ಮೇಲೆ ರಾಜಕೀಯ ಕ್ಷೇತ್ರ ನೇರ ಅಥವಾ ಪರೋಕ್ಷ ಪರಿಣಾಮ ಬೀರುತ್ತದೆ. ನಾವಿಲ್ಲಿ ಕೈಗೊಳ್ಳುವ ಒಂದೇ ಒಂದು ನಿರ್ಣಯ ಜನರ ಬದುಕಿನಲ್ಲಿ ಮಹತ್ತರ ಬದಲಾವಣೆ ತರುತ್ತದೆ. ಆದ್ದರಿಂದ ಯಾವುದೇ ನಿರ್ಧಾರ ತೆಗೆದುಕೊಳ್ಳುವಾಗ ಹತ್ತಾರು ಬಾರಿ ಯೋಚಿಸಬೇಕು ಎಂಬುದನ್ನು ನನ್ನ ಈವರೆಗಿನ ರಾಜಕೀಯ ಅನುಭವದಲ್ಲಿ ಕಂಡುಕೊಂಡಿದ್ದೇನೆ. ನೂರಾರು ವರ್ಷಗಳ ಇತಿಹಾಸವಿರುವ ಕಾಂಗ್ರೆಸ್ ಪಕ್ಷ, ದೇಶಾದ್ಯಂತ ವ್ಯಾಪಿಸಿಕೊಂಡಿರುವುದು ಜನಜೀವನ ಕೇಂದ್ರಿತ ದೃಷ್ಟಿಯಿಂದಲೇ ಹೊರತು, ಇದರ ಹಿಂದೆ ಬೇರಾವ ಕಾರಣವೂ ಇಲ್ಲ. ತೀರಾ ಬಡವನ ಬಗ್ಗೆ ಯೋಚಿಸಿ ಆತ ಅಥವಾ ಆಕೆಯನ್ನು ಬಡತನದಿಂದ ಹೇಗೆ ಮೇಲೆತ್ತಬಹುದೆಂದು ನಮ್ಮ ಪಕ್ಷ ಚಿಂತಿಸುತ್ತದೆ. ಆ ಚಿಂತನೆಯಿಂದಲೇ ಹುಟ್ಟಿಕೊಂಡ ಯೋಜನೆಯಾದ ಗ್ಯಾರಂಟಿಗಳು ರಾಜಕಾರಣದಲ್ಲಿ ಹೊಸ ಕ್ರಾಂತಿ ಸೃಷ್ಟಿಸಿವೆ. ಈ ಯೋಜನೆ ಸುಖಾಸುಮ್ಮನೆ ಚುನಾವಣೆ ಗೆಲ್ಲಲು ತಂದ ತಂತ್ರವಲ್ಲ. ಇದು ಹತ್ತಾರು ಬಾರಿ ಯೋಚಿಸಿ, ಅಳೆದು ತೂಗಿ ಜಾರಿ ಮಾಡಿದ ಯೋಜನೆ.

ಡಿ.ಕೆ.ಶಿವಕುಮಾರ್

ಉಪಮುಖ್ಯಮಂತ್ರಿಗಳು, ಕೆಪಿಸಿಸಿ ಅಧ್ಯಕ್ಷರು

- ಗ್ಯಾರಂಟಿಗಳಿಂದ ರಾಜ್ಯದ ಆದಾಯ ಸಂಗ್ರಹದಲ್ಲಿ ನಿರೀಕ್ಷೆ ಮೀರಿ ಸಾಧನೆ
- ಕಾಂಗ್ರೆಸ್ ಸರಕಾರದ ಒಂದೇ ಒಂದು ಗ್ಯಾರಂಟಿ ಎಂದಿಗೂ ನಿಲ್ಲುವುದಿಲ್ಲ
- ಮುಂದಿನ 10 ವರ್ಷವೂ ಗ್ಯಾರಂಟಿ ಯೋಜನೆಗಳು ಮುಂದುವರಿಯುತ್ತವೆ

ನಮ್ಮ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು, ನಾಯಕರಾದ ರಾಹುಲ್ ಗಾಂಧಿ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ನಾನು, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು, ಎಐಸಿಸಿ ಪ್ರಧಾನ ಕಾರ್ಯದರ್ಶಿ ಮತ್ತು ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೆವಾಲ ಅವರು ಚುನಾವಣೆ ಪೂರ್ವದಲ್ಲಿ ನೀಡಿದ ಭರವಸೆಗಳನ್ನು ಈಡೇರಿಸುವ ಮೂಲಕ ನುಡಿದಂತೆ ನಡೆದಿದ್ದೇವೆ. ಕರ್ನಾಟಕದ ಆರೂವರೆ ಕೋಟಿ ಜನರಿಗೆ ಕಾಂಗ್ರೆಸ್ ಏನು ವಾಗ್ದಾನ ನೀಡಿತ್ತೋ ಅದನ್ನು ಈಡೇರಿಸಿದ್ದೇವೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ನಮ್ಮ ಸರಕಾರ, ಗ್ಯಾರಂಟಿಗಳನ್ನು ಜಾರಿ ಮಾಡಿದ ನಂತರ ಆರ್ಥಿಕ ನಷ್ಟಕ್ಕೀಡಾಗಿದೆ, ಆರ್ಥಿಕ ವ್ಯವಸ್ಥೆಯಲ್ಲಿ ಅಸಮತೋಲನವಾಗಿದೆ ಎಂದೆಲ್ಲ ಟೀಕೆಗಳು ಬಂತು. ಈ ಟೀಕೆಗಳು ಇನ್ನೂ ನಿಂತಿಲ್ಲ. ಪ್ರತಿ ಕುಟುಂಬಕ್ಕೆ ತಿಂಗಳಿಗೆ ಕನಿಷ್ಠ 4,000 ರುಪಾಯಿ ನೀಡುವ ಈ ಯೋಜನೆ, ಆರ್ಥಿಕತೆಯನ್ನು ವಿಭಿನ್ನ ಆಯಾಮದಿಂದ ಸುಧಾರಿಸುತ್ತದೆ ಎನ್ನುವುದನ್ನು ಟೀಕಾಕಾರರು ಇನ್ನೂ ಅರಿತುಕೊಂಡಿಲ್ಲ. ಇವೇ ಪ್ರತಿಪಕ್ಷಗಳು ಅಧಿಕಾರದಲ್ಲಿದ್ದಾಗ ಯೋಜನೆ ತರುವುದು, ಅದಕ್ಕೆ ಅನುದಾನ ನಿಗದಿಪಡಿಸುವುದು ಬಿಟ್ಟರೆ ಬೇರೆ ಏನನ್ನೂ ಮಾಡಿಲ್ಲ. ಆ ಯೋಜನೆ ಯಶಸ್ವಿಯಾಗಿದೆಯೇ, ಅದು ಜನಜೀವನದ ಮೇಲೆ ಪರಿಣಾಮ ಬೀರಿದೆಯೇ ಎಂಬ ಅಧ್ಯಯನ ಕೂಡ ನಡೆದಿಲ್ಲ. ಆದರೆ ಗ್ಯಾರಂಟಿಗಳು ಹಾಗಲ್ಲ. ಗ್ಯಾರಂಟಿಗಳು ಯಾವ ಮಟ್ಟಿಗೆ ಯಶಸ್ವಿಯಾಗಿವೆ ಎಂದರೆ, ಬಡ ವೃದ್ಧೆಯೊಬ್ಬರು ಗ್ಯಾರಂಟಿಯ ಹಣದಲ್ಲಿ ಇಡೀ ಹಳ್ಳಿಗೆ ಊಟ ಹಾಕಿಸುತ್ತಾರೆ. ನೂರಾರು ಕನಸು ಕಟ್ಟಿಕೊಂಡ ಮಹಿಳೆ ಗ್ಯಾರಂಟಿಯ ಹಣದಲ್ಲಿ ಫ್ರಿಜ್ ಖರೀದಿಸುತ್ತಾರೆ. ಉಚಿತ ಪ್ರಯಾಣಕ್ಕಾಗಿ ಬಸ್ ಹತ್ತುವ ವೃದ್ಧೆ ಬಸ್ಸಿನ ಬಾಗಿಲಿಗೆ ನಮಸ್ಕಾರ ಮಾಡುತ್ತಾರೆ. ಈ ಎಲ್ಲ ಘಟನೆಗಳು ಗ್ಯಾರಂಟಿಗಳ ಯಶಸ್ಸಿನ ಗಾಥೆಯನ್ನು ಸಾರುತ್ತವೆ.

ಹರಿದುಬಂದ ಆದಾಯ!: ಆರ್ಥಿಕ ವ್ಯವಸ್ಥೆ ಕುಸಿಯುತ್ತಿದೆ ಎನ್ನುವವರು ಈ ಅಂಕಿ ಅಂಶ ನೋಡಬೇಕು. ರಾಜ್ಯ ಸರಕಾರ ಆದಾಯ ಸಂಗ್ರಹದಲ್ಲಿ ನಿರೀಕ್ಷೆಗೂ ಮೀರಿ ಸಾಧನೆ ಮಾಡಿದೆ. ಏಳು ತಿಂಗಳಲ್ಲಿ 1.03 ಲಕ್ಷ ಕೋಟಿ ರು. ಆದಾಯ ಸರಕಾರದ ಖಜಾನೆಗೆ ಹರಿದುಬಂದಿದೆ.

→ 4

ಸೆಲ್ಫಿ ವಿಥ್ ಹಣತೆ

ಹಣತೆ ಹಚ್ಚಿ ಮನೆ ಮನ ಬೆಳಗೋಣ

ದೀಪಾವಳಿ ಸಂದರ್ಭದಲ್ಲಿ ಹಣತೆ ಹಚ್ಚುವ ಮೂಲಕ ನಮ್ಮ ಮನ-ಮನೆಗಳನ್ನು ಬೆಳಗುವುದು ವಾಡಿಕೆ. ಈ ಬಾರಿಯ ದೀಪಾವಳಿಯಲ್ಲಿ ನೀವು ಹಣತೆ ಹಚ್ಚಿದ ಫೋಟೋಗಳನ್ನು ನಮಗೆ ವಾಟ್ಸ್ ಆ್ಯಪ್ ಮಾಡಿ. ವಿಶ್ವವಾಣಿ ಓದುಗರೊಂದಿಗೆ ಹಬ್ಬದ ಸಂಭ್ರಮ ಹಂಚಿಕೊಳ್ಳಿ.

ನಿಬಂಧನೆಗಳು

1) ಫೋಟೋ ಗುಣಮಟ್ಟ ಚೆನ್ನಾಗಿರಲಿ.
2) ಫೋಟೋ ಜತೆ ನಿಮ್ಮ ಹೆಸರು, ಊರು ಬರೆಯಲು ಮರೆಯದಿರಿ
3) ನವೆಂಬರ್ 3 ರ ಬೆಳಿಗ್ಗೆ 10 ಗಂಟೆ ಒಳಗೆ ನಿಮ್ಮ ಫೋಟೋ ನಮಗೆ ತಲುಪಿಸಿ.

ವಿಶ್ವವಾಣಿ ವಾಟ್ಸ್ ಆ್ಯಪ್ ನಂಬರ್
63623 93988

ಕೇಂದ್ರದಿಂದ ರಾಜ್ಯಕ್ಕೆ ತೀವ್ರ ಆರ್ಥಿಕ ಅನ್ಯಾಯ

ಜಿಲ್ಲಾ ಆಡಳಿತದಿಂದ 69ನೇ ಕನ್ನಡ ರಾಜ್ಯೋತ್ಸವ | ಜಿಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಚಾಲನೆ

ಮಂಗಳೂರು: ಅತ್ಯಧಿಕ ಜಿಎಸ್‌ಟಿ ಸಂಗ್ರಹಿಸುವ ರಾಜ್ಯ ಕರ್ನಾಟಕವಾಗಿದ್ದರೂ ರಾಜ್ಯಕ್ಕೆ ಸಿಗಬೇಕಾದ ಪಾಲು ಸಿಗದ ಕಾರಣ ರಾಜ್ಯ ತೀವ್ರ ಆರ್ಥಿಕ ಅನ್ಯಾಯಕ್ಕೆ ಗುರಿಯಾಗಿದೆ ಎಂದು ದ.ಕ. ಜಿಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಗರದ ನೆಹರೂ ಮೈದಾನದಲ್ಲಿ ದ.ಕ. ಜಿಲ್ಲಾ ಮಟ್ಟದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಪುಷ್ಪರಾಜ್ ಬಿ.ಎನ್, ರಾಜೇಶ್ ರಾವ್, ಸುಖ್ ಪಾಲ್ ಪೊಳಲಿ, ಐಬಿ ಸಂದೀಪ್ ಕುಮಾರ್ ಸಹಿತ. ಸಹಿತ 59 ಸಾಧಕರು, 24 ಸಂಸ್ಥೆಗಳಿಗೆ ದ.ಕ. ಜಿಲ್ಲಾ ಪ್ರಶಸ್ತಿಯನ್ನು ಪ್ರದಾನ ಮಾಡಿ ರಾಜ್ಯೋತ್ಸವ ಸಂದೇಶ ನೀಡಿದರು.

ಕರ್ನಾಟಕವು ಜಿಎಸ್ ಟಿ ಸಂಗ್ರಹದಲ್ಲಿ ದೇಶದಲ್ಲೇ ಎರಡನೆ ಸ್ಥಾನದಲ್ಲಿದ್ದರೂ, ಹಣಕಾಸು ಆಯೋಗದಿಂದ ಸಿಗಬೇಕಾದ ಹಣದಲ್ಲಿ ತೀವ್ರ ಕಡಿತವಾಗಿದೆ. ನಮ್ಮ ರಾಜ್ಯದಲ್ಲಿ ತೆರಿಗೆಯನ್ನು ರಾಜ್ಯಕ್ಕೆ ಅನುಕೂಲಕ್ಕೆ ತಕ್ಕಂತೆ ವಿಧಿಸುವ ಅಧಿಕಾರ ಜಿಎಸ್ಟಿಯಿಂದ ಇಲ್ಲವಾಗಿದೆ. ಇದಕ್ಕೆ ಪರಿಹಾರ ರೂಪದಲ್ಲಿ ಸಿಗಬೇಕಾದ ಹಣವೂ ಸಿಕ್ಕಿಲ್ಲ. ಇಂತಹ ಪರಿಸ್ಥಿತಿ ಯಾವ ರಾಜ್ಯಕ್ಕೂ ಬರಬಾರದು. ಕರ್ನಾಟಕ ರಾಜ್ಯೋತ್ಸವದ ಈ ದಿನದಂದು ಇದನ್ನು ನೆನಪಿಸಬೇಕಿದೆ. ನಮ್ಮ ಶ್ರಮದ ಪಾಲನ್ನು ಯಾರೋ ಅನ್ಯಾಯವಾಗಿ ಕಸಿದುಕೊಳ್ಳುತ್ತಿದ್ದಾರೆಂಬ ಭಾವನೆ ರಾಜ್ಯಗಳಿಗೆ ಬರಬಾರದು. ಕರ್ನಾಟಕ ಸರಕಾರ ಇದನ್ನು ಪ್ರಶ್ನಿಸಿದೆ. ರಾಜ್ಯದ ಹಿತಾಸಕ್ತಿ ಪರವಾಗಿ ಗಟ್ಟಿಯಾಗಿ ನಿಂತಿದೆ ಎಂದವರು ಹೇಳಿದರು.

ದ.ಕ. ಜಿಲ್ಲಾ ಮಟ್ಟದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸಚಿವ ದಿನೇಶ್ ಗುಂಡೂರಾವ್ ಅವರು ಮಾತನಾಡಿದರು.

ಸ್ವಾತಂತ್ರ್ಯ ನಂತರ ಕರ್ನಾಟಕ ಜನಸಂಖ್ಯಾ ನಿಯಂತ್ರಣಕ್ಕೆ ಅವಿರತವಾಗಿ ಶ್ರಮಿಸಿ ಯಶಸ್ಸು ಕಂಡಿದೆ. ಆದರೆ ಶಿಕ್ಷಣದಲ್ಲಿ ಹಿಂದುಳಿದಿರುವ ಮತ್ತು ಜನಸಂಖ್ಯಾ ನಿಯಂತ್ರಣವನ್ನು ಸಮರ್ಪಕವಾಗಿ ಅಳವಡಿಸದೆ ಇರುವ ಹಿಂದಿ ಮಾತನಾಡುವ ಉತ್ತಮ ರಾಜ್ಯಗಳಿಗೆ ಹೆಚ್ಚು ಲೋಕಸಭಾ ಸದಸ್ಯರನ್ನು ನೀಡಿ ಕಡಿಮೆ ಜನಸಂಖ್ಯೆ ಇರುವ ದಕ್ಷಿಣ ರಾಜ್ಯಗಳಿಗೆ ಲೋಕಸಭಾ ಸದಸ್ಯರನ್ನು ಕಡಿಮೆ ಮಾಡಿ ಕೇಂದ್ರ ಮಟ್ಟದಲ್ಲಿ ದಕ್ಷಿಣ ಭಾರತ ಹಾಗೂ ಕರ್ನಾಟಕದ ಜನರ ಪ್ರಾತಿನಿಧ್ಯವನ್ನೇ ಇಲ್ಲವಾಗಿಸುವ ಕ್ರಮವನ್ನು ನಾವು ಗಂಭೀರವಾಗಿ ಚಿಂತಿಸಬೇಕಾಗಿದೆ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಸಂಸದ ಕ್ಯಾ.ಬ್ರಿಜೇಶ್ ಚೌಟ, ಶಾಸಕರಾದ ವೇದವ್ಯಾಸ ಕಾಮತ್, ಐವನ್ ಡಿಸೋಜ, ಮೇಯರ್ ಮನೋಜ್ ಕೋಡಿಕ್ಕಲ್, ದ.ಕ. ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್, ಅಪರ ಜಿಲ್ಲಾಧಿಕಾರಿ ಡಾ. ಸಂತೋಷ್ ಕುಮಾರ್, ಪ್ರವೀಣ್ ಕುಮಾರ್ ಆಳ್ವ, ಎ.ಸಿ. ವಿನಯರಾಜ್, ನವೀನ್ ಡಿಸೋಜ, ಶಾಹುಲ್ ಹಮೀದ್, ಕಸಾದ ದ.ಕ. ಜಿಲ್ಲಾಧ್ಯಕ್ಷ ಎಂ.ಪಿ.ಶ್ರೀನಾಥ್, ಸದಾಶಿವ ಉಳ್ಳಾಲ್, ಕಸಾಪ ನಿಕಟಪೂರ್ವ ಅಧ್ಯಕ್ಷ ಪ್ರದೀಪ್ ಕುಮಾರ್ ಕಲ್ಕೂರ, ಕರ್ನಾಟಕ ಬ್ಯಾರಿ ಅಕಾಡೆಮಿಯ ಅಧ್ಯಕ್ಷ ಉಮರ್ ಯು.ಎಚ್., ಸ್ಟ್ಯಾನಿ ಅಲ್ವಾರಿಸ್, ದೇವಿಪ್ರಸಾದ್ ಶೆಟ್ಟಿ, ಡಾ. ಶಿವಪ್ರಕಾಶ್ ಇನ್ನಿತರರು ಉಪಸ್ಥಿತರಿದ್ದರು.

> ನಮ್ಮ ಕನ್ನಡ ಸಮೃದ್ಧವಾಗಿದೆ ಎಂದು ನಾವು ಸುಮ್ಮನಿರಲಾಗದು. ರಾಜ್ಯವನ್ನು ಸಮೃದ್ಧ ಕರ್ನಾಟಕ ಮಾಡುವುದೇ ಸರಕಾರದ ಗುರಿಯಾಗಿದ್ದು, ಅನೇಕ ಜನಪರ, ಜನಕಲ್ಯಾಣ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಏಕೀಕೃತ ಕರ್ನಾಟಕ ರಾಜ್ಯ ಉದ್ಭವವಾದಾಗಿನಿಂದಲೂ ಕೇಳಿಬರುತ್ತಿದ್ದ ಪ್ರಾದೇಶಿಕ ಅಸಮತೋಲನದ ಕೂಗನ್ನು ನಿವಾರಿಸಲು ರಾಜ್ಯ ಸರಕಾರ ಶ್ರಮಿಸುತ್ತಿದ್ದು, ಇತ್ತೀಚೆಗೆ ಕಲಬುರಗಿಯಲ್ಲಿ ರಾಜ್ಯ ಸಚಿವ ಸಂಪುಟ ಸಭೆ ಸೇರಿ ಆ ಭಾಗದ ಪ್ರಗತಿಗೆ ಅನೇಕ ಯೋಜನೆಗಳನ್ನು ಮತ್ತು ಮಹತ್ವದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ದಿಟ್ಟ ಹೆಜ್ಜೆ ಇಡಲಾಗಿದೆ.
>
> -ದಿನೇಶ್ ಗುಂಡೂರಾವ್, ಸಚಿವ

ತೆರೆಸಾ ಶಾಲೆಗೆ ಪ್ರಥಮ ಬಹುಮಾನ

ಬೆಳಗ್ಗೆ ಅಂಬೇಡ್ಕರ್ ವೃತ್ತದಿಂದ ನೆಹರೂ ಮೈದಾನದ ವರೆಗೆ ಭುವನೇಶ್ವರಿ ದೇವಿಯ ಭಾವಚಿತ್ರ ಹಾಗೂ ಕುವೆಂಪು ಅವರ ಮೂರ್ತಿಯ ಸ್ತಬ್ಧಚಿತ್ರ ದೊಂದಿಗೆ ಮೆರವಣಿಗೆ ನಡೆಯಿತು. ಧ್ವಜಾರೋಹಣದ ಬಳಿಕ ಜಿಲ್ಲಾ ಉಸ್ತುವಾರಿ ಸಚಿವರು ತೆರೆದ ವಾಹನದಲ್ಲಿ ಕವಾಯತು ವೀಕ್ಷಿಸಿದರು. ಪಥ ಸಂಚಲದಲ್ಲಿ ಉತ್ತಮ ನಿರ್ವಹಣೆ ತೋರಿದ ಸಂತ ತೆರೆಸಾ ಶಾಲೆಯ ಬಾಲಕ ಬಾಲಕಿಯರ ತಂಡ ಪ್ರಥಮ ಬಹುಮಾನ ಪಡೆದುಕೊಂಡಿತು.

ಸಮಾಚಾರ ಸಣ್ಣದಲ್ಲ

ಆಭರಣ ದೋಚಿ ಕೊಲೆಗೆ ಯತ್ನ:ಸೆರೆ

ಚಿಕ್ಕಮಗಳೂರು: ಒಂಟಿ ಮಹಿಳೆಯನ್ನು ಅಡ್ಡಗಟ್ಟಿ ಬೆದರಿಸಿ ಆಭರಣ ದೋಚಿ ಕೊಲೆಗೆ ಯತ್ನಿಸಿದ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಕಡೂರು ಪೊಲೀಸ್ ಠಾಣಾ ವ್ಯಾಪ್ತಿಯ ಸರಸ್ವತಿ ಪುರ. ಗೇಟ್ ಬಳಿ 26 ರಂದು ಒಂಟಿ ಮಹಿಳೆಯನ್ನು ಗುರಿಯಾಗಿಸಿಕೊಂಡು ಮಹಿಳೆಯಿಂದ ಚಿನ್ನಾಭರಣ ಸುಲಿಗೆ ಮಾಡಿ ಕೊಲೆಗೆ ಯತ್ನಿಸಿದ್ದು ಕಡೂರು ಜನತೆಯಲ್ಲಿ ಆತಂಕ ಮೂಡಿಸಿತ್ತು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಪ್ರಕರಣದ ಆರೋಪಿಗಳ ಪತ್ತೆಗೆ ತಂಡ ರಚಿಸಲಾಗಿತ್ತು. ಆರೋಪಿಗಳಾದ ಭದ್ರಾವತಿ ತಾಲೂಕು ಸಿದ್ದಾಪುರ ಹೊಸೂರಿನ ಶಹಬಾಜ್,ಸಿದ್ದಾಪುರ ತಾಂಡ್ಯದ ಹನುಮಾರನ್ನು ಬಂಧಿಸಿ ಸುಮಾರು 85,000 ರು. ಮೌಲ್ಯದ ಚಿನ್ನಾಭರಣ, ಕೃತ್ಯಕ್ಕೆ ಬಳಸಿದ 40,000 ರು. ಮೌಲ್ಯದ ಬೈಕ್‌ನ್ನು ವಶಪಡಿಸಿಕೊಳ್ಳಲಾಗಿದೆ.

ಬಿಎಡ್ ಕಾಲೇಜ್ ವಿರುದ್ಧ ಕ್ರಮಕ್ಕೆ ಆಗ್ರಹ

ಚಿಕ್ಕಮಗಳೂರು: ಕರ್ನಾಟಕ ಸರಕಾರ ಇಂದು ಕನ್ನಡ ರಾಜ್ಯೋತ್ಸವ ಆಚರಿಸುವ ಸಲುವಾಗಿ ರಾಜ್ಯಾದ್ಯಂತ ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ. ಆದರೆ ಕನ್ನಡ ರಾಜ್ಯೋತ್ಸವದ ದಿನದಂದು ಚಿಕ್ಕಮಂಗಳೂರು ನಗರದ ಎಂಎಲ್ ಮಂಜಯ್ಯ ಶೆಟ್ಟಿ ನರಸಿಂಹ ಶೆಟ್ಟಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಿರುವುದಿಲ್ಲ. ಕರ್ನಾಟಕ ಸರಕಾರದ ಆದೇಶವನ್ನು ಧಿಕ್ಕರಿಸಿ ಕನ್ನಡ ವಿರೋಧಿ ಧೋರಣೆಯನ್ನು ಅನುಸರಿಸುತ್ತಿರುವ ಬಿ ಎಡ್ ಕಾಲೇಜ್ ಪ್ರಾಂಶುಪಾಲರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಬೇಕೆಂದು ಸಂವಿಧಾನ ಸಂರಕ್ಷಣಾ ವೇದಿಕೆ ಒತ್ತಾಯಿಸುತ್ತದೆ.

ಕನ್ನಡ ರಾಜ್ಯೋತ್ಸವ ಅದ್ದೂರಿ ಆಚರಣೆ

ಮಂಗಳೂರು: ನವ ಮಂಗಳೂರು ಬಂದರು ಪ್ರಾಧಿಕಾರವು ಕರ್ನಾಟಕ ರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಿತು. ಅಧ್ಯಕ್ಷತೆ ವಹಿಸಿದ್ದ ಎನ್‌ಎಂಪಿಎ ಅಧ್ಯಕ್ಷ ಡಾ. ಎ .ವಿ .ರಮಣ ಕರ್ನಾಟಕ ರಾಜ್ಯ ಧ್ವಜಾರೋಹಣ ನೆರವೇರಿಸಿದರು. ಸುರತ್ಕಲ್‌ನ ಗೋವಿಂದದಾಸ ಕಾಲೇಜಿನ ಪ್ರಾಂಶುಪಾಲ ಕೃಷ್ಣಮೂರ್ತಿ ಪಿ, ಎಸ್.ಶಾಂತಿ, ಎನ್‌ಎಂಪಿಎ ಉಪಾಧ್ಯಕ್ಷೆ ಶ್ರೀಮತಿ. ಎನ್‌ಎಂಪಿ ಕನ್ನಡ ಸಂಘದ ಅಧ್ಯಕ್ಷೆ ಲೀಲಾ ಗೌರವ ಅತಿಥಿಗಳಾಗಿದ್ದರು. ಕನ್ನಡ ಸಂಘದ ಉಪಾಧ್ಯಕ್ಷ ಪ್ರವೀಣ್ ಸ್ವಾಗತಿಸಿದರು.

'90 ಎಮ್‌ಎಲ್' ತುಳು ಸಿನಿಮಾಕ್ಕೆ ಮುಹೂರ್ತ

ಮಂಗಳೂರು: ಡಿ ಡಿ ಪ್ರೊಡಕ್ಷನ್ ಲಾಂಛನದಲ್ಲಿ ರಂಜಿತ್ ಸಿ ಬಜಾಲ್ ನಿರ್ದೇಶನದಲ್ಲಿ ಡೋಲ್ವಿ ಡಿ ಸೋಜ ನಿರ್ಮಾಣದಲ್ಲಿ ತಯಾರಾಗುತ್ತಿರುವ 90 ಎಮ್ ಎಲ್ ತುಳು ಚಲನ ಚಿತ್ರದ ಮುಹೂರ್ತ ಸಮಾರಂಭವು ಶರವು ಶ್ರೀಮಹಾಗಣಪತಿ ದೇವಸ್ಥಾನದಲ್ಲಿ ನಡೆಯಿತು. ಶರವು ರಾಘವೇಂದ್ರ ಶಾಸ್ತ್ರಿ ಸಿನಿಮಾಕ್ಕೆ ಕ್ಲಾಪ್ ಮಾಡಿದರು. ನಟ ವಿನೀತ್ ಕುಮಾರ್, ನಟಿ ರುಹಾನಿ ಶೆಟ್ಟಿ, ರೋಶನ್ ಶೆಟ್ಟಿ, ಪುಷ್ಪರಾಜ್ ಬೊಳ್ಳೂರು, ನಿರ್ದೇಶಕ ರಂಜಿತ್ ಸಿ ಬಜಾಲ್, ನಿರ್ಮಾಪಕ ಡೋಲ್ವಿ ಡಿ ಸೋಜ ಮತ್ತಿತರರು ಉಪಸ್ಥಿತರಿದ್ದರು.

ಗೆಜೆಟಿಯರ್
ಪ್ರತಿ ಮಂಗಳವಾರ
ಇದು ಅನುಕ್ಷಣದ ಆ್ಯಪ್

ಕಾಡು ಪ್ರಾಣಿ ಬೇಟೆ: ಮೂವರ ಬಂಧನ

ಉಡುಪಿ: ಕಾರ್ಕಳ ತಾಲೂಕು ಕೆರ್ವಾಶೆ ಗ್ರಾಮ ನಲ್ಲಡು ಎಂಬಲ್ಲಿ ಪ್ರಾಣಿ ಬೇಟೆಯಾಡಲು ಕೋವಿ ಜೊತೆ ಬಂದಿದ್ದ ಮೂವರನ್ನು ಕಾರ್ಕಳ ವನ್ಯಜೀವಿ ವಲಯದ ಸಿಬ್ಬಂದಿಯವರು ಬಂಧಿಸಿದ್ದು ಇನ್ನೊರ್ವ ತಪ್ಪಿಸಿಕೊಂಡಿದ್ದಾನೆ.

ಅ.30ರಂದು ರಾತ್ರಿ ಶಿರ್ಲಾಲು ಗ್ರಾಮದ ವಸಂತ ಪೂಜಾರಿ, ರಾಕೇಶ್, ಜಯ ಪೂಜಾರಿ ಹಾಗೂ ಸಂತೋಷ್ ಪೂಜಾರಿ ಎಂಬವರು ಕೋವಿ ಜತೆಗೆ ಬೇಟೆಯಾಡಲು ತೆರಳಿದ್ದರು. ಈ ಪೈಕಿ ಮೂವರು ಅರಣ್ಯಾಧಿಕಾರಿಗಳಿಗೆ ಸಿಕ್ಕಿ ಬಿದ್ದಿದ್ದು, ಸಂತೋಷ್ ಪೂಜಾರಿ ತಪ್ಪಿಸಿಕೊಂಡಿರುತ್ತಾನೆ.

ಬಂಧಿತರನ್ನು ನ್ಯಾಯಲಯದಲ್ಲಿ ಹಾಜರುಪಡಿಸಿದ ಬಳಿಕ ಹಿರಿಯಡ್ಕ ಜೈಲಿನಲ್ಲಿರಿಸಲಾಗಿದೆ. ಶಸ್ತ್ರಾಸ್ತ್ರ ಕಾಯಿದೆ ಮತ್ತು ವನ್ಯಜೀವಿ ಸಂರಕ್ಷಣಾ ಕಾಯಿದೆಯಡಿ ಪ್ರಕರಣ ದಾಖಲಾಗಿದೆ.

ಕುದುರೆಮುಖ ವನ್ಯಜೀವಿ ವಿಭಾಗ ಕಾರ್ಕಳ ಇದರ ಉಪ ಅರಣ್ಯ ಸಂರಕ್ಷಣಾಧಿಕಾರಿ ಶಿವರಾಮ ಬಾಬು ಅವರ ನಿರ್ದೇಶನದಂತೆ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸತೀಶ್ ಬಿ. ಅವರ ಮಾರ್ಗದರ್ಶನದಲ್ಲಿ ಕಾರ್ಕಳ ವನ್ಯಜೀವಿ ವಲಯದ ವಲಯ ಅರಣ್ಯಾಧಿಕಾರಿ ಶಶಿಧರ ಗೌಡ ಪಾಟೀಲ್ ಅವರ ನೇತೃತ್ವದಲ್ಲಿ ಆರೋಪಿಗಳನ್ನು ಪತ್ತೆಹಚ್ಚಿದ್ದು ಪ್ರಕರಣದ ಕಾರ್ಯಾಚರಣೆಯಲ್ಲಿ ಉಪ ವಲಯ ಅರಣ್ಯಾಧಿಕಾರಿ ರಾಜು ಎಲ್. ಜೇ. ಹಾಗೂ ಅಭಿಲಾಷ್, ಗಸ್ತು ಅರಣ್ಯ ಪಾಲಕರಾದ ಮಲ್ಲಯ್ಯ ಎ ಮಠಪತಿ ಯಮನೂರು, ಅರಣ್ಯ ವೀಕ್ಷಕರಾದ ಸುಜೀತ್ ದಾಮೋದರ, ಸಂತೋಷ್ ಹಾಗೂ ವಾಹನ ಚಾಲಕ ನಿತಿನ್ ಜೇ. ಹೆಗ್ಡೆ ಪಾಲ್ಗೊಂಡಿದ್ದರು.

ಕಾರ್ಕಳ ವನ್ಯಜೀವಿ ವಲಯದ ಸಿಬ್ಬಂದಿಯವರು ಮೂವರು ಆರೋಪಿಗಳನ್ನು ಬಂಧಿಸಲಾಗಿದೆ.

ಹರಿಪ್ರಸಾದ್ ವಿರುದ್ಧ ಹೇಳಿಕೆಗೆ ಕಾಂಗ್ರೆಸ್ ಕಿಡಿ

ಮಂಗಳೂರು: ಜಾತಿ ಗಣತಿಯನ್ನು ಜಾರಿ ಮಾಡಬೇಕೆಂದು ಪ್ರಸ್ತಾಪವನ್ನಿಟ್ಟ ಸಚ್ಚಾರಿತ್ರ್ಯ ರಾಜಕಾರಣಿ, ಹಿಂದುಳಿದ ವರ್ಗದ ನಾಯಕ ಬಿ.ಕೆ. ಹರಿಪ್ರಸಾದ್ ಬಗ್ಗೆ ತುಚ್ಛವಾಗಿ ಮಾತನಾಡಿರುವ ಬೆಳ್ತಂಗಡಿ ಶಾಸಕ ಹರೀಶ್ ಪೂಂಜಾ ಅವರು ಹರಿಪ್ರಸಾದ್ ಹಾಗೂ ಅವರ ಸಮುದಾಯದ ಕ್ಷಮೆಯಾಚಿಸಬೇಕು. ಮಹಾತ್ಮ ಗಾಂಧೀಜಿ ಹತ್ಯೆ ಮಾಡಿದ ದೇಶದ್ರೋಹಿ ಡಿಎನ್‌ಎ ಜೊತೆಗೆ ಹರೀಶ್ ಪೂಂಜಾ ಡಿಎನ್‌ಎ ಹೊಂದಾಣಿಕೆಯಾಗಬಹುದು ಎಂದು ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚಿತ್ತರಂಜನ್ ಶೆಟ್ಟಿ ಬೊಂಡಾಲ ಆಗ್ರಹಿಸಿದ್ದಾರೆ.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ಹರೀಶ್ ಪೂಂಜಾ ಅವರು ಬಿ.ಕೆ. ಹರಿಪ್ರಸಾದ್ ಅವರ ಡಿಎನ್‌ಎ ಪರೀಕ್ಷೆ ಮಾಡಬೇಕೆಂದು ಕೀಳುಮಟ್ಟದ ರಾಜಕೀಯ ಹೇಳಿಕೆ ನೀಡಿರುವುದು ಖಂಡನೀಯ.

ಹರಿಪ್ರಸಾದ್ ರ ಡಿಎನ್‌ಎ ಪರಿಶೀಲನೆ ಮಾಡಿದರೆ ಸಿಗುವುದು ಈ ದೇಶದ ಮೂಲ ನಿವಾಸಿಯ ಗುರುತು. ಪದೇ ಪದೇ ನೀವು ಡಿಎನ್‌ಎ ಬಗ್ಗೆ ಮಾತನಾಡುತ್ತಿರುವುದನ್ನು ನೋಡಿದರೆ ನಿಮಗೆ ನಿಮ್ಮ್ ಡಿಎನ್‌ಎ ಬಗ್ಗೆ ಸಂಶಯ ಇರುಬಹುದು ಮತ್ತು ಅದನ್ನು ಪರಿಶೀಲನೆ ಮಾಡಿದರೆ ಮಹಾತ್ಮ ಗಾಂಧೀಜಿ ಹತ್ಯೆ ಮಾಡಿದ ದೇಶದ್ರೋಹಿ ಡಿಎನ್‌ಎ ಜೊತೆಗೆ ಹೊಂದಾಣಿಕೆ ಯಾಗ ಬಹುದು. ಡಿಎನ್‌ಎ ಪರಿಶೀಲನೆಗೆ ಬರುವವರು ಇದ್ದರೆ ಈ ದೇಶದ ಮೂಲ ನಿವಾಸಿಗಳು ದೇಶಕ್ಕೆ ಪ್ರಾಣ ತ್ಯಾಗ ಮಾಡಿರುವ ಡಿಎನ್‌ಎ ಹೊಂದಿರುವ ನಾವು ಪರಿಶೀಲನೆಗೆ ಸಿದ್ದರಿದ್ದೇವೆ ಎಂದು ಸವಾಲೆಸೆದರು. ಸುದ್ದಿಗೋಷ್ಠಿ ಯಲ್ಲಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ನೀರಜ್ ಚಂದ್ರಪಾಲ್, ಪ್ರಧಾನ ಕಾರ್ಯದರ್ಶಿ ಟಿ.ಡಿ.ವಿಕಾಸ್ ಶೆಟ್ಟಿ, ಯೋಗೀಶ್ ಕುಮಾರ್, ಮುಖಂಡರಾದ ನಿತ್ಯಾನಂದ ಶೆಟ್ಟಿ, ಲಕ್ಷಣ ಶೆಟ್ಟಿ, ಮಂಜುಳಾ ನಾಯಕ್ ಉಪಸ್ಥಿತರಿದ್ದರು.



ಸುದ್ದಿಗೋಷ್ಠಿಯಲ್ಲಿ ಚಿತ್ತರಂಜನ್ ಶೆಟ್ಟಿ ಬೊಂಡಾಲ ಅವರು ಮಾತನಾಡಿದರು.

> ಹರಿಪ್ರಸಾದ್‌ರನ್ನು ಹಿಂದೂ ವಿರೋಧಿ ರೀತಿ ಬಿಂಬಿಸಲಾಗುತ್ತಿದೆ. ಹರೀಶ್ ಪೂಂಜಾ ಪದೇ ಪದೇ ಈ ರೀತಿಯ ಹೇಳಿಕೆ ನೀಡುತ್ತಿದ್ದು, ಇವರ ಚಾಳಿ ಮುಂದುವರಿಸಿದರೆ ಅದಕ್ಕೆ ತಕ್ಕ ಬೆಲೆ ತೆರಲಿದ್ದಾರೆ.
>
> -ಚಿತ್ತರಂಜನ್ ಶೆಟ್ಟಿ ಬೊಂಡಾಲ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಸುಭದ್ರ ದೇಶಕ್ಕಾಗಿ ಶ್ರಮಿಸಿದ ಇಂದಿರಾಗಾಂಧಿ

ಚಿಕ್ಕಮಗಳೂರು: ಭಾರತದ ಧೀಮಂತ ನಾಯಕಿ ಉಕ್ಕಿನ ಮಹಿಳೆ ಎಂದೆ ಕರೆಸಿಕೊಂಡಿದ್ದ 15 ವರ್ಷಗಳ ಕಾಲ ಪ್ರಧಾನಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾಗಾಂಧಿ ಅವರ ಪುಣ್ಯ ಸ್ಮರಣೆ ಹಾಗೂ ಭಾರತದ ಉಪ ಪ್ರಧಾನಿಯಾಗಿ ದೇಶದ 553 ಸಂಸ್ಥಾನಗಳನ್ನು ಒಗ್ಗೂಡಿಸಿದ ಉಕ್ಕಿನ ಮನುಷ್ಯ ಎಂದೇ ಭಾಜನರಾಗಿದ್ದ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ ಜನ್ಮ ದಿನಾಚರಣೆಯನ್ನು ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಇಂದು ಆಚರಿಸಲಾಯಿತು.

ಕೃಷಿ ಉತ್ಪನ್ನಗಳ ರಫ್ತು ನಿಗಮದ ಅಧ್ಯಕ್ಷರಾದ ಬಿ. ಹೆಚ್.ಹರೀಶ್ ಮಾತನಾಡಿ, ಪ್ರಿಯದರ್ಶಿನಿ ಇಂದಿರಾಗಾಂಧಿ ಅವರು ಭಾರತಕ್ಕಷ್ಟೇ ಅಲ್ಲದೆ ವಿಶ್ವದ ನಾಯಕಿಯಾಗಿದ್ದರು.

15 ವರ್ಷಗಳ ಕಾಲ ಈ ದೇಶದ ಪ್ರಧಾನಿಯಾಗಿ ಸುಭದ್ರ ದೇಶವನ್ನು ಕಟ್ಟುವಲ್ಲಿ ಮತ್ತು ಶತೃಗಳ ಹೆಡೆಮುರಿಕಟ್ಟಿಸದೆ ಬಿಡದ ಈ ನಾಯಕಿಯನ್ನು ಅಂದಿನ ವಿರೋಧ ಪಕ್ಷದ ಮುಖಂಡರಾಗಿದ್ದ ಅಟಲ್ ಬಿಹಾರಿ ವಾಜಪೇಯಿ ಅವರು ದುರ್ಗಿ ಎಂದು ಕರೆದಿದ್ದರು ಎಂಬುದನ್ನು ನೆನಪಿಸಿಕೊಂಡರು.

ಕಾರ್ಯಕ್ರಮದಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ತನೋಜ್‌ಕುಮಾರ್ ನಾಯ್ಡು ಸ್ವಾಗತಿಸಿ ಪ್ರಸ್ತಾವಿಕವಾಗಿ ಮಾತನಾಡಿದರು.

ಪಕ್ಷದ ಎಸ್.ಸಿ ವಿಭಾಗದ ಜಿಲ್ಲಾಧ್ಯಕ್ಷ ಎಂ.ಮಲ್ಲೇಶ್ ಸ್ವಾಮಿ, ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಹಮದ್ ಹನೀಫ್, ಸಿಡಿಎ ಸದಸ್ಯರಾದ ಶೃದೀಪ್, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ರಾಮಚಂದ್ರ, ಎಸ್.ಸಿ ವಿಭಾಗದ ರಾಜ್ಯ ಸಂಚಾಲಕಿ ನೇತ್ರಾವತಿ, ಮುಖಂಡರಾದ ರಘು, ಬೀಕನಹಳ್ಳಿ ಧರ್ಮೇಶ್, ನಾಗೇಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ಇಂದಿರಾಗಾಂಧಿ ಅವರ ಪುಣ್ಯ ಸ್ಮರಣೆ ಆಚರಿಸಲಾಯಿತು.

> ಇಂದಿರಾಗಾಂಧಿ ಹಾಕಿಕೊಟ್ಟ ಹಾದಿಯಲ್ಲಿ ನಾವೆಲ್ಲರೂ ನಡೆಯಬೇಕು ಎಂದರಲ್ಲದೇ, ಈ ರಾಷ್ಟ್ರವನ್ನು ನೂರಾರು ಸಂಸ್ಥಾನಗಳಿಂದ ಒಗ್ಗೂಡಿಸುವಲ್ಲಿ ಕಾರಣಕರ್ತರಾದ ಮಾಜಿ ಉಪ ಪ್ರಧಾನಿ ಹಾಗೂ ಉಕ್ಕಿನ ಮನುಷ್ಯ ಎಂದೇ ಕರೆಸಿಕೊಂಡಿದ್ದ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ ಜನ್ಮ ದಿನಾಚರಣೆ ಇಂದು ನಾವೆಲ್ಲ ಭಾರತ ಸದಾ ಏಕೀಕರಣ ಶಕ್ತಿಯಾಗಿ ಹೊರಹೊಮ್ಮಲು ಮನಸ್ಸು ಮಾಡಬೇಕು ಇದು ಅವರಿಗೆ ಕೊಡುವ ಕೊಡುಗೆ.
>
> -ಎಂ.ಸಿ.ಶಿವಾನಂದಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ

ಮಹಾವೀರಸ್ವಾಮಿ ನಿರ್ವಾಣೋತ್ಸವ

ಉಜಿರೆ: ದೀಪಾವಳಿ ಹಬ್ಬದ ಸಂದರ್ಭದಲ್ಲಿ ಭಗವಾನ್ ಮಹಾವೀರಸ್ವಾಮಿ ನಿರ್ವಾಣೋತ್ಸವದ ಪ್ರಯುಕ್ತ ಧರ್ಮಸ್ಥಳದಲ್ಲಿ ಭಗವಾನ್ ಶ್ರೀಚಂದ್ರನಾಥಸ್ವಾಮಿ ಬಸದಿಯಲ್ಲಿ ಶುಕ್ರವಾರ ಮುಂಜಾನೆ ಸಮಸ್ತ ಶ್ರಾವಕರು, ಶ್ರಾವಕಿಯರು ಅಷ್ಟವಿಧಾರ್ಚನೆ ಪೂಜೆ ಸಹಿತ ಅರ್ಘ್ಯವೆತ್ತಿದರು.

ಧರ್ಮಾಧಿಕಾರಿ ಪೂಜ್ಯ ಡಿ. ವೀರೇಂದ್ರ ಹೆಗ್ಗಡೆಯವರು ಮತ್ತು ಹೇಮಾವತಿ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ನಡೆದ ಪೂಜಾ ಕಾರ್ಯಕ್ರಮದಲ್ಲಿ ಬಾಹುಬಲಿ ಸೇವಾಸಮಿತಿಯ ಸರ್ವಸದಸ್ಯರು ಹಾಗೂ ಊರಿನ ಶ್ರಾವಕರು, ಶ್ರಾವಕಿಯರು ಅಷ್ಟವಿಧಾರ್ಚನೆ ಪೂಜೆ ಸಹಿತ ಅರ್ಘ್ಯ ಎತ್ತುವ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ದೇಶದ ಎಲ್ಲಾ ಜಿನಮಂದಿರಗಳಲ್ಲಿ ಶುಕ್ರವಾರ ಮುಂಜಾನೆ ಭಗವಾನ್ ಮಹಾ ವೀರ ಸ್ವಾಮಿಯ ನಿರ್ವಾಣಮ ಹೋತ್ಸವನ್ನು ಶ್ರದ್ಧಾ-ಭಕ್ತಿಯಿಂದ ಆಚರಿಸಲಾಯಿತು. ಜೈನರು ಜಪ, ತಪ, ಧ್ಯಾನ, ಸ್ವಾಧ್ಯಾಯ ದೊಂದಿಗೆ ಉಪವಾಸ ಮೊದಲಾದ ವೃತ- ನಿಯಮಗಳನ್ನು ಪಾಲಿಸಿ ಪುಣ್ಯಸಂಚಯ ಮಾಡಿದರು.

ಭಾಷೆ ಹೆಸರಲ್ಲಿ ವೈಷಮ್ಯ ಬೆಳೆಸಬೇಡಿ

ಚಿಕ್ಕಮಗಳೂರು: ಕನ್ನಡ ಭಾಷೆಯೊಂದಿಗೆ ಇತರೆ ಭಾಷೆಗಳನ್ನು ಗೌರವಿಸುವ ಉದಾರತೆ ನಮ್ಮಲ್ಲಿ ಬರಬೇಕೆಂದು ಹಿರಿಯ ವೈದ್ಯ ಡಾ.ಮಹಮದ್ ಸಾಲಿ ಅಭಿಪ್ರಾಯಸಿದರು. ರಾಮೇಶ್ವರ ನಗರದಲ್ಲಿ ಏರ್ಪಡಿಸಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಅತಿಥಿಗಳಾಗಿ ಮಾತನಾಡಿದ ಅವರು ಕನ್ನಡ ಭಾಷೆಗೆ ತನ್ನದೇ ಆದ ಹಿರಿತನ ಇದೆ ಎಂದರು. ವ್ಯಾವಹಾರಿಕ ದೃಷ್ಟಿಯಿಂದ ಇತರೆ ಭಾಷೆಗಳನ್ನು ಕಲಿತು ಬಳಸುವುದರಲ್ಲಿ ತಪ್ಪಿಲ್ಲ, ಆದರೆ ಕನ್ನಡದ ಕಡೆಗಣನೆ ಸರಿಯಲ್ಲ ಎಂದು ಹೇಳಿದರು.

ವೈವಿಧ್ಯದಲ್ಲಿ ಏಕತೆ ಹೊಂದಿದ ಭಾರತದಲ್ಲಿ ಅನೇಕ ಭಾಷೆ ಸಂಸ್ಕೃತಿಗಳು ಇದ್ದು, ಪರಸ್ಪರ ಪ್ರೀತಿ ವಿಶ್ವಾಸದಿಂದ ನಡೆದುಕೊಳ್ಳಬೇಕೆ ಹೊರತು, ಭಾಷೆ ಹೆಸರಿನಲ್ಲಿ ವೈಷಮ್ಯ ಬೆಳೆಸುವುದು ಸರಿಯಲ್ಲ ಎಂದರು. ಆಂಗ್ಲ ಭಾಷೆ ವ್ಯಾಮೋಹದಲ್ಲಿ ಸಿಲುಕಿ ನಮ್ಮತನವನ್ನು ಕಳೆದುಕೊಳ್ಳಬಾರದು, ಈ ನಿಟ್ಟಿನಲ್ಲಿ ಯುವಕರು ವಿಶೇಷ ಗಮನ ನೀಡಬೇಕು ಎಂದು ಹೇಳಿದರು.

ರಾಮೇಶ್ವರನಗರ ಹಿತರಕ್ಷಣಾ ಸಮಿತಿ ಅಧ್ಯಕ್ಷ ರಘುನಾಥ್ ಕನ್ನಡ ಭಾಷೆ ಹಿರಿಮೆ ಗರಿಮೆಗಳನ್ನು ವಿವರಿಸಿ, ಕನ್ನಡ ಭಾಷೆಯನ್ನು ಅಳಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದರು. ನಗರ ಸಭೆ ಸದಸ್ಯೆ ರೂಪ ಕುಮಾರ್ ಮಾತನಾಡಿದರು.ರಾಜಾಚಾರ್ ನೇತೃತ್ವದಲ್ಲಿ ಧ್ವಜಾರೋಹಣ ನೆರವೇರಿತು. ಅನುಸೂಯಾ ರಾಜಾಚಾರ್ ತಂಡದಿಂದ ನಾಡಗೀತೆ, ಕನ್ನಡ ಗೀತೆ ಹಾಡಲಾಯಿತು. ಹಿರಿಯ ಪತ್ರಕರ್ತ ದಿನೇಶ್ ಪಟವರ್ಧನ್, ಸಂತೋಷ್ ಜೈನ್, ಪುಷ್ಪಲತಾ, ಹರಿಣಾಕ್ಷಿ ನಾಗರಾಜ್ ಇತರರು ಪಾಲ್ಗೊಂಡಿದ್ದರು.

ನಾಡಿನ ನೆಲ, ಜಲ, ಭಾಷೆ ಗೌರವಿಸಿ: ಶಾಸಕ

ಮೊಳಕಾಲ್ಮೂರು: ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದ್ದು,ನಾಡಿನ ನೆಲ ಜಲ ಭಾಷೆ ಸಂಸ್ಕೃತಿ ಪರಂಪರೆಯನ್ನು ಗೌರವಿಸಬೇಕು ಎಂದು ಶಾಸಕ ಎನ್.ವೈ. ಗೋಪಾಲಕೃಷ್ಣ ಹೇಳಿದರು.

ಪಟ್ಟಣದ ಪದವಿ ಪೂರ್ವ ಕಾಲೇಜು ಆವರಣದಲ್ಲಿ ತಾಲೂಕು ಆಡಳಿತದ ವತಿಯಿಂದ ಹಮ್ಮಿಕೊಂಡಿದ್ದ 69ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ನೇತೃತ್ವದ ರಾಜ್ಯ ಸರ್ಕಾರ ಗಡಿನಾಡಿನ ಜನರ ಅಭಿವೃದ್ಧಿಗಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು ಎಂದರು.

ಗಡಿಭಾಗದ ಜನರ ಅಭಿವೃದ್ಧಿಗಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಮೂಲಕ ಜನರ ಸಮಾಜಮುಖಿ ಜೀವನಕ್ಕೆ ಅನುಕೂಲವಾಗುವ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದು ಹೆಚ್ಚಿನ ಆದ್ಯತೆ ನೀಡಬೇಕಾಗಿದೆ ಎಂದು ತಿಳಿಸಿದರು. ಕರ್ನಾಟಕ ಸರ್ಕಾರದ ದ್ರಾಕ್ಷಿ ಮತ್ತು ವೈನ್ ಬೋರ್ಡ್ ಅಧ್ಯಕ್ಷ ಡಾ. ಬಿ. ಯೋಗೇಶ್ ಬಾಬು ಅವರು ಮಾತನಾಡಿದರು. ಪ್ರಾಂಶುಪಾಲರಾದ ಗೋವಿಂದಪ್ಪ ಉಪನ್ಯಾಸ ನೀಡಿದರು. ತಹಶೀಲ್ದಾರ್ ಟಿ .ಜಗದೀಶ್ , ತಾಪಂ ಇಒ ಹನುಮಂತಪ್ಪ, ವೃತ ನಿರೀಕ್ಷಕರಾದ ವಸಂತ ವಿ ಅಸೋದೆ, ಪಪಂ ಮುಖ್ಯ ಅಧಿಕಾರಿ ಪಾಲಯ್ಯ,ಕ್ಷೇತ್ರ ಶಿಕ್ಷಣಾಧಿಕಾರಿ ನಿರ್ಮಲಾದೇವಿಅರಣ್ಯ ಅಧಿಕಾರಿ ಶ್ರೀಹರ್ಷ ಇದ್ದರು.

ಕಾಫಿ ಉದ್ಯಮ ರಕ್ಷಣೆಗೆ ಹಲವು ಯೋಜನೆ: ಅಧ್ಯಕ್ಷ ದಿನೇಶ್

ಚಿಕ್ಕಮಗಳೂರು: ಮುಂದಿನ 10 ವರ್ಷದಲ್ಲಿ ಕಾಫಿ ಉದ್ಯಮವನ್ನು ಉಳಿಸಲು ಹಲವಾರು ಬದಲಾವಣೆಗಳನ್ನು ತರುವ ಮೂಲಕ 17 ವಿವಿಧ ಸಮಿತಿಗಳನ್ನು ರಚಿಸಿದ್ದು, 316 ಸದಸ್ಯರು ಕಾಫಿ ಗುಣಮಟ್ಟ ಹಾಗೂ ಸ್ಥಳೀಯವಾಗಿ ಕಾಫಿ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಅಧ್ಯಯನ ನಡೆಸಲಿದ್ದಾರೆ ಎಂದು ಕಾಫಿ ಮಂಡಳಿ ಅಧ್ಯಕ್ಷ ದಿನೇಶ್‌ದೇವರುಂದ ತಿಳಿಸಿದರು.

ಅವರು ಜಿಲ್ಲಾ ಒಕ್ಕಲಿಗರ ಸಮುದಾಯ ಭವನದಲ್ಲಿ ಮಹಿಳಾ ಜಿಲ್ಲಾ ಒಕ್ಕಲಿಗರ ಸಂಘ ಏರ್ಪಡಿಸಿದ್ದ ತಿಂಗಳ ಅತಿಥಿ ಕಾರ್ಯಕ್ರಮದಲ್ಲಿ ಕಾಫಿ ಮಂಡಳಿಯಿಂದ ಗುಣಮಟ್ಟದ ಕಾಫಿ ತಯಾರಿಸುವ ಬಗ್ಗೆ ಮಾಹಿತಿ ನೀಡಿದರು.

ಪ್ರಸ್ತುತ ಪ್ರಪಂಚ ಬದಲಾವಣೆ ಕಾಣುತ್ತಿದ್ದು, ಯುವಕರು ಕಾಫಿ ಉದ್ಯಮಕ್ಕೆ ಆಗಮಿಸುತ್ತಿದ್ದಾರೆ. ಆದರೆ ಬೆಳಗಾರರು ಬರುತ್ತಿಲ್ಲ ಎಂದು ವಿಷಾಧಿಸಿದ ಅವರು, ಭಾರತದಲ್ಲಿ ಕಾಫಿ ಉದ್ಯಮಕ್ಕೆ ಭವ್ಯ ಭವಿಷ್ಯದ ದೃಷ್ಠಿಯಿಂದ ಬೇರೆ ಬೇರೆ ರಾಜ್ಯಗಳ ಯುವಕರು ಕಲಿಕೆ ಆರಂಭಿಸಿದ್ದಾರೆ ಎಂದರು.

ರತನ್ ಟಾಟಾ ಕಾಫಿ ಉದ್ಯಮ ಸ್ಥಾಪಿಸಿ ಅನೇಕರಿಗೆ ಉದ್ಯೋಗ ನೀಡಿ ಕಾಫಿ ಬೆಳಗಾರರಿಗೆ ಉತ್ತೇಜನ ನೀಡಿದ್ದಾರೆ ನಟ ಪುನೀತ್‌ರಾಜಕುಮಾರ್ ಸಹ ಸಮಾಜ ಸೇವೆಗೆ ತೊಡಗಿಸಿಕೊಂಡಿದ್ದರಿಂದ ಇಂದು ಈ ಇಬ್ಬರು ಮಹನೀಯರನ್ನು ಜನತೆ ಸ್ಮರಿಸುತಿದ್ದಾರೆ. ಅದಕ್ಕಾಗಿ ಶ್ರದ್ಧಾಂಜಲಿ ಅರ್ಪಿಸೋಣವೆಂದು ಹೇಳಿದರು.

ಇಂದು ಕಾಫಿಗೆ ಉತ್ತಮ ಬೆಲೆ ಬಂದಿದೆ, ಅರೇಬಿಕಾ ಕಾಫಿ ಬೆಳೆಯುವ ಎಲ್ಲಾ ದೇಶಗಳಲ್ಲಿ ಕಡಿಮೆ ಆಗುತ್ತಿದೆ. ರೋಬಾಸ್ಟ್ ಹೆಚ್ಚು ಉತ್ಪಾದನೆ ಆಗುತ್ತಿರುವ ಕಾರಣಕ್ಕೆ ಉತ್ತಮ ಬೆಲೆಯನ್ನುಕಾಣಬಹುದಾಗಿದೆ ಎಂದು ವಿವರಿಸಿದರು.

ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷಟಿ.ರಾಜಶೇಖರ್ ಮಾತನಾಡಿ, ನಮ್ಮ ಪೂರ್ವಿಕರು ಹಲವು ಸಂಕಷ್ಟಗಳ ನಡುವೆಯೂಕಾಫಿಯನ್ನು ಬೆಳೆದು ಇಂದು ನಮ್ಮನ್ನು ಸಂತೋಷವಾಗಿಟ್ಟಿದ್ದಾರೆ. ಕಾಫಿ ಬೆಳೆಗಾರರು ತಮ್ಮ ಮಕ್ಕಳನ್ನು ಬೇರೆ ಕಡೆ ಉದ್ಯೋಗಕ್ಕೆ ಕಳಿಸಿ ವೇತನಕ್ಕೆ ಕಾಯದೆ ಕಾಫಿ ಉದ್ಯಮದಲ್ಲಿ ತೊಡಗಿಸಿ ಎಂದು ಕಿವಿಮಾತು ಹೇಳಿದರು. ಬೆಳೆಗಾರರಿಂದ ಕಾಫಿಯನ್ನು ಖರೀದಿ ಮಾಡಿದ ವರ್ತಕ ಕಾಫಿ ಪುಡಿ ಮಾರಾಟ ಮಾಡಿ, ಅಧಿಕ ಲಾಭಗಳಿಸುತ್ತಿದ್ದಾರೆ ಚಿಕ್ಕಮಗಳೂರಿನಲ್ಲಿ ಕಾಫಿ ಉದ್ಯಮ ಬೆಳವಣಿಗೆಗೆ ಪೂರಕ ವಾತಾವರಣ ಇದೆ ಎಂದು ಹೇಳಿದರು.

ಕಾಫಿ ಅಪಪ್ರಚಾರದಿಂದಾಗಿ ಅದರ ಮಾರಾಟ ಮತ್ತು ಬೆಲೆ ಕಡಿಮೆ ಇತ್ತು. ಇದಕ್ಕೆ ಟೀ ಬೆಳೆಯ ಲಾಭಿ ಕಾರಣ. ಆದ್ದರಿಂದ ಕಾಫಿ ಕುಡಿಯುವುದರಿಂದ ಹಲವು ರೋಗ ನಿರೋಧಕ ಶಕ್ತಿ ಇದೆ ಎಂದರು. ಜಿಲ್ಲಾ ಮಹಿಳಾ ಒಕ್ಕಲಿಗರ ಸಂಘದ ಅಧ್ಯಕ್ಷೆ ರೀನಾ ಸುಜೇಂದ್ರ , ವೈ.ಬಿ.ವೆಂಕಟರೆಡ್ಡಿ, ಪ್ರಭುಗೌಡ, ಕಾವ್ಯಸುಕುಮಾರನ್, ಅಮಿತ ವಿಜಯೇಂದ್ರ, ಕೋಮಲಾ ರವಿ, ನಿರ್ದೇಶಕರುಗಳಾದ ಚಂಪ ಜಗದೀಶ್ ಇದ್ದರು.

ಗುಣಮಟ್ಟದ ಕಾಫಿ ತಯಾರಿಸುವ ಬಗ್ಗೆ ದಿನೇಶ್‌ದೇವರುಂದ ಅವರು ಮಾಹಿತಿ ನೀಡಿದರು.

> ಕೆಫೆ ಕಾಫಿಡೆಯನ್ನು ಎಲ್ಲ ಉದ್ಯಮಿ ಸಿದ್ದಾರ್ಥರವರು ಸ್ಥಾಪನೆ ಮಾಡಿದ ಪರಿಣಾಮ ಅನೇಕ ಯುವಕರು ಕಾಫಿಡೆಯಲ್ಲಿ ಉದ್ಯೋಗ ಪಡೆಯಲು ಆಕರ್ಷಿತರಾಗಿದ್ದಾರೆ. ಮೊದಲು ಅರೆಬಿಕಾರೊಬಾಸ್ಟ್ ಎಂಬ ವ್ಯತ್ಯಾಸ ಗೊತ್ತಿರಲಿಲ್ಲ ನಂತರ ಗುಣಮಟ್ಟದ ಕಾಫಿ ತಯಾರಿಕೆ ಮೂಲಕ ಗ್ರಾಹಕರಿಗೆ ತಲುಪಿಸಲಾಯಿತು. ಈಗ ವಿಯಟ್ನಾಂನಲ್ಲಿ ನೆರಳಿನಲ್ಲಿ ಕಾಫಿಯನ್ನು ಬೆಳೆಯಲು ಪ್ರಾರಂಭಿಸಿದ್ದಾರೆ.
>
> -ದಿನೇಶ್ ದೇವರುಂದ, ಕಾಫಿ ಮಂಡಳಿ ಅಧ್ಯಕ್ಷ

ಮಂಗಳೂರು ನೆಹರು ಮೈದಾನದಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ನಾಲ್ವರು ಪತ್ರಕರ್ತರಿಗೆ ಜಿಲ್ಲಾ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪುಷ್ಪರಾಜ್ ಬಿ.ಎನ್.(ವಾರ್ತಾ ಭಾರತಿ), ರಾಜೇಶ್ ರಾವ್ (ನಮ್ಮ ಕುಡ್ಲ), ಸುಖಪಾಲ್ ಪೊಳಲಿ (ಪಬ್ಲಿಕ್ ಟಿ.ವಿ.), ಮತ್ತು ಐ.ಬಿ. ಸಂದೀಪ್ ಕುಮಾರ್ (ಹೊಸದಿಗಂತ) ಜಿಲ್ಲಾ ಪ್ರಶಸ್ತಿ ಸ್ವೀಕರಿಸಿದರು.

> {ಡಾ.ಎಚ್.ಸಿ.ಮಹಾದೇವಪ್ಪ} ಸಮಾಜ ಕಲ್ಯಾಣ ಸಚಿವ
>
> ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲೂ ಕನ್ನಡ ಲಿಪಿಯು ಹೆಚ್ಚು ಬಳಕೆಯಾಗುತ್ತಿರುವುದು ಸಂತಸದ ಬೆಳವಣಿಗೆ. ವಿಜ್ಞಾನ-ತಂತ್ರಜ್ಞಾನದ ಜೊತೆ ಜೊತೆಗೆ ಕನ್ನಡ ಕೂಡ ಬಳಸಿ, ಬೆಳೆಸಬೇಕಾಗಿದೆ. ಕನ್ನಡದ ಅಸ್ಮಿತೆ ಕಟ್ಟುವಂತಹ ಕೆಲಸ ಪ್ರತಿಯೊಬ್ಬರಿಂದಲೂ ಆಗಬೇಕು.

ಸಮಾಚಾರ ಸಣ್ಣದಲ್ಲ

ಸೊಸೈಟಿಯಲ್ಲಿ ಶ್ರೀಧನಲಕ್ಷ್ಮಿ ಪೂಜೆ

ಶಿವಮೊಗ್ಗ: ಆದಿ ದ್ರಾವಿಡರ್ ಕೋ ಆಪರೇಟಿವ್ ಸೊಸೈಟಿಯ ಕಚೇರಿಯಲ್ಲಿ ಲಕ್ಷ್ಮಿ ಪೂಜೆ ನೆರವೇರಿಸಲಾಯಿತು. ಆದಿ ದ್ರಾವಿಡರ್ ಕೋ ಆಪರೇಟಿವ್ ಸೊಸೈಟಿ ಪ್ರಾರಂಭವಾಗಿ ಎರಡನೇ ವರ್ಷ ಪೂರೈಸಿದೆ. ಮೂರನೇ ವರ್ಷಕ್ಕೆ ಕಾಲಿಟ್ಟಿದೆ ಆ ಸಂಭ್ರಮ ಆಚರಿಸಲಾಯಿತು. ಸಂಘದ ಅಧ್ಯಕ್ಷ ಸಿ.ವಿ. ನಾರಾಯಣ್, ಉಪಾಧ್ಯಕ್ಷ ಎಂ. ಪ್ರಭಾಕರ್, ನಿರ್ದೇಶಕರಾದ ಪಿ. ಶಕ್ತಿವೇಲ್, ಪಿ. ಮುರುಗನ್, ಶೇಖರ್ ವಿ, ರಮೇಶ್, ವಡಿವೇಲು, ಕೇಶವನ್ ಇದ್ದರು.

ವಿಐಎಸ್‌ಪಿಯಲ್ಲಿ ರಾಜ್ಯೋತ್ಸವ

ಭದ್ರಾವತಿ: ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಖಾನೆ ಸಭಾಂಗಣದಲ್ಲಿ ಆಚರಿಸಲಾಯಿತು. ಕಾರ್ಯಪಾಲಕ ನಿರ್ದೇಶಕ ಬಿ.ಎಲ್. ಚಂದ್ವಾನಿ, ಮುಖ್ಯ ಮಹಾ ಪ್ರಬಂಧಕ (ವರ್ಕ್ಸ್), ಕೆ.ಎಸ್. ಸುರೇಶ್, ಮಹಾಪ್ರಬಂಧಕ ಎಲ್. ಪ್ರವೀಣ್ ಕುಮಾರ್, ವಿಐಎಸ್‌ಎಲ್ ಕಾರ್ಮಿಕ ಸಂಘದ ಅಧ್ಯಕ್ಷ ಜೆ. ಜಗದೀಶ್, ವಿಐಎಸ್‌ಎಲ್ ಅಧಿಕಾರಿಗಳ ಸಂಘದ ಅಧ್ಯಕ್ಷ ಪಾರ್ಥಸಾರಥಿ ಮಿಶ್ರಾ, ಚಾಲನೆ ನೀಡಿದರು. ಅಧಿಕಾರಿಗಳಾದ ಶೋಭ ಶಿವಶಂಕರನ್, ಹರಿಕೃಷ್ಣ ಗುಡೆ ಇದ್ದರು.

ಪೊಲೀಸ್ ಠಾಣೆಯಲ್ಲಿ ರಾಜ್ಯೋತ್ಸವ

ಭದ್ರಾವತಿ: ಕನ್ನಡ ನಾಡಿನ ಸೇವೆ ಮಾಡಲು ನಾವೆಲ್ಲಾ ಸನ್ನದ್ಧರಾಗಿರೋಣ ಎಂದು ಪಿಎಸ್‌ಐ ಶಾಂತಲಾ ಕರೆ ಕೊಟ್ಟರು. ಶುಕ್ರವಾರ ನಗರದ ನ್ಯೂಟೌನ್ ಸಂಚಾರಿ ಪೊಲೀಸ್ ಠಾಣೆಯಲ್ಲಿ ಕನ್ನಡ ರಾಜ್ಯೋತ್ಸವ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಕನ್ನಡಪ್ರೇಮಿ ಹೆಡ್ ಕಾನ್ಸ್ ಟೇಬಲ್ ಹಾಲೇಶಪ್ಪ ಮಾತನಾಡಿ ಹೇರಿಕೆ ಹಾಗೂ ತೂರಿಕೆ ಇಲ್ಲದೆ ಕನ್ನಡ ಭಾಷೆ ಮಾತನಾಡೋಣ,ನಮ್ಮ ಭಾಷೆಯ ಬಗ್ಗೆ ಅಭಿಮಾನ ಬೆಳೆಸಿಕೊಳ್ಳೋಣ ಆಗ ಕನ್ನಡ ಉಳಿಸಿ ಎಂದು ಹೋರಾಡುವ ಅಗತ್ಯ ವಿರುವಿದಿಲ್ಲ ಎಂದರು.

ದೀಪಾವಳಿ ಅಮಾವಾಸ್ಯೆ ಲಕ್ಷ್ಮೀ ಪೂಜೆ

ಚಂದ್ರಗುತ್ತಿ: ಹೋಬಳಿಯಾದ್ಯಂತ ದೀಪಾವಳಿ ಹಬ್ಬದ ಅಮಾವಾಸ್ಯೆ ದಿನವಾದ ಗುರುವಾರ ಮತ್ತು ಶುಕ್ರವಾರ ಮನೆಗಳಲ್ಲಿ ಹಾಗೂ ಅಂಗಡಿಗಳಲ್ಲಿ ಲಕ್ಷ್ಮೀ ಪೂಜೆಯನ್ನು ಸಂಭ್ರಮದಿಂದ ಆಚರಿಸಿದರು. ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿಅಂಗಡಿ ಪೂಜೆ, ವಾಹನ ಪೂಜೆ, ಆಯುಧಗಳ ಪೂಜೆ ಸೇರಿದಂತೆ ಲಕ್ಷ್ಮೀದೇವಿಯ ಪೂಜೆಗೆ ವಿವಿಧ ಸಿದ್ಧತೆಗಳನ್ನು ಮಾಡಿಕೊಂಡಿದ್ದರು, ಮನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ಬಾಳೆ ಗಿಡ, ಕಬ್ಬು, ಮಾವಿನ ತೋರಣ, ಪುಷ್ಪಾಲಂಕಾರದಿಂದ ಸುಂದರವಾಗಿಅಲಂಕೃತಗೊಂಡ ಮಂಟಪಗಳನ್ನು ನಿರ್ಮಿಸಿ ಲಕ್ಷ್ಮೀದೇವಿಯನ್ನು ಪ್ರತಿಷ್ಠಾಪಿಸಿ ವಿವಿಧ ಬಗೆ ಬಗೆಯ ಖಾದ್ಯಗಳನ್ನು ಅರ್ಪಿಸಿ ಲಕ್ಷ್ಮೀದೇವಿಯಆರಾಧನೆಯನ್ನು ನೇರವೇರಿಸಿದರು. ನಂತರ ಮಹಿಳೆಯರು ಅಕ್ಕ ಪಕ್ಕದ ಮನೆಗಳಿಗೆ ತೆರಳಿ ಅರಿಷಿಣ ಕುಂಕುಮ ಪಡೆದರು. ಗ್ರಾಮದ ಮನೆ ಬಾಗಿಲುಗಳಲ್ಲಿ ಸುಂದರವಾದ ಬಣ್ಣ ಬಣ್ಣದ ಚಿತ್ತಾರಗಳಿಂದ ಮೂಡಿದ ರಂಗೋಲಿಗಳು ನೋಡುಗರನ್ನುಆಕರ್ಷಿಸುವಂತಿತು

ಪುನೀತ್ ಅಭಿಮಾನಿ ಬಳಗದಿಂದ ರಾಜ್ಯೋತ್ಸವ

ಸೊರಬ: ಕನ್ನಡ ನಾಡು, ನುಡಿ, ಜಲದ ವಿಷಯದಲ್ಲಿ ಪ್ರತಿಯೊಬ್ಬ ಕನ್ನಡಿಗರು ಒಗ್ಗಟ್ಟಾಗಿರಬೇಕು ಎಂದು ಹಿರಿಯ ವಕೀಲ ವೈ.ಜಿ. ಪುಟ್ಟಸ್ವಾಮಿ ಹೇಳಿದರು. ಶುಕ್ರವಾರ ಪಟ್ಟಣದ ವಿದ್ಯುತ್ ನಗರದ ಡಾ. ಪುನೀತ್ ರಾಜ್‌ಕುಮಾರ್ ವೃತ್ತದಲ್ಲಿ ಪುನೀತ್ ರಾಜ್ ಕುಮಾರ್ ಅಭಿಮಾನಿ ಬಳಗದಿಂದ ನಡೆದ ರಾಜ್ಯೋತ್ಸವದಲ್ಲಿ ಮಾತನಾಡಿದರು. ಇತರೆ ಭಾಷೆಗಳ ಬಗ್ಗೆ ಗೌರವ ನೀಡುವ ಜೊತೆಗೆ ಯಾವುದೇ ಭಾಷೆಯನ್ನು ಕಲಿತರು ಸಹ ನೆಲದ ಭಾಷೆ ಕನ್ನಡದ ಬಗ್ಗೆ ಆತ್ಮಾಭಿಮಾನ ಹೊಂದಿರಬೇಕು ಎಂದರು. ಕರುನಾಡಿನ ಜನತೆಯಿಂದ ಪ್ರೀತಿಯಿಂದ ಕರೆಯಲ್ಪಡುತ್ತಿದ್ದ ಡಾ. ಪುನೀತ್ ರಾಜ್‌ಕುಮಾರ್ ಅವರು ನಮ್ಮನ್ನೆಲ್ಲ ಅಗಲಿ ಮೂರು ವರ್ಷಗಳು ಗತಿಸಿದೆ. ಆದರೂ, ಅಭಿಮಾನಿಗಳಲ್ಲಿ ಕಿಂಚಿತ್ತು ಅಭಿಮಾನ ಕಡಿಮೆಯಾಗದಿರುವುದು ಕಾಣಬಹುದು. ನಾಡಿನಲ್ಲಿ ಮತ್ತೊಮ್ಮೆ ಪುನೀತ್ ರಾಜ್‌ಕುಮಾರ್ ಹುಟ್ಟಿಬರಲಿ ಎಂಬುದು ಕೋಟ್ಯಂತರ ಕನ್ನಡಿಗರ ಆಸೆಯೂ ಆಗಿದೆ ಎಂದರು. ಗ್ರಾಪಂ ಮಾಜಿ ಉಪಾಧ್ಯಕ್ಷ ಕೃಷ್ಣಮೂರ್ತಿ ಕೊಡಕಣಿ, ಉಪನ್ಯಾಸಕ ಎನ್.ಎಚ್. ಲಿಂಗೇಶ್, ಮಲ್ಲಿಕಾರ್ಜುನ ಟ್ರ್ಯಾಕ್ಟರ್, ಪುನೀತ್ ರಾಜ್ ಕುಮಾರ್ ಅಭಿಮಾನಿ ಬಳಗದ ಎಸ್. ಹರೀಶ್, ಅರುಣ್, ನಟೇಶ್, ಆರ್. ಇದ್ದರು.

{ಡಾ.ಎಚ್.ಸಿ.ಮಹಾದೇವಪ್ಪ} ಸಮಾಜ ಕಲ್ಯಾಣ ಸಚಿವ

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲೂ ಕನ್ನಡ ಲಿಪಿಯು ಹೆಚ್ಚು ಬಳಕೆಯಾಗುತ್ತಿರುವುದು ಸಂತಸದ ಬೆಳವಣಿಗೆ. ವಿಜ್ಞಾನ-ತಂತ್ರಜ್ಞಾನದ ಜೊತೆ ಜೊತೆಗೆ ಕನ್ನಡ ಕೂಡ ಬಳಸಿ, ಬೆಳೆಸಬೇಕಾಗಿದೆ. ಕನ್ನಡದ ಅಸ್ಮಿತೆ ಕಟ್ಟುವಂತಹ ಕೆಲಸ ಪ್ರತಿಯೊಬ್ಬರಿಂದಲೂ ಆಗಬೇಕು.



ಜಿಲ್ಲಾಡಳಿತದಿಂದ ಅದ್ಧೂರಿ ಕನ್ನಡ ರಾಜ್ಯೋತ್ಸವ | ಜಿಲ್ಲಾಧಿಕಾರಿ ಹೇಮಂತ್ ಚಾಲನೆ

ಕನ್ನಡ ಮನೆ ಮನಗಳ ಉಸಿರಾಗಬೇಕು

ಶಿವಮೊಗ್ಗ: ಕನ್ನಡ ರಾಜ್ಯೋತ್ಸವದ ದಿನ ಮಾತ್ರ ಕನ್ನಡದ ಹಬ್ಬ ಆಚರಿಸಿದರೆ ಕನ್ನಡ ಉಳಿದಂತಾಗುವುದಿಲ್ಲ. ಕನ್ನಡ ಪ್ರತಿಯೊಬ್ಬರ ಮನ-ಮನೆಗಳ ಉಸಿರಾಗಬೇಕು ಎಂದು ಜಿಲ್ಲಾಧಿಕಾರಿ(ಪ್ರಭಾರ)ಗಳಾದ ಹೇಮಂತ್.ಎನ್ ಆಶಿಸಿದರು.

ಜಿಲ್ಲಾ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಡಿಎಆರ್ ಮೈದಾನದಲ್ಲಿ ಶುಕ್ರವಾರ ಏರ್ಪಡಿಸಲಾಗಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ, ರಾಜ್ಯೋತ್ಸವದ ಸಂದೇಶ ನೀಡಿ ಮಾತನಾಡಿದರು.

ಈಗಿನ ಕರ್ನಾಟಕ ಮೊದಲು ಮೈಸೂರು ರಾಜ್ಯವಾಗಿತ್ತು. ಇದು 1956ರ ನವೆಂಬರ್ 1 ರಂದು ಉದಯವಾಯಿತು. ಈ ಹಿಂದೆ ರಾಜರ ಆಳ್ವಿಕೆಯಲ್ಲಿ ದಕ್ಷಿಣ ಭಾರತದಲ್ಲಿ ಹಲವಾರು ಸಂಸ್ಥಾನಗಳನ್ನು ಒಳಗೊಂಡಂತ್ತು. ಕನ್ನಡ ಮಾತನಾಡುವ ಪ್ರಾಂತ್ಯಗಳು ಸೇರಿ ಮೈಸೂರು ರಾಜ್ಯ ಉದಯವಾಯಿತು. ಬಳಿಕ ಕರ್ನಾಟಕ ಎಂಬ ಹೆಸರು ಪಡೆಯಿತು. ಹಲವು ಮಹನೀಯರು ಕರ್ನಾಟಕ ಏಕೀಕರಣಕ್ಕೆ ಕಾರಣರಾದರು. ಅವರೆಲ್ಲರನ್ನು ಸ್ಮರಿಸುವ ಸುದಿನ ಇದಾಗಿದೆ ಎಂದರು.

ಅನ್ಯಭಾಷೆಗಳನ್ನು ಕಲಿಯುವುದು ತಪ್ಪಲ್ಲ. ಆದರೆ, ಬೇರೆ ಭಾಷೆ ಕಲಿತು ಕನ್ನಡ ಮರೆಯಬಾರದು. ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು, ಕನ್ನಡವೇ ಸತ್ಯ ಎಂಬ ಕುವೆಂಪು ಅವರ ಸಾಲುಗಳನ್ನು ಯಾವಾಗಲೂ ನೆನಪಿಸಿಕೊಳ್ಳಲೇಬೇಕು. ಈ ಸಂದರ್ಭದಲ್ಲಿ ಇಲ್ಲಿನ ನಾಡು-ನುಡಿ, ನೆಲ-ಜಲ ಭಾಷೆ, ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿ, ಸಂಪತ್ತನ್ನು ಸಂರಕ್ಷಿಸಿ, ಮುಂದಿನ ಪೀಳಿಗೆಗೆ ತಲುಪಿಸುವಲ್ಲಿ ನಾಡಿನ ಸಮಸ್ತ ಪ್ರಜೆಗಳ ಪಾತ್ರವೂ ಪ್ರಮುಖವಾದುದ್ದಾಗಿದೆ. ಕನ್ನಡ ಭಾಷೆ ಮತ್ತು ಸಂಸ್ಕೃತಿಗೆ ಭಾರತದಲ್ಲೇ ಪ್ರಮುಖಸ್ಥಾನವಿದೆ. ಕರ್ನಾಟಕದ ಹೆಸರು ವ್ಯಾಸ ಭಾರತದಲ್ಲೇ ಉಲ್ಲೇಖವಾಗಿದೆ ಎಂದರು.

ನಮ್ಮ ಶಿಕ್ಷಣ ನೀತಿಯೂ ಮಾತೃಭಾಷೆಗೆ ಹೆಚ್ಚಿನ ಒತ್ತನ್ನು ನೀಡಿದ್ದರೂ ಕನ್ನಡ ಭಾಷೆಯನ್ನು ಉಳಿಸಿಕೊಳ್ಳುವಲ್ಲಿ ನಮ್ಮೆಲ್ಲರ ಜಬಾಬ್ದಾರಿ ಇದೆ. ಕನ್ನಡ ಮಾಧ್ಯಮ ಶಾಲೆಗಳನ್ನು ಉಳಿಸಿ ಬೆಳೆಸುವ ಕಾರ್ಯವನ್ನು ಸರ್ಕಾರ ಮುಂದುವರೆಸಿದ್ದು, ಕನ್ನಡ ಭಾಷೆಯ ಸೊಗಡನ್ನು ಉಳಿಸಿಕೊಂಡು ಅದನ್ನು ಇನ್ನೂ ಹೆಚ್ಚಿಸುವ ಕೆಲಸದಲ್ಲಿ ಎಲ್ಲರೂ ಕೈಜೋಡಿಸಬೇಕಾಗಿದೆ. ಇದೇ ಸಂದರ್ಭದಲ್ಲಿ ಕನ್ನಡ ಭಾಷೆಯ ಪರಂಪರೆ, ಹಿರಿಮೆ, ಹಾಗೂ ಈ ನೆಲದ ಆದರ್ಶ ವ್ಯಕ್ತಿಗಳ, ಪುರಾಣ ಪುರುಷರ ಇತಿಹಾಸವನ್ನು ಪರಿಚಯಿಸುವ ಅಗತ್ಯವಿರುವುದನ್ನು ನಾನು ಮನಗಂಡಿದ್ದೇನೆ. ಜೊತೆಗೆ ಕನ್ನಡಪರ ಸಂಘಟನೆಗಳೂ ಕೂಡ ಈ ಕಾರಣಕ್ಕೆ ಕೈಜೋಡಿಸಬೇಕಾದ ಅಗತ್ಯವಿದೆ ಎಂದರು. ಅಸಂಖ್ಯಾತ ವಚನಕಾರರು ಮತ್ತು ದಾರ್ಶನಿಕರು ಬಾಳಿ ಬದುಕಿದ ನೆಲ ಈ ಹೆಮ್ಮೆಯ ಕನ್ನಡನಾಡು, ಧರ್ಮ ಸಹಿಷ್ಣುತೆ, ಸಮನ್ವಯತೆ, ಸೌಹಾರ್ದತೆಯಿಂದ ಬದುಕುತ್ತಿರುವ ನಾಡು ನಮ್ಮದು.

ಶ್ರೀಮಂತ ಸಾಹಿತ್ಯ ಹೊಂದಿದ್ದು, ಕನ್ನಡದ ಸಾಹಿತ್ಯದ ಅತ್ಯುನ್ನತ ಪ್ರಶಸ್ತಿಯಾದ ಜ್ಞಾನಪೀಠ ಪ್ರಶಸ್ತಿ ಪುರಸ್ಕಾರಕ್ಕೆ 8 ಮಂದಿ ಭಾಜನರಾಗಿದ್ದಾರೆ ಎಂದರು.

ಜಿಲ್ಲಾಧಿಕಾರಿ ಹೇಮಂತ್ ಎನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕನ್ನಡಾಂಬೆ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಪ್ರವಾಸೋದ್ಯಮ ಇಲಾಖೆಯಿಂದ ಚಂದ್ರಗುತ್ತಿ ರೇಣುಕಾದೇವಿಯ ಸ್ತಬ್ಧಚಿತ್ರ, ಸಮಾಜ ಕಲ್ಯಾಣ ಇಲಾಖೆ, ಪಾಲಿಕೆ, ಪೊಲೀಸ್ ಇಲಾಖೆ, ತೋಟಗಾರಿಕೆ ಇಲಾಖೆಯಿಂದ ವಿಶೇಷ ಮಾಹಿತಿಯುಳ್ಳ ಸ್ತಬ್ಧಚಿತ್ರಗಳನ್ನು ಪ್ರದರ್ಶಿಸಲಾಯಿತು. ಶಾಸಕರಾದ ಎಸ್. ಎನ್.ಚನ್ನಬಸಪ್ಪ, ವಿಧಾನ ಪರಿಷತ್ ಶಾಸಕರಾದ ಡಿ.ಎಸ್.ಅರುಣ್, ಅಪರ ಜಿಲ್ಲಾಧಿಕಾರಿ ಸಿದ್ದಲಿಂಗ ರೆಡ್ಡಿ, ಪಾಲಿಕೆ ಆಯುಕ್ತರಾದ ಡಾ.ಕವಿತಾ ಯೋಗಪ್ಪನವರ್, ಎಸಿ ಸತ್ಯನಾರಾಯಣ, ತಹಶೀಲ್ದಾರ್ ಗಿರೀಶ್, ಅಧಿಕಾರಿಗಳು, ಕನ್ನಡ ಸಂಘಟನೆಯ ಪದಾಧಿಕಾರಿಗಳು ಇದ್ದರು.

ಜಿಲ್ಲಾಡಳಿತದಿಂದ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿ ಹೇಮಂತ್ ಚಾಲನೆ ನೀಡಿದರು.

ಕನ್ನಡ ಸಂಸ್ಕೃತಿ ಪರಂಪರೆಗೆ ಸಾಗರದ ವಿಶೇಷ ಕೊಡುಗೆ

ಸಾಗರ: ಕನ್ನಡದ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಪರಂಪರೆಗೆ ಸಾಗರ ತಾಲೂಕು ವಿಶೇಷ ಕೊಡುಗೆ ನೀಡುತ್ತಿದೆ. ಇದು ಅನುಕರಣೀಯ ಎಂದು ಉಪವಿಭಾಗಾಧಿಕಾರಿ ಆರ್. ಯತೀಶ್ ಹೇಳಿದರು.

ನಗರದ ರಾಣಿ ಚೆನ್ನಮ್ಮಾಜಿ ವೃತ್ತದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕೆಳದಿಯಿಂದ ಬಂದ ಕನ್ನಡ ಜ್ಯೋತಿಯನ್ನು ಸ್ವೀಕರಿಸಿದ ನಂತರ ಮಾತನಾಡಿದರು.

ಕನ್ನಡ ರಾಜ್ಯೋತ್ಸವ ಎಂದರೆ ಸರಕಾರದ ಕಾರ್ಯಕ್ರಮ ಎನ್ನುವ ಭಾವನೆ ಇರುವ ಈ ಕಾಲಘಟ್ಟದಲ್ಲಿಯೂ ಸಾರ್ವಜನಿಕರು ವೈಯಕ್ತಿಕ ಆಸಕ್ತಿಯಿಂದ ಪಾಲ್ಗೊಳ್ಳುವುದು ಒಂದಾದರೆ, ಕೆಳದಿ ಅರಸರ ಕಾಲದಿಂದಲೂ ನಡೆದು ಬಂದ ಸಂಪ್ರದಾಯದ ಕೆಳದಿಯಿಂದ ಜ್ಯೋತಿ ತರುವ ಸಂಭ್ರಮ ವಿಶೇಷ ಎಂದರು.

ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣಗೊಂಡು 50 ವರ್ಷವಾಗಿರುವ ಹಿನ್ನೆಲೆಯಲ್ಲಿ ಈ ಬಾರಿ ಸುವರ್ಣ ರಾಜ್ಯೋತ್ಸವಕ್ಕೆ ವರ್ಷ ಪೂರ್ತಿ ಕನ್ನಡ ಕಾರ್ಯಕ್ರಮಗಳು ಇಲ್ಲಿ ಜರುಗಲಿವೆ. ರಾಜ್ಯೋತ್ಸವದ ಜತೆ ದೀಪಾವಳಿಯ ಸಡಗರವೂ ಸೇರಿ ಸಂಭ್ರಮಕ್ಕೆ ಕಳೆ ಕಟ್ಟಿದೆ ಎಂದರು.

ನಗರ ಸಭಾಯುಕ್ತ ಎಚ್.ಕೆ. ನಾಗಪ್ಪ, ಉಮೇಶ್ ಬಂದಗದ್ದೆ, ವಿದ್ಯಾರಣ್ಯ ಯುವಕ ಸಂಘದ ಅಧ್ಯಕ್ಷ ಪ್ರದೀಪ್ ಆಚಾರ್ಯ, ಮಂಜುನಾಥ್ ಮೊಗೇರ, ಪರಮೇಶ್ವರ ಆಚಾರ್ಯ, ಉದಯ ಕಾಮತ್ ಇದ್ದರು.

ಸಾಗರದಲ್ಲಿ ಕೆಳದಿಯಿಂದ ಆಗಮಿಸಿದ ಕನ್ನಡ ಜ್ಯೋತಿಯನ್ನು ಗೌರವಿಸಿ ನಮಿಸಿದ ಉಪವಿಭಾಗಾಧಿಕಾರಿ ಆರ್. ಯತೀಶ್.

ಮುಸ್ಲಿಮ್ ಯುವಕನ ಅಂಗಡಿಯಲ್ಲಿ ಲಕ್ಷ್ಮಿಪೂಜೆ

ಶಿವಮೊಗ್ಗ: ಮುಸ್ಲಿಂ ಯುವಕ ಹಾಗೂ ಆತನ ಸ್ನೇಹಿತರು ಹಿಂದೂ ಸಂಪ್ರದಾಯದಂತೆ ಲಕ್ಷ್ಮಿ ಪೂಜೆ ನೆರವೇರಿಸಿದ್ದಾರೆ.

ತನ್ನು ಅರಸಾಳು ಎಂಬ ಯುವಕ ಹೊಸನಗರ ತಾಲೂಕಿನ ರಿಪ್ಪನ್ ಪೇಟೆಯ ವಿನಾಯಕ ವೃತ್ತದ ತನ್ನ ಮೊಬೈಲ್ ಅಂಗಡಿಯಲ್ಲಿ ಪ್ರತಿ ವರ್ಷ ಹಿಂದೂ ಸಂಪ್ರದಾಯದಂತೆ ಕಳಸ ಇರಿಸಿ, ಹಣ್ಣು-ಕಾಯಿ ನೈವೇದ್ಯ ಅರ್ಪಿಸುವ ಮೂಲಕ ಪುರೋಹಿತರಾದ ಕೋಡೂರು ಪ್ರಮೋದ ಜೋಯಿಸ್ ಅವರಿಂದ ಪೂಜೆ ನೆರವೇರಿಸಿದ್ದಾರೆ.

ನಾಡಿನೆಲ್ಲೆಡೆ ಲಕ್ಷ್ಮಿ ಪೂಜೆ ಹಾಗೂ ದೀಪಾವಳಿ ಸಂಭ್ರಮ ಮನೆ ಮಾಡಿದೆ. ಸೌಹಾರ್ದತೆ ಕಾರಣಕ್ಕೆ ಹಿಂದೂಗಳ ಹಬ್ಬವನ್ನು ಮುಸ್ಲಿಮರು ಹಾಗೂ ಮುಸ್ಲಿಂರ ಹಬ್ಬವನ್ನು ಹಿಂದೂ ಧರ್ಮದವರು ಆಚರಿಸುವುದನ್ನು ಅಲ್ಲಲ್ಲಿ ನೋಡಿದ್ದೇವೆ. ಅದೇ ಮಾದರಿಯ ಸುದ್ದಿ ಇಲ್ಲಿ ವರದಿಯಾಗಿದೆ. ತನ್ನು ಅವರು ಸತತ 5 ವರ್ಷದಿಂದ ಇದೇ ಮಾದರಿಯಲ್ಲಿ ಲಕ್ಷ್ಮೀ ಪೂಜೆಯನ್ನು ನಡೆಸಿಕೊಂಡು ಬಂದಿದ್ದಾರೆ. ಅದೇ ರೀತಿ ಇಲ್ಲಿ ಮುಸ್ಲಿಂ ಸಂಪ್ರದಾಯದಾಯಂತೆ ಕೂಡ ಧರ್ಮ ಗುರುಗಳಿಂದ ಪೂಜೆ ನೆರವೇರಿಸಲಾಯಿತು.

ಹಬ್ಬಗಳು ಸಂಬಂಧಗಳನ್ನು ಗಟ್ಟಿಗೊಳಸಿಬೇಕು. ಜಾತಿ- ಧರ್ಮ ನೆಪ ಮಾತ್ರ. ಎಲ್ಲರೂ ಒಗ್ಗಟ್ಟಿನಿಂದ ಕೂಡಿ ಹಬ್ಬಗಳನ್ನು ಆಚರಿಸೋಣ ಎಂದು ತನ್ನು ಅರಸಾಳು ಹೇಳಿದ್ದಾರೆ.

ಹಸೆ ಚಿತ್ತಾರ ತೋರಣಕ್ಕೆ ರಾಜ್ಯೋತ್ಸವ ಪ್ರಶಸ್ತಿ ಓರಣ

ರಮೇಶ್ ಹೆಗಡೆ ಗುಂಡೂಮನೆ, ಸಾಗರ

ಯಾರು ನೋಡಲಿ ಬಿಡಲಿ, ಅದಕ್ಕೆ ಗಮನ ನೀಡದೆ ಹಳ್ಳಿಯಲ್ಲಿ ಮರೆತು ಹೋಗುತ್ತಿರುವ ಹಸೆ ಚಿತ್ತಾರ ಮತ್ತು ಭತ್ತದ ತೋರಣಗಳ ಭವ್ಯತೆ ಉಳಿಸಿ ಬೆಳೆಸುವುದಕ್ಕಾಗಿಯೇ ಎರಡೂವರೆ ದಶಕಗಳಿಂದ ಅವಿರತ ತೊಡಗಿಕೊಂಡಿರುವ ಸಿರಿವಂತೆ ಗ್ರಾಮದ ಚಂದ್ರಶೇಖರ ಕುಟುಂಬಕ್ಕೆ ಶುಕ್ರವಾರ ಸಾರ್ಥಕತೆಯ ಕ್ಷಣ. ತಾಲೂಕಿಗೊಂದು ಕೀರ್ತಿ ಕಳಶವಾಗಿರುವ ಸಿರಿವಂತೆ ಚಂದ್ರಶೇಖರ್ ಈ ಬಾರಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಜಾನಪದೀಯ ಕಲೆಯಾಗಿರುವ ಹಸೆ ಚಿತ್ತಾರ ಮಲೆನಾಡ ಭಾಗದಲ್ಲಿ ಹಲವು ಮನೆಗಳಲ್ಲಿರಬಹುದು. ಆದರೆ ಚಂದ್ರಶೇಖರ್ ಕೇವಲ ಅಪ್ಪ ನೆಟ್ಟ ಆಲದ ಮರ ಎಂದು ಜೋತು ಬೀಳದೆ ಹಸೆ ಚಿತ್ತಾರದ ನಿಜವಾದ ಉದ್ದೇಶ ಅದಕ್ಕಿರುವ ಮಹತ್ವ ತಿಳಿಯುವ ವೈಜ್ಞಾನಿಕ ಆಳಕ್ಕೆ ಇಳಿದು ಶೋಧಿಸಿದವರು. ಕಲಾವಿದನೊಬ್ಬನಿಗೆ ಚಿತ್ರ ಬರೆಯುವ ಕೈಚಳಕ ಮಾತ್ರ ಇದ್ದರೆ ಸಾಲದು. ಮುಖ್ಯವಾಗಿ ಶೋಧಕ ಚಕ್ಷು ಹೊಂದಿರಲೇಬೇಕು. ಆ ಮೂಲಕ ಹುಡುಕಿರುವುದನ್ನು ಸಾಧಿಸುವ ಛಲ ಬೇಕು. ಅದಕ್ಕಾಗಿ ಕಾಯುವ ತಾಳ್ಮೆ ಬೇಕು. ಈ ಸಿದ್ಧಾಂತವನ್ನು ನೆಚ್ಚಿ ಹೆಜ್ಜೆ ಇಟ್ಟಿರುವ ಚಂದ್ರಶೇಖರ್ ಕುಟುಂಬ ಭತ್ತದ ಕದಿರಿನಲ್ಲಿ ನೆಯ್ಗೆ ಮಾಡಿರುವ ಅತೀ ಉದ್ದದ ತೋರಣ ದಾಖಲೆಗಳಲ್ಲಿ ಶಾಶ್ವತ ಹೆಸರು ಬರೆದಿತ್ತು. ಅದು ಇದೀಗ ಕರ್ನಾಟಕ ರಾಜ್ಯದ ರಾಜ್ಯೋತ್ಸವ ಪ್ರಶಸ್ತಿಯ ಗರಿ ಮೂಡಿಸಿದೆ.

ಸಾಮಾನ್ಯವಾಗಿ ಮನೆಯ ಬಾಗಿಲಲ್ಲಿ ನೇತು ಬಿಡಬಹುದಾದ ಮೂರು ಅಡಿ ಭತ್ತದ ಕದಿರ ತೋರಣ ಈ ಹಿಂದೆ ಮಲೆನಾಡ ಬಹುತೇಕ ಮನೆಗಳಲ್ಲಿ ಕಂಡು ಬರುತ್ತಿತ್ತು. ಆದರೆ ಇದಕ್ಕೆ ಸೀಮಿತವಾಗದ ಚಂದ್ರಶೇಖರ್ ಸರ್ವಕಾಲಿಕ ದಾಖಲೆಯಾಗಿಸಿ ಭತ್ತಕ್ಕೂ ಅದರಿಂದ ಮಾಡಿರುವ ತೋರಣಕ್ಕೂ ಮಾತ್ರವಲ್ಲ, ಪುರಾತನ ಕಾಲದಿಂದ ಇಲ್ಲಿಯವರೆಗೆ ಈ ಕಲಾತ್ಮತೆ ಉಳಿಸಿಕೊಂಡು ಬಂದಿರುವ ಕಲಾವಿದರಿಗೂ ಹೆಸರು ತಂದುಕೊಡುವ ಕೆಲಸ ಮಾಡಿದ್ದಾರೆ. ಹಲವು ದಿನಗಳ ಶ್ರಮ ಮತ್ತು ಹಲವರ ಸಹಕಾರದಿಂದ 2008 ರಲ್ಲಿಯೇ 1111 ಅಡಿ ಉದ್ದದ ಕದಿರ ತೋರಣ ಸಿದ್ದಗೊಳಿಸಿ ಜಗತ್ತಿನಲ್ಲಿಯೇ ಅತೀ ಉದ್ದದ ಭತ್ತದ ತೋರಣ ನಿರ್ಮಿಸಿದ ದಾಖಲೆ ಬರೆದಿದ್ದರು.

ಇಂತಹ ಸಾಧನೆ ಮಾಡುವುದೇ ಕಷ್ಟ. ಆದಾಯ ತರುವ ಕಾಯಕ ಹೊರತುಪಡಿಸಿ ಬೇರ್‍ಯಾವ ಸಾಧನೆಯಲ್ಲೂ ಆಸಕ್ತಿ ಉಳಿಯಲ್ಲ. ಆದರೆ ಚಂದ್ರಶೇಖರ ಕುಟುಂಬದ ವಿಚಾರಕ್ಕೆ ಬಂದರೆ ಇದಕ್ಕೆ ತದ್ವಿರುದ್ದ. ಅದಕ್ಕಾಗಿ 2016 ರಲ್ಲಿಯೂ ಮತ್ತೆ ಇಂತಹ ಸಾಧನೆ ಮಾಡಿದ್ದರು.

ಈಗಿನ ಹೊಸ ತಳಿ ಭತ್ತ ಮುಟ್ಟಿದಾಕ್ಷಣ ಉದುರುವುದರಿಂದ ನೇಯ್ಗೆ ಮಾಡಿಯೂ ಪ್ರಯೋಜನವಿಲ್ಲ. ಹಾಗಾಗಿ ಅದಕ್ಕೆ ಪೂರಕ ತಳಿ ಹುಡುಕಿ ಆ ಮನೆಯವರ ಮನವೊಲಿಸಿ ಕಟಾವು ಮಾಡಿ ನೇಯ್ಗೆ ಮಾಡಬೇಕು. ಕಷ್ಟಪಟ್ಟು ಸಂಗ್ರಹಿಸಿ ತೋರಣವನ್ನು ನೆಯ್ಗೆ ಮಾಡುತ್ತಾರೆ.

ಚಂದ್ರಶೇಖರ ಸಾಧನೆಯ ಹಿಂದೆ ಅವರ ಪತ್ನಿ ಗೌರಿಯವರ ಕೊಡುಗೆ ಅಪಾರ. ಇವರ ಹಸೆ ಚಿತ್ತಾರ ಮತ್ತು ಭತ್ತದ ತೋರಣದ ಕೈಚಳಕದ ವಸ್ತು ಪ್ರದರ್ಶನ ದೇಶ ಮಾತ್ರವಲ್ಲ ಜಪಾನ್, ದುಬೈಗಳಲ್ಲಿಯೂ ಪ್ರದರ್ಶನಗೊಂಡಿದೆ. ಇವರ ಕಲಾ ನೈಪುಣ್ಯತೆಗೆ ಅವರೂ ಬೆರಗಾಗಿದ್ದಾರೆ.

ನಾಡು, ನುಡಿ, ಜಲಕ್ಕಾಗಿ ಒಗ್ಗಟ್ಟು ಅಗತ್ಯ

ಸೊರಬ: ಕನ್ನಡ ನಾಡು, ನುಡಿ, ಜಲದ ವಿಷಯದಲ್ಲಿ ಪ್ರತಿಯೊಬ್ಬ ಕನ್ನಡಿಗರು ಒಗ್ಗಟ್ಟಾಗಿರಬೇಕು ಎಂದು ಹಿರಿಯ ವಕೀಲ ವೈ.ಜಿ. ಪುಟ್ಟಸ್ವಾಮಿ ಹೇಳಿದರು.

ಶುಕ್ರವಾರ ಪಟ್ಟಣದ ವಿದ್ಯುತ್ ನಗರದ ಡಾ. ಪುನೀತ್ ರಾಜ್‌ಕುಮಾರ್ ವೃತ್ತದಲ್ಲಿ ಪುನೀತ್ ರಾಜ್‌ಕುಮಾರ್ ಅಭಿಮಾನಿ ಬಳಗದಿಂದ ಹಮ್ಮಿಕೊಂಡ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ನಾಡಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ರಾಜ್ಯಕ್ಕೆ ಕರ್ನಾಟಕವೆಂದು ಮರುನಾಮಕರಣಗೊಂಡು ಐವತ್ತು ವರ್ಷಗಳು ಪೂರೈಸಿದ ಹಿನ್ನೆಲೆಯಲ್ಲಿ ಸರ್ಕಾರ ಸುವರ್ಣ ಸಂಭ್ರಮವನ್ನು ಆಚರಿಸುತ್ತಿದೆ. ಸ್ವಾಭಿಮಾನದ ಕೆಚ್ಚೆದೆ ಇರುವ ಕನ್ನಡಿಗರ ಹೋರಾಟ ಚರಿತ್ರೆಯ ಪುಟದಲ್ಲಿ ದಾಖಲಾಗಿದೆ. ಮನೆಗಳಲ್ಲಿ ಯಾವುದೇ ಭಾಷೆಯನ್ನು ಮಾತನಾಡಿದರೂ ಸಹ ವ್ಯವಹಾರಿಕವಾಗಿ ಕನ್ನಡವನ್ನು ಬಳಸಬೇಕು. ಇತರೆ ಭಾಷೆಗಳ ಬಗ್ಗೆ ಗೌರವ ನೀಡುವ ಜೊತೆಗೆ ಯಾವುದೇ ಭಾಷೆಯನ್ನು ಕಲಿತರು ಸಹ ನೆಲದ ಭಾಷೆ ಕನ್ನಡದ ಬಗ್ಗೆ ಆತ್ಮಾಭಿಮಾನ ಹೊಂದಿರಬೇಕು ಎಂದರು.

ಕರುನಾಡಿನ ಜನತೆಯಿಂದ ಪ್ರೀತಿಯಿಂದ ಕರೆಯಲ್ಪಡುತ್ತಿದ್ದ ಡಾ. ಪುನೀತ್ ರಾಜ್‌ಕುಮಾರ್ ಅವರು ನಮ್ಮನ್ನೆಲ್ಲ ಅಗಲಿ ಮೂರು ವರ್ಷಗಳು ಗತಿಸಿದೆ. ಆದರೂ, ಅಭಿಮಾನಿಗಳಲ್ಲಿ ಕಿಂಚಿತ್ತು ಅಭಿಮಾನ ಕಡಿಮೆಯಾಗದಿರುವುದು ಕಾಣಬಹುದು. ಅಪ್ಪು ಹೆಸರಿನಲ್ಲಿ ಅನೇಕ ಸಾಮಾಜಿಕ ಕಾರ್ಯಗಳು ನಿರಂತರವಾಗಿ ನಡೆಯುತ್ತಿರುವುದೇ ಸಾಕ್ಷಿ. ನಾಡಿನಲ್ಲಿ ಮತ್ತೊಮ್ಮೆ ಪುನೀತ್ ರಾಜ್‌ಕುಮಾರ್ ಹುಟ್ಟಿಬರಲಿ ಎಂಬುದು ಕೋಟ್ಯಂತರ ಕನ್ನಡಿಗರ ಆಸೆಯೂ ಆಗಿದೆ ಎಂದರು.

ಈ ಸಂದರ್ಭದಲ್ಲಿ ಗ್ರಾಪಂ ಮಾಜಿ ಉಪಾಧ್ಯಕ್ಷ ಕೃಷ್ಣಮೂರ್ತಿ ಕೊಡಕಣಿ, ಉಪನ್ಯಾಸಕ ಎನ್.ಎಚ್. ಲಿಂಗೇಶ್, ಮಲ್ಲಿಕಾರ್ಜುನ ಟ್ರ್ಯಾಕ್ಟರ್, ಪುನೀತ್ ರಾಜ್‌ಕುಮಾರ್ ಅಭಿಮಾನಿ ಬಳಗದ ಎಸ್. ಹರೀಶ್, ಅರುಣ್, ನಟೇಶ್, ಆರ್. ಕೃಷ್ಣಮೂರ್ತಿ, ಮನೋಜ್, ಗಂಧರ್ವ, ಇಬ್ರಾಹಿಂ, ಸಂತೋಷ, ಪ್ರಭಾಕರ, ರಾಜಪ್ಪ, ರಾಜೀವ್, ಪ್ರವೀಣ್, ರಾಘವೇಂದ್ರ ಸೇರಿದಂತೆ ಇತರರಿದ್ದರು.

ಸೊರಬದಲ್ಲಿ ಪುನೀತ್ ರಾಜ್‌ಕುಮಾರ್ ಅಭಿಮಾನಿ ಬಳಗದಿಂದ ಕನ್ನಡ ರಾಜ್ಯೋತ್ಸವ ನಡೆಯಿತು.

ಪ್ರಾಂತ್ಯಗಳ ವಿಲೀನದಿಂದ ರಾಜ್ಯ ಉದಯ

ಹೊಸನಗರ: ಕನ್ನಡ ನಾಡಿನ ಸಮಸ್ತ ಜನತೆ ಯಾವುದೇ ಜಾತಿ, ಧರ್ಮ, ಪಂಥಗಳ ಭೇದವಿಲ್ಲದೆ ಒಗ್ಗಟ್ಟಿನಿಂದ ಕನ್ನಡ ರಾಜ್ಯೋತ್ಸವವನ್ನು ಆಚರಿಸುತ್ತೇವೆ ಎಂದು ಹೊಸನಗರದ ತಹಸೀಲ್ದಾರ್ ರಶ್ಮೀ ಹಾಲೇಶ್ ಹೇಳಿದರು.

ನೆಹರು ಮೈದಾನದಲ್ಲಿ ವಿವಿಧ ಸಂಘ-ಸಂಸ್ಥೆ ತಾಲೂಕು ಆಡಳಿತ, ತಾಲೂಕು ಪಂಚಾಯತಿ ಪಟ್ಟಣ ಪಂಚಾಯತಿ ಹಾಗೂ ನಾಡ ಹಬ್ಬಗಳ ಸಮಿತಿಯ ಸಂಯುಕ್ತ ಆಶ್ರಯದಲ್ಲಿ 69ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

1956 ರಲ್ಲಿ ಭಾರತದ ಎಲ್ಲ ಕನ್ನಡ ಭಾಷೆ ಮಾತನಾಡುವ ಪ್ರದೇಶಗಳನ್ನು ವಿಲೀನಗೊಳಿಸಿ ಮೈಸೂರು ರಾಜ್ಯವನ್ನು ರಚಿಸಲಾಯಿತು.ಆಲೂರು ವೆಂಕಟರಾವ್‌ರವರು 1905 ರಲ್ಲಿ ಕರ್ನಾಟಕ ಏಕೀಕರಣ ಚಳುವಳಿಯೊಂದಿಗೆ ರಾಜ್ಯವನ್ನು ಏಕೀಕರಿಸುವ ಕನಸು ಕಂಡ ಮೊದಲ ವ್ಯಕ್ತಿ 1950 ರಲ್ಲಿ ಭಾರತ ದೇಶವು ಗಣರಾಜ್ಯವಾಯಿತು. ನಿರ್ದಿಷ್ಟ ಪ್ರದೇಶಗಳಲ್ಲಿ ಮಾತನಾಡುವ ಭಾಷೆಯ ಆಧಾರದ ಮೇಲೆ ದೇಶದಲ್ಲಿ ವಿವಿದ ಪ್ರಾಂತ್ಯಗಳು ರಚನೆಯಾದವು. ಈ ತರ್ಕಕ್ಕೆ ಅನುಗುಣವಾಗಿ ರಾಜ್ಯದ ಹೆಸರನ್ನು ಕರ್ನಾಟಕ ಎಂದು ಹೆಸರನ್ನು ನವೆಂಬರ್ 1 1973 ರಲ್ಲಿ ಬದಲಾಯಿಸಲಾಯಿತು ಎಂದರು.

ಬಿಇಒ ಕೃಷ್ಣಮೂರ್ತಿ, ದೈಹಿಕ ಪರೀವಿಕ್ಷಕರಾದ ಬಾಲಚಂದ್ರ ರಾವ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ತಾ.ಮ.ನರಸಿಂಹ, ತಾಪಂ ಇಒ ನರೇಂದ್ರಕುಮಾರ್, ಸರ್ಕಲ್ ಇನ್ಸ್‌ಪೆಕ್ಟರ್ ಗುರಣ್ಣ ಎಸ್ ಹೆಬ್ಬಾಳ್, ಅವಿನಾಶ್, ತಾಕಸಾಪ ಅಧ್ಯಕ್ಷ ಡಾ.ಸೊನಲೆ ಶ್ರೀನಿವಾಸ್, ಪಟ್ಟಣ ಪಂಚಾಯತಿ ಮುಖ್ಯಾದಿಕಾರಿ ಉಮೇಶ್ ಎಸ್ ಗುಡ್ಡದ್, ಶಿರಾಸ್ಥೆದಾರ್ ಚಿರಾಗ್, ನಾಡಹಬ್ಬಗಳ ಸಮಿತಿಯ ಸದಸ್ಯರಾದ ಶ್ರೀದರ ಉಡುಪ, ಶ್ರೀನಿವಾಸ್ ಕಾಮತ್, ರಾಜಮೂರ್ತಿ, ವರ್ತಕರ ಸಂಘದ ಅಧ್ಯಕ್ಷರಾದ ವಿಜೇಂದ್ರ ಶೇಟ್, ಪಟ್ಟಣ ಪಂಚಾಯಿತಿ ಅಧ್ಯಕ್ಷ ನಾಗಪ್ಪ, ಕಮಲಾಕರ, ಧನಂಜಯ, ಸುಹಾಸ್, ಗಾಯಿತ್ರಿ ನಾಗರಾಜ್, ಅಂಜಲಿ ಅಶ್ವಿನ್‌ಕುಮಾರ್ ಇದ್ದರು.

ಹೊಸನಗರದ ನೆಹರು ಮೈದಾನದಲ್ಲಿ ವಿವಿಧ ಸಂಘ-ಸಂಸ್ಥೆ ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ನಾಡ ಹಬ್ಬಗಳ ಸಮಿತಿಯಿಂದ 69ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ತಹಸೀಲ್ದಾರ್ ರಶ್ಮೀ ಹಾಲೇಶ್ ಮಾತನಾಡಿದರು.

ಬೆಳೆ ಹಾನಿ ಪರಿಹಾರಕ್ಕೆ ರೈತಸಂಘ ಮನವಿ

ಶಿಕಾರಿಪುರ: ತಾಲೂಕು ರೈತಸಂಘ - ಹಸಿರುಸೇನೆ ನೂತನ ಘಟಕವನ್ನು ರಚಿಸಲಾಗಿದೆ ಎಂದು ತಾಲೂಕು ಘಟಕದ ನೂತನ ಅಧ್ಯಕ್ಷ ಮಾಳಗೊಂಡನ ಕೊಪ್ಪದ ಪ್ರಮೋದ್ ಡಿ. ಪಿ ಹೇಳಿದರು.

ಪಟ್ಟಣದ ಸುದ್ದಿ ಮನೆಯಲ್ಲಿ ಮಾತನಾಡಿದ ಅವರು,ತಾ.ಗೌರವ ಅಧ್ಯಕ್ಷರಾಗಿ ತಡಸನಹಳ್ಳಿಯ ಶಿವಮೂರ್ತಪ್ಪ, ಅಧ್ಯಕ್ಷರಾಗಿ ಮಾಳಗೊಂಡನಕೊಪ್ಪದ ಪ್ರಮೋದ್ ಡಿ ಪಿ, ಉಪಾಧ್ಯಕ್ಷರಾಗಿ ತಾಳಗುಂದದ ಚಂದ್ರಶೇಖರ್ ಮತ್ತು ಬೆಂಡೆಕಟ್ಟೆಯ ಅಬ್ದುಲ್ ಮುನಾಫ್, ಕಾರ್ಯದರ್ಶಿಯಾಗಿ ಶೀರಿಹಳ್ಳಿಯ ಚಂದ್ರಶೇಖರ್ ಬಿ ಎಂ ಹಸಿರು ಸೇನೆಯ ಅಧ್ಯಕ್ಷರಾಗಿ ತಾಳಗುಂದದ ಚೆನ್ನಬಸಪ್ಪ ಕೆ.ಆಯ್ಕೆಯಾಗಿರುವುದಾಗಿ ತಿಳಿಸಿದರು.

ಜಿಲ್ಲಾ ಕಾರ್ಯದರ್ಶಿ ಕೆ ಎಂ ಬಲೀಂದ್ರಪ್ಪ ಮಾತನಾಡಿ, ಶಿವಮೊಗ್ಗ ಜಿಲ್ಲೆಯಲ್ಲಿ ಅತಿಹೆಚ್ಚಿನ ಮಳೆಯಾಗಿದ್ದು ಇದರಿಂದಾಗಿ ಅಡಿಕೆ ಬೆಳೆಯು ಕೊಳೆ ರೋಗಕ್ಕೆ ಹಾಗೂ ಭತ್ತದ ಬೆಳೆಯು ಜಿಗಿ ರೋಗಕ್ಕೆ ತುತ್ತಾಗಿದೆ.ಮೆಕ್ಕೆಜೋಳವು ಅತಿವೃಷ್ಟಿಯಿಂದಾಗಿ ಹಾಳಾಗಿದ್ದು ಬಂದ ಜೋಳವನ್ನು ಮುರಿಯದೆ ನಿಲುವಿನಲ್ಲೇ ಮೊಳಕೆ ಬರುತ್ತಿದೆ,ಇದರಿಂದಾಗಿ ರೈತರು ತೀವ್ರ ಆತಂಕಕ್ಕೆ ಒಳಗಾಗಿದ್ದು ಕೂಡಲೇ ಪರಿಹಾರ ಧನವನ್ನು ನೀಡಬೇಕು ಎಂದು ಆಗ್ರಹಿಸಿದರು. ಈ ಕುರಿತಂತೆ ತಾಲೂಕಿನ ಶಾಸಕರು ಹಾಗೂ ರಾಜ್ಯ ಬಿಜೆಪಿ ಅಧ್ಯಕ್ಷ ವಿಜಯೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು ಎಂದು ಆಗ್ರಹಿಸಿದರು.

ನೂತನ ಉಪಾಧ್ಯಕ್ಷ ಅಬ್ದುಲ್ ಮುನಾಫ್ ಮಾತನಾಡಿ,ತಾಲೂಕು ಕಚೇರಿಯಲ್ಲಿನ ರೆಕಾರ್ಡ್ ರೂಂನಲ್ಲಿ ಸಿಬ್ಬಂದಿ ಕೊರತೆಯಿಂದಾಗಿ ಸಮಯಕ್ಕೆ ದಾಖಲಾತಿಗಳು ದೊರೆಯದೆ ರೈತರಿಗೆ ಸಂಕಷ್ಟ ಉಂಟಾಗುತ್ತಿದ್ದು ಈ ಕುರಿತು ಶಾಸಕರು ಮತ್ತು ಸಂಸದರು ಗಮನಹರಿಸಿ ಸಿಬ್ಬಂದಿ ಕೊರತೆಯನ್ನು ನೀಗಿಸಬೇಕು ಎಂದರು. ಗೋಷ್ಠಿಯಲ್ಲಿ ಪರಮೇಶ್ವರಪ್ಪ, ತಿಪ್ಪೇಶಪ್ಪ, ನಾಗಪ್ಪ, ಬಸವರಾಜಪ್ಪ ಸದಸ್ಯರು ಉಪಸ್ಥಿತರಿದ್ದರು.



ರೈತಸಂಘದ ಅಧ್ಯಕ್ಷ ಪ್ರಮೋದ್ ಸುದ್ದಿಮನೆಯಲ್ಲಿ ಮಾತನಾಡಿದರು.

ಕನ್ನಡ ಬೆಳೆಸುವ ಜವಾಬ್ದಾರಿ ನಮ್ಮದು

ಸೊರಬ: ಕನ್ನಡ ಭಾಷೆಯನ್ನು ಬೆಳೆಸುವ ಜವಾಬ್ದಾರಿ ಎಲ್ಲರ ಮೇಲಿದೆ ಎಂದು ತಹಶೀಲ್ದಾರ್ ಮಂಜುಳಾ ಬಿ. ಹೆಗಡಾಳ್ ಹೇಳಿದರು.

ಪಟ್ಟಣದ ಡಾ. ರಾಜ್ ಕುಮಾರ್ ರಂಗಮಂದಿರದ ಆವರಣದಲ್ಲಿ ತಾಲೂಕು ಆಡಳಿತ, ತಾಪಂ, ಪುರಸಭೆ, ವಿವಿಧ ಇಲಾಖೆಗಳು ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಹಮ್ಮಿಕೊಂಡ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕನ್ನಡ ಕೇವಲ ಭಾಷೆಯಾಗಿರದೇ ನಮ್ಮ ಹೆಮ್ಮೆ ಮತ್ತು ಅಸ್ಮಿತೆಯಾಗಿದ್ದು, ನಾಡಿನ ಸಂಪತ್ತನ್ನು ರಕ್ಷಿಸುವ ಹೊಣೆ ಎಲ್ಲರದ್ದಾಗಿದೆ. ಕರ್ನಾಟಕ ರಾಜ್ಯವೆಂದು ಪುನರ್ ನಾಮಕರಣಗೊಂಡು ಐವತ್ತು ವರ್ಷಗಳು ತುಂಬಿದ್ದು, ಕನ್ನಡವನ್ನು ಮತ್ತಷ್ಟು ಜನಪ್ರಿಯಗೊಳಿಸಿ, ವ್ಯವಹಾರಿಕ ಭಾಷೆಯಾಗಿ ಬಳಸಬೇಕು. ಕನ್ನಡವನ್ನು ಬೆಳೆಸುವ ಜೊತೆಗೆ ಬಲಿಷ್ಠಗೊಳಿಸೋಣ ಎಂದು ಕರೆ ನೀಡಿದರು.

ನಾಡ ಧ್ವಜಾರೋಹಣ ನೆರವೇರಿಸಿದ ಕಸಾಪ ತಾಲೂಕು ಅಧ್ಯಕ್ಷ ಶಿವಾನಂದ ಪಾಣಿ ಮಾತನಾಡಿ, ಕರ್ನಾಟಕ ವೆಂದು ನಾಮಕರಣಗೊಂಡು ಸುವರ್ಣ ವರ್ಷಾಚರಣೆ ಹಿನ್ನೆಲೆಯಲ್ಲಿ ಕನ್ನಡ ರಥ ನಾಡಿನೆಲ್ಲಡೆ ಯಶಸ್ವಿಯಾಗಿ ಸಂಚರಿಸಿತು. ಕನ್ನಡದ ಬಗ್ಗೆ ಜಾಗೃತಿ ಮೂಡಿಸುವ ಕೆಲಸವಾಗಬೇಕು. ಪ್ರತಿಯೊಬ್ಬರಲ್ಲೂ ಕನ್ನಡಾಭಿಮಾನ ಬೆಳೆಯುವಂತಾಗಬೇಕು. ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ ನಾಡಿನಲ್ಲಿ ಕನ್ನಡಕ್ಕೆ ಮೊದಲ ಆದ್ಯತೆ ನೀಡಬೇಕು. ಹೊರ ರಾಜ್ಯದಿಂದ ವಲಸೆ ಬಂದವರಿಗೂ ಕನ್ನಡ ಕಲಿಸಬೇಕು ಎಂದು ತಿಳಿಸಿದರು.

ಮಕ್ಕಳ ಛದ್ಮವೇಷ ಹಾಗೂ ಡೊಳ್ಳು ಕುಣಿತ ಮೆರವಣಿಗೆಗೆ ಮೆರುಗು ತಂದಿತು. ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಹಸೆಚಿತ್ತಾರ ಕಲಾವಿದೆ ಪಾರ್ವತಮ್ಮ ಸಾರೇಕೊಪ್ಪ ಮತ್ತು ರಂಗ ಕಲಾವಿದ ಶಿವಪ್ಪ ಮಾಳೆಕೊಪ್ಪ ಅವರನ್ನು ಸನ್ಮಾನಿಸಲಾಯಿತು.

ತಾಪಂ ಇಒ ಡಾ. ಎನ್.ಆರ್. ಪ್ರದೀಪ್ ಕುಮಾರ್, ಬಿಇಒ ಆರ್. ಪುಷ್ಪಾ, ನೌಕರರ ಸಂಘದ ತಾಲೂಕು ಅಧ್ಯಕ್ಷ ಎಸ್. ಮಂಜುನಾಥ್, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಕೆ.ಜಿ. ಕುಮಾರ್, ಕರವೇ ತಾಲೂಕು ಅಧ್ಯಕ್ಷ ಸಿ.ಕೆ. ಬಲೀಂದ್ರಪ್ಪ, ಕನ್ನಡ ಸಾಹಿತ್ಯ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಡಿ.ಎಸ್. ಶಂಕರ್ ಶೇಟ್, ಪುರಸಭೆ ಸದಸ್ಯರಾದ ಎಂ.ಡಿ. ಉಮೇಶ್, ಈರೇಶ್ ಮೇಸ್ತ್ರಿ, ಅಫ್ರೀನಾ, ಪ್ರೇಮಾ ಟೋಕಪ್ಪ, ಮುಖ್ಯಾಧಿಕಾರಿ ಎಚ್.ವಿ. ಚಂದನ್, ಪಿಎಸ್‌ಐ ನಾಗರಾಜ್, ಚಿಂತಕ ರಾಜಪ್ಪ ಮಾಸ್ತರ್, ಅಕ್ಷರ ದಾಸೋಹ ನಿರ್ದೇಶಕ ಡಾ. ಶ್ರೀಕಾಂತ್, ಕ್ಷೇತ್ರ ಸಮನ್ವಯಾಧಿಕಾರಿ ದಯಾನಂದ ಕಲ್ಲೇರ್, ದೈಹಿಕ ಶಿಕ್ಷಣ ಪರಿವೀಕ್ಷಕ ಲಿಂಗರಾಜ ಒಡೆಯರ್ ಇದ್ದರು.

ಸೊರಬದಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ನಡೆಯಿತು.

ಸಮಾಚಾರ ಸಣ್ಣದಲ್ಲ

ಹಲ್ಮಿಡಿ ಶಾಸನದ ಪ್ರತಿಕೃತಿ ಅನಾವರಣ

ಮಂಡ್ಯದಲ್ಲಿ ಸಚಿವ ಚಲುವರಾಯಸ್ವಾಮಿ ಅವರಿಂದ ಹಲ್ಮಿಡಿ ಶಾಸನದ ಪ್ರತಿಕೃತಿ ಅನಾವರಣ.

ಮಂಡ್ಯ: ಕರ್ನಾಟಕ ಸುವರ್ಣ ಸಂಭ್ರಮದ ಅಂಗವಾಗಿ ಕನ್ನಡದ ಮೊದಲ ಶಾಸನವಾದ ಹಲ್ಮಿಡಿ ಶಾಸನದ ಪ್ರತಿಕೃತಿಯನ್ನು ಮಂಡ್ಯ ಜಿಲ್ಲಾಧಿಕಾರಿ ಕಚೇರಿಯ ಎದುರಿನ ಕಾವೇರಿ ಉದ್ಯಾನ ವನದಲ್ಲಿ ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್ ಚಲುವರಾಯಸ್ವಾಮಿ ಅವರು ಅನಾವರಣಗೊಳಿಸಿದರು. ಕಾರ್ಯಕ್ರಮದಲ್ಲಿ ಮಂಡ್ಯ ಶಾಸಕ ಪಿ.ರವಿಕುಮಾರ್, ವಿಧಾನ ಪರಿಷತ್ ಶಾಸಕ ದಿನೇಶ್ ಗೂಳಿಗೌಡ, ಮುಡಾ ಅಧ್ಯಕ್ಷ ನಯೀಮ್, ಜಿಲ್ಲಾಧಿಕಾರಿ ಡಾ. ಕುಮಾರ, ಅಪರ ಜಿಲ್ಲಾಧಿಕಾರಿ ಡಾ. ಎಚ್ ಎಲ್ ನಾಗರಾಜು, ಕನ್ನಡ ಸಾಹಿತ್ಯ ಸಮ್ಮೇಳನದ ಸಮನ್ವಯ ಸಮಿತಿ ಅಧ್ಯಕ್ಷೆ ಡಾ.ಮೀರಾ ಶಿವಲಿಂಗಯ್ಯ ಮೊದಲಾದ ಗಣ್ಯರು ಹಾಜರಿದ್ದರು. ಹಲ್ಮಿಡಿ ಶಾಸನದ ಪ್ರತಿಕೃತಿಯನ್ನು ಮೇಲ್ಮನೆ ಸದಸ್ಯ ದಿನೇಶ್ ಗೂಳಿಗೌಡ ಅವರ ಪ್ರಾದೇಶಿಕ ಅಭಿವೃದ್ಧಿಯ ಅನುದಾನದಿಂದ ನಿರ್ಮಿಸಲಾಗಿದೆ.

ಗರ್ಭಗುಡಿ ಸೇರಿದ ದೇವೀರಮ್ಮ

ಚಿಕ್ಕಮಗಳೂರು: ದೇವಿರಮ್ಮ ದೇವಾಲಯದ ಗರ್ಭ ಗುಡಿಯ ಬಾಗಿಲಿಗೆ ಹಾಕಿದ್ದ ಪರದೆ ಓರ್ವ ವ್ಯಕ್ತಿ ಒಳ ಹೋಗುವಷ್ಟು ಸರಿದದ್ದನ್ನು ಕಂಡ ಭಕ್ತರು, ದೇವಿಯೇ ಗರ್ಭಗುಡಿ ಪ್ರವೇಶಿಸಿದಳೆಂದು ಸಂಭ್ರಮಿಸಿದರು. ವರ್ಷದಲ್ಲಿ ಒಂದು ಬಾರಿ ದರ್ಶನ ನೀಡುವ ದೇವಿರಮ್ಮ, ತನ್ನನ್ನು ನೋಡಲು ಬೆಟ್ಟ ಹತ್ತಿ ಬರುವ ಭಕ್ತರಿಗಾಗಿ ದೀಪಾವಳಿ ಅಮವಾಸ್ಯೆಯ ಹಿಂದಿನ ರಾತ್ರಿ ಬೆಟ್ಟದಲ್ಲಿ ನೆಲೆಸಿರುತ್ತಾಳೆ. ತಾಯಿ ಬೆಟ್ಟವನ್ನಿಳಿದು ಗರ್ಭಗುಡಿ ಪ್ರವೇಶಿಸುತ್ತಾಳೆ ಎನ್ನುವ ನಂಬಿಕೆಗೆ 800 ವರ್ಷಗಳ ಇತಿಹಾಸವಿದೆ. 3 ಸಾವಿರ ಅಡಿ ಎತ್ತರದಲ್ಲಿರುವ ಬೆಟ್ಟವನ್ನಿಳಿದು ಬಂದು ದೇವಿ ಗರ್ಭಗುಡಿ ಪ್ರವೇಶಿಸುತ್ತಾಳೆ ಅನ್ನೋದು ಭಕ್ತರ ನಂಬಿಕೆ. ಬಿಂಡಿಗ ಮಲ್ಲೇನಹಳ್ಳಿ ದೇವಿರಮ್ಮನ ದೇವಾಲಯಕ್ಕೆ ಕಳೆದೆರಡು ದಿನಗಳಿಂದ ಸಾವಿರಾರು ಭಕ್ತರು ಆಗಮಿಸಿದ್ದಾರೆ. ಬೆಟ್ಟ ಹತ್ತೋ ಭಕ್ತರಿಗೆ ದರ್ಶನ ನೀಡಲೆಂದೇ ಅಮಾವಾಸ್ಯೆಯ ಹಿಂದಿನ ರಾತ್ರಿ ಬೆಟ್ಟದಲ್ಲಿ ನೆಲೆಸುವ ತಾಯಿ ಗರ್ಭಗುಡಿ ಪ್ರವೇಶಿಸುತ್ತಾಳೆ.

ಪಟಾಕಿ ಹಚ್ಚಿದ್ದನ್ನು ಪ್ರಶ್ನಿಸಿದ್ದಕ್ಕೆ ಕೊಲೆ

ರಾಯಚೂರು: ನಮ್ಮ ಮನೆ ಬಳಿ ಯಾಕೆ ಪಟಾಕಿ ಹಚ್ಚುತ್ತೀರಿ ಅಂದಿದ್ದಕ್ಕೆ ಕೊಲೆ ಮಾಡಿರುವಂತಹ ಘಟನೆ ನಗರದ ರಾಗಿಮನಗಡ್ಡದಲ್ಲಿ ನಡೆದಿದೆ. ನರಸಿಂಹಲು (32) ಮೃತ ವ್ಯಕ್ತಿ. ರಾಯಚೂರು ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಪರಸ್ಪರ ಕೇಸ್ ದಾಖಲಾಗಿದ್ದು, ಐವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ರಾಗಿಮನಗಡ್ಡದಲ್ಲಿ ಕಾರ್ನರ್ ಬಳಿ ವಾಸಿಸುತ್ತಿದ್ದ ನರಸಿಂಹ ಮೃತರು. ಗುರುವಾರ ರಾತ್ರಿ ರಸ್ತೆಯಲ್ಲಿ ಅದೇ ಪ್ರದೇಶದ ಹುಡುಗರು ಪಟಾಕಿ ಹೊಡೆಯುತ್ತಿದ್ದರು. ಪಟಾಕಿ ಏಕೆ ಹೊಡೆಯುತ್ತಿದ್ದಿರಿ ಅಂತ ನರಸಿಂಹ ಪ್ರಶ್ನಿಸಿದ್ದಾರೆ. ಆಗ ಹುಡುಗರು ಮಾತು ಕೇಳದ ಹಿನ್ನೆಲೆಯಲ್ಲಿ ನರೇಶ್, ಪ್ರವೀಣ್ ಮೇಲೆ ಮಚ್ಚಿನಿಂದ ಹಲ್ಲೆ ಮಾಡಿದ್ದಾರೆ. ಆಗ ಹಲ್ಲೆಗೊಳಗಾದ ಯುವಕರು ಹಾಗೂ ಅವರ ಕಡೆಯವರು ನರಸಿಂಹನ ಮೇಲೆ ದೊಣ್ಣೆಗಳಿಂದ ಹಲ್ಲೆ ನಡೆಸಿ ಹತ್ಯೆಗೈಯಲಾಗಿದೆ. ಈ ಪ್ರಕರಣ ಸಂಬಂಧ ದೂರು-ಪ್ರತಿದೂರು ದಾಖಲಾಗಿದೆ.

ಭೀಕರ ಅಪಘಾತ: ಇಬ್ಬರ ಸಾವು

ಸಾಗರ: ಹೊರವಲಯದ ತ್ಯಾಗರ್ತಿ ರಸ್ತೆಯ ಬೊಮ್ಮತ್ತಿ ಬಳಿ ಶುಕ್ರವಾರ ಕಾರು ಮತ್ತು ರಿಕ್ಷಾ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ರಿಕ್ಷಾ ಚಾಲಕ ಸೇರಿ ಇಬ್ಬರು ಮೃತಪಟ್ಟು, ಮೂವರು ಗಾಯ ಗೊಂಡಿದ್ದಾರೆ. ಮೃತರನ್ನು ರಿಕ್ಷಾ ಚಾಲಕ ದೊಡ್ಡಬೈಲಿನ ರಾಘವೇಂದ್ರ(45) ಹಾಗೂ ಮಾಲತಿ ರಾಮಪ್ಪ(35) ಎಂದು ಗುರುತಿಸಲಾಗಿದೆ. ಕಾರೆ ಹೊಂಡದ ರಾಮಪ್ಪ ಕುಟುಂಬದ ವರು ಸಾಗರದಲ್ಲಿ ದೀಪಾವಳಿ ಹಿನ್ನೆಲೆಯಲ್ಲಿ ಸಾಮಗ್ರಿಗಳನ್ನು ಖರೀದಿಸಿ ರಿಕ್ಷಾದಲ್ಲಿ ವಾಪಸಾಗುತ್ತಿದ್ದ ವೇಳೆ ಕಾರಿಗೆ ಡಿಕ್ಕಿಯಾಗಿದೆ. ರಿಕ್ಷಾ ಚಾಲಕ ಸ್ಥಳದಲ್ಲೇ ಮೃತಪಟ್ಟರೆ ಗಂಭೀರ ಗಾಯಗೊಂಡಿದ್ದ ಮಾಲತಿ ರಾಮಪ್ಪ ಆಸ್ಪತ್ರೆ ಮಾರ್ಗದಲ್ಲಿ ಕೊನೆಯುಸಿರೆಳೆದಿದ್ದಾರೆ. ಅಪಘಾತದಲ್ಲಿ ಗಾಯಗೊಂಡ ರಾಮಪ್ಪ ಹಾಗೂ ಮಕ್ಕಳಾದ ಕೃತಿಕಾ ಹಾಗೂ ಸಾನ್ವಿಕ ಅವರನ್ನು ಶಿವಮೊಗ್ಗದ ಆಸ್ಪತ್ರೆಗೆ ದಾಖಲಿಸಲಾಗಿದೆ. ಆನಂದಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜ್ಯೋತ್ಸವ ದಿನಾಚರಣೆಯಲ್ಲಿ ಸಿಎಂ ಸಿದ್ದರಾಮಯ್ಯ ಅಸಮಾಧಾನ | ಕನ್ನಡದ ಬಗ್ಗೆ ದುರಭಿಮಾನ ಸಲ್ಲದು: ಕನ್ನಡೇತರರಿಗೆ ಎಚ್ಚರಿಕೆ

ತೆರಿಗೆ ಹಂಚಿಕೆಯಲ್ಲಿ ಕೇಂದ್ರದಿಂದ ತಾರತಮ್ಯ

ಬೆಂಗಳೂರು: ಕೇಂದ್ರ ಸರಕಾರದಿಂದ ತೆರಿಗೆ ಪಾಲು ಹಂಚಿಕೆಯಲ್ಲಿ ಅನ್ಯಾಯವಾಗುತ್ತಿದ್ದು, ಇದರ ವಿರುದ್ಧ ನಾವೆಲ್ಲರೂ ಒಗ್ಗೂಡಿ ಹೋರಾಟ ನಡೆಸಿ ನ್ಯಾಯ ಪಡೆಯಬೇಕಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಶಿಕ್ಷಣ ಇಲಾಖೆ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವದ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಪ್ರತಿವರ್ಷ ಕೇಂದ್ರ ಸರಕಾರಕ್ಕೆ 4 ಲಕ್ಷ ಕೋಟಿಗೂ ಹೆಚ್ಚು ತೆರಿಗೆ ನೀಡುತ್ತಿದೆ. ತೆರಿಗೆ ಪಾಲಿನಲ್ಲಿ ಸುಮಾರು 60 ಸಾವಿರ ಕೋಟಿ ಮಾತ್ರ ಬರುತ್ತಿದ್ದು, ತೆರಿಗೆ ಹಂಚಿಕೆಯಲ್ಲಿ ಅನ್ಯಾಯ ಮಾಡುವುದು ಸರಿಯಲ್ಲ. ಅದರೆ ತೆರಿಗೆ ಪಾಲು ಮತ್ತು ಅನುದಾನ ತಾರತಮ್ಯದ ವಿರುದ್ಧ ಹೋರಾಟಕ್ಕೆ ಮುಂದಾದರೆ ಅದಕ್ಕೆ ರಾಜಕೀಯ ಬಣ್ಣ ಕೊಡುತ್ತಾರೆ ಎಂದರು.

ಲೋಕಸಭೆಯಲ್ಲಿ ನಮ್ಮ ಸಂಸದರು ರಾಜ್ಯಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ದನಿ ಎತ್ತಿ ನಮಗೆ ಕೊಡಬೇಕಾಗಿರುವ ಪಾಲನ್ನು ಕೊಡಿ ಎಂದು ಕೇಳಿದಾಗ ಮಾತ್ರ ನಮಗೆ ನ್ಯಾಯ ಸಿಗಲು ಸಾಧ್ಯ. ರಾಜ್ಯದಿಂದ ಕೇಂದ್ರಕ್ಕೆ ಹೋಗುವ ತೆರಿಗೆ ಪಾಲಿನ ಒಂದು ರುಪಾಯಿಯಲ್ಲಿ ರಾಜ್ಯಕ್ಕೆ ಬರುತ್ತಿರುವುದು 13 ರಿಂದ 14 ಪೈಸೆ ಮಾತ್ರ. ರಾಜ್ಯ ಮುಂದುವರಿದಿದೆ ಎಂದು ತೆರಿಗೆ ಹಂಚಿಕೆಯಲ್ಲಿ ಕಡಿತ ಮಾಡುವುದು ಸರಿಯಲ್ಲ. ರಾಜ್ಯಕ್ಕೆ 15ನೇ ಹಣಕಾಸು ಆಯೋಗದಲ್ಲಿ ಆದ ಅನ್ಯಾಯ ಇದುವರೆಗೂ ಕೇಂದ್ರ ಸರಿಪಡಿಸಿಲ್ಲ ಎಂದು ಮುಖ್ಯಮಂತ್ರಿ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯೋತ್ಸವದಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ, ಸಚಿವ ಮಧು ಬಂಗಾರಪ್ಪ.

ಬೇರೆಯವರಿಗೂ ಕನ್ನಡ ಕಲಿಸುವ ಪ್ರತಿಜ್ಞೆ: ಕನ್ನಡ ಭಾಷೆಯ ಬಗ್ಗೆ ದುರಾಭಿಮಾನ ಸಲ್ಲದು, ಎಲ್ಲರೂ ಕನ್ನಡ ಭಾಷೆಯಲ್ಲಿಯೇ ಮಾತನಾಡಬೇಕು. ಕನ್ನಡ ಮಾತನಾಡಲು ಬಾರದೆ ಇರುವವರ ಬಳಿ ಬೇರೆ ಭಾಷೆ ಮಾತನಾಡದೆ ಕನ್ನಡದಲ್ಲೇ ಮಾತನಾಡಿ, ಅವರಿಗೆ ಕನ್ನಡ ಕಲಿಸುವ ಕೆಲಸ ಆಗಬೇಕು. ಕನ್ನಡ ರಾಜ್ಯೋತ್ಸವ ದಿನದಂದು ನಾವು ಕನ್ನಡಿಗರಾಗಿ, ಬೇರೆಯವರಿಗೂ ಕನ್ನಡ ಕಲಿಸುತ್ತೇವೆ ಎಂಬ ಪ್ರತಿಜ್ಞೆ ಮಾಡೋಣ. ಕನ್ನಡದ ವಾತಾವರಣ ಎಲ್ಲೆಡೆ ನಿರ್ಮಿಸೋಣ. ಆ ಮೂಲಕ ಕನ್ನಡ ಬೆಳೆಸುವ, ಕನ್ನಡದಲ್ಲೇ ವ್ಯವಹರಿಸುವ ಸಂಕಲ್ಪ ತೊಡೋಣ. ಹೀಗಾದಾಗ ಮಾತ್ರ ಕನ್ನಡ ಅಗ್ರ ಭಾಷೆಯಾಗುತ್ತದೆ, ಸಾರ್ವಭೌಮ ಭಾಷೆಯಾಗುತ್ತದೆ, ಆಡಳಿತ ಕನ್ನಡಮಯವಾಗುತ್ತದೆ ಎಂದು ಸಿದ್ದರಾಮಯ್ಯ ಕರೆ ನೀಡಿದರು.

> **ಕನ್ನಡಿಗರು ನಮ್ಮ ಭಾಷೆ ಬಲಿಕೊಟ್ಟು ಉದಾರಿಗಳಾಗಬಾರದು. ಭಾಷೆಯ ವ್ಯಾಮೋಹ ಅತಿಯಾಗಿ ಇರಬಾರದು, ಆದರೆ, ಕನ್ನಡದ ಅಭಿಮಾನ ಯಾವೊತ್ತೂ ಬಿಟ್ಟು ಕೊಡಬಾರದು. ಕನಿಷ್ಠ ಅಭಿಮಾನ ಇಲ್ಲದಿದ್ದರೆ ಭಾಷೆ ಬೆಳೆಸಲು ಸಾಧ್ಯವಿಲ್ಲ. ಕನ್ನಡ ಭಾಷೆ ಎತ್ತರಕ್ಕೆ ಕೊಂಡೊಯ್ಯ ಬೇಕಾದರೆ, ಬೆಳೆಸ ಬೇಕಾದರೆ, ನಾವೆಲ್ಲರೂ ಕನ್ನಡಿಗರಾಗಬೇಕು.**
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

ಕ್ರೀಡಾಂಗಣದಲ್ಲಿ ನಡೆದ ವಿವಿಧ ಕಲಾತಂಡಗಳ ಪ್ರದರ್ಶನ ಜನರನ್ನು ಆಕರ್ಷಿಸಿತು.

2 ಸಾವಿರ ವರ್ಷದ ಇತಿಹಾಸ: ನಮ್ಮ ಮಾತೃ ಭಾಷೆ ಕನ್ನಡ. ನಾವು ಕನ್ನಡದಲ್ಲೇ ವ್ಯವಹರಿಸುತ್ತೇವೆ. ಬೇರೆಯವರ ಜತೆ ಕನ್ನಡದಲ್ಲೇ ಮಾತನಾಡುತ್ತೇವೆ ಎಂಬ ಶಪಥ ಮಾಡಬೇಕು. ಯಾವುದೇ ಜಾತಿ, ಭಾಷೆಯವರಾಗಲಿ, ಅವರಿಗೆ ಕನ್ನಡ ಕಲಿಸುವ ಕೆಲಸ ಆಗಬೇಕು. ರಾಜ್ಯದ ನೀರು, ಗಾಳಿ, ಆಹಾರ ಸೇವಿಸಿದ ಮೇಲೆ ನಾವೆಲ್ಲ ಕನ್ನಡಿಗರು. ಕನ್ನಡ ಅತ್ಯಂತ ಪ್ರಾಚೀನ ಭಾಷೆ, 2 ಸಾವಿರಕ್ಕೂ ಹೆಚ್ಚು ವರ್ಷಗಳ ಇತಿಹಾಸವಿದೆ. ಅದಕ್ಕಾಗಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಕ್ಕಿದೆ ಎಂದರು.

ಗ್ಯಾರಂಟಿಗಳು ಚುನಾವಣಾ ತಂತ್ರವಲ್ಲ..

← ಮೊದಲಪುಟದಿಂದ

ಈ ಆರ್ಥಿಕ ವರ್ಷದ ನಿಗದಿತ ಗುರಿಯ ಶೇ.53 ರಷ್ಟು ಸಾಧನೆ ಈಗಲೇ ಪೂರ್ಣಗೊಂಡಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಈ ಸಾಧನೆಯ ಪ್ರಮಾಣ ಶೇ.11.2 ರಷ್ಟು ಅಧಿಕವಾಗಿದೆ. ಅಂದರೆ ಗ್ಯಾರಂಟಿಗಳು ಜಾರಿಯಲ್ಲಿದ್ದಾಗಲೂ ಸರಕಾರದ ಆದಾಯ ಹೆಚ್ಚುತ್ತಲೇ ಇದೆ. 2024-25ರ ಮೊದಲ ತ್ರೈಮಾಸಿಕದಲ್ಲಿ 2.2 ಶತಕೋಟಿ ರುಪಾಯಿಗೂ ಅಧಿಕ ವಿದೇಶಿ ನೇರ ಬಂಡವಾಳ ಹೂಡಿಕೆ ಆಕರ್ಷಣೆಯಾಗಿದೆ. ಈ ವಿಷಯದಲ್ಲಿ ಕರ್ನಾಟಕ, ಗುಜರಾತ್ ರಾಜ್ಯವನ್ನೂ ಹಿಂದಿಕ್ಕಿದೆ. ಇಷ್ಟೆಲ್ಲ ಇದ್ದರೂ 'ಖಜಾನೆ ಖಾಲಿ' ಎನ್ನುವ ಟೊಳ್ಳು ಆರೋಪ ಮಾತ್ರ ಮುಂದುವರಿದಿದೆ. ಅಂತೂ ನಮ್ಮ ಸರಕಾರ ಜನರಿಗೆ ಆರ್ಥಿಕ ಶಕ್ತಿ ನೀಡುತ್ತಿರುವುದರಿಂದ ಖರೀದಿ ಸಾಮರ್ಥ್ಯ ಹೆಚ್ಚಾಗಿದೆ. ಮುಖ್ಯವಾಗಿ ಬಡ ಹಾಗೂ ಕೆಳಮಧ್ಯಮ ವರ್ಗದ ಜೇಬು ತುಂಬುತ್ತಿದೆ.

ದೀರ್ಘಕಾಲದ ಯೋಜನೆ: ಗ್ಯಾರಂಟಿಗಳು ಬದುಕಿನ ಮೇಲೆ ಬೀರುವ ಸಕಾರಾತ್ಮಕ ಪರಿಣಾಮ ಜನರಿಗೆ ಅರಿವಾಗಿದೆ. ಇದನ್ನು ಮೆಚ್ಚಿಕೊಂಡಿರುವ ಜನರು 2028 ರಲ್ಲೂ ಕಾಂಗ್ರೆಸ್‌ಗೆ ಬಹುಮತ ನೀಡಿ ಗೆಲ್ಲಿಸುವುದು ಖಚಿತ. ಆದ್ದರಿಂದ ಗ್ಯಾರಂಟಿಗಳು ಕೇವಲ ಐದು ವರ್ಷವಲ್ಲ, ನಂತರದ ಹತ್ತು ವರ್ಷ ಕೂಡ ಮುಂದುವರಿಯಲಿವೆ. ಬಿಜೆಪಿ ಈ ಬಗ್ಗೆ ಆತಂಕಕ್ಕೀಡಾಗಿರುವುದರಿಂದಲೇ ಬೇರೆ ರಾಜ್ಯಗಳ ಚುನಾವಣೆಗಳಲ್ಲಿ ಇದನ್ನು ನಕಲು ಮಾಡಲು ಯತ್ನಿಸಿತ್ತು. ಪ್ರತಿಪಕ್ಷಗಳ ಉದ್ದೇಶ ಗ್ಯಾರಂಟಿಗಳನ್ನು ಸ್ಥಗಿತಗೊಳಿಸು ವುದೇ ಹೊರತು, ಆರ್ಥಿಕತೆಯ ಮೇಲಿನ ಪ್ರೀತಿಯಲ್ಲ. ಇನ್ನೂ ತಮಾಷೆಯ ಸಂಗತಿ ಎಂದರೆ, ಪ್ರತಿಪಕ್ಷಗಳು ಸುರಿಸುತ್ತಿರುವ ಟೀಕೆ ಗಳ ಮಳೆಯಿಂದಲೇ ಗ್ಯಾರಂಟಿಗಳಿಗೆ ಉತ್ತಮ ಪ್ರಚಾರ ದೊರೆಯುತ್ತಿದೆ. ಟೀಕೆಗಳನ್ನು ರಚನಾತ್ಮಕವಾಗಿ ಸ್ವೀಕರಿಸಿ, ಯೋಜನೆ ಮುಂದುವರಿಸುವತ್ತ ಕಾಂಗ್ರೆಸ್ ಗಮನ ಹರಿಸಲಿದೆ.

ಮಹಿಳೆಯರಿಗೆ ಶಕ್ತಿ: ರಾಜ್ಯ ರಾಜಕಾರಣದಲ್ಲಿ ಹಲವಾರು ವರ್ಷಗಳಿಂದ ಮಹಿಳಾ ಸಬಲೀಕರಣದ ಬಗ್ಗೆ ಮಾತು ಕೇಳಿಬರುತ್ತಿದೆ. ಗ್ಯಾರಂಟಿಗಳು ಆ ಕೆಲಸವನ್ನು ಯಶಸ್ವಿಯಾಗಿ ಮಾಡುತ್ತಿವೆ. ಒಂದು ಕುಟುಂಬದ ಆಧಾರವಾದ ಮಹಿಳೆಗೆ ನೇರವಾಗಿ ಹಣ ನೀಡಿದರೆ ಆ ಇಡೀ ಕುಟುಂಬ ಪ್ರಗತಿಯತ್ತ ನಡೆಯುತ್ತದೆ ಎನ್ನುವುದರಲ್ಲಿ ಯಾವುದೇ ಅನುಮಾನ ವಿಲ್ಲ. ಅದಕ್ಕಾಗಿಯೇ ಕಾಂಗ್ರೆಸ್ ಸರಕಾರ, ಮಹಿಳೆಯರಿಗೆ ಆರ್ಥಿಕ ಸಬಲೀಕರಣದ ಶಕ್ತಿ ಕಲ್ಪಿಸಿದೆ.

ಉಚಿತ ಬಸ್ ಪ್ರಯಾಣ 'ಶಕ್ತಿ' ಯೋಜನೆಯ ಲಾಭ ಮಹಿಳೆ ಯರಿಗೆ ಯಶಸ್ವಿಯಾಗಿ ಸಿಕ್ಕಿದೆ. ಕಾಂಗ್ರೆಸ್‌ನ ಮಹಿಳಾ ಕೇಂದ್ರಿತ ಅಭಿವೃದ್ಧಿಯನ್ನು ಮೆಚ್ಚಿದ ಮಹಿಳೆಯರು ಪಕ್ಷಕ್ಕೆ ಮತ ಹಾಕಿದ್ದಾರೆ. ಮುಂದೆಯೂ ಮಹಿಳೆಯರು ಕಾಂಗ್ರೆಸ್ ಪರವಾಗಿ ಗಟ್ಟಿಯಾಗಿ ನಿಲ್ಲುತ್ತಾರೆ. ಇದು ಪ್ರತಿಪಕ್ಷಗಳಿಗೆ ಅರಗಿಸಿಕೊಳ್ಳಲಾಗದ ಸತ್ಯವಾಗಿ ಬಿಟ್ಟಿದೆ. ಆದ್ದರಿಂದ ಯೋಜನೆಗಳ ಸ್ಥಗಿತ ಎನ್ನುವ ಹೊಸ ಸುಳ್ಳನ್ನು ಹರಿಬಿಡಲಾಗಿದೆ.

ಅಕ್ಟೋಬರ್ ಅಂತ್ಯದ ವೇಳೆಗೆ ಶಕ್ತಿ ಯೋಜನೆಯಡಿ 318.63 ಕೋಟಿ ಉಚಿತ ಟಿಕೆಟ್ ನೀಡಿದ್ದು, ಇದಕ್ಕಾಗಿ 7,691.13 ಕೋಟಿ ರು. ಖರ್ಚು ಮಾಡಲಾಗಿದೆ. ಯೋಜನೆಗೆ ಮೊದಲು 84 ಲಕ್ಷದಷ್ಟಿದ್ದ ಒಟ್ಟು ಪ್ರಯಾಣಿಕರ ಸಂಖ್ಯೆ (ಮಹಿಳೆ-ಪುರುಷ ಸೇರಿ) ಯೋಜನೆ ಜಾರಿಯ ನಂತರ 1.08 ಕೋಟಿಗೆ ತಲುಪಿದೆ. ಈ ಪೈಕಿ ಶೇ.58 ರಷ್ಟು ಮಹಿಳಾ ಪ್ರಯಾಣಿಕರಾಗಿದ್ದಾರೆ.

ಈ ಯೋಜನೆಯನ್ನು ಮಹಿಳೆಯರು ಬಹಳ ಯಶಸ್ವಿಯಾಗಿ ಬಳಸಿಕೊಳ್ಳುತ್ತಿದ್ದಾರೆ. ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ಸೇರಿದಂತೆ ತಾವು ಇಷ್ಟಪಟ್ಟ ಯಾವುದೇ ಸ್ಥಳಗಳಿಗೆ ಉಚಿತವಾಗಿ ಪ್ರಯಾಣಿಸುವ ಮೂಲಕ ಪ್ರಯಾಣಕ್ಕಾಗಿ ಮಾಡುತ್ತಿದ್ದ ಖರ್ಚನ್ನು ಉಳಿಸುತ್ತಿದ್ದಾರೆ. ಹೀಗೆ ಉಳಿತಾಯವಾದ ಹಣ, ಕುಟುಂಬದ ಅಗತ್ಯಗಳಿಗೆ ಖರ್ಚಾಗಿ ಮರಳಿ ಆರ್ಥಿಕ ವ್ಯವಸ್ಥೆಯನ್ನು ಸೇರುತ್ತಿದೆ. ಇದು ಚಕ್ರದಂತೆ ನಿರಂತರ ಪ್ರಕ್ರಿಯೆಯಾಗಿದ್ದು, ಇದರಿಂದ ಆರ್ಥಿಕತೆ ಇನ್ನಷ್ಟು ಸಮೃದ್ಧವಾಗುತ್ತಿದೆ. ಮಹಿಳೆಯರನ್ನು ಸ್ವಾವಲಂಬಿಯಾಗಿ ಸುವ ಯಾವುದೇ ಯೋಜನೆ ಸ್ಥಗಿತಗೊಳ್ಳಲು ನಮ್ಮ ಪಕ್ಷ ಹಾಗೂ ಸರಕಾರ ಬಿಡುವುದಿಲ್ಲ.

ಇನ್ನು ರಾಜ್ಯದ ಪ್ರತಿ ಕುಟುಂಬಕ್ಕೆ 200 ಯೂನಿಟ್ ಒಳಗೆ ವಿದ್ಯುತ್ ಉಚಿತವಾಗಿ ಕೊಡುತ್ತೇವೆ ಎಂದು ಘೋಷಿಸಿದ್ದೆವು. ಅದರಂತೆ 1 ಕೋಟಿ 60 ಲಕ್ಷ ಕುಟುಂಬಗಳಿಗೆ ಉಚಿತ ವಿದ್ಯುತ್ ಪೂರೈಕೆ ಮಾಡುತ್ತಿದ್ದೇವೆ. ಇದಕ್ಕೆ ಪ್ರತಿ ತಿಂಗಳು ಸುಮಾರು 800 ಕೋಟಿ ರುಪಾಯಿ ಆಗುತ್ತದೆ. ಇಲ್ಲಿಯವರೆಗೆ 10,000 ಕೋಟಿ ರುಪಾಯಿಯನ್ನು ಇದಕ್ಕಾಗಿ ವ್ಯಯಿಸಲಾಗಿದೆ.

4.5 ಕೋಟಿ ಕಾರ್ಡ್‌ಗಳಿಗೆ ತಲಾ 5 ಕೆಜಿ ಅಕ್ಕಿ, ತಲಾ 170 ರುಪಾಯಿಯಂತೆ ತಿಂಗಳಿಗೆ ಸುಮಾರು 700 ಕೋಟಿ ರು. ಹಣವನ್ನು ರಾಜ್ಯ ಸರಕಾರ ಭರಿಸುತ್ತಿದೆ. 1 ಲಕ್ಷ 25 ಸಾವಿರ ಯುವನಿಧಿ ಫಲಾನುಭವಿಗಳಿಗೆ 3 ಸಾವಿರ ರು. ಮತ್ತು 1.5 ಸಾವಿರ ರು. ನಂತೆ ನಮ್ಮ ಸರಕಾರ ನಿರಂತರವಾಗಿ ಹಣ ಕೊಡುತ್ತಿದೆ. ಇದನ್ನು ಪ್ರತಿಪಕ್ಷದವರಿಗೆ ತಡೆಯಲು ಸಾಧ್ಯ ಇಲ್ಲ.

ಚುನಾವಣೆಗೆ ಮುನ್ನ ಗ್ಯಾರಂಟಿಗಳನ್ನು ಜಾರಿಗೆ ತರಲಾಗುವು ದೆಂದು ಕಾಂಗ್ರೆಸ್ ನುಡಿದಿತ್ತು. ಅದನ್ನು ಗೆದ್ದ ಬಳಿಕ ನಡೆಸಲಾಗಿದೆ. ಈ 'ನುಡಿದಂತೆ ನಡೆಯುವ' ಸಂಕಲ್ಪಕ್ಕೆ ಎಳ್ಳಷ್ಟೂ ಚ್ಯುತಿ ಬಾರದಂತೆ ನಮ್ಮ ಪಕ್ಷ ನಡೆದುಕೊಂಡಿದೆ. ಕಾಂಗ್ರೆಸ್‌ನ ಒಂದೇ ಒಂದು ಗ್ಯಾರಂಟಿ ಎಂದಿಗೂ ನಿಲ್ಲುವುದಿಲ್ಲ. ಇದು ಜನಜೀವನದಲ್ಲಿ ಸದಾ ಹರಿಯುವ ಪ್ರಗತಿ, ಇದು ಆರ್ಥಿಕ ಶಕ್ತಿ ತುಂಬುವ ಅಕ್ಷಯ ಪಾತ್ರೆ. ಕಾಂಗ್ರೆಸ್ ಪಕ್ಷವು ಬ್ಯಾಂಕುಗಳ ರಾಷ್ಟ್ರೀಕರಣ ಮಾಡಿತು. ಉಳುವವನೇ ಹೊಲದೊಡೆಯ ಜಾರಿ ಮಾಡಿ ಲಕ್ಷಾಂತರ ಜನರು ಬದುಕು ಕಟ್ಟಿಕೊಳ್ಳುವಂತೆ ಮಾಡಿತು. ಶೋಷಿತರ, ಧಮನಿತರ, ಕೈಲಾಗದವರ ಪರವಾಗಿ ಪ್ರತಿ ಬಾರಿ ಕೆಲಸ ಮಾಡಿದೆ. ಇದು ಚುನಾವಣೆಗಾಗಿ, ಮತ ಗಳಿಕೆಗಾಗಿ ಅಲ್ಲ. ಹಿಂದುಳಿದವರನ್ನು, ಅಲ್ಪ ಸಂಖ್ಯಾತರನ್ನು ಸಮಾಜದ ಮುಖ್ಯವಾಹಿನಿಗೆ ತರುವಂಥದ್ದೆ ಕಾಂಗ್ರೆಸ್ ಪಕ್ಷದ ಮುಖ್ಯ ಧ್ಯೇಯ ಹಾಗೂ ಕಾಂಗ್ರೆಸ್ ಪಕ್ಷದ ತತ್ವ-ಸಿದ್ಧಾಂತವಾಗಿದೆ.

ಕಲ್ಯಾಣ ಕರ್ನಾಟಕ: ಪ್ರತ್ಯೇಕ ರಾಜ್ಯ ಧ್ವಜಾರೋಹಣ ಯತ್ನ

ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿ ಅಧ್ಯಕ್ಷ ಎಂ.ಎಸ್.ಪಾಟೀಲ ನರಿಬೋಳ ಸೇರಿದಂತೆ ಹಲವು ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು.

ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗಕ್ಕೆ ರಾಜ್ಯ ಸರಕಾರ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸಿ ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಧ್ವಜಾರೋಹಣ ಮಾಡಲು ಯತ್ನಿಸಿದ ಹೋರಾಟ ಸಮಿತಿ ಅಧ್ಯಕ್ಷ ಎಂ.ಎಸ್.ಪಾಟೀಲ ನರಿಬೋಳ ಸೇರಿದಂತೆ ಹಲವು ಮುಖಂಡರನ್ನು ಪೊಲೀಸರು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು.

ಈ ವೇಳೆ ಮಾತನಾಡಿದ ಎಂ.ಎಸ್. ಪಾಟೀಲ ನರಿಬೋಳ, ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ನಿರಂತರ ಅನ್ಯಾಯವಾಗುತ್ತಿದೆ. 371 (ಜೆ) ಕಲಂ ಸಂಪೂರ್ಣ ಕಾರ್ಯರೂಪಕ್ಕೆ ಬರುತ್ತಿಲ್ಲ. ಸಂಪೂರ್ಣ ಜಾರಿಯಾಗಲು ಕಲ್ಯಾಣ ಕರ್ನಾಟಕ ಹೊರತುಪಡಿಸಿದ ಜನಪ್ರತಿನಿಧಿಗಳು ಹಾಗೂ ಕೆಲ ಕುತಂತ್ರಿ ಅಧಿಕಾರಿಗಳು ಬಿಡುತ್ತಿಲ್ಲ. ನಮ್ಮ ಭಾಗದ ಅದಿಕಾರಿಗಳಿಗೆ ಸೂಕ್ತ ಸ್ಥಾನಮಾನಗಳು ಸಿಗುತ್ತಿಲ್ಲ. ಅಡಿಕೆ, ರಾಗಿ ಬೆಳೆಗಳಿಗೆ ನೀಡುವ ಪ್ರಾಮುಖ್ಯತೆ ನಮ್ಮ ಪ್ರದೇಶದ ತೊಗರಿ, ಜೋಳಕ್ಕೆ ಸಿಗುತ್ತಿಲ್ಲ. ಮುಂದಿನ ದಿನಗಳಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದ ಎಲ್ಲ ಜಿಲ್ಲೆ, ತಾಲೂಕು, ಹೋಬಳಿ, ಗ್ರಾಮ ಮಟ್ಟದಲ್ಲಿ ಪ್ರತ್ಯೇಕ ರಾಜ್ಯ ಧ್ವಜಾರೋಹಣ ಮಾಡಿ ತೆಲಂಗಾಣ ಮಾದರಿ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದರು.

> **ಸರಕಾರ ಪೊಲೀಸರ ಮುಖಾಂತರ ಹೋರಾಟ ಹತ್ತಿಕ್ಕಿಸುವ ಪ್ರಯತ್ನ ಮಾಡಿದೆ. ಇದು ಖಂಡನೀಯ. ಬಂಧನಕ್ಕೆ ಹೆದರಿ ಹೋರಾಟ ಕೈಬಿಡದೆ ಮುಂದೆ ಉಗ್ರ ಹೋರಾಟ ಮಾಡುತ್ತೇವೆ.**
> **- ಎಂ.ಎಸ್.ಪಾಟೀಲ ನರಿಬೋಳ**
> ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿ ಅಧ್ಯಕ್ಷ

ಬೆಂಗಳೂರಿನ ವಿಧಾನಸೌಧದ ಎದುರು ಶುಕ್ರವಾರ ನಡೆದ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ ಎ.ಜಿ.ಕಾರಟಗಿ (ಅಮರ ಗುಂಡಪ್ಪ ಕಾರಟಗಿ) ಅವರಿಗೆ ಸಿಎಂ ಸಿದ್ದರಾಮಯ್ಯ ಪ್ರಶಸ್ತಿ ನೀಡಿ, ಪುರಸ್ಕರಿಸಿದರು. ಡಿಸಿಎಂ ಡಿ.ಕೆ.ಶಿವಕುಮಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ, ಗೃಹ ಸಚಿವ ಜಿ.ಪರಮೇಶ್ವರ ಸೇರಿ ಇತರರು ಇದ್ದರು.

ಕಾರ್ಮಿಕನ ಕೊಲೆ ಪ್ರಕರಣ: ಏಳು ಆರೋಪಿಗಳ ಬಂಧನ

ಕಾನಹೊಸಹಳ್ಳಿ (ವಿಜಯನಗರ): ಬಣವಿಕಲ್ಲು-ಗುಣಸಾಗರ ಮಧ್ಯದ ಅರಣ್ಯ ಪ್ರದೇಶದಲ್ಲಿ ಬೆಂಗಳೂರು ದಾಸನಪುರ ಹೋಬಳಿಯ ಕಾಚೋಹಳ್ಳಿ ಗ್ರಾಮದ ಕಾಂಟೆ ನೆಂಟಲ್ ಕ್ಲೋಸರ್ಸ್ ಕಂಪನಿಯ ಕೂಲಿ ಕಾರ್ಮಿಕ ಅಖಿಲೇಶ್ ಕುಮಾರ್ ಯಾದವ್ ಶವ ದೊರೆತ ಪ್ರಕರಣದಲ್ಲಿ 7 ಆರೋಪಿಗಳನ್ನು ಬಂಧಿಸಲಾಗಿದೆ. ತಲೆಮರೆಸಿಕೊಂಡಿರುವ ಮತ್ತೊಬ್ಬನಿಗಾಗಿ ಪೊಲೀಸರು ಶೋಧನೆ ನಡೆಸಿದ್ದಾರೆ. ಅರಣ್ಯ ಪ್ರದೇಶದಲ್ಲಿ ದೊರೆತ ಅಪರಿಚಿತ ಶವವನ್ನು ಬೆಂಗಳೂರಿನ ಅಖಿಲೇಶ್ ಕುಮಾರ್ ಎಂದು ಗುರುತಿಸಲಾಗಿತ್ತು. ಪ್ರಕರಣದ ಜಾಡು ಹಿಡಿದು ಆರೋಪಿಗಳಾದ ರಾಮನಗರ ಜಿಲ್ಲೆಯ ಮಹಮ್ಮದ್ ಏಸನ್, ಪೀಣ್ಯದ ರೋಷನ್ ಜಮೀರ್, ನೆಲಮಂಗಲ ಹೆಸರಘಟ್ಟದ ಗಣೇಶ್, ರಾಮಗೊಂಡನಹಳ್ಳಿಯ ಎಚ್.ನಾಗೇಶ್, ತಿಗಳರ ಪಾಳ್ಯದ ಎಲ್.ನಂದಕುಮಾರ್, ಬೇಗೂರಿನ ಮನುಕುಮಾರ್ ಹಾಗೂ ಬಾಲಕನೊಬ್ಬನನ್ನು ಬಂಧಿಸಿದ್ದು, ಎಲ್ಲರೂ ಹಡಗಲಿಯ ಜೈಲಿನಲ್ಲಿದ್ದಾರೆ.

ಬೆಳಗಾವಿಯಲ್ಲಿ ಶುಕ್ರವಾರ ಎಂಇಎಸ್ ಸದಸ್ಯರು, ರಾಜ್ಯೋತ್ಸವ ವಿರೋಧಿಸಿ ಕರಾಳ ದಿನಾಚರಣೆ ಅಂಗವಾಗಿ ಕಪ್ಪು ಬಟ್ಟೆ ಧರಿಸಿ ಮೆರವಣಿಗೆ ಮಾಡಿದರು.

ಎಂಇಎಸ್ ಮೆರವಣಿಗೆ, ಬೈಕ್ ರ‍್ಯಾಲಿ

ಬೆಳಗಾವಿ: ರಾಜ್ಯೋತ್ಸವ ವಿರೋಧಿಸಿ ಇಲ್ಲಿನ ಎಂಇಎಸ್ ಕೆಲವು ಮುಖಂಡರು ಮೆರವಣಿಗೆ, ಬೈಕ್ ರ‍್ಯಾಲಿ ನಡೆಸಿದರು. ನಗರದ ಮಾಧವ ರಸ್ತೆಯಲ್ಲಿನ ಸಂಭಾಜಿ ಉದ್ಯಾನದ ಮೈದಾನದಿಂದ ಆರಂಭಗೊಂಡು ಮಾಧವ್ ರಸ್ತೆ, ಎಸ್ಪಿಎಂ ರಸ್ತೆ, ಶಹಾಪುರ, ನಾಥಪೈ ಸರ್ಕಲ್, ಗೋವಾವೇಸ್ ಮಾರ್ಗವಾಗಿ ಮರಾಠಾ ಮಂದಿರ ತಲುಪಿತು. 'ಬೆಳಗಾವಿ, ಬೀದರ್, ಭಾಲ್ಕಿ, ನಿಪ್ಪಾಣಿ, ಕಾರವಾರ ಸಂಯುಕ್ತ ಮಹಾರಾಷ್ಟ್ರ ಝಾಲಾಚ್ ಪಾಯಿಜೆ' ಎಂದು ಕಿಡಿಗೇಡಿಗಳು ನಾಡವಿರೋಧಿ ಘೋಷಣೆ ಕೂಡ ಮೊಳಗಿಸಿದರು.

> **ಈ ಬಾರಿ ಮಹಾರಾಷ್ಟ್ರ ಏಕೀಕರಣ ಸಮಿತಿಗೆ ಕರಾಳ ದಿನಾಚರಣೆಗಾಗಲೀ, ಪ್ರತಿಭಟನೆ ಅಥವಾ ಮೆರವಣಿಗೆ ಯಾವುದಕ್ಕೂ ಅನುಮತಿ ನೀಡಿಲ್ಲ. ಆದರೂ ಕಪ್ಪು ಬಟ್ಟೆ ಧರಿಸಿ ಬೈಕ್ ರ‍್ಯಾಲಿ ಮಾಡಿದ್ದಾರೆ ಎಂದು ಗೊತ್ತಾಗಿದೆ. ಅವರ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು.**
> **- ಸತೀಶ ಜಾರಕಿಹೊಳಿ**

ಬಿಜೆಪಿ ಆಡಳಿತದ ವೇಳೆ 216 ಪ್ರಕರಣದಲ್ಲಿ ವಕ್ಫ್ ನೋಟಿಸ್

ವಿಜಯಪುರ: ಬಿಜೆಪಿ ಅವಧಿಯಲ್ಲಿಯೂ ನೂರಾರು ರೈತರ ಜಮೀನುಗಳಿಗೆ ವಕ್ಫ್ ನೋಟಿಸ್ ನೀಡಲಾಗಿದೆ. 2019-2023 ಅವಧಿ ಬಿಜೆಪಿ ಸರಕಾರ ಅಸ್ತಿತ್ವದಲ್ಲಿದ್ದ ಸಂದರ್ಭದಲ್ಲಿ 216 ಪ್ರಕರಣಗಳಲ್ಲಿ ರೈತರಿಗೆ ನೋಟಿಸ್ ನೀಡಿದೆ ಎಂದು ಬೃಹತ್ ಕೈಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಬಿ. ಪಾಟೀಲ ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ವಿಜಯಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2008-2013 ರವರೆಗೆ ಬಿಜೆಪಿ ಸರಕಾರದಲ್ಲಿ ಬಿ.ಎಸ್. ಯಡಿಯೂರಪ್ಪ, ಸದಾನಂದ ಗೌಡ, ಜಗದೀಶ ಶೆಟ್ಟರ್ ಅವರು ಮುಖ್ಯಮಂತ್ರಿಯಾಗಿದ್ದ ಕಾಲಘಟ್ಟದಲ್ಲಿ ಚಿಕ್ಕಮಗಳೂರಿನ ಏಳು ಆಸ್ತಿಗಳಿಗೆ ಪಹಣಿಯ ಕಾಲಂ ನಂ.9 ರಲ್ಲಿ ನಮೂದು ಮಾಡಿ ಖಾತೆ ಮಾಡಿದ್ದಾರೆ, ಈಗ ಈ ವಿಷಯವಾಗಿ ಗುಡುಗುತ್ತಿರುವ ಸಿ.ಟಿ. ರವಿ ಅಂದು ಶಾಸಕರಾ ಗಿದ್ದರು. ಅವರೇಕೆ ಅಂದು ಸುಮ್ಮನಿದ್ದರು ಎಂದು ಪ್ರಶ್ನಿಸಿದರು.

ಬಿಜೆಪಿ ಅವಧಿಯಲ್ಲೂ ವಕ್ಫ್ ಪ್ರಕ್ರಿಯೆ: ಪ್ರತಿಪಕ್ಷ ನಾಯಕ ಆರ್. ಅಶೋಕ ಅವರು ಕಂದಾಯ ಸಚಿವರಾಗಿದ್ದ ಸಂದರ್ಭದಲ್ಲಿಯೇ ಬೆಂಗಳೂರು ನಗರ ಜಿಲ್ಲೆಯ 7 ಪ್ರಕರಣಗಳಲ್ಲಿ ಕಾಲಂ 11 ರಲ್ಲಿ ವಕ್ಫ್ ಎಂದು ನಮೂದಿಸಲಾಗಿದೆ. ಬಿಜೆಪಿ ಸತ್ಯ ಶೋಧನಾ ತಂಡದ ಮುಖ್ಯಸ್ಥ ಸಂಸದ ಕಾರಜೋಳ ಶಾಸಕರಾಗಿದ್ದ ವೇಳೆ ಅವರ ಕ್ಷೇತ್ರದಲ್ಲೂ ಈ ರೀತಿಯ ಕ್ರಮ ನಡೆದಿದೆ. ಈಗ ಮತ್ತೆ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿರುವ ಕುಮಾರಸ್ವಾಮಿ ಸರಕಾರದಲ್ಲೂ ಈ ಪ್ರಕ್ರಿಯೆ ನಡೆದಿತ್ತು.

ಬಿಜೆಪಿ-ಜೆಡಿಎಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಚಿಕ್ಕಮಗಳೂರಿನ ಗಾವನಹಳ್ಳಿ, ಕಡೂರಳ್ಳಿ ಸೇರಿದಂತೆ ಹಲವು ಗ್ರಾಮಗಳಲ್ಲಿ ವಕ್ಫ್ ಖಾತೆ ಮಾಡಲಾಗಿದೆ ಎಂದು ಎಂ.ಬಿ.ಪಾಟೀಲ್ ಆರೋಪಿಸಿದರು.

ಕಾರಜೋಳ ಇನ್ನೂ ಡಿಸಿಎಂ ಗುಂಗಿನಲ್ಲಿದ್ದಾರೆ

ಕಾರಜೋಳ ಸಾಹೇಬರು ಜಿಲ್ಲಾಧಿಕಾರಿ ಕಚೇರಿಯಲ್ಲಿ ತಾವು ಸಭೆ ನಡೆಸಿ ಮಾಹಿತಿ ಪಡೆದುಕೊಂಡರೆ ನಡೆಯುತ್ತದೆ. ಅದನ್ನು ಬಿಟ್ಟು ಹಿಂಬಾಲಕರನ್ನು ಜಿಲ್ಲಾಧಿಕಾರಿ ಕಚೇರಿಗೆ ಕರೆಸಿ ಮಾಧ್ಯಮದವರ ಎದುರಿಗೆ ಡಿಸಿ ಮೇಲೆ ಟೀಕೆ ಮಾಡುವುದು ಕಾರಜೋಳರಿಗೆ ಶೋಭೆ ತರುವುದಿಲ್ಲ. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಒಬ್ಬ ಸುಸಂಸ್ಕೃತ ರಾಜಕಾರಣಿ ಎಂದು ಭಾವಿಸಿದ್ದೆ, ಆದರೆ ಜಿಲ್ಲಾಧಿಕಾರಿ ಮೇಲೆ ಅವರು ಏಕವಚನ ಪ್ರಯೋಗಿಸಿರುವುದು ಅವರಿಗೂ ಶೋಭೆ ತರದ ಸಂಗತಿ. ಇದನ್ನು ಬಿಜೆಪಿಗರು ಅರ್ಥೈಸಿಕೊಳ್ಳಬೇಕು ಎಂದು ಸಚಿವ ಎಂ.ಬಿ.ಪಾಟೀಲ್ ತರಾಟೆಗೆ ತೆಗೆದುಕೊಂಡರು.

> {**ಎಚ್.ಡಿ.ಕುಮಾರಸ್ವಾಮಿ**} ಕೇಂದ್ರ ಸಚಿವ
> **ಹಿಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್‌ನವರು ಸೀರೆ, ಪಂಚೆ, ಗ್ಯಾರಂಟಿ ಕಾರ್ಡ್ ಹಂಚಿ ಗೆದ್ದಿದ್ದರು. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಸಿ.ಪಿ.ಯೋಗೇಶ್ವರ್ ಸೀರೆ ಹಂಚಿರಲಿಲ್ಲವೇ..? ಕಾಂಗ್ರೆಸ್‌ನವರು ಗ್ಯಾರಂಟಿ ಕಾರ್ಡ್ ಕೊಟ್ಟಿರಲಿಲ್ಲವೇ..? ಈ ಬಾರಿಯೂ ಸೀರೆ-ಪಂಚೆ ಹಂಚುವ ಪ್ರಯತ್ನದಲ್ಲಿದ್ದಾರೆ.**

ಸಾರಸ್ವತ ಸಂಭ್ರಮ

← ಮೊದಲಪುಟದಿಂದ

ಪುಸ್ತಕಗಳನ್ನು ಓದುಗರು ಕೊಳ್ಳುವ ಮೂಲಕ ಜ್ಞಾನ ವೃದ್ಧಿಸಿಕೊಳ್ಳಬೇಕು. ಇನ್ನಷ್ಟು ಕೃತಿಗಳು ಹೆಚ್ಚು ಬೆಳಕಿಗೆ ಬರುವಂತೆ ಸಾಹಿತಿಗಳನ್ನು ಪ್ರೋತ್ಸಾಹಿಸಬೇಕು ಎಂದು ತಿಳಿಸಿದರು. ಕಾರ್ಯ ಕ್ರಮದ ರಿಯಾಯಿತಿ ಮೇಳದ ಉದ್ಘಾಟನೆಯನ್ನು ರಾಜ್ಯಸಭಾ ಸದಸ್ಯೆ ಡಾ. ಸುಧಾ ಮೂರ್ತಿ ಅವರು ನೆರವೇರಿಸಿದರು. ದೀಪಾರಾಧನೆಯನ್ನು 'ಇಬ್ಬನಿ ತಬ್ಬಿದ ಇಳೆಯಲಿ' ಚಲನಚಿತ್ರದ ನಟಿ ಕುಮಾರಿ ಅಂಕಿತ ಅಮರ್ ನೆರವೇರಿಸಿದರು. ಸಾಹಿತಿ ಎಸ್.ಜಿ. ಸಿದ್ದರಾಮಯ್ಯ ಅವರು ಉಚಿತ ಪುಸ್ತಕ ವಿತರಣೆ ಮಾಡಿದರು. ಶ್ರೀರಾಮಪುರ ಲಿಟಲ್ ಫ್ಲವರ್ ಪ್ರೌಢಶಾಲೆಯ ಮಕ್ಕಳಿಂದ ಡೊಳ್ಳು ಕುಣಿತ ನಡೆಯಿತು. ವಾದ್ಯವೃಂದವರಿಗೆ ಗೌರವ ವಂದನೆ ಅರ್ಪಿಸಲಾಯಿತು. ಸಾಹಿತಿಗಳಾದ ಎಂ.ಎಸ್.ನರಸಿಂಹಮೂರ್ತಿ, ವೈ.ವಿ. ಗುಂಡೂರಾವ್ ಅವರಿಂದ ಹಾಡು ಹರಟೆ ನಡೆಯಿತು.

ಕೃತಿಕಾ ಶ್ರೀನಿವಾಸ್ ಕನ್ನಡದ ಗೀತೆಗಳನ್ನು ಹಾಡಿದರು. ಅಪ್ಪಗೆರೆ ತಿಮ್ಮರಾಜು ಅವರು ಜನಪದ ಮತ್ತು ಭಾವಗೀತೆ ಹಾಡಿದರು. ಕಾರ್ಯಕ್ರಮದಲ್ಲಿ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಲೇಖಕರಾದ ದೊಡ್ಡರಂಗೇಗೌಡ, ಮಲ್ಲೇಪುರಂ ಜಿ. ವೆಂಕಟೇಶ್, ರಾ.ನಂ.ಚಂದ್ರಶೇಖರ್, ಡಿ.ವಿ. ಗುರುಪ್ರಸಾದ್, ಜೋಗಿ, ವಸುಂಧರಾ ಭೂಮತಿ, ಪದ್ಮಿನಿ ನಾಗರಾಜ್ ಸೇರಿದಂತೆ ಹಲವು ಸಾಹಿತಿಗಳು ಭಾಗವಹಿಸಿದ್ದರು.

ಸಪ್ನ ಬುಕ್‌ಹೌಸ್‌ನ ಪುಸ್ತಕಗಳ ಜಾತ್ರೆ ಸಂಭ್ರಮದಲ್ಲಿ ಭಾಗಿಯಾದ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಪತ್ರಕರ್ತ ಜೋಗಿ, ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ.

ಟ್ವೀಟೂ-ಖಾರಾ

ಬಿಜೆಪಿ, ಕರ್ನಾಟಕ

ಆಕಸ್ಮಿಕವಾಗಿ ಎಐಸಿಸಿ ಅಧ್ಯಕ್ಷರಾಗಿರುವ ಖರ್ಗೆ ಅವರು ತಮ್ಮ ಕೈಯಲ್ಲಿ ಏನೂ ಇಲ್ಲ, ಅವರು ಹೇಳಿದ ಹಾಗೆ ನಾನು ನಡೆದುಕೊಳ್ಳಬೇಕು ಎಂಬ ಅಸಹಾಯಕತೆ ಹೊರಹಾಕಿದ್ದಾರೆ.ಈ ಮೂಲಕ ಕಾಂಗ್ರೆಸ್‌ನ ದಲಿತ ವಿರೋಧಿ ಧೋರಣೆಯನ್ನು ನೊಂದ ಮನಸ್ಸಿನಿಂದ ಹೇಳಿದ್ದಾರೆ. ಪ್ರಿಯಾಂಕಾ ಗಾಂಧಿ ನಾಮಪತ್ರ ಸಲ್ಲಿಕೆ ವೇಳೆ ಮಲ್ಲಿಕಾರ್ಜುನ ಖರ್ಗೆಯವರನ್ನು ಕಚೇರಿ ಹೊರಗೆ ನಿಲ್ಲಿಸಿ ಅವಮಾನಿಸಿದ್ದ ಗಾಂಧಿ ಕುಟುಂಬ, ದಲಿತರೆಂಬ ಕಾರಣಕ್ಕೆ ಖರ್ಗೆ ಅವರನ್ನು ಕನಿಷ್ಠವಾಗಿ ನಡೆಸಿಕೊಳ್ಳುತ್ತ , ದಲಿತ ಸಮುದಾಯಕ್ಕೆ ಅಪಮಾನ ಮಾಡುತ್ತಿದೆ.

ಚಲುವೇಗೌಡ ಎಚ್.ಎನ್., ಬೆಂಗಳೂರು

ಖರ್ಗೆಜೀ, ನೀವು ವಿರೋಧ ಪಕ್ಷದಲ್ಲಿದ್ದರೂ, ನಮ್ಮ ವಿಚಾರಗಳಿಗೆ ನೀವು ವಿರುದ್ಧ ಇದ್ರೂ, ನೀವು ನಮ್ಮ ನೆಲದ ವ್ಯಕ್ತಿ. ಕಾಂಗ್ರೆಸ್ ನಿಮಗೆ ಅವಮಾನ ಮಾಡುವುದನ್ನು ಸಹಿಸಲು ನಮಗೂ ಆಗುವುದಿಲ್ಲ. ಮೊದಲು ನೀವು ನಿಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ರಾಜ್ಯಕ್ಕೆ ಬಂದುಬಿಡಿ.

ಸಮಾಚಾರ ಸಣ್ಣದಲ್ಲ

ಟೀ ಬಿದ್ದು ಎರಡು ವರ್ಷದ ಮಗು ಸಾವು

ಹೊಸನಗರ: ಮೈಮೇಲೆ ಬಿಸಿ ಚಹ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದ 2 ವರ್ಷದ ಮಗುವೊಂದು ಚಿಕಿತ್ಸೆ ಫಲಿಸದೆ ಶುಕ್ರವಾರ ಮೃತಪಟ್ಟ ಘಟನೆ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕು ಹಿರಿಮನೆ ಎಂಬಲ್ಲಿ ಸಂಭವಿಸಿದೆ. ಶಾಸಕ ಆರಗ ಜ್ಞಾನೇಂದ್ರ ಅವರ ಆಪ್ತ ಸಹಾಯಕ ರಾಜೇಶ್ ಹಿರಿಮನೆ ಹಾಗೂ ತಾ.ಪಂ. ಮಾಜಿ ಸದಸ್ಯೆ ಅಶ್ವಿನಿ ಪಾಟೀಲ್ ಅವರ 2 ವರ್ಷದ ಪುತ್ರ ಅಥರ್ವ್ ಮೈಮೇಲೆ ಅ. 24ರಂದು ಬಿಸಿ ಟೀ ಚೆಲ್ಲಿ ಗಂಭೀರವಾಗಿ ಗಾಯಗೊಂಡಿದ್ದ. ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಯಲ್ಲಿ ಕಳೆದ ಎಂಟು ದಿನಗಳಿಂದ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ಚಿಕಿತ್ಸೆ ಫಲಿಸದೆ ಅಥರ್ವ ಕೊನೆಯುಸಿರೆಳೆದಿದ್ದಾನೆ.

ಜೋಶಿಯದ್ದು ಬೆಂಕಿ ಹಚ್ಚುವ ಕೆಲಸ

ಕಲಬುರಗಿ: ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರು ಈವರೆಗೆ ದೀಪ ಹಚ್ಚುವುದನ್ನು ನೋಡೇ ಇಲ್ಲ, ಅವರದ್ದೇನಿದ್ದರೂ ಬೆಂಕಿ ಹಚ್ಚುವ ಕೆಲಸ ಎಂದು ಸಚಿವ ಪ್ರಿಯಾಂಕ್ ಖರ್ಗೆ ಕಿಡಿಕಾರಿದ್ದಾರೆ.

ಶುಕ್ರವಾರ ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಪ್ರಹ್ಲಾದ್ ಜೋಶಿ ಕೇಂದ್ರ ಸರಕಾರದ ಭಾಗವಾಗಿ ದಶಕಗಳೇ ಕಳೆದರೂ ಈವರೆಗೆ ಜನರು ಮೆಚ್ಚುವ ಒಂದೇ ಒಂದು ಯೋಜನೆಯನ್ನು ಕರ್ನಾಟಕಕ್ಕೆ ಕೊಟ್ಟಿಲ್ಲ. ಸುಮ್ನೆ ಬರೋದು ಮನ್ ಕೀ ಬಾತ್ ಕೇಳೋದು ಅಷ್ಟೇ ಅವರ ಕೆಲಸ ಆಗಿದೆ. ಅದ್ಕೇನಾ ನಾವು ಅವರನ್ನು ಆರಿಸಿ ಸಂಸತ್ತಿಗೆ ಕಳುಹಿಸಿದ್ದು ಎಂದು ತೀಕ್ಷ್ಣವಾಗಿ ಪ್ರಶ್ನಿಸಿದರು. ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ರಾಜ್ಯದಿಂದ ಎರಡನೇ ಬಾರಿಗೆ ಆಯ್ಕೆಯಾಗಿ ಹೋಗಿದ್ದಾರೆ. ತೆರಿಗೆಯಲ್ಲಿ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯದ ಬಗ್ಗೆ ಧ್ವನಿ ಎತ್ತಿದ್ದಾರಾ ಎಂದು ಪ್ರಶ್ನಿಸಿದ ಪ್ರಿಯಾಂಕ್ ಖರ್ಗೆ, ಅವರಿಂತ ನಾನೇ ಉತ್ತಮ ಕೆಲಸ ಮಾಡಿದ್ದೇನೆ ಎಂದು ಕುಟುಕಿದರು.

ಸಿಪಿವೈ ಗೆಲ್ಲುವುದು ಖಚಿತ: ಚನ್ನಪಟ್ಟಣ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ನಿಂದ ಸ್ಪರ್ಧಿಸಿರುವ ಸಿಪಿ ಯೋಗೇಶ್ವರ್ ಗೆಲ್ಲುವುದು ಖಚಿತ. ಈಗಾಗಲೇ ಅವರು ನೀರಾವರಿ ಕುರಿತಂತೆ ಹಲವಾರು ಯೋಜನೆಗಳು ಜಾರಿಗೆ ತಂದಿದ್ದಾರೆ, ಜನ ಅವರನ್ನು ಆರಿಸಿ ತರಲಿದ್ದಾರೆ. ಮೂರೂ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಗೆಲುವು ಶತಃಸಿದ್ಧ ಎಂದು ಸಚಿವ ಪ್ರಿಯಾಂಕ್ ಖರ್ಗೆ ಭವಿಷ್ಯ ನುಡಿದರು.

ದೂರು ದುಮ್ಮಾನ

- **ಸ್ಥಳ : ಬೀದರ್**

ಸಮಸ್ಯೆಯೇನು..?

- ಕೃಷಿ ಉತ್ಪನ್ನ ಮಾರುಕಟ್ಟೆ ಹತ್ತಿರದಲ್ಲಿರುವ ಶೌಚಾಲಯ ತ್ಯಾಜ್ಯ ನೀರು ಚರಂಡಿಗೆ ಸೇರದೆ, ರಸ್ತೆಯಲ್ಲೇ ಹರಿಯುತ್ತಿದ್ದ ಸಮಸ್ಯೆ.
- **ಸಮಸ್ಯೆ ಎಲ್ಲಿ: ಔರಾದ್**
- ಪರಿಹಾರ: ಕೃಷಿ ಉತ್ಪನ್ನ ಮಾರುಕಟ್ಟೆ ಹತ್ತಿರದಲ್ಲಿರುವ ಶೌಚಾಲಯ ತ್ಯಾಜ್ಯ ನೀರು ಸ್ವಚ್ಛಗೊಳಿಸಿದೆ. ಶೌಚಾಲಯ ನೀರು ಚರಂಡಿಗೆ ಹೋಗುವಂತೆ ಸರಿಪಡಿಸಲಾಗಿದೆ.

ನಿಖಿಲ್ ಸೋಲಿನ ಅನುಕಂಪದಿಂದ ಗೆದ್ದ ಎಚ್‌ಡಿಕೆ

ಚನ್ನಪಟ್ಟಣ ಉಪಚುನಾವಣೆ ಪ್ರಚಾರದಲ್ಲಿ ಡಿ.ಕೆ.ಸುರೇಶ್ ತಿರುಗೇಟು | ಯೋಗೇಶ್ವರ್ ಪರ ಕಾಂಗ್ರೆಸ್ ನಾಯಕರ ಬಿರುಸಿನ ಪ್ರಚಾರ



ಚನ್ನಪಟ್ಟಣ ತಾಲೂಕಿನ ಸುಳ್ಳೇರಿ ಗ್ರಾಮದಲ್ಲಿ ಸಿ.ಪಿ.ಯೋಗೇಶ್ವರ್ ಪರ ಡಿ.ಕೆ. ಸುರೇಶ್ ಮಾತನಾಡಿದರು.

ರಾಮನಗರ: ನಿಖಿಲ್ ಕುಮಾರಸ್ವಾಮಿ ಕಣ್ಣೀರಿಗೆ ಅವರ ಅಪ್ಪ, ಅಮ್ಮ ಕಾರಣ. ಮಂಡ್ಯದಲ್ಲಿ ನಿಖಿಲ್ ಸೋಲಿನ ಅನುಕಂಪದ ಲಾಭ ಪಡೆದು ಕುಮಾರಸ್ವಾಮಿ ಗೆದ್ದರು. ರಾಮನಗರದಲ್ಲಿ ಅನಿತಾ ಕುಮಾರಸ್ವಾಮಿ ಕೆಲಸ ಮಾಡದೆ ನಿಖಿಲ್ ಸೋತರು ಎಂದು ಮಾಜಿ ಸಂಸದ ಡಿ.ಕೆ.ಸುರೇಶ್ ತಿರುಗೇಟು ನೀಡಿದ್ದಾರೆ.

ಚನ್ನಪಟ್ಟಣ ತಾಲೂಕಿನ ಸುಳ್ಳೇರಿ ಗ್ರಾಮದಲ್ಲಿ ಸಿ.ಪಿ.ಯೋಗೇಶ್ವರ್ ಪರ ಪ್ರಚಾರದ ವೇಳೆ ಮಾತನಾಡಿ, ನಿಖಿಲ್ ತಂದೆಯಯಿಂದಲೇ ಸೋಲನುಭವಿಸಿ ದ್ದಾರೆ, ಅವರ ಮಗನ ಸೋಲಿಗೆ ಅವರೇ ಕಾರಣ, ನಿಖಿಲ್ ಕುಮಾರಸ್ವಾಮಿ ಅವರ ಕಣ್ಣೀರಿಗೆ ಡಿ.ಕೆ.ಸುರೇಶ್, ಡಿ.ಕೆ.ಶಿವಕುಮಾರ್ ಕಾರಣ ಎಂದಿದ್ದಾರೆ. ನಮ್ಮ ಮೇಲೆ ದೂಷಣೆ ಮಾಡುವ ಅವಶ್ಯಕತೆ ಏನಿದೆ ಎಂದು ಸುರೇಶ್ ಪ್ರಶ್ನಿಸಿದರು.

ಒಂದು ದಿನವೂ ಕ್ಷೇತ್ರಕ್ಕೆ ಬಾರದ ಎಚ್‌ಡಿಕೆ: ಕುಮಾರಸ್ವಾಮಿ ಒಂದು ದಿನವೂ ಕ್ಷೇತ್ರಕ್ಕೆ ಬಂದಿಲ್ಲ ಈಗ ಮಗನನ್ನು ನಿಮ್ಮ ಮಡಿಲಿಗೆ ಹಾಕಿದ್ದೇನೆ ಗೆಲ್ಲಿಸಿ ಎನ್ನುತ್ತಿದ್ದಾರೆ, ಯೋಗೇಶ್ವರ್ ಯಾವಾಗಲೂ ನಿಮ್ಮ ಮಡಿಲಿನಲ್ಲಿರುವ ವ್ಯಕ್ತಿ ಅವರನ್ನ ಉಳಿಸಿಕೊಂಡು ತಾಲೂಕಿನ ಅಭಿವೃದ್ಧಿಗೆ ಅವಕಾಶ ಕೊಡಿ, ನಾವು ನಿಮ್ಮ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಲಿಲ್ಲ ಎಂದರೆ ಮುಂದಿನ ಬಾರಿ ಮತ ಹಾಕಬೇಡಿ ಎಂದು ಮಾಜಿ ಸಂಸದರು ಮನವಿ ಮಾಡಿದರು.

ಕೆರೆಗಳು ತುಂಬಲು ಸಿಪಿವೈ ಕಾರಣ: ಚನ್ನಪಟ್ಟಣ ತಾಲೂಕಿನ ಋಣ ತೀರಿಸುವ ವ್ಯಕ್ತಿಗೆ ಆಶೀರ್ವಾದ ಮಾಡಿ. ಈ ತಾಲೂಕಿನಲ್ಲಿ ಕೆರೆ ತುಂಬಲು ಯೋಗೇಶ್ವರ್ ಕಾರಣ. ಈಗಾಗಲೇ ಕುಮಾರಸ್ವಾಮಿ ಅವರಿಗೆ ಎರಡು ಬಾರಿ ಅವಕಾಶ ಕೊಟ್ಟಿದ್ದೀರಿ. ಅವರ ಬಾವನನ್ನು ಸಂಸದರನ್ನಾಗಿ ಮಾಡಿದಿರಿ. ಯೋಗೇಶ್ವರ್ ಗೆ ಒಂದು ಅವಕಾಶ ಕೊಡಿ, ಹಬ್ಬಕ್ಕೆ ದುಡ್ಡು ಕೊಡುತ್ತಾರೆ , ಸೀರೆ, ಪಂಚೆ ಕೊಡುತ್ತಾರೆ ಎನ್ನುತ್ತಿದ್ದಾರೆ.

ಜನರ ಕಣ್ಣೀರು ನೋಡೋರು ಯಾರು?

ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಮಾತನಾಡಿ, ಗುರುವಾರದಿಂದ ನಿಖಿಲ್ ಕಣ್ಣೀರು ಹಾಕಿದರು ಎಂಬುದೇ ಸುದ್ದಿ, ತಾಲೂಕಿನ ಜನರ ಕಣ್ಣೀರು ನೋಡೋರು ಯಾರು, ಕುಮಾರಸ್ವಾಮಿ ಕಣ್ಣೀರು ಹಾಕಿದರು ಎಂದು ಮತ ಹಾಕಿದಿರಿ, ಅವರು ಸಿಎಂ ಆಗಿದ್ದರು, ತಾಲೂಕಿಗೆ ಏನು ಮಾಡಿದ್ದಾರೆ ಈ ಬಗ್ಗೆ ಜನ ಎಚ್ಚೆತ್ತುಕೊಳ್ಳಬೇಕು, ಬಾರಿ ಜೆಡಿಎಸ್ ಪಕ್ಷವನ್ನು ಕಿತ್ತು ಬಿಸಾಕಿ ಎಂದು ಮನವಿ ಮಾಡಿದರು.

ಕುಮಾರಸ್ವಾಮಿ ಏನು ಅಭಿವೃದ್ಧಿ ಮಾಡಿದ್ದಾರೆ, ಯೋಗೇಶ್ವರ್ ಏನು ಅಭಿವೃದ್ಧಿ ಮಾಡಿದ್ದಾರೆ ಎಂಬ ಬಗ್ಗೆ ಪಟ್ಟಿ ಮಾಡಿ. ನೀರಾವರಿ ಅಭಿವೃದ್ಧಿ ಮಾಡಿದ್ದು ಯಾರು ನೀವೇ ಹೇಳಿ..? ಈಗ ಬಂದು ನಾನು ಮಾಡಿದ್ದೇನೆ, ನಮ್ಮಪ್ಪ ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ. ಅವತ್ತು ಯಾವನಿಗೆ ಧಮ್ ಇತ್ತು.

- ಸಿ.ಪಿ.ಯೋಗೇಶ್ವರ್ ಕಾಂಗ್ರೆಸ್ ಅಭ್ಯರ್ಥಿ

ಕುಮಾರಣ್ಣನ ನೋಟು ಪಡೆದು ಯೋಗೇಶಣ್ಣಂಗೆ ಓಟು ಕೊಡಿ ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಶಾಸಕರಾದ ಶ್ರೀನಿವಾಸ್, ಶರತ್ ಬಚ್ಚೇಗೌಡ, ಕೆ.ಎಂ.ಉದಯ್, ವಿಧಾನ ಪರಿಷತ್ ಸದಸ್ಯರಾದ ರವಿ, ಮಾಜಿ ಶಾಸಕ ಎಂ.ಸಿ.ಅಶ್ವಥ್, ಜಿಲ್ಲಾಧ್ಯಕ್ಷರಾದ ಎಸ್. ಗಂಗಾಧರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರಮೋದ್ ಇದ್ದರು.

4ರಿಂದ ಸಿಎಂ, ಡಿಸಿಎಂ ಪ್ರಚಾರ ಕೈ ನಾಯಕರಿಂದ ಸರಣಿ ಪ್ರಚಾರ ಸಭೆ ಏರ್ಪಾಡು

ಯಾಸೀರ್ ಗೆಲುವಿಗೆ ಕಾಂಗ್ರೆಸ್ ಸಂಕಲ್ಪ

ಶಿಗ್ಗಾವಿ: ಶಿಗ್ಗಾವಿ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಯಾಸೀರ್ ಅಹ್ಮದ್ ಖಾನ್ ಪಠಾಣ ಅವರ ಪರವಾಗಿ ಇದೇ ನ.4, 5 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ನ.6, 7 ರಂದು ಡಿಸಿಎಂ ಡಿ.ಕೆ. ಶಿವಕುಮಾರ ಪ್ರಚಾರ ನಡೆಸಲಿದ್ದಾರೆ ಎಂದು ಹಾವೇರಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಂಜೀವಕುಮಾರ ನೀರಲಗಿ ತಿಳಿಸಿದರು.

ಸಿಎಂ ಪ್ರಚಾರ ಸಭೆ: ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನೀರಲಗಿ, ನ.4 ರಂದು ಬೆಳಗ್ಗೆ 10ಕ್ಕೆ ಹುಲಗೂರ, ಶಿಶುವಿನಹಾಳ, ಅತ್ತಿಗೇರಿ, ಬಸನಾಳ, ಕ್ಯಾಲಕೊಂಡ, ಮಧ್ಯಾಹ್ನ 3ಕ್ಕೆ ಸವಣೂರ ತಾಲೂಕು ಹುರಳಿಕೊಪ್ಪಿ, ಕುರಬರಮಲ್ಲೂರ, ತೊಂಡೂರ, ತೆಗ್ಗಿಹಳ್ಳಿ, ಸಂಜೆ 6ಕ್ಕೆ ಬಂಕಾಪುರ ಪಟ್ಟಣದಲ್ಲಿ ಪ್ರಚಾರ ಸಭೆಗಳಲ್ಲಿ ಸಿಎಂ ಸಿದ್ದರಾಮಯ್ಯ ಮಾತನಾಡಲಿದ್ದಾರೆ.

ನ.5 ರಂದು ಬೆಳಗ್ಗೆ 10ಕ್ಕೆ ಚಂದಾಪುರ, ಹುನಗುಂದ, ಕೋಣನಕೇರಿ, ಮಧ್ಯಾಹ್ನ 3ಕ್ಕೆ ಹಿರೇಬೆಂಡಿಗೇರಿ, ಬನ್ನೂರ, ಕಬನೂರ, ಎನ್. ಎಂ.ತಡಸ, ಹಿರೇಮಣಕಟ್ಟಿ ಹಿರೇಬೆಂಡಿಗೇರಿ, ಸಂಜೆ 6ಕ್ಕೆ ಚಿಲ್ಲೂರಬಡ್ನಿ, ತಳ್ಳಳ್ಳಿ, ಬೇವಿನಹಳ್ಳಿ, ಅಲ್ಲಿಪುರ, ಮಂತ್ರೋಡಿ ನಡೆಯವ ಪ್ರಚಾರ ಸಭೆಯಲ್ಲಿ ಸಿಎಂ ಪಾಲ್ಗೊಳ್ಳಲಿದ್ದಾರೆ.

ಡಿಸಿಎಂ ಪ್ರಚಾರ ಸಭೆ: ನ.6 ರಂದು ಬೆಳಗ್ಗೆ ಡಿಸಿಎಂ ಡಿ.ಕೆ. ಶಿವಕುಮಾರ ಅವರು ಹೋತನಹಳ್ಳಿ, ಹಳೇಬಂಕಾಪುರ, ಮಧ್ಯಾಹ್ನ 3ಕ್ಕೆ ದುಂಡಶಿ, ಹೊಸೂರ, ಮಡ್ಲಿ, ವನಹಳ್ಳಿ ಪ್ರಚಾರ ಸಭೆಯಲ್ಲಿ ಪಾಲ್ಗೊಂಡು ಸಂಜೆ 6ಕ್ಕೆ ತಡಸದಲ್ಲಿ ಬೃಹತ್ ರ್‍ಯಾಲಿಯಲ್ಲಿ ಭಾಗವಹಿಸುವರು.

ನ.7 ರಂದು ಬೆಳಗ್ಗೆ 10ಕ್ಕೆ ಅಂದಲಗಿ, ಕೋಣನಕೇರಿ, ಮಧ್ಯಾಹ್ನ 3ಕ್ಕೆ ತವರಮೆಳ್ಳಳ್ಳಿ, ಸಂಜೆ 6ಕ್ಕೆ ಶಿಗ್ಗಾವಿಯಲ್ಲಿ ರ್‍ಯಾಲಿಯಲ್ಲಿ ಭಾಗವಹಿಸುವರು ಎಂದು ಸಂಜೀವಕುಮಾರ ನೀರಲಗಿ ವಿವರಿಸಿದರು.

ಸಿದ್ದರಾಮಯ್ಯ ಅಭ್ಯರ್ಥಿಯೆಂದು ಮತ ನೀಡಿ

ಶಿಗ್ಗಾವಿಯಲ್ಲಿ ಮತದಾರರಿಗೆ ಸಚಿವ ಜಮೀರ್ ಅಹ್ಮದ್ ಖಾನ್ ಮನವಿ

ಶಿಗ್ಗಾವಿ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರ ಕೈಗೊಂಡ ವೇಳೆ ಸಚಿವ ಜಮೀರ್ ಅಹಮದ್ ಖಾನ್ ತಡಸ ಗ್ರಾಮದ ಹೈಮದ್ ಷಾ ಖಾದ್ರಿ ದರ್ಗಾದಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ತಡಸ: ಶಿಗ್ಗಾವಿ ವಿಧಾನಸಭಾ ಕ್ಷೇತ್ರದಲ್ಲಿ ಯಾಸೀರ ಅಹ್ಮದ್ ಖಾನ್ ಪಠಾಣ ಅವರು ಕಾಂಗ್ರೆಸ್ ಅಭ್ಯರ್ಥಿ. ಆದರೆ, ಅಲ್ಲಿ ನಿಜವಾದ ಅಭ್ಯರ್ಥಿ ಸಿದ್ದರಾಮಯ್ಯ. ಅವರು ಮಾಡಿದ ಜನಪರ ಕೆಲಸ ಮತ್ತು ಗ್ಯಾರಂಟಿ ಯೋಜನೆಗಳನ್ನು ಸ್ಮರಿಸಿಕೊಂಡು ಕಾಂಗ್ರೆಸ್‌ಗೆ ಮತ ನೀಡಿ ಎಂದು ಸಚಿವ ಜಮೀರ್ ಅಹ್ಮದ್ ಖಾನ್ ಮನವಿ ಮಾಡಿದ್ದಾರೆ.

ಶಿಗ್ಗಾವಿ ತಾಲ್ಲೂಕಿನ ತಡಸದಲ್ಲಿ ಕಾಂಗ್ರೆಸ್ ಪಕ್ಷದ ರೋಡ್ ಶೋನಲ್ಲಿ ಪಾಲ್ಗೊಂಡ ಜಮೀರ್, ಕಾಂಗ್ರೆಸ್ ಅಭ್ಯರ್ಥಿ ಈ ಬಾರಿ 30 ಸಾವಿರದಿಂದ 40 ಸಾವಿರ ಮತಗಳ ಅಂತರದಿಂದ ಗೆಲುವು ಸಾಧಿಸುವರು ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಬಸವರಾಜ ಬೊಮ್ಮಾಯಿ ಅವರು ಶಿಗ್ಗಾವಿಯಲ್ಲಿ ನಾಲ್ಕು ಬಾರಿ ಗೆದ್ದಿದ್ದಾರೆ. ಒಮ್ಮೆ ಮುಖ್ಯಮಂತ್ರಿಯೂ ಆಗಿದ್ದಾರೆ. ಈಗ ಅವರ ಮಗನನ್ನು ನಿಲ್ಲಿಸಿದ್ದಾರೆ. ಆದರೆ, ಕ್ಷೇತ್ರವನ್ನು ಅಭಿವೃದ್ಧಿ ಮಾಡಿಲ್ಲ ಎಂಬ ಸಿಟ್ಟು ಜನರಲ್ಲಿದೆ. ಅವರಿಗೆ ಯಾವ ರೀತಿ ಪಾಠ ಕಲಿಸಬೇಕು ಎಂಬುದನ್ನು ಜನರೇ ತೀರ್ಮಾನಿಸುವರು ಎಂದರು.

ಕಾಂಗ್ರೆಸ್ ಸರಕಾರಕ್ಕೆ ಪಾಠ ಕಲಿಸಿ: ಬೊಮ್ಮಾಯಿ

ಶಿಗ್ಗಾವಿ: ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ರೈತರು ಹಾಗೂ ಅವರ ಮಕ್ಕಳ ಶಿಕ್ಷಣಕ್ಕೆಂದು ಯೋಜನೆಗಳನ್ನು ಜಾರಿಗೆ ತಂದರು. ಆದರೆ ಅಧಿಕಾರ ಬರುತ್ತಿದ್ದಂತೆ ಕಾಂಗ್ರೆಸ್ ಸರಕಾರ ಎಲ್ಲ ಯೋಜನೆಗಳನ್ನು ಹಿಂಪಡೆದಿದೆ. ರೈತ ವಿರೋಧಿಯಾದ ಸರ್ಕಾರಕ್ಕೆ ಜನ ಪಾಠ ಕಲಿಸಬೇಕು ಎಂದು ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಹೇಳಿದರು. ಶಿಗ್ಗಾವಿ ತಾಲ್ಲೂಕಿನ ಕೋಣನಕೇರಿಯಲ್ಲಿ ಪ್ರಚಾರ ನಡೆಸಿದ ಅವರು ರೈತರಿಂದ ನಾವು ತುತ್ತು ಅನ್ನ ತಿನ್ನುತ್ತಿದ್ದೇವೆ. ಆದರೆ ಇಂದಿನ ಸರಕಾರ ರೈತರ ವಿರೋಧಿ ನಡೆ ಅನುಸರಿಸುತ್ತಿದೆ. ಬಿಜೆಪಿಗೆ ಮತ ನೀಡಿ ದುರಾಡಳಿತದ ಕಾಂಗ್ರೆಸ್ ಸರ್ಕಾರಕ್ಕೆ ತಕ್ಕ ಉತ್ತರ ರವಾನಿಸಬೇಕು' ಎಂದರು.

ಸಂಡೂರು ಕ್ಷೇತ್ರ ಉಪಚುನಾವಣೆ: ಅಂತಿಮ ಕಣದಲ್ಲಿ 6 ಅಭ್ಯರ್ಥಿಗಳು

ಬಳ್ಳಾರಿ: ಸಂಡೂರು ವಿಧಾನಸಭಾ ಉಪಚುನಾವಣೆಗೆ ಸಲ್ಲಿಕೆಯಾಗಿದ್ದ ನಾಮಪತ್ರಗಳ ಪೈಕಿ ಒಬ್ಬರು ತಮ್ಮ ಉಮೇದುವಾರಿಕೆಯನ್ನು ವಾಪಸ್ ತೆಗೆದುಕೊಂಡಿದ್ದು, ಅಂತಿಮ ಕಣದಲ್ಲಿ 6 ಅಭ್ಯರ್ಥಿಗಳು ಇದ್ದಾರೆ ಎಂದು ಉಪಚುನಾವಣಾಧಿಕಾರಿ ರಾಜೇಶ್.ಎಚ್.ಡಿ ತಿಳಿಸಿದ್ದಾರೆ.

ಅ.18 ರಿಂದ 25 ರವರೆಗೆ 7 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದರು. ಅ.28 ರಂದು ನಡೆದ ನಾಮಪತ್ರಗಳ ಪರಿಶೀಲನೆಯಲ್ಲಿ 7 ಅಭ್ಯರ್ಥಿಗಳ ನಾಮಪತ್ರಗಳು ಕ್ರಮವಾಗಿದ್ದವು. ನಾಮಪತ್ರ ವಾಪಸ್ಸು ಪಡೆಯುವ ದಿನವಾದ ಅ.30 (ಬುಧವಾರ) ರಂದು ಸ್ವತಂತ್ರ ಅಭ್ಯರ್ಥಿ ಬಂಗಾರಿ ಅನಿಲ್ ಕುಮಾರ್ ತಮ್ಮ ಉಮೇದುವಾರಿಕೆ ಹಿಂಪಡೆದಿದ್ದಾರೆ.

ಅಂತಿಮ ಕಣದಲ್ಲಿರುವ ಅಭ್ಯರ್ಥಿಗಳು: ಕಾಂಗ್ರೆಸ್ ಅಭ್ಯರ್ಥಿ ಈ.ಅನ್ನಪೂರ್ಣ, ಬಿಜೆಪಿ ಅಭ್ಯರ್ಥಿ ಬಂಗಾರ ಹನುಮಂತ್, ಕರ್ನಾಟಕ ಜನತಾ ಪಕ್ಷದ ಅಭ್ಯರ್ಥಿ ಅಂಜಿನಪ್ಪ ಎನ್ ಮತ್ತು ಪಕ್ಷೇತರ ಅಭ್ಯರ್ಥಿಗಳಾದ ಟಿ.ಎಂ.ಮಾರುತಿ, ಟಿ.ಎರ್‍ರಿಸ್ವಾಮಿ, ಎನ್.ವೆಂಕಣ್ಣ ಅಂತಿಮ ಕಣದಲ್ಲಿ ಇದ್ದಾರೆ ಎಂದು ಉಪಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

ವಕ್ಫ್ ಮಂಡಳಿ ನೋಟಿಸ್ ವಾಪಸ್: ಸಚಿವ ಜಮೀರ್

ಭಾರತೀಯ ಜನತಾ ಪಕ್ಷದಿಂದ ಅನಗತ್ಯ ಗೊಂದಲ ಸೃಷ್ಟಿ; ಸಚಿವರ ಆರೋಪ

ಹೊಸಪೇಟೆ: ರೈತರಿಗೆ ವಕ್ಫ್ ಮಂಡಳಿಯಿಂದ ನೋಟಿಸ್ ನೀಡಿದ್ದರೆ ತಕ್ಷಣ ಹಿಂದಕ್ಕೆ ಪಡೆಯಲಾಗುವುದು, ರೈತರ ಜಮೀನನ್ನು ವಶಕ್ಕೆ ಪಡೆಯುವ ಪ್ರಶ್ನೆಯೇ ಇಲ್ಲ ಎಂದು ವಕ್ಫ್ ಮತ್ತು ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಸ್ಪಷ್ಟಪಡಿಸಿದ್ದಾರೆ.

ಹೊಸಪೇಟೆಯಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಬಿಜೆಪಿಯವರು ಅನಗತ್ಯ ಗೊಂದಲ ಸೃಷ್ಟಿಸುತ್ತಿದ್ದಾರೆ. ವಿಜಯಪುರದಲ್ಲಿ 1,200 ಎಕರೆ ಜಮೀನು ವಕ್ಫ್ ಪಾಲಾಗುತ್ತದೆ ಎಂದು ಗುಲ್ಲೆಬ್ಬಿಸಿದರು. ಅಲ್ಲಿ ವಕ್ಫ್ ಗೆ ಸೇರಿದ 11 ಎಕರೆ ಜಮೀನಷ್ಟೇ ಇದೆ ಎಂದು ತಿರುಗೇಟು ಕೊಟ್ಟರು.

ಕಡಕೋಳ ಘಟನೆ ದುರದೃಷ್ಟಕರ: ಹಾವೇರಿ ಜಿಲ್ಲೆಯ ಕಡಕೋಳದಲ್ಲಿ ಕಲ್ಲು ತೂರಾಟದ ಘಟನೆ ಆಗಬಾರದಿತ್ತು, ಪೆಟ್ಟು ತಿಂದವರೇ ದೂರು ನೀಡಲು ಸಿದ್ಧರಿಲ್ಲ, ನಾವೆಲ್ಲ ಜತೆಗೆ ಇರುವವರು ಎಂದು ಅವರೇ ಹೇಳುತ್ತಿದ್ದಾರೆ. ಆದರೆ ಬಿಜೆಪಿ ಅಲ್ಲಿ ರಾಜಕೀಯ ಮಾಡುತ್ತಿದೆ ಎಂದು ಸಚಿವರು ಆರೋಪಿಸಿದರು.

ವಕ್ಫ್ ಬಳಿ 1.12 ಲಕ್ಷ ಎಕರೆ ಜಮೀನಿದೆ. ಅವೆಲ್ಲವೂ ದಾನಿಗಳು ಕೊಟ್ಟ ಜಮೀನು ಹೊರತು ಸರಕಾರ ಕೊಟ್ಟಿದ್ದಲ್ಲ. ರೈತರಿಗೆ ಯಾವ ಕಾರಣಕ್ಕೂ ತೊಂದರೆ ಕೊಡುವ ಉದ್ದೇಶ ಸರಕಾರಕ್ಕಿಲ್ಲ. ರೈತರ ಪಹಣಿಯಲ್ಲಿ ವಕ್ಫ್ ಹೆಸರು ನಮೂದಾಗಿದ್ದರೆ ಚಿಂತೆಯೇ ಬೇಡ, ಆ ಜಮೀನನ್ನು ಸ್ವಾಧೀನಕ್ಕೆ ಪಡೆಯುವುದಿಲ್ಲ. ನೋಟಿಸ್ ನೀಡಿದ್ದರೆ ಅದನ್ನು ಹಿಂದಕ್ಕೆ ಪಡೆಯಲಾಗುವುದು ಎಂದು ಜಮೀರ್ ಖಾನ್ ಸ್ಪಷ್ಟಪಡಿಸಿದರು.

ಸಂಡೂರು ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಅನ್ನಪೂರ್ಣಾ ತುಕಾರಾಂ ಅವರು 30 ಸಾವಿರದಿಂದ 40 ಸಾವಿರ ಮತಗಳ ಅಂತರದಲ್ಲಿ ಗೆಲುವು ಸಾಧಿಸುವುದು ನಿಶ್ಚಿತ. ಕ್ಷೇತ್ರಕ್ಕೆ ಕಾಂಗ್ರೆಸ್ ಸರ್ಕಾರ ವಿವಿಧ ಕಾಮಗಾರಿಗಳಿಗೆ 1,618 ಕೋಟಿ ರೂಗಳ ಅನುದಾನ ಮಂಜೂರು ಮಾಡಿದೆ. ತುಕಾರಾಂ ಅವರ ಕೆಲಸವೇ ಅವರನ್ನು ಕೈ ಹಿಡಿಯಲಿದೆ ಎಂದು ಹೇಳಿದರು. ಗ್ಯಾರಂಟಿ ಯೋಜನೆಗಳನ್ನು ಯಾವ ಕಾರಣಕ್ಕೂ ರದ್ದು ಮಾಡುವುದಿಲ್ಲ, ಸ್ವತಃ ಮುಖ್ಯಮಂತ್ರಿ ಅವರೇ ಇದನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ ಎಂದು ಹೇಳಿದರು.

ರೈತರ ಜಮೀನನ್ನು ವಕ್ಫ್ ಆಸ್ತಿ ಎಂದು ಯಾರಿಂದಲೂ ಬದಲಾಯಿಸಲು ಸಾಧ್ಯವಿಲ್ಲ. ಸಚಿವರು ಹೇಳಿದರೆಂದು ಅಧಿಕಾರಿಗಳು ಸಹ ಆ ಕೆಲಸ ಮಾಡಲು ಸಾಧ್ಯವಿಲ್ಲ. ವಕ್ಫ್ ಆಸ್ತಿ ಸಂಬಂಧ ನೋಟಿಸ್ ಕೊಡುವುದು ಈಗ ನಡೆದಿರುವ ಬೆಳವಣಿಗೆ ಅಲ್ಲ, ಬಿಜೆಪಿ ಅಧಿಕಾರ ಅವಧಿಯಲ್ಲಿ ಸಾವಿರಾರು ನೋಟಿಸ್ ನೀಡಲಾಗಿತ್ತು. ಅದನ್ನು ಮರೆಮಾಚಿ, ಈಗ ರಾಜಕೀಯ ಕಾರಣಕ್ಕಾಗಿ ವಿಷಯ ಎತ್ತಿದ್ದಾರೆ.

- ಜಮೀರ್ ಅಹಮದ್ ಖಾನ್ ಸಚಿವ

ರಾಮನಗರ: ಸೀರೆ, ಶರ್ಟ್, ಪಂಚೆ ವಶ

ರಾಮನಗರ: ತಾಲೂಕಿನ ಭೀಮನಹಳ್ಳಿ ಗ್ರಾಮದ ಸ್ಟೋರಿ ಫ್ಯಾಶನ್ ಸಂಸ್ಥೆಯ ಗೋದಾಮಿನ ಮೇಲೆ ಗುರುವಾರ ರಾತ್ರಿ ದಾಳಿ ನಡೆಸಿದ ಚುನಾವಣಾಧಿಕಾರಿಗಳ ತಂಡ, ಸೂಕ್ತ ದಾಖಲೆಗಳಿಲ್ಲದೆ ಸಂಗ್ರಹಿಸಿಟ್ಟಿದ್ದ ಲಕ್ಷಾಂತರ ರುಪಾಯಿ ಮೌಲ್ಯದ ಸೀರೆ ಹಾಗೂ ಪಂಚೆ, ಶರ್ಟ್‌ಗಳನ್ನು ವಶಪಡಿಸಿಕೊಂಡಿದೆ.

ಚನ್ನಪಟ್ಟಣ ಉಪ ಚುನಾವಣೆಗೆ ಹಂಚಲು ಇವುಗಳನ್ನು ಸಂಗ್ರಹಿಸಿಡಲಾಗಿತ್ತು ಎಂಬ ಆರೋಪ ಕೇಳಿಬಂದಿದೆ. ಗೋದಾಮಿನಲ್ಲಿ ಸೀರೆ ಮತ್ತು ಪಂಚೆ , ಶರ್ಟ್‌ಗಳನ್ನು ಸಂಗ್ರಹಿಸಿಟ್ಟ ಬಗ್ಗೆ ಸಿಕ್ಕ ಮಾಹಿತಿ ಮೇರೆಗೆ, ಫ್ಲೈಯಿಂಗ್ ಸ್ಕ್ವಾಡ್ ಪೊಲೀಸರೊಂದಿಗೆ ದಾಳಿ ನಡೆಸಿದ ಸಂದರ್ಭದಲ್ಲಿ 25 ಬಾಕ್ಸ್‌ಗಳಲ್ಲಿದ್ದ ಬಟ್ಟೆಗಳು ಪತ್ತೆಯಾದವು. ಇಷ್ಟು ಪ್ರಮಾಣದ ಬಟ್ಟೆಗಳನ್ನು ಯಾವ ಪಕ್ಷದವರು ಸಂಗ್ರಹಿಸಿ ಇಟ್ಟಿದ್ದರು, ಎಲ್ಲಿಂದ ತರಲಾಗಿತ್ತು ಎಂಬ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ.

ಸಂಬಂಧಪಟ್ಟವರ ವಿರುದ್ಧ ಪ್ರಕರಣ ದಾಖಲಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಚುನಾವಣಾಧಿಕಾರಿ ಬಿನೋಯ್ ಪಿ.ಕೆ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಟಿ.ವಿ. ಸುರೇಶ್ ಮೊದಲಾದವರು ಭಾಗಿಯಾಗಿದ್ದರು.

ವಕ್ಫ್ ಆಸ್ತಿ ರಾಷ್ಟ್ರೀಕರಣಕ್ಕೆ ಆಗ್ರಹ

ಪ್ರಧಾನಿಗೆ ಬಸನಗೌಡ ಪಾಟೀಲ್ ಯತ್ನಾಳ್ ಪತ್ರ

ವಿಜಯಪುರ: ವಿಜಯಪುರ ಜಿಲ್ಲೆ ಸೇರಿದಂತೆ ರಾಜ್ಯದಲ್ಲಿ ವಕ್ಫ್ ಗೊಂದಲ ವಿಚಾರವಾಗಿ ಪ್ರಧಾನಿ ನರೇಂದ್ರ ಮೋದಿಯವರಿಗೆ ಪತ್ರ ಬರೆದಿರುವ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಕೂಡಲೇ ವಕ್ಫ್ ಆಸ್ತಿಗಳನ್ನು ರಾಷ್ಟ್ರೀಕರಣಗೊಳಿಸುವಂತೆ ಆಗ್ರಹಿಸಿದ್ದಾರೆ.

ರಾಜ್ಯದಲ್ಲಿ ವಕ್ಫ್ ಮಂಡಳಿ ರೈತರ ಆಸ್ತಿಗಳ ಹಕ್ಕಿನ ಸಂಬಂಧ ನೋಟಿಸ್ ಕಳುಹಿಸಿದ ನಂತರ ಭುಗಿಲೆದ್ದಿರುವ ಸಮಸ್ಯೆ ಹಿನ್ನೆಲೆಯಲ್ಲಿ ಯತ್ನಾಳ್ ಪ್ರಧಾನಿ ಮೊರೆ ಹೋಗಿದ್ದಾರೆ.

ವಕ್ಫ್ ಬೋರ್ಡ್‌ನಿಂದಾಗಿ ಜಮೀನು ಮಾಲೀಕರು ಮತ್ತು ರೈತರಿಗೆ ತೊಂದರೆಯಾಗುತ್ತಿದೆ. ಅಲ್ಲದೆ,


ಬಸನಗೌಡ ರಾ. ಪಾಟೀಲ (ಯತ್ನಾಳ)
ಶಾಸಕರು,
30-ವಿಜಯಪುರ ನಗರ ಮತಕ್ಷೇತ್ರ
ಮಾಜಿ ಕೇಂದ್ರ ರೈಲ್ವೆ ಮತ್ತು ಜವಳಿ ಸಚಿವರು (ರಾಜ್ಯ)

BASANAGOUDA R. PATIL (YATNAL)
Member of Legislative Assembly
30- Vijayapur City Constituency
Former Union Railway & Textile Minister (State)

- 3 -

In view of the above stated reasons, I request you to Nationalize the Assets of Waqf so that it can be used for productive purposes to build Hospitals, Research Centres, Schools, Colleges, Stadiums so that it can be utilized by people irrespective of caste and creed.

With kind regards,

Yours faithfully,
[BASANAGOUDA R. PATIL]
(YATNAL)

ಧಾರ್ಮಿಕ ಸಂಸ್ಥೆ, ಮಠಮಾನ್ಯಗಳ ಜಮೀನುಗಳನ್ನು ವಕ್ಫ್ ಮಂಡಳಿ ಆಕ್ರಮಿಸಿಕೊಳ್ಳುತ್ತಿದೆ.

ವಕ್ಫ್ ಕಾನೂನು ಅಸಮಾನತೆ, ಕ್ರೂರತೆ ಒಳಗೊಂಡಿದೆ. ವಕ್ಫ ಬೋರ್ಡ್‌ಗೆ ಅನಿಯಂತ್ರಿತ, ಪರಿಮಿತ ಅಧಿಕಾರ ನೀಡಲಾಗಿದ್ದು, ಈ ಮೂಲಕ ಭಾರತೀಯರಿಗೆ ಅನ್ಯಾಯವಾಗುತ್ತಿದೆ. ವಕ್ಫ್ ಆಸ್ತಿಗಳನ್ನು ರಾಷ್ಟ್ರೀಕರಣ ಮಾಡಿ, ಸಮಾಜಕ್ಕೆ ಉಪಯೋಗವಾಗುವಂತೆ ಮಾಡಬೇಕು ಎಂದು ಯತ್ನಾಳ ಒತ್ತಾಯಿಸಿದ್ದಾರೆ.

ವಕ್ಫ್ ಭೀತಿಯಿಂದ ಕಡಕೋಳದಲ್ಲಿ ಕಲ್ಲು ತೂರಾಟ: 32 ಮಂದಿ ಬಂಧನ, ಗ್ರಾಮದಲ್ಲಿ ಉದ್ವಿಗ್ನ ಪರಿಸ್ಥಿತಿ

ಹಾವೇರಿ: ವಕ್ಫ್ ಮಂಡಳಿ ಹೆಸರಿನಲ್ಲಿ ಖಾತೆ ಇಂದೀಕರಣಕ್ಕೆ ಯ ಸವಣೂರು ತಾಲೂಕಿನ ಕಡಕೋಳ ಗ್ರಾಮದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದ್ದು, ವಾಸದ ಮನೆಗಳನ್ನು ಖಾಲಿ ಮಾಡಿಸುವ ಭೀತಿಯಿಂದ ಉದ್ರಿಕ್ತರ ಗುಂಪು ಬುಧವಾರ ರಾತ್ರಿ ಮುಸ್ಲಿಂ ಮುಖಂಡರ ಮನೆಗಳ ಮೇಲೆ ಕಲ್ಲು ತೂರಾಟ ನಡೆಸಿದ್ದರಿಂದ ಪರಿಸ್ಥಿತಿ ಪ್ರಕ್ಷುಬ್ಧಗೊಂಡಿದೆ. ಪ್ರಕರಣ ಸಂಬಂಧ ಸಂಬಂಧಿಸಿದಂತೆ 32 ಜನರನ್ನು ವಶಕ್ಕೆ ಪಡೆಯಲಾಗಿದೆ.

ರೊಚ್ಚಿಗೆದ್ದ ಗುಂಪು ಮೊಹಮ್ಮದ್ ರಫಿ ಮನೆ ಮೇಲೆ ಕಲ್ಲು ತೂರಿ ಆಕ್ರೋಶ ವ್ಯಕ್ತಪಡಿಸಿದೆ. ಅಲ್ಲದೆ ಮನೆ ಮುಂದೆ ಇದ್ದ ಬೈಕನ್ನು ಜಖಂಗೊಳಿಸಿದೆ. ಪರಿಸ್ಥಿತಿ ಉದ್ವಿಗ್ನಗೊಂಡ ಬೆನ್ನಲ್ಲೇ ಬುಧವಾರ ರಾತ್ರಿ ಹಾವೇರಿ ಜಿಲ್ಲಾಧಿಕಾರಿ ಡಾ। ವಿಜಯ ಮಹಾಂತೇಶ ದಾನಮ್ಮನವರ, ಪೊಲೀಸ್ ವರಿಷ್ಠಾಧಿಕಾರಿ ಅಂಶುಕುಮಾರ್ ಕಡಕೋಳಕ್ಕೆ ಭೇಟಿನೀಡಿ ಗ್ರಾಮಸ್ಥರ ಮನವೊಲಿಕೆಗ ಯತ್ನಿಸಿದರು.

ಬಂಧಿತರಲ್ಲಿ ಮೂವರು ಅಪ್ರಾಪ್ತ ವಯಸ್ಕರು: ಘಟನೆಗೆ ಸಂಬಂಧಿಸಿ ಹಲ್ಲೆಗೊಳಗಾದವರಿಂದಲೂ ಮಾಹಿತಿ ಪಡೆದು ದೂರು ಸ್ವೀಕರಿಸಲಾಗಿದೆ. ಈವರೆಗೆ 32 ಜನರನ್ನು ವಶಕ್ಕೆ ಪಡೆದಿದ್ದು, ಅವರಲ್ಲಿ ಮೂವರು ಅಪ್ರಾಪ್ತ ವಯಸ್ಕರೂ ಸೇರಿದ್ದಾರೆ. ಗ್ರಾಮದಲ್ಲಿ ಬಿಗಿಭದ್ರತೆಗೆ 4 ಕೆಎಸ್‌ಆರ್‌ಪಿ ತುಕಡಿ, 200 ಪೊಲೀಸ್ ಸಿಬಂದಿ ನಿಯೋಜಿಸಲಾಗಿದೆ. 6 ಜನ ಗಾಯಗೊಂಡಿದ್ದಾರೆ ಎಂದು ಎಸ್‌ಪಿ ಅಂಶುಕುಮಾರ್ ತಿಳಿಸಿದ್ದಾರೆ.

ವಕ್ಫ್ ಗಲಾಟೆಯಿಂದ ಉದ್ವಿಗ್ನಗೊಂಡಿದ್ದ ಕಡಕೋಳಕ್ಕೆ ಹಾವೇರಿ ಡಿಸಿ ಡಾ.ವಿಜಯ ಮಹಾಂತೇಶ ದಾನಮ್ಮನವರ್ ಭೇಟಿನೀಡಿ ಪರಿಸ್ಥಿತಿ ಪರಾಮರ್ಶೆ ನಡೆಸಿದರು.

ವಕ್ಫ್ ಆಸ್ತಿ ಎಂದು ಮನೆ ದಾಖಲೆಗಳಲ್ಲೂ ನಮೂದಿಸುತ್ತಾರೆಂಬ ಭಯದಿಂದ ಜನರು ಗಲಾಟೆ ಮಾಡಿದ್ದಾರೆ. ಈಗ ಪರಿಸ್ಥಿತಿ ತಿಳಿಯಾಗಿದೆ.ವೈಯಕ್ತಿಕವಾಗಿ ಯಾರಿಗೂ ನಾವು ನೋಟಿಸ್ ಕೊಟ್ಟಿರಲಿಲ್ಲ. ಹಿಂದೆ ಇದ್ದ ಪಟ್ಟ ಮೇಲೆ ಮುಂದಿನ ಕ್ರಮಕ್ಕೆ ಪತ್ರ ಬರೆದಿದ್ದೆವು. ಡಾ। ವಿಜಯಮಹಾಂತೇಶ ದಾನಮ್ಮನವರ್.

-ಹಾವೇರಿ ಜಿಲ್ಲಾಧಿಕಾರಿ

ವಿಶ್ವವಾಣಿ

ಸಂಪಾದಕೀಯ

ಹಬ್ಬಗಳಲ್ಲೇ ಬರೆ ಬೀಳುವುದೇಕೆ?

ಬೆಳಕಿನ ಹಬ್ಬ ದೀಪಾವಳಿಯ ಈ ಸಂದರ್ಭದಲ್ಲಿ ಮಾರುಕಟ್ಟೆಯಲ್ಲಿ ಹೂವು-ಹಣ್ಣು, ತರಕಾರಿ ಹಾಗೂ ಪೂಜಾ ಸಾಮಗ್ರಿಗಳ ಬೆಲೆ ಮುಗಿಲು ಮುಟ್ಟಿರುವುದರ ಬಗೆಗಿನ ವರದಿಗಳನ್ನು ನೀವು ಈಗಾಗಲೇ ಓದಿರಬಹುದು. ಬೇಡಿಕೆ ಮತ್ತು ಪೂರೈಕೆಗಳ ನಡುವಿನ ಅಂತರ ಹೆಚ್ಚಾದಾಗ, ಅಥವಾ ಉತ್ಪಾದನೆಯಲ್ಲಿನ ಕುಸಿತದಿಂದಾಗಿ ನಿರ್ದಿಷ್ಟ ಪದಾರ್ಥದ ತೀವ್ರ ಕೊರತೆ ತಲೆದೋರಿದಾಗ ಮಾರುಕಟ್ಟೆಯಲ್ಲಿ ಅಂಥ ವಸ್ತುಗಳ ಬೆಲೆಯೇರಿಕೆ ಕಂಡುಬರುವುದು ವಾಡಿಕೆ. ಆದರೆ, ಇಂಥ ಯಾವ ಸಮಸ್ಯೆ ಇಲ್ಲದಿರುವಾಗಲೂ, ಹಬ್ಬ-ಹರಿದಿನ ಬರುತ್ತಿದ್ದಂತೆ ಉತ್ಪನ್ನಗಳ ಬೆಲೆಯೇರಿಕೆಯಾಗುವುದೇಕೆ ಎಂಬುದು ಶ್ರೀಸಾಮಾನ್ಯರ ಪ್ರಶ್ನೆ. ಉದಾಹರಣೆಗೆ, ಕೆಲ ದಿನಗಳ ಹಿಂದಷ್ಟೇ ಒಂದು ಕೆ.ಜಿ. ಸೇವಂತಿಗೆ ಹೂವಿನ ಬೆಲೆ 150 ರುಪಾಯಿ ಇದ್ದುದು, ಹಬ್ಬ ಬರುತ್ತಿದ್ದಂತೆ 250 ರುಪಾಯಿಗೆ ಜಿಗಿದುಬಿಡುತ್ತದೆ. ಇದು ನಿಜಕ್ಕೂ ಪವಾಡವಲ್ಲವೇ? ಇಂಥ 'ಕೃತಕ' ಬೆಲೆಯೇರಿಕೆಗೆ ಕಾರಣರಾರು? ಹೂವು, ಹಣ್ಣು, ತರಕಾರಿ ಸೇರಿದಂತೆ ಯಾವುದೇ ಕೃಷಿ ಉತ್ಪನ್ನಗಳಿಗೆ ಸಂಬಂಧಿಸಿ ಕಾಲಾನುಕಾಲಕ್ಕೆ ಗ್ರಾಹಕರ ಬೇಡಿಕೆಯಲ್ಲಿ ಮತ್ತು ಅವುಗಳ ಮಾರಾಟ ಬೆಲೆಯಲ್ಲಿ ಹೆಚ್ಚಳವಾದರೆ ಕೃಷಿಕರಿಗೆ ನಾಲ್ಕು ಕಾಸು ಹೆಚ್ಚು ಸಂಪಾದನೆಯಾದರೂ ಆಗುತ್ತದೆ ಅಂತ ಸಮಾಧಾನಪಟ್ಟುಕೊಳ್ಳೋಣ ಎಂದರೆ, ಇಲ್ಲಿ ಬಹುತೇಕ ಅಂತ ದೃಶ್ಯ ಕಂಡುಬರುವುದು ಕಮ್ಮಿ. ಏಕೆಂದರೆ, ಇಲ್ಲಿ ಪ್ರಯೋಜನ ಪಡೆಯುವುದು ಕೃಷಿ ಉತ್ಪನ್ನಗಳನ್ನು ಬೆಳೆದ ರೈತರೂ ಅಲ್ಲ, ಅವನ್ನು ಖರೀದಿಸುವ ಗ್ರಾಹಕರೂ ಅಲ್ಲ; ಬದಲಿಗೆ ಅವನ್ನು ಕೈಬದಲು ಮಾಡಿ ದುಡ್ಡನ್ನು ಗಂಟುಮಾಡಿಕೊಳ್ಳುವ ಮಧ್ಯವರ್ತಿಗಳು! ಪದಾರ್ಥಗಳ ಕೃತಕ ಬೆಲೆಯೇರಿಕೆಗೆ ಕಾರಣವಾಗಿರುವ ಅಂಶಗಳಲ್ಲಿ ಇವರೂ ಸೇರಿಕೊಂಡಿದ್ದಾರೆ ಎಂಬುದು ಗಂಭೀರವಾಗಿ ಆಲೋಚಿಸಬೇಕಾದ ಸಂಗತಿ. ಹಬ್ಬ-ಹರಿದಿನ ಬಂದಾಗ ಗ್ರಾಹಕರು ಸಾಮಾನ್ಯವಾಗಿ ಚೌಕಾಸಿ ಮಾಡುವುದಿಲ್ಲ; ದೇವರ ಮೇಲಿನ ಶ್ರದ್ಧಾಭಕ್ತಿಯಿಂದಾಗಿ ಹೆಚ್ಚು ಹಣ ತೆತ್ತಾದರೂ ಅವರು ಅಗತ್ಯ ವಸ್ತುಗಳನ್ನು ಖರೀದಿಸುತ್ತಾರೆ ಎಂಬುದು ಮಧ್ಯವರ್ತಿಗಳಿಗೂ ಗೊತ್ತಿದೆ. ಹೀಗಾಗಿ ಅವರಾಡಿದ್ದೇ ಆಟ. ಆದರೆ ಇಂಥ ಅತಿರೇಕದ ಬೆಲೆಯೇರಿಕೆಗೆ ಲಗಾಮು ಹಾಕುವುದಕ್ಕೆ ಆಳುಗ ವ್ಯವಸ್ಥೆಗೆ ಸಾಧ್ಯವೇ ಇಲ್ಲವೇ ಎಂಬುದು ಶ್ರೀಸಾಮಾನ್ಯರ ಪ್ರಶ್ನೆ.

ಸೊಂಪಾದಕೀಯ

ಭಂಡರಿಗೆ ಇದೇ ತಕ್ಕ ಶಾಸ್ತಿ

ಸಾಮಾನ್ಯ ಜನರ ಸಹನೆಯ ಕಟ್ಟೆಯೊಡೆದರೆ ಏನಾಗುತ್ತದೆ ಎಂಬುದಕ್ಕೆ ಇದೊಂದು ಉದಾಹರಣೆ. ಇಂದಿನ ಯುವ ಪೀಳಿಗೆಗೆ ಅಂಟಿರುವ ಹಲವು ಪೀಡೆಗಳಲ್ಲಿ ರಸ್ತೆ ಮೇಲೆ ತಮ್ಮ ವೆಹಿಕಲ್ ನೊಂದಿಗೆ ವೀಲಿಂಗ್ ಮಾಡುವುದು ಕೂಡ ಒಂದು. ಇನ್ನೂ ಮೀಸೆ ಬಾರದ ಹುಡುಗರು ಕೈಯಲ್ಲಿ ಲೈಸೆನ್ಸ್, ತಲೆಯಲ್ಲಿ ಸೆನ್ಸ್ ಇಲ್ಲದಿದ್ದರೂ ತಮ್ಮ ದ್ವಿಚಕ್ರ ವಾಹನಗಳಲ್ಲಿ ರಸ್ತೆಯ ಮೇಲೆ ಸರ್ಕಸ್ ಮಾಡುವುದನ್ನು ನೋಡಿದ್ದೇವೆ. ಇದು ವೀಲಿಂಗ್ ಅಂತಲೇ ಪ್ರಸಿದ್ಧಿ. ಈ ಹುಚ್ಚು ಹಿಡಿದ ಹುಡುಗರಿಗೆ ಐಷಾರಾಮಿ ಸ್ಪೋರ್ಟ್ಸ್ ಬೈಕ್‌ಗಳೇ ಆಗಬೇಕು ಅಂತೇನಿಲ್ಲ. ಮಾಮೂಲಿ ಸ್ಕೂಟರ್ ತೆಗೆದುಕೊಂಡು ಪಡ್ಡೆ ಹುಡುಗರು ರಿಂಗ್ ರೋಡ್, ನೈಸ್ ರೋಡ್‌ಗಳಲ್ಲಿ ಈ ವೀಲಿಂಗ್ ಸರ್ಕಸ್ ಮಾಡುತ್ತಾರೆ. ಇದರಿಂದ ತಮ್ಮ ಜೀವಕ್ಕೂ, ಪರರ ಜೀವಕ್ಕೂ ಅಪಾಯ ಅನ್ನುವುದು ಮಾತ್ರ ಇವರಿಗೆ ಮನವರಿಕೆ ಆಗುವುದಿಲ್ಲ. ವೀಲಿಂಗ್ ಮಾಡುತ್ತಾ ಎಡವಟ್ಟಾದರೆ ಬರೀ ಪ್ರಾಣ ಹೋಗೋದು ಅಷ್ಟೇ ಅಲ್ಲ, ಪ್ರಾಣ ಹೋಗದಿದ್ದರೂ ಜೀವನಪೂರ್ತಿ ವೀಲ್ ಚೇರ್ ಮೇಲೆ ಕುಳಿತುಕೊಳ್ಳಬೇಕಾದ ಪರಿಸ್ಥಿತಿ ಬಂದರೂ ಬರಬಹುದು. ಆದರೆ ಇಂದಿನ ಕೆಲವು ಯುವಜನರಿಗೆ ಇದರ ಯಾವ ಅರಿವೂ ಇಲ್ಲ. ಇವರು ಒಂದೇ ವೀಲ್ ಮೇಲೆ ತಮ್ಮ ವಾಹನದೊಂದಿಗೆ ಮಾಡುವ ಸರ್ಕಸ್ ನೋಡಿದರೆ ಯಾರಿಗಾದರೂ ಜೀವ ಬಾಯಿಗೆ ಬಂದಂತೆ ಆಗುತ್ತದೆ. ಆದರೆ ಇವರು ಅಷ್ಟೊಂದು ಸ್ಪೀಡ್‌ನಲ್ಲಿ ಅಸಡ್ಡೆಯಿಂದ ಸರ್ಕಸ್ ಮಾಡುವಾಗ ಅವರನ್ನು ತಡೆಯುವ ಸಾಮರ್ಥ್ಯ ಯಾರಿಗೂ ಇರುವುದಿಲ್ಲ. ಆದರೆ ಕೆಲ ದಿನಗಳ ಹಿಂದೆ ಮಾತ್ರ ನೆಲಮಂಗಲದ ಫ್ಲೈಓವರ್ ಮೇಲೆ ಇಂಥ ವೀಲಿಂಗ್ ಮಾಡುವವರಿಗೆ ತಕ್ಕ ಶಾಸ್ತಿಯಾಗಿದೆ. ಸಾರ್ವಜನಿಕರ ಕೈಗೆ ಸಿಕ್ಕು ತಮ್ಮ ಬೈಕ್‌ಗಳನ್ನು ಅಲ್ಲೇ ಬಿಟ್ಟು ಓಡಿಹೋದ ಈ ವೀಲರ್‌ಗಳ ಬೈಕ್‌ಗಳು ಎಲ್ಲರ ಕೋಪಕ್ಕೆ ತುತ್ತಾಗಿವೆ. ವೀಲಿಂಗ್ ಮಾಡುವುದರ ಮೇಲೆ ಅದೆಷ್ಟು ದಿನದ ಸಿಟ್ಟಿತ್ತೋ ಏನೋ ಸಾರ್ವಜನಿಕರು ಅವರ ಎರಡು ಬೈಕ್‌ಗಳನ್ನು ಫ್ಲೈ ಓವರ್ ಮೇಲಿಂದ ಕೆಳಕ್ಕೆ ಬಿಸಾಕಿದ್ದಾರೆ. ಇದು ಕಾನೂನಿಗೆ ವಿರುದ್ಧವಾದರೂ ಒಮ್ಮೊಮ್ಮೆ ಟ್ರಾಫಿಕ್ ಪೊಲೀಸರ ಕೈಗೂ ಸಿಗದೆ ಚಳ್ಳೆಹಣ್ಣು ತಿನ್ನಿಸುವ ಇಂಥ ಪುಂಡರಿಗೆ, ಭಂಡರಿಗೆ ಇದೇ ತಕ್ಕ ಶಾಸ್ತಿ ಅನ್ನಿಸಿದರೆ ತಪ್ಪೇನಿಲ್ಲ.

ಸಂಪಾದಕರ ಸದ್ಯಶೋಧನೆ

ವಿಮಾನ ಮತ್ತು ಹಾರಾಟದ ಪಥ

ವಿಮಾನ ಪ್ರಯಾಣ ಮಾಡುವ ಅನೇಕರಲ್ಲಿ ಒಂದು ಪ್ರಶ್ನೆ ಮೂಡುವುದುಂಟು. ಒಮ್ಮೆ ವಿಮಾನ ಟೇಕಾಫ್ ಆದ ಬಳಿಕ, ಅದು ತನ್ನ ಮಾರ್ಗವನ್ನು ಹೇಗೆ ಕಂಡುಕೊಳ್ಳುತ್ತದೆ? ಆಕಾಶ ಮಾರ್ಗದಲ್ಲಿ ನಾವು ಹೋಗಬೇಕೆಂದಿರುವ ಊರಿನ ಮಾರ್ಗವನ್ನು ತಿಳಿದುಕೊಳ್ಳುವುದು ಹೇಗೆ? ಅದರಲ್ಲೂ ಅಂತಾರಾಷ್ಟ್ರೀಯ ವಾಯುಯಾನದಲ್ಲಿ ವಿಮಾನ ಹತ್ತಾರು ದೇಶಗಳ ಮೇಲೆ ಒಂದೆರಡು ಖಂಡಗಳ ಮೇಲೆ ಹಾರುತ್ತದೆ. ಹೀಗಿರುವಾಗ ಯಾವ ಮಾರ್ಗದಲ್ಲಿ ಪಯಣಿಸಬೇಕು ಎಂಬುದನ್ನು ವಿಮಾನದ ಪೈಲಟ್ ಹೇಗೆ ಅರ್ಥ ಮಾಡಿಕೊಳ್ಳುತ್ತಾನೆ? ಈಗ ಜಿಪಿಎಸ್ ವ್ಯವಸ್ಥೆಯಿದೆ, ಅದಕ್ಕೂ ಮೊದಲು ಪೈಲಟ್‌ಗಳು ಹೇಗೆ ನಿಭಾಯಿಸುತ್ತಿದ್ದರು? ಒಂದು ನಿರ್ದಿಷ್ಟ ದಿಕ್ಕಿನಲ್ಲಿ, ನಿರ್ದಿಷ್ಟ ಎತ್ತರದಲ್ಲಿ, ಒಂದು ವೇಗದಲ್ಲಿ, ಇಷ್ಟು ಹೊತ್ತು ಹಾರಿದರೆ, ಈ ಊರು ಸಿಗುತ್ತದೆ ಎಂದು ನಿರ್ಧರಿಸುತ್ತಿದ್ದ ಕಾಲವೂ ಇತ್ತು. ಈಗ ತಂತ್ರಜ್ಞಾನ ಸಾಕಷ್ಟು ಅಭಿವೃದ್ಧಿಯಾಗಿದೆ. ವಿಮಾನಗಳು ತಮ್ಮ ಮಾರ್ಗವನ್ನು ಸರಿಯಾದ ದಿಕ್ಕಿನಲ್ಲಿ ಕ್ರಮಿಸಲು ಆಧುನಿಕ ತಂತ್ರಜ್ಞಾನದ ಸಹಾಯದಿಂದ ನಿಖರ ಮಾರ್ಗದರ್ಶನ ವ್ಯವಸ್ಥೆಗಳನ್ನು ಬಳಸುತ್ತಿವೆ. ಆಧುನಿಕ ವಿಮಾನಗಳಲ್ಲಿ ಜಿಪಿಎಸ್ ವ್ಯವಸ್ಥೆಯಿದೆ. ಇದು ಉಪಗ್ರಹಗಳ (satellites) ಮೂಲಕ ವಿಮಾನವು ಭೂಮಿಯ ಮೇಲೆ ತನ್ನ ನಿಖರ ಸ್ಥಾನವನ್ನು ಪತ್ತೆ ಹಚ್ಚಲು ಸಹಾಯ ಮಾಡುತ್ತದೆ. ಜಿಪಿಎಸ್ ಮೂಲಕ ವಿಮಾನವು ತನ್ನ ಗಮ್ಯಸ್ಥಾನಕ್ಕೆ ತ್ವರಿತವಾಗಿ ಮತ್ತು ನಿಖರವಾಗಿ ತಲುಪಬಹುದು. ವಿಮಾನಗಳು ಜಿಪಿಎಸ್‌ಗಿಂತ ಹೊರತಾಗಿ, ನೆಲದ ಮೇಲೆ ನೇವಿಗೇಶನ್ ಸಾಧನಗಳಾದ 'ವೋರ್' (VHF Omnidirectional Range- VOR) ವ್ಯವಸ್ಥೆಯನ್ನು ಬಳಸುತ್ತವೆ. ಇದು short-range radio navigation system. ಇದು ನಿಖರವಾಗಿ ವಿಮಾನ ಎಲ್ಲಿದೆ ಎಂಬುದನ್ನು ರಿಯಲ್ ಟೈಮ್‌ನಲ್ಲಿ ತಿಳಿಸುತ್ತದೆ. ಇದು ಹೈ ಫ್ರೀಕ್ವೆನ್ಸಿ ರೇಡಿಯೋ ಬ್ಯಾಂಡ್‌ನಲ್ಲಿ ಕಾರ್ಯನಿರ್ವಹಿಸುತ್ತದೆ. ಈಗಿನ ವಿಮಾನಗಳಲ್ಲಿ ಎನ್‌ಡಿಬಿ (NDB: Non-Directional Beacon) ವ್ಯವಸ್ಥೆಯೂ ಇರುತ್ತದೆ. ಇದು ವಿಮಾನಕ್ಕೆ ಮಾರ್ಗ ಅಥವಾ ಪಥ ಮತ್ತು ದೂರವನ್ನು ತಿಳಿಸುತ್ತದೆ. ಹಾರಾಟದ ಮಾರ್ಗಗಳನ್ನು ನಿರ್ದಿಷ್ಟಗೊಳಿಸಲು ಏರ್‌ವೇ ಚಾರ್ಟ್‌ಗಳು ಬಳಕೆಯಾಗುತ್ತವೆ. ವಿಮಾನ ಚಲಿಸುತ್ತಿರುವ ಹಾರಾಟದ ದಾರಿ (airway)ಯ ಸ್ಪಷ್ಟ ನೋಟ ಪೈಲಟ್‌ಗೆ ಸಿಗುತ್ತದೆ. ಪ್ರತಿ ವಿಮಾನದಲ್ಲಿಯೂ ಫ್ಲೈಟ್ ಮ್ಯಾನೇಜ್ಮೆಂಟ್ ಸಿಸ್ಟಮ್ ಅನ್ನು ಅಳವಡಿಸಿರುತ್ತಾರೆ. ಈ ಕಂಪ್ಯೂಟರ್ ವ್ಯವಸ್ಥೆ ಪೈಲಟ್‌ಗಳಿಗೆ ವಿಮಾನ ಮಾರ್ಗದ ದಿಕ್ಕನ್ನು ನೀಡುತ್ತದಷ್ಟೇ ಅಲ್ಲ, ಹಾರಾಟದ ಉದ್ದಕ್ಕೂ ಇಂಧನ ಬಳಕೆ, ತಾಪಮಾನ ಮತ್ತು ಗಮ್ಯಸ್ಥಾನದ ಮಾಹಿತಿಯನ್ನು ನಿರಂತರವಾಗಿ ನೀಡುತ್ತದೆ. ಮಾರ್ಗಮಧ್ಯೆ ಪೈಲಟ್‌ಗೆ ತಾನು ಸೇರುವ ಊರು ಇನ್ನೂ ಎಷ್ಟು ದೂರವಿದೆ, ತಲುಪಲು ಇನ್ನೂ ಎಷ್ಟು ಸಮಯಬೇಕು, ವಿಮಾನದಲ್ಲಿ ಈಗ ಎಷ್ಟು ಇಂಧನವಿದೆ, ಊರು ತಲುಪಲು ಆ ಇಂಧನ ಸಾಕಾಗುವುದಾ... ಮುಂತಾದ ಅಮೂಲ್ಯ ಮಾಹಿತಿಯನ್ನು ಈ ವ್ಯವಸ್ಥೆ ನೀಡುತ್ತದೆ. ಇದಲ್ಲದೇ, ಹಾರಾಟದ ಸಮಯದಲ್ಲಿ ಎಟಿಸಿ ವ್ಯವಸ್ಥೆ (Air Traffic Control) ನಿರಂತರವಾಗಿ ವಿಮಾನಗಳಿಗೆ ಮಾರ್ಗಸೂಚನೆ ನೀಡುತ್ತದೆ. ಹವಾಮಾನ ಬದಲಾವಣೆ, ವಿಮಾನ ದಟ್ಟಣೆ ಅಥವಾ ತುರ್ತುಸ್ಥಿತಿಯಲ್ಲಿ ಎಟಿಸಿ ಮಾರ್ಗವನ್ನು ತಕ್ಷಣ ಬದಲಾಯಿಸಿ, ಪೈಲಟ್‌ಗಳಿಗೆ ಹೊಸ ದಾರಿಗಳನ್ನು ಸೂಚಿಸುತ್ತದೆ. SID (Standard Instrument Departure) ಮತ್ತು STAR (Standard Terminal Arrival Route) ವ್ಯವಸ್ಥೆಗಳು ವಿಮಾನಗಳ ಹಾರಾಟ, ಟೇಕಾಫ್ ಮತ್ತು ಲ್ಯಾಂಡಿಂಗ್ ಸಮಯದಲ್ಲಿ ಸರಿಯಾದ ಮಾರ್ಗದಲ್ಲಿ ಹೊಂದಿಸುವ ಕ್ರಮಗಳಾಗಿ ಕೆಲಸ ನಿರ್ವಹಿಸಲು ಅನುವು ಮಾಡಿಕೊಡುತ್ತದೆ. ಉದಾಹರಣೆಗೆ, ವಿಮಾನವು ವಿಮಾನ ನಿಲ್ದಾಣದಿಂದ ಹೊರಡುವಾಗ SID ಪ್ರಕ್ರಿಯೆಯನ್ನು ಅನುಸರಿಸಿ ಏರ್‌ವೇನಲ್ಲಿ ಸೇರುತ್ತದೆ ಮತ್ತು ಲ್ಯಾಂಡಿಂಗ್ ವೇಳೆ STAR ಪ್ರಕ್ರಿಯೆಯ ಮೂಲಕ ಏರ್‌ವೇ ಬಿಟ್ಟು ನಿರ್ದಿಷ್ಟ ಮಾರ್ಗದ ಮೂಲಕ ನಿಲ್ದಾಣಕ್ಕೆ ಬರುತ್ತದೆ. ಟರ್ಬ್ಯುಲನ್ಸ್ ಸಂದರ್ಭಗಳಲ್ಲಿ, ವಿಮಾನಗಳು ತಮ್ಮ ಹಾರಾಟದ ಮಾರ್ಗವನ್ನು ಬದಲಾಯಿಸುತ್ತವೆ. ಹವಾಮಾನ ಮುನ್ಸೂಚನೆ ಮೂಲಕ ಹಾರಾಟದ ಮಾರ್ಗದಲ್ಲಿ ತಕ್ಷಣದ ಬದಲಾವಣೆ ಮಾಡಲಾಗುತ್ತದೆ. ಇಷ್ಟಾಗಿಯೂ, ಪೈಲಟ್‌ಗಳು ಮಾರ್ಗವನ್ನು ತಪ್ಪುವ ಸಂಭವವಿರುತ್ತದೆ. ಅದು ಅಪರೂಪ.

ಭಾರತದ ಶ್ರೀಮಂತ ಧರ್ಮ ಇಸ್ಲಾಂ

ವೀಕೆಂಡ್ ವಿತ್ ಮೋಹನ್

ಮೋಹನ್ ವಿಶ್ವ
camohanbn@gmail.com

ಅಖಂಡ ಭಾರತದ ವಿಭಜನೆಯಾದ ನಂತರ ಪಾಕಿಸ್ತಾನಕ್ಕೆ ಹೋಗದೆ ಇಲ್ಲೇ ಉಳಿದುಕೊಂಡ ಮುಸಲ್ಮಾನರನ್ನು ಅಲ್ಪಸಂಖ್ಯಾತರೆಂದು ಕರೆಯಲಾಗುತ್ತಿದೆ. ಭಾರತದ ಒಟ್ಟಾರೆ ಜನಸಂಖ್ಯೆಯಲ್ಲಿ ಮುಸಲ್ಮಾನರ ಪಾಲು ಕಡಿಮೆಯಿದ್ದ ಕಾರಣಕ್ಕೆ ಅವರನ್ನು ಅಲ್ಪಸಂಖ್ಯಾತರೆಂದು ಕರೆಯಲಾಗುತ್ತಿದೆಯೆಂದು ಹಿಂದೂಗಳು ಅಂದುಕೊಂಡಿದ್ದರು. ಆದರೆ ಅದರ ಹಿಂದಿನ ರಾಜಕೀಯ ಉದ್ದೇಶ ಬೇರೆಯದ್ದೇ ಆಗಿತ್ತು. ಮುಸಲ್ಮಾನರು ತನಗೆ ನಿಷ್ಠರೆಂಬ ಸಾಮಾನ್ಯ ಜ್ಞಾನ ಕಾಂಗ್ರೆಸ್ಸಿಗಿತ್ತು. ಈ ಮತಬ್ಯಾಂಕಿನ ಮೂಲಕ ಅಧಿಕಾರಕ್ಕೆ ಬರುವುದು ಸುಲಭವೆಂಬುದು ಕಾಂಗ್ರೆಸ್ಸಿಗರಿಗೆ ಚೆನ್ನಾಗಿ ತಿಳಿದಿದೆ. ಬಹುತೇಕ ಮುಸಲ್ಮಾನರಿಗೆ ಅಭಿವೃದ್ಧಿಗಿಂತಲೂ ತಮ್ಮ ಧಾರ್ಮಿಕ ಆಚರಣೆಗಳನ್ನು ಬೆಂಬಲಿಸುವ ಪಕ್ಷ ಬೇಕು. ಬಾಬಾಸಾಹೇಬರ ಸಂವಿಧಾನಕ್ಕಿಂತಲೂ ತಮ್ಮ ಧರ್ಮವೇ ಮುಖ್ಯವೆಂದು ಅನೇಕ ಮುಸಲ್ಮಾನರು ಹೇಳುತ್ತಾರೆ, ಆದರೆ ಭಾರತದ ಸಂವಿಧಾನಾತ್ಮಕ ಹಕ್ಕುಗಳ ಬಗ್ಗೆ ಸದಾ ಪ್ರತಿಪಾದಿಸುತ್ತಿರುತ್ತಾರೆ. ಮುಸಲ್ಮಾನರ ಓಲೈಕೆಯ ಮತಬ್ಯಾಂಕ್ ರಾಜಕಾರಣ ಅನೇಕ ಪ್ರಾದೇಶಿಕ ಪಕ್ಷಗಳ ಹುಟ್ಟಿಗೂ ಕಾರಣವಾಯಿತು. ಮುಸಲ್ಮಾನರ ಓಲೈಕೆಗಾಗಿ ತಮ್ಮ ಪಕ್ಷ ಯಾವ ಮಟ್ಟಕ್ಕೆ ಬೇಕಾದರೂ ಹೋಗುತ್ತದೆಯೆಂದು ಮಮತಾ ಬ್ಯಾನರ್ಜಿ ತೋರಿಸಿಕೊಟ್ಟಿದ್ದಾರೆ. ದೇಶದ ಜನಸಂಖ್ಯೆಯಲ್ಲಿ ಶೇ.12ರಷ್ಟು ಇರುವ ಮುಸಲ್ಮಾನರನ್ನು ಇಂದಿಗೂ ಅಲ್ಪಸಂಖ್ಯಾತರೆಂದೇ ಕರೆಯಲಾಗುತ್ತದೆ. ಅಲ್ಪಸಂಖ್ಯಾತರೆಂಬ ಕೋಟಾದಲ್ಲಿ ಮುಸಲ್ಮಾನರು ಸರಕಾರದ ಅನೇಕ ಸವಲತ್ತುಗಳ ಮೊದಲ ಫಲಾನುಭವಿಗಳಾಗಿದ್ದಾರೆ. ಕಾಂಗ್ರೆಸ್ ಸರಕಾರ ನೆಹರು ಕಾಲದಿಂದಲೂ ಮುಸಲ್ಮಾನರ ಓಲೈಕೆಯಲ್ಲಿ ತೊಡಗಿದೆ. ಅದು ಹೆಣ್ಣುಮಕ್ಕಳ ರಕ್ಷಣೆಯ ಬಗ್ಗೆ ಮಾತನಾಡಿ ತ್ರಿವಳಿ ತಲಾಕ್ ರದ್ದತಿಯನ್ನು ವಿರೋಧಿಸಿತ್ತು. ರಾಜೀವ್ ಗಾಂಧಿ ಶಾಬಾನು ಪ್ರಕರಣದ ತೀರ್ಪಿನ ನಂತರ, ಮುಸ್ಲಿಂ ಗಂಡಸರ ಒತ್ತಡಕ್ಕೆ ಮಣಿದು ನ್ಯಾಯಾಲಯದ ವಿರುದ್ಧ ಕಾನೂನಿಗೆ ತಿದ್ದುಪಡಿ ತಂದರು.

ಮುಸಲ್ಮಾನರನ್ನು ಅಲ್ಪಸಂಖ್ಯಾತರೆಂಬ ಹಣೆಪಟ್ಟಿಯಲ್ಲಿರಿಸಿ ಲಕ್ಷಾಂತರ ಕೋಟಿ ಮೌಲ್ಯದ ಆಸ್ತಿಯನ್ನು 'ವಕ್ಫ್' ಕಾಯ್ದೆಯಡಿಯಲ್ಲಿ ವಕ್ಫ್ ಮಂಡಳಿಯ ಸುಪರ್ದಿಗೆ ತರಲಾಗಿದೆ. ಅಖಂಡ ಭಾರತದ ವಿಭಜನೆಯ ನಂತರ ಪಾಕಿಸ್ತಾನದಿಂದ ಭಾರತಕ್ಕೆ ಬಂದ ಹಿಂದೂಗಳ ಆಸ್ತಿಗಳನ್ನು ಅಲ್ಲಿನ ಮುಸ್ಲಿಂ ಸಮುದಾಯ ಮತ್ತು ಪಾಕಿಸ್ತಾನ ಸರಕಾರ ಆಕ್ರಮಿಸಿಕೊಂಡಿವೆ. ಆದರೆ ಭಾರತದಿಂದ ಪಾಕಿಸ್ತಾನಕ್ಕೆ ಹೋದ ಮುಸ್ಲಿಮರ ಭೂಮಿಯನ್ನು ಅಂದಿನ ಭಾರತ ಸರಕಾರ ವಕ್ಫ್ ಬೋರ್ಡ್‌ಗಳಿಗೆ ನೀಡಿತು. ನಂತರ 1954ರಲ್ಲಿ ವಕ್ಫ್ ಬೋರ್ಡ್ ಕಾಯ್ದೆಯನ್ನು ಜಾರಿಗೆ ತರಲಾಯಿತು. ಆದರೆ 1995ರಲ್ಲಿ ವಕ್ಫ್ ಕಾಯ್ದೆಯನ್ನು ಬದಲಾಯಿಸುವ ಮೂಲಕ ವಕ್ಫ್ ಮಂಡಳಿಗಳಿಗೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಅನಿಯಮಿತ ಹಕ್ಕುಗಳನ್ನು ನೀಡಲಾಯಿತು. ಅಂಕಿ-ಅಂಶಗಳ ಪ್ರಕಾರ, ಪ್ರಸ್ತುತ ವಕ್ಫ್ ಬೋರ್ಡ್‌ಗಳು ಹೊಂದಿರುವ ಒಟ್ಟು 8,54,509 ಆಸ್ತಿಗಳು ಎಂಟು ಲಕ್ಷ ಎಕರೆಗೂ ಹೆಚ್ಚಿನ ಭೂಮಿಯಲ್ಲಿ ಹರಡಿಕೊಂಡಿವೆ. ಭಾರತೀಯ ಸೇನೆ ಮತ್ತು ಭಾರತೀಯ ರೇಲ್ವೆಗಳ ನಂತರ ಅತಿ ಹೆಚ್ಚಿನ ಭೂಮಿ ವಕ್ಫ್ ಮಂಡಳಿ ಬಳಿ ಇದೆ. 2009ರಲ್ಲಿ ವಕ್ಫ್ ಮಂಡಳಿಯ ಆಸ್ತಿಗಳು ನಾಲ್ಕು ಲಕ್ಷ ಎಕರೆಯಷ್ಟು ಇದ್ದವು. ಅದು 2022ರ ವೇಳೆಗೆ ದುಪ್ಪಟ್ಟಾಗಿದೆ.

ವಕ್ಫ್ ಮಂಡಳಿಯು ದೇಶದ ಯಾವುದೇ ಮೂಲೆಯಲ್ಲಿ ಸ್ಮಶಾನದ ಗಡಿ ಗೋಡೆಯನ್ನು ನಿರ್ಮಾಣ ಮಾಡಿದರೂ, ಅದರ ಸುತ್ತಲಿನ ಭೂಮಿಯನ್ನು ತನ್ನ ಆಸ್ತಿ ಎಂದು ಪರಿಗಣಿಸುತ್ತದೆ. ಕರ್ನಾಟಕದಲ್ಲಿ ವಕ್ಫ್ ಸಚಿವ ಜಮೀರ್ ಅಹಮದ್ ಖಾನ್ ನೇತೃತ್ವದಲ್ಲಿ ಜಿಲ್ಲೆ ಜಿಲ್ಲೆಗಳಲ್ಲಿ ವಕ್ಫ್ ಅದಾಲತ್ ನಡೆಸಲಾಗುತ್ತಿದ್ದು, ರೈತರಿಗೆ ಸೇರಿದ ಸಾವಿರಾರು ಎಕರೆ ಭೂಮಿಯನ್ನು ವಕ್ಫ್ ಮಂಡಳಿಗೆ ಸೇರಿಸುವ ಕೆಲಸ ನಡೆಯುತ್ತಿದೆ. ಚಿತ್ರದುರ್ಗದಲ್ಲಿ ದಲಿತ ಸಮುದಾಯಕ್ಕೆ ಸೇರಿದ ಆಸ್ತಿಯನ್ನೂ ವಕ್ಫ್ ಮಂಡಳಿ ಬಿಟ್ಟಿಲ್ಲ, ಆಸ್ತಿಗಳಿಗೆ ಬೇಲಿ ಹಾಕುವಂತೆ ಸಚಿವ ಜಮೀರ್ ಸಭೆಯಲ್ಲಿ ಬಹಿರಂಗವಾಗಿ ಕರೆ ಕೊಡುತ್ತಿದ್ದಾರೆ. ಅನ್ನದಾತನು ತನ್ನ ತಾತ, ಮುತ್ತಾತನ ಕಾಲದಿಂದಲೂ ವ್ಯವಸಾಯ ಮಾಡಿಕೊಂಡು ಬಂದಿರುವ ಜಮೀನಿನ ಒಡೆತನವನ್ನು ವಕ್ಫ್ ಮಂಡಳಿಯ ಮುಂದೆ ದಾಖಲೆಗಳ ಮೂಲಕ ಸಾಬೀತುಪಡಿಸಬೇಕಾದ ಪರಿಸ್ಥಿತಿ ಎದುರಾಗಿದೆ. 1995ರ ವಕ್ಫ್ ಕಾಯ್ದೆ ಪ್ರಕಾರ, ವಕ್ಫ್ ಮಂಡಳಿ ಭೂಮಿಯೊಂದು ಮುಸಲ್ಮಾನರಿಗೆ ಸೇರಿದ್ದು ಎಂದು 'ಯೋಚಿಸಿದರೆ' ಸಾಕು, ಅದು ವಕ್ಫ್‌ನ ಆಸ್ತಿ ಎಂದು ಪರಿಗಣಿಸಬಹುದು. ಅದರ ಮಾಲೀಕತ್ವವನ್ನು ಸಾಬೀತುಪಡಿಸಲು ಪುರಾವೆ ನೀಡಬೇಕಾದ ಅಗತ್ಯವಿಲ್ಲ. ನಿಮ್ಮ ಆಸ್ತಿ ನಿಮ್ಮದಲ್ಲ, ಮಂಡಳಿಯದ್ದು ಎಂದು ವಕ್ಫ್ ತೀರ್ಮಾನಿಸಿದರೆ, ನೀವು ನ್ಯಾಯಾಲಯದ ಮೊರೆ ಹೋಗುವಂತಿಲ್ಲ, ವಕ್ಫ್ ಕಾಯ್ದೆಯಡಿಯಲ್ಲಿರುವ ಟ್ರಿಬ್ಯೂನಲ್ ನ್ಯಾಯಾಲಯವನ್ನು ಮಾತ್ರ ಸಂಪರ್ಕಿಸಬಹುದು.

2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಅಂದಾಜು 1.67 ಕೋಟಿ ಮತಗಳು ಬಂದಿದ್ದವು. ಕರ್ನಾಟಕದ ಒಟ್ಟಾರೆ ಜನಸಂಖ್ಯೆ ಸುಮಾರು 7 ಕೋಟಿಯ ಆಸುಪಾಸಿನಲ್ಲಿದೆ. ಇದರಲ್ಲಿ ಮುಸಲ್ಮಾನರ ಪಾಲು ಸುಮಾರು ಶೇ.10ರಷ್ಟು ಅಂದುಕೊಂಡರೂ, ಅವರ ಸಂಖ್ಯೆ ಸುಮಾರು 70 ಲಕ್ಷಕ್ಕೆ ಮುಟ್ಟುತ್ತದೆ. ಈ ಪೈಕಿ ಶೇ.60ರಷ್ಟು ಮತದಾನಕ್ಕೆ ಅರ್ಹರೆಂದುಕೊಂಡರೆ, ಅಂದಾಜು 42 ಲಕ್ಷ ಮುಸ್ಲಿಮರ ಮತಗಳು ಚಲಾವಣೆಯಾಗಿವೆ. ಕಾಂಗ್ರೆಸ್‌ನ ಚುನಾವಣಾಪೂರ್ವ ಓಲೈಕೆಯ ರಾಜಕಾರಣದ ಪರಿಣಾಮ ಶೇ.95ರಷ್ಟು ಮುಸಲ್ಮಾನರು 2023ರಲ್ಲಿ ಕಾಂಗ್ರೆಸ್ಸಿಗೆ ಮತ ಹಾಕಿದ್ದಾರೆಂದು ಹೇಳಲಾಗುತ್ತಿದೆ. ಅಂದರೆ ಸುಮಾರು 40 ಲಕ್ಷ ಮುಸಲ್ಮಾನರ ಮತಗಳು ಕಾಂಗ್ರೆಸ್‌ಗೆ ಬಿದ್ದಿವೆ. ಹೀಗೆ, ಕಾಂಗ್ರೆಸ್‌ನ ಒಟ್ಟಾರೆ ಮತಗಳಿಕೆಯಲ್ಲಿ ಮುಸಲ್ಮಾನರ ಮತಗಳು ಹೆಚ್ಚಾಗಿರುವ ಕಾರಣ ಅವರ ಋಣಸಂದಾಯ ಮಾಡುವ ಕೆಲಸವನ್ನು ಸರಕಾರ ತಾನು ಅಸ್ತಿತ್ವಕ್ಕೆ ಬಂದ ದಿನದಿಂದಲೂ ಮಾಡುತ್ತಲೇ ಇದೆ. ರೈತರಿಗೆ ಸೇರಿದ ಜಮೀನನ್ನು ವಕ್ಫ್ ಮಂಡಳಿಗೆ ಸೇರಿಸಿ ತಮಗೆ ಮತನೀಡಿದ ಸಮುದಾಯದ ತುಷ್ಟೀಕರಣ ಮಾಡುವ ಕೆಲಸವನ್ನು ಕಾಂಗ್ರೆಸ್ ಮಾಡುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ತನಗೆ ನೀಡಿರುವ ಅಪರಿಮಿತ ಅಧಿಕಾರದ ಮೂಲಕ ವಕ್ಫ್ ಮಂಡಳಿಯು ಆಸ್ತಿಗಳ ಮೇಲೆ ಹಕ್ಕು ಸಾಧಿಸುತ್ತಿರುವುದು ಇದೇ ಮೊದಲಲ್ಲ, 2022ರಲ್ಲಿ ತಮಿಳುನಾಡು ವಕ್ಫ್ ಮಂಡಳಿಯು 1500 ವರ್ಷಗಳಷ್ಟು ಹಳೆಯದಾದ ಹಿಂದೂ ದೇವಾಲಯ ಸೇರಿದಂತೆ, ತಮಿಳುನಾಡಿನ 6 ಗ್ರಾಮಗಳನ್ನು 'ವಕ್ಫ್ ಆಸ್ತಿ' ಎಂದು ಘೋಷಿಸಿತ್ತು. ಗುಜರಾತ್ ವಕ್ಫ್ ಮಂಡಳಿ ಸೂರತ್ ನಗರಪಾಲಿಕೆಯ ಕಟ್ಟಡ ತನಗೆ ಸೇರಬೇಕೆಂದು ಹೇಳಿತ್ತು. ಕಂದಾಯ ಇಲಾಖೆಯಲ್ಲಿನ ಕಡತಗಳಲ್ಲಿ ಯಾರ ಹೆಸರೂ ಇಲ್ಲದ ಕಾರಣ, ಹಿಂದೆ ಮೊಘಲರ ಕಾಲದಲ್ಲಿ ಆ ಜಾಗವು ಹಜ್ ಯಾತ್ರಿಗಳ ವಿಶ್ರಾಂತಿ ಸ್ಥಳವಾಗಿತ್ತಂತೆ. ಬ್ರಿಟಿಷರ ಆಡಳಿತದಲ್ಲಿ ಆ ಜಾಗವು ಬ್ರಿಟಿಷ್ ಸರಕಾರದ ವಶಕ್ಕೆ ಹೋಯಿತು. ಸ್ವಾತಂತ್ರ್ಯಾ ನಂತರ ಆ ಜಾಗವು ಭಾರತ ಸರಕಾರಕ್ಕೆ ಸೇರಿತ್ತು. ತದನಂತರ ಕಂದಾಯ ಇಲಾಖೆಯ ದಾಖಲೆಗಳು ತಿದ್ದುಪಡಿಯಾಗದ ಕಾರಣ, ಮೊಘಲರ ಕಾಲದಲ್ಲಿ ಆ ಜಾಗ 'ವಕ್ಫ್' ಆದ ಕಾರಣ, ಷರಿಯಾ ಕಾನೂನಿನಡಿಯಲ್ಲಿ ವಕ್ಫ್ ಮಂಡಳಿಗೆ ಸೇರಬೇಕೆಂದು ಹೇಳಲಾಗಿತ್ತು. ಗುಜರಾತ್ ವಕ್ಫ್ ಮಂಡಳಿ ಉಚ್ಚ ನ್ಯಾಯಾಲಯದಲ್ಲಿ, ಶ್ರೀಕೃಷ್ಣನ ದ್ವಾರಕದಲ್ಲಿರುವ ದ್ವೀಪಗಳು ತನಗೆ ಸೇರಬೇಕೆಂದು ಅರ್ಜಿ ಹಾಕಿತ್ತು. ಅರ್ಜಿಯನ್ನು ತಿರಸ್ಕರಿಸಿದ ನ್ಯಾಯಾಲಯ ಕೃಷ್ಣನಗರದಲ್ಲಿನ ದ್ವೀಪಕ್ಕೂ, ವಕ್ಫ್ ಮಂಡಳಿಗೂ ಎಲ್ಲಿಯ ಸಂಬಂಧವೆಂದು ಛೀಮಾರಿ ಹಾಕಿತ್ತು. ಅಪಾರ್ಟ್‌ಮೆಂಟ್ ಮಾಲೀಕರ ಸಂಘಕ್ಕೆ ತಿಳಿಯದಂತೆ, ಅಪಾರ್ಟ್‌ಮೆಂಟಿನಲ್ಲಿರುವ ಮನೆಯನ್ನು ವ್ಯಕ್ತಿಯೊಬ್ಬ ವಕ್ಫ್ ಮಂಡಳಿಗೆ ನೀಡಬಹುದು. ಸೂರತ್ ನಗರದ ಅಪಾರ್ಟ್‌ಮೆಂಟ್ ಒಂದರಲ್ಲಿ ಇದೇ ರೀತಿಯ ಘಟನೆಯೊಂದು ನಡೆದು, ಮುಸಲ್ಮಾನರು ವಕ್ಫ್ ಮಂಡಳಿಗೆ ಮಾಲೀಕ ನೀಡಿದ ಮನೆಯಲ್ಲಿ ನಿತ್ಯ ನಮಾಜ್ ಮಾಡುತ್ತಿದ್ದರು.

2013ರಲ್ಲಿ ಸಾರ್ವತ್ರಿಕ ಚುನಾವಣೆಗೂ ಕೆಲ ತಿಂಗಳ ಹಿಂದೆ ಕಾಂಗ್ರೆಸ್ ಸರಕಾರ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಪ್ರಧಾನಿ ಮನ್‌ಮೋಹನ್ ಸಿಂಗ್ ನೇತೃತ್ವದಲ್ಲಿ ದೆಹಲಿಯ ಪಾರ್ಲಿಮೆಂಟ್ ಹೌಸ್, ಕನಾಟ್ ಪ್ಲೇಸ್, ಕರೋಲ್ ಬಾಗ್, ದರಿಯಾಗಂಜ್, ಲೋಧಿ ರೋಡ್, ಜನಪಥ್, ಮಥುರಾ ಹೌಸ್, ಸದಾರ್ ಬಜಾರ್, ಮಾನ್‌ಸಿಂಗ್ ರಸ್ತೆಯಲ್ಲಿರುವ ಸುಮಾರು 123 ಸರಕಾರಿ ಆಸ್ತಿಗಳನ್ನು ಡಿನೋಟಿಫೈ ಮಾಡಿ ವಕ್ಫ್ ಮಂಡಳಿಗೆ ನೀಡಲಾಗಿತ್ತು. ದೆಹಲಿಯಲ್ಲಿ ವಕ್ಫ್ ಮಂಡಳಿಗೆ ನೀಡಿದ ಈ ಜಾಗಗಳ ಮಾರುಕಟ್ಟೆಯ ಮೌಲ್ಯ ಸಾವಿರಾರು ಕೋಟಿಯಷ್ಟಿದೆ. ತಿಂಗಳಿಗೆ ನೂರಾರು ಕೋಟಿಯ ಆದಾಯ ಮಂಡಳಿಗೆ ಬರುತ್ತಿದೆ. ದೆಹಲಿಯ ಪ್ರತಿಷ್ಠಿತ ಜಾಗಗಳಲ್ಲಿ ಕಾಂಗ್ರೆಸ್ ಸರಕಾರ ವಕ್ಫ್ ಮಂಡಳಿಗೆ ನೀಡಿರುವ ಜಾಗಗಳಲ್ಲಿ ಒಂದು ಚದರಡಿಗೆ ಸುಮಾರು 70,000 ರು. ಮಾರುಕಟ್ಟೆ ಮೌಲ್ಯವಿದೆ. ಅಸಾಂವಿಧಾನಿಕವಾಗಿರುವ ವಕ್ಫ್ ಕಾಯ್ದೆಯನ್ನು ತಿದ್ದುಪಡಿ ಮಾಡಬೇಕೆಂಬ ಚರ್ಚೆ ಕೇಂದ್ರದಲ್ಲಿ ನಡೆಯುತ್ತಿರುವ ಸಂದರ್ಭದಲ್ಲಿ, ಮುಸಲ್ಮಾನರನ್ನು ಅಲ್ಪಸಂಖ್ಯಾತರೆಂದು ಕರೆದು ಓಲೈಕೆಯ ಮೂಲಕ ಮತ್ತಷ್ಟು ಆಸ್ತಿಯನ್ನು ವಕ್ಫ್ ಮಂಡಳಿಗೆ ಸೇರಿಸುವ ಕೆಲಸ ನಡೆಯುತ್ತಿದೆ. ಧರ್ಮಗಳನ್ನೂ ಮೀರಿ ದೇಶಕ್ಕಾಗಿ ಹೋರಾಡಿದ ಸೈನಿಕರಿಗೆ ಉತ್ತರಾಖಂಡ್ ರಾಜ್ಯದಲ್ಲಿರುವ ವಕ್ಫ್ ಆಸ್ತಿಯನ್ನು ನೀಡಬೇಕೆಂಬ ಸಲಹೆಯು ಸಂಸತ್ತಿನ ಜಂಟಿ ಸದನ ಸಮಿತಿಯಲ್ಲಿ ಬಂದಾಗ, ಮುಸಲ್ಮಾನರನ್ನು ಓಲೈಸುವ ಸಲುವಾಗಿ ವಿರೋಧ ಪಕ್ಷಗಳು ಆ ಸಲಹೆಯನ್ನು ವಿರೋಧಿಸಿವೆ.

ಧರ್ಮದ ಹೆಸರಿನಲ್ಲಿ ವಕ್ಫ್ ಮಂಡಳಿಯು ಅಸಾಂವಿಧಾನಿಕ ಕಾನೂನಿನ ಮೂಲಕ ವಶಪಡಿಸಿಕೊಂಡಿರುವ ಜಾಗಗಳಿಂದ ಬರುತ್ತಿರುವ ಆದಾಯದಿಂದ ಮುಸಲ್ಮಾನರ ಅಭಿವೃದ್ಧಿಯಾಗಿದ್ದರೆ, ಇಂದಿಗೂ ಬಡ ಮುಸಲ್ಮಾನರು ಮೂಲಭೂತ ಸೌಕರ್ಯಗಳಿಗೆ ಸರಕಾರವನ್ನು ಯಾಕೆ ಅವಲಂಬಿಸಿದ್ದಾರೆ? ಸರಕಾರಗಳು ಯಾಕೆ ಸಾವಿರಾರು ಕೋಟಿ ಹಣವನ್ನು ವರ್ಷದ ಆಯವ್ಯಯದಲ್ಲಿ ಮುಸಲ್ಮಾನರ ಅಭಿವೃದ್ಧಿಗೆ ಮೀಸಲಿಡಬೇಕು? ಕೇಂದ್ರ ಮತ್ತು ರಾಜ್ಯ ಸರಕಾರಗಳಲ್ಲಿ ಅಲ್ಪಸಂಖ್ಯಾತರಿಗೆ ಪ್ರತ್ಯೇಕ ಮಂತ್ರಿ ಖಾತೆಯನ್ನು ರಚಿಸಲಾಗಿದೆ. ವಕ್ಫ್ ಕಾನೂನಿನನ್ವಯ ವಶಪಡಿಸಿಕೊಂಡಿರುವ ಭೂಮಿಯಲ್ಲಿ, ವಕ್ಫ್ ಮಂಡಳಿಯಡಿಯಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಅನ್ವರ್ ಮಾಣಿಪ್ಪಾಡಿ ಆಯೋಗ ತನ್ನ ವರದಿಯನ್ನು ನೀಡಿದೆ. ಕೇಂದ್ರದಲ್ಲಿ ನಡೆಯುತ್ತಿರುವ ವಕ್ಫ್ ಕಾನೂನಿನ ತಿದ್ದುಪಡಿಯ ಸಭೆಗೆ ಅನ್ವರ್ ಮಾಣಿಪ್ಪಾಡಿ ಹಾಜರಾಗಿ ವಕ್ಫ್ ಮಂಡಳಿಯಲ್ಲಾಗಿರುವ ಅಕ್ರಮಗಳ ಕುರಿತು ವಿವರಿಸಿದ್ದಾರೆ. ಕಾಂಗ್ರೆಸ್‌ನ ಹಿರಿಯ ನಾಯಕರು ವಕ್ಫ್ ಮಂಡಳಿಯಲ್ಲಿ ನಡೆದಿರುವ ಅಕ್ರಮದಲ್ಲಿ ಭಾಗಿಯಾಗಿರುವ ವಿಷಯವನ್ನು ಅನ್ವರ್ ಮಾಣಿಪ್ಪಾಡಿ ಹೇಳಿದ್ದಾರೆ. ಮುಸಲ್ಮಾನರ ಓಲೈಕೆಯ ಹೆಸರಿನಲ್ಲಿ ವಕ್ಫ್ ಮಂಡಳಿಗೆ ಹಿಂದೂಗಳ ಆಸ್ತಿಯನ್ನು ಸೇರಿಸಿ, ನಂತರ ಕೆಲವು ಮುಸ್ಲಿಂ ನಾಯಕರು ವಕ್ಫ್ ಮಂಡಳಿಗೆ ಸೇರಿದ ಆಸ್ತಿಗಳನ್ನು ಅನುಭವಿಸುತ್ತಿದ್ದಾರೆ. ವಕ್ಫ್ ಮಂಡಳಿ ಭಾರತದ ಮೂರನೇ ಶ್ರೀಮಂತ ಮಂಡಳಿಯಾಗಿದೆ. ಇಸ್ಲಾಂ ಧರ್ಮಕ್ಕೆ ಸೀಮಿತವಾಗಿರುವ ಶ್ರೀಮಂತ ಧಾರ್ಮಿಕ ಮಂಡಳಿಯಿಂದ ಬಡ ಮುಸಲ್ಮಾನನಿಗೆ ಉಪಯೋಗವಾಗುತ್ತಿಲ್ಲ, ಕೇಂದ್ರ ಸರಕಾರ ಪ್ರಸ್ತಾಪಿಸಿರುವ ತಿದ್ದುಪಡಿಯಲ್ಲಿ, ವಕ್ಫ್ ಮಂಡಳಿಯಲ್ಲಿ ಇತರ ಧರ್ಮದವರನ್ನು ಸೇರಿಸಬೇಕೆಂದಿದೆ. ಆದರೆ ಕಾಂಗ್ರೆಸ್ಸನ ಪ್ರಕಾರ ಮುಸ್ಲಿಮರ ಮಂಡಳಿಯಲ್ಲಿ ಇತರರನ್ನು ಸೇರಿಸಿದರೆ ಅದು 'ಕೋಮುವಾದ', ತಿರುಪತಿ ದೇವಸ್ಥಾನದ ಆಡಳಿತ ಮಂಡಳಿಯಲ್ಲಿ ಇತರ ಧರ್ಮದವರು ಭಾಗಿಯಾದರೆ ಅದು 'ಜಾತ್ಯತೀತತೆ'. ಇಸ್ಲಾಂ ಧರ್ಮಕ್ಕೆ ಸೇರಿದ ಭಾರತದ ವಕ್ಫ್ ಮಂಡಳಿ ದೇಶದ ಮೂರನೇ ಶ್ರೀಮಂತ ಮಂಡಳಿಯಾಗಿದ್ದು, ಸುಮಾರು 3 ಲಕ್ಷ ಕೋಟಿ ರುಪಾಯಿಗೂ ಮೀರಿದ ಮಾರುಕಟ್ಟೆ ಮೌಲ್ಯವಿರುವ ಆಸ್ತಿಯನ್ನು ಹೊಂದಿದೆ. ಈ ಮಟ್ಟದ ಆಸ್ತಿ ಹೊಂದಿರುವ ವಕ್ಫ್ ಮಂಡಳಿ ಸಂಪೂರ್ಣವಾಗಿ ಇಸ್ಲಾಂ ಧರ್ಮಕ್ಕೆ ಸೇರಿರುವುದರಿಂದ, ಭಾರತದ ಶ್ರೀಮಂತ ಧರ್ಮ ಇಸ್ಲಾಂ ಎಂದು ಖಂಡಿತವಾಗಿ ಹೇಳಬಹುದು. ದೇಶದ ಶ್ರೀಮಂತ ಧರ್ಮದವರನ್ನು ಅಲ್ಪ ಸಂಖ್ಯಾತರೆಂದು ಕರೆಯುವುದು ಎಷ್ಟು ಸೂಕ್ತವೆಂಬ ಚರ್ಚೆಗಳು ಕೂಡ ಮತ್ತೊಂದೆಡೆ ಆರಂಭವಾಗಿವೆ.

ಸ್ವತಂತ್ರ ಭಾರತದಲ್ಲಿ ಅತಂತ್ರವೇ ಕರ್ನಾಟಕ?



ಸಿಂಹಾವಲೋಕನ

ಎಸ್.ಶ್ರೀನಿವಾಸ್
vveditoped@gmail.com

ಬ್ರಿಟಿಷರು ಭಾರತವನ್ನು ತೊರೆಯುವುದಕ್ಕೂ ಮುನ್ನ ತಮ್ಮ ಅಧೀನದಲ್ಲಿದ್ದ 500ಕ್ಕೂ ಹೆಚ್ಚು ರಾಜಮನೆತನ ಹಾಗೂ ಸಂಸ್ಥಾನಗಳಿಗೆ ಒಂದೋ ಭಾರತ ಅಥವಾ ಪಾಕಿಸ್ತಾನದೊಂದಿಗೆ ವಿಲೀನಗೊಳ್ಳಲು ಮತ್ತು ಕನಿಷ್ಠಪಕ್ಷ ವಿದೇಶಾಂಗ ನೀತಿ, ರಕ್ಷಣೆ, ಸಾರಿಗೆ-ಸಂಪರ್ಕ ಮುಂತಾದ ಆಡಳಿತ ವಿಷಯಗಳನ್ನು ಕೇಂದ್ರ ಸರಕಾರಕ್ಕೆ ಒಪ್ಪಿಸಿ, ಉಳಿದೆಲ್ಲ ಬಾಬತ್ತುಗಳನ್ನು ತಮ್ಮ ವಶದಲ್ಲಿಟ್ಟುಕೊಳ್ಳುವಂತೆ ಸಲಹೆ ನೀಡಿದರು. ಅಂತೆಯೇ ಮೈಸೂರು ರಾಜಮನೆತನವು ಭಾರತದೊಂದಿಗಿನ 'ವಿಲೀನ ಪತ್ರ'ಕ್ಕೆ ಸಹಿ ಹಾಕಿ, ಮೇಲೆ ಉಲ್ಲೇಖಿಸಿದ ಆಡಳಿತ ವಿಷಯಗಳನ್ನು ಕೇಂದ್ರ ಸರಕಾರಕ್ಕೆ ಒಪ್ಪಿಸಿತ್ತು.

ಭಾರತದೊಂದಿಗೆ ವಿಲೀನಗೊಂಡ ನಂತರ ಭಾರತ ಒಕ್ಕೂಟದ ಸಂವಿಧಾನ ರಚನಾ ಸಭೆಗೆ ಮೈಸೂರು ಪ್ರಾಂತ್ಯದಿಂದ ಸದಸ್ಯರನ್ನು ಆಯ್ಕೆಮಾಡಲು 1947ರ ಜುಲೈ 7ರಂದು ಮೈಸೂರು ಪ್ರತಿನಿಧಿ ಸಭೆ ಮತ್ತು ವಿಧಾನ ಪರಿಷತ್ತಿನಿಂದ ಚುನಾವಣೆ ನಡೆಯಿತು. ಎ.ರಾಮಸ್ವಾಮಿ ಮುದಲಿಯಾರ್, ಎಸ್.ವಿ.ಕೃಷ್ಣಮೂರ್ತಿ, ಡಿ.ಎಚ್.ಚಂದ್ರಶೇಖರಯ್ಯ ಪ್ರತಿನಿಧಿ ಸಭೆಯಿಂದ ಮತ್ತು ಎಚ್.ಆರ್.ಗುರುವರೆಡ್ಡಿ, ಕೆ.ಸಿ.ರೆಡ್ಡಿ ವಿಧಾನ ಪರಿಷತ್ತಿನಿಂದ ಆಯ್ಕೆಯಾದರು. ಇವರ ಜತೆಗೆ ಮೊಹಮ್ಮದ್ ಷರೀಫ್ ಮತ್ತು ಟಿ.ಚನ್ನಯ್ಯರವರನ್ನು ನಾಮನಿರ್ದೇಶನ ಮಾಡಲಾಯಿತು. ಅಕ್ಟೋಬರ್ 12ರಂದು ಮೈಸೂರು ರಾಜ್ಯ ಕಾಂಗ್ರೆಸ್ ಮತ್ತು ದಿವಾನರ ನಡುವೆ ಆದ ಒಪ್ಪಂದದಂತೆ, ಮೈಸೂರು ರಾಜ್ಯದಲ್ಲಿ ಅಕ್ಟೋಬರ್ 24ರಂದು ಉತ್ತರದಾಯಿ ಸರಕಾರ ಸ್ಥಾಪನೆಯಾಗಿ ಹೊಸ ಮಂತ್ರಿಮಂಡಲ ರಚನೆಯಾಯಿತು. ಕೆ.ಸಿ.ರೆಡ್ಡಿ ರಾಜ್ಯದ ಮುಖ್ಯಮಂತ್ರಿಯಾದರು.

ಪ್ರಾರಂಭದಲ್ಲಿ ಉಲ್ಲೇಖಿಸಿದ 3 ಆಡಳಿತಾತ್ಮಕ ವಿಷಯಗಳನ್ನು ಬಿಟ್ಟು ಉಳಿದೆಲ್ಲದರ ವಿಷಯದಲ್ಲಿ ಶಾಸನ ಮಾಡಲು ಮೈಸೂರು ರಾಜ್ಯ ಸ್ವತಂತ್ರವಾಗಿತ್ತು ಹಾಗೂ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಮೈಸೂರು ರಾಜ್ಯದಲ್ಲೂ ಹೊಸ ಸಂವಿಧಾನದ ರಚನಾ ಪ್ರಕ್ರಿಯೆ ಶುರುವಾಯಿತು. ಅದರ ಸಲುವಾಗಿ, ಅಕ್ಟೋಬರ್ 29ರಂದು ಮಹಾರಾಜರು, 76 ಸದಸ್ಯರುಳ್ಳ ಮೈಸೂರು ಸಂವಿಧಾನ ರಚನಾ ಸಭೆಯ ಸ್ಥಾಪನೆಗೆ ಅನುಮೋದಿಸಿದರು (ಇಂಥದೊಂದು ಸಭೆಯ ರಚನೆಗೆ ಮುಂದಾಗಿದ್ದನ್ನು ಭಾರತದ ಅಂದಿನ ಪ್ರಧಾನಿ ನೆಹರು, ಗೃಹ ಸಚಿವ ವಲ್ಲಭಭಾಯಿ ಪಟೇಲ್ ಶ್ಲಾಘಿಸಿದ್ದೂ ಉಂಟು!). ಸಭೆಯ ಸದಸ್ಯರ ಆಯ್ಕೆಗೆಂದು 1948ರ ಮಾರ್ಚ್ 5ರಂದು ಚುನಾವಣೆ ನಡೆದು, ಕೆಂಗಲ್ ಹನುಮಂತಯ್ಯ, ಕಡಿದಾಳ್ ಮಂಜಪ್ಪ, ಎಸ್.ನಿಜಲಿಂಗಪ್ಪ ಸೇರಿದಂತೆ ಹಲವು ಕಾಂಗ್ರೆಸ್ಸಿಗರು ಆಯ್ಕೆಯಾದರು. ಸಭೆಯಲ್ಲಿ ಮುಸಲ್ಮಾನರಿಗೆ 5 ಹಾಗೂ ಹಿಂದುಳಿದ ವರ್ಗದವರಿಗೆ 9 ಸ್ಥಾನಗಳನ್ನು ಮೀಸಲಿಡಲಾಯಿತು. ಏಪ್ರಿಲ್ 7ರಂದು ಬೆಂಗಳೂರಿನ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಸಂವಿಧಾನ ರಚನಾ ಸಭೆಯ ಮೊದಲ ಅಧಿವೇಶನ ನಡೆಯಿತು. ಹಂಗಾಮಿ ಅಧ್ಯಕ್ಷರಾಗಿದ್ದ ಕೆ.ಸಿ.ರೆಡ್ಡಿ ಮಾತನಾಡಿ, ಮೈಸೂರು ಸಂವಿಧಾನವು ಭಾರತೀಯ ಸಂವಿಧಾನದ ಅನುಸಾರವಾಗಿರಬೇಕೆಂದು ಮತ್ತು ರಾಜ್ಯದಲ್ಲಿ ಮಹಾರಾಜರ ಸಾಂವಿಧಾನಿಕ ರಾಜಪ್ರಭುತ್ವವನ್ನು ರಚಿಸುವುದಾಗಿ ಘೋಷಿಸಿದರು. ಮೈಸೂರು ಸಂವಿಧಾನ ಸಭೆ ಒಟ್ಟು 4 ಅಧಿವೇಶನಗಳನ್ನು ನಡೆಸಿತು. ಬಳಿಕ ಭಾರತ ಸರಕಾರದ ರಾಜ್ಯಗಳ ಸಚಿವಾಲಯದಿಂದ, ''ರಾಜ್ಯಗಳಿಗೆ ಮಾದರಿ ಸಂವಿಧಾನ ರೂಪಿಸಲು ಸಮಿತಿಯೊಂದನ್ನು ನೇಮಿಸಲು ನಿರ್ಧರಿಸಲಾಗಿದ್ದು, ಮೈಸೂರು ರಾಜ್ಯ ಸಂವಿಧಾನ ಸಭೆಯ ಮುಂದಿನ ಸಭೆಯನ್ನು ಮುಂದೂಡಬೇಕು'' ಎಂಬುದಾಗಿ ಮೈಸೂರು ಸರಕಾರಕ್ಕೆ ಸೂಚನೆ ಬಂದಿತು. ಒಕ್ಕೂಟಗಳು ಮತ್ತು ರಾಜ್ಯಗಳಿಗೆ ಮಾದರಿ ಸಂವಿಧಾನವನ್ನು ರೂಪಿಸಲು ರಾಜ್ಯಗಳ ಸಚಿವಾಲಯವು ನವೆಂಬರ್‌ನಲ್ಲಿ ಬಿ.ಎನ್.ರಾವ್ ಅಧ್ಯಕ್ಷತೆ ಯಲ್ಲಿ ಸಮಿತಿಯನ್ನು ಸ್ಥಾಪಿಸಿತು.

1949ರ ಜೂನ್ 1ರಂದು ಪರಿಷ್ಕೃತ ವಿಲೀನಪತ್ರಕ್ಕೆ ರುಜು ಹಾಕಿದ ಮಹಾರಾಜರು, ತೆರಿಗೆ ಹಾಗೂ ಸುಂಕ ಸಂಬಂಧಿತ ವಿಷಯಗಳನ್ನು ಹೊರತುಪಡಿಸಿ ಸಂಯುಕ್ತ ಮತ್ತು ಸಮವರ್ತಿ ಪಟ್ಟಿಯಲ್ಲಿ ಬರುವ ಎಲ್ಲಾ ವಿಷಯಗಳ ಮೇಲೆ ಶಾಸನ ಮಾಡುವ ಅಧಿಕಾರವನ್ನು ಕೇಂದ್ರ ಶಾಸಕಾಂಗಕ್ಕೆ ಬಿಟ್ಟುಕೊಟ್ಟರು. 1950ರ ಏಪ್ರಿಲ್ 1ರಂದು ಕಾರ್ಯರೂಪಕ್ಕೆ ಬಂದ ಸಂಯುಕ್ತ ಹಣಕಾಸಿನ ಏಕೀಕರಣದ ಯೋಜನೆಗೂ ಮೈಸೂರು ರಾಜ್ಯವು ಒಪ್ಪಿಗೆ ಸೂಚಿಸಿತು. ಮೇ 19ರಂದು ನಡೆದ ಭಾರತದ ವಿವಿಧ ಪ್ರಾಂತ್ಯಗಳ ಮತ್ತು ಪೂರ್ವ ರಾಜಮನೆತನಗಳ ರಾಜ್ಯಗಳ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ, ಪ್ರತಿ ಪ್ರಾಂತ್ಯ ಮತ್ತು ರಾಜ್ಯಗಳಿಗೆ ಪ್ರತ್ಯೇಕ ಸಂವಿಧಾನ ರಚಿಸುವ ಬದಲು, ಭಾರತದ ಸಂವಿಧಾನ ಸಭೆ ರೂಪಿಸಿದ ಸಂವಿಧಾನವನ್ನೇ ಅಂಗೀಕರಿಸಲು ಎಲ್ಲರೂ ನಿರ್ಧರಿಸಿದರು. ಈ ನಿಟ್ಟಿನಲ್ಲಿ, ಮೈಸೂರು ರಾಜ್ಯ ಸಂವಿಧಾನ ರಚನಾ ಸಭೆಯ ಸದಸ್ಯರು ಒಂದು ಠರಾವು ಜಾರಿಗೊಳಿಸಿದರು. ಅದರನ್ವಯ, ಭಾರತದ ಸಂವಿಧಾನವೇ ಮೈಸೂರು ರಾಜ್ಯಕ್ಕೆ ಸಂವಿಧಾನವಾಗಿರಬೇಕೆಂದು ಮಹಾರಾಜರು ನವೆಂಬರ್ 25ರಂದು ಆದೇಶಿಸಿ, ಶಾಸಕಾಂಗದ ಎರಡು ಸದನಗಳಾದ ಪ್ರತಿನಿಧಿ ಸಭೆ ಮತ್ತು ವಿಧಾನ ಪರಿಷತ್ತನ್ನು ಡಿಸೆಂಬರ್ 15ರಂದು ವಿಸರ್ಜಿಸಿದರು. ಮೈಸೂರಿನ ಸಂವಿಧಾನ ಸಭೆಯನ್ನು ಮಧ್ಯಂತರ ಅವಧಿಗೆ ಶಾಸಕಾಂಗವಾಗಿ ಪರಿವರ್ತಿಸಲಾಯಿತು. ಈ ಹಿಂದೆ ಆಗಸ್ಟ್ 7ರಂದು 'ದಿವಾನ್' ಹುದ್ದೆಯನ್ನು ರದ್ದುಗೊಳಿಸಲಾಗಿತ್ತು. 1950ರ ಜನವರಿ 26ರಂದು ಭಾರತವು ಗಣರಾಜ್ಯವಾದಾಗ, ಮೈಸೂರು ಅರಮನೆಯಲ್ಲಿ ದರ್ಬಾರ್ ನಡೆದು, ಮೈಸೂರು ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಅವರು ಮೈಸೂರು ರಾಜ್ಯದ ರಾಜಪ್ರಮುಖರಾಗಿ ಪ್ರಮಾಣವಚನ ಸ್ವೀಕರಿಸಿದರು.

ಸ್ವಾತಂತ್ರ್ಯಪೂರ್ವದಲ್ಲಿ ಗಾಂಧೀಜಿಯಿಂದ 'ರಾಮರಾಜ್ಯ'ವೆಂದು, ಬ್ರಿಟಿಷರಿಂದ 'ಮಾದರಿರಾಜ್ಯ'ವೆಂದು ಕರೆಸಿಕೊಂಡಿದ್ದ ಮೈಸೂರು ಸಂಸ್ಥಾನವು ದಕ್ಷ ಮತ್ತು ಪ್ರಗತಿಪರ ಆಡಳಿತಕ್ಕೆ ಖ್ಯಾತವಾಗಿತ್ತು. ತನ್ನದೇ ಆದ ರಾಷ್ಟ್ರಧ್ವಜ, ರಾಷ್ಟ್ರಗೀತೆ, ಸ್ವತಂತ್ರ ನ್ಯಾಯಾಂಗ ಮತ್ತು ಶಾಸಕಾಂಗ, ಆರ್ಥಿಕ ನೀತಿಗಳನ್ನು ರೂಪಿಸುವ ಸ್ವಾತಂತ್ರ್ಯ, ಸ್ವಂತ ಮಿಲಿಟರಿ ಪಡೆ, ನಾಗರಿಕ ಸೇವಾ ಆಯೋಗವನ್ನು ಹೊಂದಿತ್ತು. ಆದರೆ ಸ್ವತಂತ್ರ ಭಾರತದಲ್ಲಿ, ಈ ಎಲ್ಲ ವಿಷಯಗಳಲ್ಲಿನ ತನ್ನ ಅಧಿಕಾರವನ್ನು ಮೈಸೂರು ಬಿಟ್ಟುಕೊಡಬೇಕಾಯಿತು. ಪ್ರಸ್ತುತ ಕರ್ನಾಟಕ ಸರಕಾರವು ಕೇಂದ್ರಕ್ಕೆ ವಿವಿಧ ತೆರಿಗೆ, ಶುಲ್ಕಗಳನ್ನು ಪಾವತಿಸುತ್ತಿದೆ; ಹೆಚ್ಚು ಜಿಎಸ್‌ಟಿ ಸಂಗ್ರಹಿಸಿ ಪಾವತಿಸುತ್ತಿದ್ದರೂ ಕೇಂದ್ರ ಸರಕಾರ ರಾಜ್ಯಕ್ಕೆ ಅನುದಾನ ಬಿಡುಗಡೆ ಮಾಡುವಾಗ ರಾಜಕೀಯ ದೃಷ್ಟಿಯಿಂದ ತಾರತಮ್ಯ ಮಾಡುತ್ತಿದೆ ಎಂಬ ಕೂಗು ಹೊಮ್ಮುತ್ತಿದೆ. ಅತಿವೃಷ್ಟಿ-ಅನಾವೃಷ್ಟಿಯಾದಾಗಲೂ ಪರಿಹಾರದ ಹಣ ಬಿಡುಗಡೆ ಮಾಡುವಂತೆ ಕೇಂದ್ರ ಸರಕಾರವನ್ನು ಅಂಗಲಾಚುವ ಸ್ಥಿತಿ ಕರ್ನಾಟಕಕ್ಕೆ ಬಂದಿರುವುದನ್ನು ಕಾಣಬಹುದು. ದೇಶಕ್ಕೇ ಮಾದರಿಯಾದ, ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕೋರ್ಸ್‌ಗಳ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಕರ್ನಾಟಕ ನಡೆಸುತ್ತಿತ್ತು; ಆದರೆ ಕೇಂದ್ರವು 'ನೀಟ್' ಪರೀಕ್ಷೆ ನಡೆಸುವ ಮೂಲಕ ಆ ಹಕ್ಕನ್ನೂ ಕಸಿದುಕೊಂಡಿದೆ.

ಮೈಸೂರು ರಾಜ್ಯದಲ್ಲಿ ಪ್ರತಿನಿಧಿ ಸಭೆಯ ಮತ್ತು ವಿಧಾನ ಪರಿಷತ್‌ನ ಸದಸ್ಯರು ತಮ್ಮ ಅಭಿಪ್ರಾಯವನ್ನು ಕನ್ನಡದಲ್ಲಿ ವ್ಯಕ್ತಪಡಿಸುತ್ತಿದ್ದರು. ಆದರೆ ಪ್ರಸ್ತುತ ನಮ್ಮ ಸಂಸದರು ಹಿಂದಿ ಅಥವಾ ಇಂಗ್ಲಿಷ್‌ನಲ್ಲಿ ತಮ್ಮ ಅಭಿಪ್ರಾಯವನ್ನು ಮುಕ್ತವಾಗಿ ವ್ಯಕ್ತಪಡಿಸಲಾಗದಿರುವುದು ಒಂದೆಡೆಯಾದರೆ, ಮತ್ತೊಂದೆಡೆ ನೈಜಸ್ಥಿತಿಗಳ ಬಗ್ಗೆ ಚರ್ಚಿಸಿದರೆ ಹೈಕಮಾಂಡ್‌ನ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆಯೆಂದು ಸಂಸದರು ಸಂಸತ್ತಿನಲ್ಲಿ ಬಾಯಿಬಿಡಲು ಹೆದರುವಂತಾಗಿದೆ. ಈಗ, ಗ್ರಾಮ ಪಂಚಾಯಿತಿ ಚುನಾವಣೆಯಿಂದ ಮೊದಲ್ಗೊಂಡು ಲೋಕಸಭಾ ಚುನಾವಣೆಯವರೆಗೆ ಅಭ್ಯರ್ಥಿ ಯಾರಾಗಬೇಕು, ಚುನಾವಣೆಯಲ್ಲಿ ಗೆದ್ದರೆ ಮುಖ್ಯಮಂತ್ರಿ ಮತ್ತು ಇತರ ಮಂತ್ರಿಗಳು ಯಾರಾಗಬೇಕು, ಸರಕಾರ ರಚಿಸಲು ಸಂಖ್ಯಾಬಲವಿಲ್ಲದಿದ್ದರೆ ಯಾವ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕು ಇತ್ಯಾದಿಗಳನ್ನು ನಿರ್ಧರಿಸುವುದು ದೆಹಲಿಯ ಹೈಕಮಾಂಡ್! ಮಾತ್ರವಲ್ಲ, ಚುನಾವಣೆಯಲ್ಲಿ ಕರ್ನಾಟಕದ ಪ್ರಜೆಗಳು ಯಾರಿಗೆ ಮತಹಾಕಬೇಕೆಂಬುದನ್ನು ತನ್ನ ಸ್ಟಾರ್ ಪ್ರಚಾರಕರ ಮೂಲಕ ಹೇಳಿಸುವುದೂ ಇದೇ ಹೈಕಮಾಂಡ್; ತಾವು ಯಾರಿಗೆ ಮತಹಾಕಬೇಕೆಂಬುದನ್ನು ಈ ಪ್ರಚಾರಕರಿಂದ ಅವರ ಭಾಷೆಯಲ್ಲೇ ಕೇಳಬೇಕಾದ ದಯನೀಯ ಸ್ಥಿತಿ ಸ್ವಾಭಿಮಾನಿ ಕನ್ನಡಿಗರದ್ದು. ಒಟ್ಟಿನಲ್ಲಿ ಗುಲಾಮಗಿರಿ ಕೊನೆಯಾಗಿಲ್ಲ. ಚುನಾವಣೆಗೆ ಮುನ್ನ ಮತಬೇಟೆಗೆ ಮನೆಮನೆಗೆ ಬರುವ ಅಭ್ಯರ್ಥಿ, ಗೆದ್ದ ನಂತರ ಮತದಾರರನ್ನು ತನ್ನ ಮನೆ ಬಾಗಿಲಲ್ಲಿ ನಾಯಿಯಂತೆ ಕಾಯಿಸುತ್ತಾನೆ. ಮತ ಚಲಾವಣೆ ಅವಧಿ ಮುಗಿದಾಕ್ಷಣ ಕರ್ನಾಟಕದ ಮತದಾರರ ಸ್ಥಿತಿಯು, ಉಪಯೋಗಿಸಿ ಬಿಸಾಕುವ 'ಟಿಶ್ಯೂ ಪೇಪರ್'ನಂತೆ ಆಗಿರುವುದು ವಿಷಾದನೀಯ!

(ಲೇಖಕರು ಇತಿಹಾಸಕಾರರು ಹಾಗೂ ಸಂಶೋಧಕರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಗಮನ ಸೆಳೆಯಿತು

ಶಿಶಿರಕಾಲ ಅಂಕಣದಲ್ಲಿ (ವಿಶ್ವವಾಣಿ ನ.1) ಪ್ರಕಟವಾದ 'ಕೂತಲ್ಲಿ ಕೂರಂಗಿಲ್ಲ, ನಿಂತಲ್ಲಿ ನಿಲ್ಲಂಗಿಲ್ಲ...' ಎಂಬ ಬರಹ ಗಮನ ಸೆಳೆಯುವಂತಿತ್ತು. ಲೇಖನ ಬರೆಯಲು ಕಲಿಯಬೇಕಾದರೆ ಮೊದಲು 4-5 ತಾಸು ಕೂರುವುದನ್ನು ಕಲಿಯಬೇಕು ಎಂಬ ಮಾತನ್ನು ಒಪ್ಪೋಣ. ಆದರೆ ಇಲ್ಲಿ ಹುಟ್ಟುವ ಪ್ರಶ್ನೆ- ಕೂತು ಯೋಚಿಸುವುದೋ, ಯೋಚಿಸಿ ಕೂರುವುದೋ? ಮಾಡಬೇಕಾದ ಕೆಲಸವನ್ನು ಆ ಹೊತ್ತಿಗೆ ಮಾಡಿ ಮುಗಿಸಬೇಕು ಎಂಬುದು ನಿಜ. ಆದರೆ, ಸಮಯ ಸಂದರ್ಭಗಳ ಅರಿವಿಲ್ಲದೆಯೇ ಕೆಲಸಕ್ಕೆ ಮುಂದಾಗಿ ರಾವಣನ ಆತ್ಮಲಿಂಗದ ಪರಿಸ್ಥಿತಿ ಬಂದರೆ? ಆತ್ಮಲಿಂಗ ದಶದಿಕ್ಕುಗಳಲ್ಲಿ ಚೆಲ್ಲಾಪಿಲ್ಲಿಯಾಗಿ ಹಂಚಿಹೋದರೆ?

ಏಕಾಗ್ರತೆ ಅಂದರೆ ಕರೆ-ಮೆಸೇಜುಗಳನ್ನು ನೋಡದೇ ಇರುವುದೂ ಅಲ್ಲ, ಅಕ್ಕಪಕ್ಕದವರೊಡನೆ ಮಾತಾಡದೆ ಗುಮ್ಮನಗುಸುಕನಂತೆ ಇರುವುದೂ ಅಲ್ಲ. ಏನೋ ಬರೆಯಬೇಕೆಂದು ಒತ್ತಾಯಪೂರ್ವಕವಾಗಿ ತಾಸುಗಟ್ಟಲೆ ಒಂದೇ ಕಡೆ ಕುಳಿತರೂ, ಯಾವೊಂದು ವಿಷಯ ಹೊಳೆಯದೆ ಸಮಯ ವ್ಯರ್ಥವಾಗಲೂಬಹುದು. ಹೀಗಾಗಿ, ತಾಸುಗಟ್ಟಲೆ ಒಂದೆಡೆ ಕುಳಿತುಕೊಳ್ಳುವುದು ಮುಖ್ಯವಾಗಿರದೆ Open to details ಎಂಬಂತೆ, ಎಲ್ಲೇ ಇದ್ದರೂ ಸುತ್ತಮುತ್ತಲೂ ದೃಷ್ಟಿಯಿಡುತ್ತ ಇರುವುದರಲ್ಲೇ ಹೊಸತು ಕಾಣುವಂತಾದರೆ, ಅದರಿಂದಲೇ ಅದ್ಭುತ ಬರಹ ಹೊರಹೊಮ್ಮಬಹುದು. ಬರೆಯುವ ಮನಸ್ಸಿದ್ದವನಿಗೆ ತಾನೆಲ್ಲಿರುವೆ, ಯಾರ ಜತೆಗಿರುವೆ, ಏನು ಮಾಡುತ್ತಿರುವೆ ಎಂಬುದು ಮುಖ್ಯವಲ್ಲವೇ ಅಲ್ಲ. ಎಲ್ಲೇ ಇರಲಿ, ಹೇಗೇ ಇರಲಿ, ಆಸಕ್ತಿ ಮತ್ತು ತುಡಿತ ಇದ್ದರೆ ಯಾವುದೋ ಒಂದು ವಿಷಯ ಆ ಹೊತ್ತಿಗೆ ಥಟ್ಟನೆ ಮನಸ್ಸಿನಾಳಕ್ಕೆ ಇಳಿದುಬಿಡುತ್ತದೆ. ಅದನ್ನೇ ವಿಸ್ತರಿಸಿದರೆ ಒಂದೊಳ್ಳೆ ಬರಹವಾಗಲೂಬಹುದು. ಇದೊಂದು ರೀತಿಯ ಬರೆಯುವ ಗುಂಗಿನ ಪ್ರಶ್ನೆ. ಆ ಗುಂಗು, ಬಚ್ಚಲಮನೆಯಲ್ಲಿದ್ದಾಗಲೂ ಬರಬಹುದು, ಯಾರೊಟ್ಟಿಗೋ ಹರಟುವಾಗಲೂ ಬರಬಹುದು. ಅಷ್ಟೇಕೆ, ನಿದ್ರಿಸುವಾಗ ಕನಸಿನ ರೂಪದಲ್ಲೂ ಬರಬಹುದು.

ಬರೆಯುವುದೊಂದು ಕಲೆ, ಅದನ್ನು ಹೇಗೆ ರೂಢಿಸಿಕೊಳ್ಳುತ್ತೇವೆ ಎಂಬುದು ಮುಖ್ಯ. ತಾಸುಗಟ್ಟಲೆ ಒಂದೆಡೆ ಕುಳಿತರೆ ಬರಹ ಹೊಮ್ಮುತ್ತದೆ ಎಂಬುದೂ ಸತ್ಯವಲ್ಲ. ಹಾಂ, ವಿಷಯವೊಂದು ತಲೆಯೊಳಗೆ ಹೊಕ್ಕಿತೆಂದರೆ, ಅದನ್ನು ವಿಸ್ತರಿಸಿ ಬರಹದ ರೂಪ ಕೊಡುವಾಗ ಒಂದಿಷ್ಟು ಹೊತ್ತು ಕೂತರೆ ಸಾಕು. ಮುಂದಿನದೆಲ್ಲ ಸಹಜವಾಗಿ ನಡೆದುಹೋಗುತ್ತದೆ. ಅದೊಂದು spontaneous ಕ್ರಿಯೆ. ಆದರೆ ಬರೆಯುವ ಗತಿ, ಆಸಕ್ತಿ ಅಥವಾ ಯಾವುದೋ ಒತ್ತಡ ಇರಲೇಬೇಕು. ಉದಾಹರಣೆಗೆ, ಪ್ರತಿವಾರ ಬರೆಯುವ ಅಂಕಣಕಾರ, ಸದಾ ಒಂದಿಲ್ಲೊಂದು ಹೊಸ ವಿಷಯದ ಹುಡುಕಾಟ ನಡೆಸುತ್ತಲೇ ಇರುತ್ತಾನೆ. ಅದು ಯಾರೋ ಯಾವಾಗಲೋ ಹೇಳಿದ್ದು ಇರಬಹುದು, ಎಲ್ಲೋ ನೋಡಿದ್ದು ಅಥವಾ ಸ್ವಂತ ಅನುಭವ ಇರಬಹುದು. ಒಟ್ಟಾರೆ ಏನೋ ಒಂದು ಮಾನಸಿಕ ಚಟುವಟಿಕೆ ನಡೆಯುತ್ತಲೇ ಇರಬೇಕು. ಒಂದಂತೂ ನಿಜ- ಯಾವುದೇ ವಿಷಯವಿರಲಿ ಅದು ಖಾಲಿಸ್ಥಳದಿಂದ ಮಾತ್ರ ಉದ್ಭವಿಸುವುದಿಲ್ಲ; ಎಲ್ಲೋ, ಯಾವುದೋ ರೂಪದಲ್ಲಿ ಅಡಗಿರುತ್ತದೆ. ಅದನ್ನು ಪತ್ತೆಹಚ್ಚಿ ಕೆದಕಿ ತೆಗೆಯುವ ಕೆಲಸವಾದಾಗಲೇ ಬರಹವೂ ಪುಟಿದೆದ್ದೀತು!

- ಶಂಕರನಾರಾಯಣ ಭಟ್, ಮಾಡಗೇರಿ

ಗೊಂದಲ ಬಗೆಹರಿಸಲಿ

ರೈತರು ತಲೆತಲಾಂತರದಿಂದ ಉಳುಮೆ ಮಾಡಿಕೊಂಡು ಬಂದ ಜಮೀನಿನ ಪಹಣಿಯಲ್ಲಿ 'ವಕ್ಫ್ ಆಸ್ತಿ' ಎಂದು ಏಕಾಏಕಿ ಉಲ್ಲೇಖ ಮಾಡಿರುವ ಘಟನೆಗಳು ರಾಜ್ಯದ ಹಲವು ಜಿಲ್ಲೆಗಳಿಂದ ವರದಿಯಾಗುತ್ತಿವೆ. ಇದು ಅತ್ಯಂತ ಕಳವಳಕಾರಿ ಬೆಳವಣಿಗೆ. ಸಾಕಷ್ಟು ಸರಕಾರಿ ಅಧಿಕಾರಿಗಳಿಗೇ ವಕ್ಫ್ ಕಾನೂನು ಎಂದರೇನು ಎಂಬ ಬಗ್ಗೆ ಸ್ಪಷ್ಟ ಮಾಹಿತಿಯಿಲ್ಲ, ಹೀಗಿರುವಾಗ ನಾಗರಿಕರಿಗೆ/ರೈತರಿಗೆ ಆ ಅರಿವು ಹೇಗಿದ್ದೀತು? ಈ ಕಾನೂನು ಜಾರಿಯಾದ ನಂತರ ವಕ್ಫ್ ಆಸ್ತಿಗೆ ಸಂಬಂಧಿಸಿದ ಜಮೀನು ಖರೀದಿಸಲು ಯಾರೇ ಮುಂದಾದರೂ, 'ಇದು ವಕ್ಫ್ ಆಸ್ತಿಗೆ ಸೇರಿದ್ದು' ಎಂಬುದಾಗಿ ಸಬ್‌ರಿಜಿಸ್ಟ್ರಾರ್ ಅವರು ಆಗಲೇ ಮಾಹಿತಿ ನೀಡಿದ್ದರೆ ಹಾಗೂ ಸರಕಾರಿ ದಾಖಲೆಗಳಲ್ಲಿ ಕೂಡಲೇ ತಿದ್ದುಪಡಿ ಮಾಡಿಕೊಂಡಿದ್ದರೆ, ಅಂಥ ಆಸ್ತಿಯ ಖರೀದಿಗೆ ಯಾರೂ ಮುಂದಾಗುತ್ತಿರಲಿಲ್ಲ, ಮೋಸ ಹೋಗುತ್ತಿರಲಿಲ್ಲ. ಇಂದು ನಡೆಯುತ್ತಿರುವ ಎಲ್ಲಾ ಘಟನೆಗಳಿಗೂ ಆಳುಗರ/ವ್ಯವಸ್ಥೆಯ ನಿರ್ಲಕ್ಷ್ಯವೇ ಕಾರಣ. ಹಾಗಾಗಿ, ಸದ್ಯ ಉಂಟಾಗಿರುವ ಗೊಂದಲವನ್ನು ಬಗೆಹರಿಸಿ, ಇಂಥ ಜನವಿರೋಧಿ ಕಾನೂನಿನ ಬಗ್ಗೆ ಇನ್ನಾದರೂ ಅರಿವುಮೂಡಿಸಬೇಕಿದೆ.

-ಸುರೇಂದ್ರ ಪೈ, ಭಟ್ಕಳ

ಸಂಶೋಧನೆಗೆ ಮಾರ್ಗಸೂಚಿ

ರವಿ ಹಂಜ್ ಅವರ 'ಬಸವ ಮಂಟಪ' ಅಂಕಣವು ಅತ್ಯಂತ ಮೌಲ್ಯಯುತವಾಗಿ ಮೂಡಿಬರುತ್ತಿದೆ ಎಂದು ನನಗನ್ನಿಸುತ್ತಿದೆ. ಸಾಕಷ್ಟು ಅಧ್ಯಯನ ಮಾಡಿ ಬರೆಯುತ್ತಿರುವ ಲೇಖಕರು, ಅಂದಿನ ಸಮಾಜದ ಸ್ಥಿತಿ ಯನ್ನೂ, ಪಲ್ಲಟಗಳನ್ನೂ ತೆರೆದಿಡುತ್ತಿದ್ದಾರೆ. ಇದು ವಾಸ್ತವಿಕ ಇತಿಹಾಸದ ದರ್ಶನಕ್ಕೆ ಸಹಕಾರಿ. ಅದರಲ್ಲೂ ಇತಿಹಾಸದ ವಿದ್ಯಾರ್ಥಿಗಳಿಗೆ, ಸಂಶೋಧನೆಗೆ ಮಾರ್ಗವೊಂದನ್ನು ಸೂಚಿಸುವಂತಿದೆ. ಲೇಖಕರಿಗೆ ನನ್ನ ಅಭಿನಂದನೆಗಳು.

- ಕೆ. ಜನಾರ್ದನ ತುಂಗ, ಬೆಂಗಳೂರು

ದಯವಿಟ್ಟು ನನ್ನನ್ನು ಉಳಿಸಿ

ನಾನು ವಿಜಯನಗರ ಜಿಲ್ಲೆ ಹರಪನಹಳ್ಳಿಯ ಅತ್ಯಂತ ಪುರಾತನ ಕೆರೆ. ಸುತ್ತಲಿನ ಎಲ್ಲಾ ಹಳ್ಳಿಗಳ ಕೆರೆಗಳು ಬತ್ತಿ ಬರಡಾದರೂ ನಾನು ನಳನಳಿಸುತ್ತಿದ್ದೆ. ಈಗ ನನ್ನ ಸಮಸ್ಯೆ ಏನೆಂದರೆ, ಊರಿನ ಸಕಲ ಗಲೀಜು, ಬೀಳಿಸಿದ ಕಟ್ಟಡದ ಕಲ್ಲು-ಮಣ್ಣು, ಹಸಿಕಸ-ಒಣಕಸ, ನೂರೆಂಟು ಬಗೆಯ ತ್ಯಾಜ್ಯಗಳನ್ನು ತಂದು ನನ್ನ ದಂಡೆಯ ಎಲ್ಲೆಡೆ ಗುಡ್ಡೆಹಾಕುತ್ತಾರೆ. ಇದನ್ನು ನಾನಾದರೂ ಹೇಗೆ ಸಹಿಸಲಿ? ಸಾಲದೆಂಬಂತೆ ಬೆಳ್ಳಂಬೆಳಗ್ಗೆ ಕೈಯಲ್ಲಿ ಚೊಂಬು ಹಿಡಿದು ವಿಸರ್ಜನೆಗೆ ಬರುವವರ ಸರತಿಯ ಸಾಲು ಬೇರೆ! ಹೀಗಾಗಿ, ಸ್ಟೇಡಿಯಂನಲ್ಲಿ ಆಡಲು ಬರುವವರು, ವಾಯುವಿಹಾರಿಗರು ಮೂಗುಮುಚ್ಚಿ ಸಾಗಬೇಕಾಗಿದೆ. ಶುಚಿ-ಶುದ್ಧತೆಗೆ ಮೊದಲಿಂದಲೂ ಬದ್ಧಳಾದ ನನಗೆ ಉಸಿರಾಡಲೂ ಕಷ್ಟವಾಗಿದೆ. 'ಕೆರೆ ತುಂಬಿಸಿ, ಕೆರೆಗಳನ್ನು ಉಳಿಸಿ, ಪರಿಸರ ಕಾಪಾಡಿ' ಎಂದು ಪ್ರಚಾರ ಮಾಡುವವರು ಏನು ಮಾಡುತ್ತಿದ್ದಾರೆ? ಒಂದು ದಿನದ 'ಕೆರೆ ಶುದ್ಧೀಕರಣ ಅಭಿಯಾನ' ನಡೆಸಿ ಸಾಕಷ್ಟು ಶುದ್ಧಮಾಡಿರುವ ಸಂಘಟನೆಗಳಿವೆ. ಆದರೆ ಅವು ತಾನೇ ಎಷ್ಟು ಬಾರಿ ಶುದ್ಧ ಮಾಡಿಯಾವು? ಮರುದಿನ ಮತ್ತದೇ ಗೋಳು. ದಯವಿಟ್ಟು ನನ್ನನ್ನು ಕಾಪಾಡಿ. ಕೆರೆಯ ಪರವಾಗಿ-

- ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ಆಪ್ತವೆನಿಸುವ ಬರಹ

ಶಶಿಧರ ಹಾಲಾಡಿಯವರ 'ಶಶಾಂಕಣ' (ವಿಶ್ವವಾಣಿ ನ.1) ಚೆನ್ನಾಗಿ ಮೂಡಿಬಂದಿದೆ. ಬಾಲ್ಯದ ನೆನಪುಗಳು ಅಷ್ಟು ಸುಲಭವಾಗಿ ಮಾಸುವುದಿಲ್ಲ. ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ಓದಿದವರು ತಾವು ಶಾಲೆಗಳಿಗೆ ಹೋಗಲು ಮಾಡಿದ ಕಸರತ್ತು ಹಾಗೂ ತಿಂಡಿ-ಊಟವನ್ನು ಹೊಂದಿಸಿಕೊಳ್ಳುವಲ್ಲಿ ಅನುಭವಿಸಿದ ಪಡಿಪಾಟಲುಗಳನ್ನು ಮರೆಯಲಾಗದು. ಇಂಥ ಬರಹಗಳು ಪತ್ರಿಕೆಯಲ್ಲಿ ಹೆಚ್ಚು ಮೂಡಿಬರಲಿ.

-ರಾಮಕೃಷ್ಣ ಅಯ್ಯಂಗಾರ್, ಚಿಕ್ಕಮಗಳೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ರಂಗದೊರೆ, ಮೇಲುಕೋಟೆ**
ಭಟ್ರೇ, ಜಯವೀರ ಗೌಡ ಯಾವಾಗ ಪುನರ್ ಎಂಟ್ರಿ ತೆಗೆದುಕೊಳ್ಳಬಹುದು?
- **ದರ್ಶನ್‌ಗೆ ಬೇಲ್ ಸಿಗೋ ತನಕ ಕಾಯಿರಿ ಅಂತಿದ್ದ.. ಅದೂ ಸಿಕ್ತು.. ಇನ್ನಾದರೂ ಬರಬಹುದು!**

- **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಸರ್, ಜಮೀರ್ ಅಹಮದ್ ಖಾನ್ ತಾವು ರೈತರ ಮಗ ಅಂತ ಹೇಳಿದ್ದಾರಲ್ಲಾ?
- **ದೇವೇಗೌಡರ ಜತೆ ಇದ್ದಾಗಿನ ದಿನಗಳನ್ನು ನೆನಪಿಸಿಕೊಂಡಾಗ ಹಾಗೆ ಕನವರಿಸುತ್ತಾರೆ!**

- **ಕಾವ್ಯ ಗೋಖಲೆ, ಬೆಂಗಳೂರು**
ಭಟ್ರೇ, ವಿಶ್ವೇಶ್ವರ ಭಟ್ಟರು ಕನಸಿನಲ್ಲಿ ಬರಬೇಕು ಅಂದ್ರೆ ಏನು ಮಾಡಬೇಕು?
- **ಲೊಕೇಶನ್ ಕಳಿಸಿದರೆ ಅವರು ನನಸಿನಲ್ಲೇ ಬರ್ತಾರೆ!**

- **ವೀರೇಶ ಕಮತಗಿ, ಅಡಗೂರು**
ಭಟ್ರೇ, ಹೆಂಡತಿಯ ಮಾತನ್ನು ಕೇಳಬೇಕಾ?
- **ಕೇಳದಿದ್ದರೆ, ಇಡೀ ಊರಿಗೆ ಕೇಳೋ ಹಾಗೆ ಕೇಳಿಸ್ತಾಳೆ, ಆಯ್ಕೆ ನಿನಗೆ ಬಿಟ್ಟಿದ್ದು!**

- **ನಾಗವೇಣಿ ಚಂದ್ರ, ಮೈಸೂರು**
ಭಟ್ರೇ, ಹೊಸರುಚಿ ಬೇಕಾ ಅಂತ ಕೇಳಿದ್ರೆ, ಯಜಮಾನರು ಬೇಡ ಅಂತಾರಲ್ಲ?
- **ಕಿಚನ್ ಬದಲು, ಬೆಡ್‌ರೂಮಿನಲ್ಲಿ ಆ ಮಾತನ್ನು ಹೇಳಿ ನೋಡಮ್ಮ!**

- **ಮಾಧುರಿ ನಾಗರಾಜ, ಶಿವಮೊಗ್ಗ**
ಭಟ್ರೇ, ನೀವು ಅಭಿಮಾನಿಗಳಿಗಿಂತ ಡ್ರೋನ್ ಅನ್ನು ಹೆಚ್ಚು ಪ್ರೀತಿಸ್ತೀರಿ ಅಂತಾರಲ್ಲ?
- **ಇದು ಮಾಜಿ ಪ್ರೇಯಸಿಯರ ಅಪಪ್ರಚಾರ!**

- **ರಾಜಿ, (ಇಮೇಲ್ ಮೂಲಕ)**
ಭಟ್ರೇ, 'ವಕ್ರತುಂಡೋಕ್ತಿ'ಯಲ್ಲಿ ಹೆಂಡತಿಯರೇ ಹೆಚ್ಚು ಟೀಕೆಗೆ ಒಳಗಾಗುತ್ತಾರಲ್ಲ?
- **ಅಷ್ಟಕ್ಕೇ ಕೇಸ್ ಹಾಕಿ ನನ್ನನ್ನು ಕೋರ್ಟಿಗೆ ಅಲೆಸುತ್ತಿದ್ದಾರಲ್ಲ?!**

- **ಮನೋಹರ ಬಾಪಟ್, ಬೆಳಗಾವಿ**
ಭಟ್ರೇ, ಕನ್ನಡದ ಕೆಲವು ಲೇಖಕರು ಬಹಳ ಚೆನ್ನಾಗಿ ಬರೆಯುತ್ತಿದ್ದಾರಲ್ಲ?
- **ಇಲ್ಲಿ 'ಕೆಲವು' ಪದ ಇದ್ದಿದ್ದರಿಂದ ನಿನ್ನ ಪ್ರಶ್ನೆಗೆ ಬೆಲೆ ಬಂತು!**

- **ನಾರಾಯಣ ಶಂಕರ, ಕೆಂಗೇರಿ**
ಭಟ್ರೇ, ಇಂದು ನವೆಂಬರ್ ಒಂದು ಅಂತ ಹೇಗೆ ಗೊತ್ತಾಗುತ್ತದೆ?
- **'ರಾಜ್ಯೋತ್ಸವ' ಅಂತ ಬೇರೆ ಯಾವ ದಿನವೂ ಹೇಳೊಲ್ಲ ನಾರಾಯಣ!**

ಪ್ರಾಣಾಯಾಮವೆಂಬ ಪಯಣದ ಪ್ರಾರಂಭ

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ.ಸಾಧನಶ್ರೀ
vveditoped@gmail.com

ನಿಮ್ಮ ಉಸಿರನ್ನು ಕೆಲವು ಗಂಟೆಗಳ ಕಾಲ ಹಿಡಿದಿಟ್ಟುಕೊಳ್ಳಲು ಸಾಧ್ಯವೇ? ಹೃದಯಬಡಿತವನ್ನು ಕೆಲವು ನಿಮಿಷಗಳ ಕಾಲ ನಿಲ್ಲಿಸಿ ಪುನರಾರಂಭಿಸಲು ಸಾಧ್ಯವೇ? ಸಾವಿನ ಸ್ಥಿತಿಯನ್ನು ತಲುಪಿ ಪುನಃ ಜೀವಂತ ಸ್ಥಿತಿಗೆ ಮರಳಲು ಸಾಧ್ಯವೇ? ಖಂಡಿತ ಸಾಧ್ಯವಿಲ್ಲ. ಇವುಗಳನ್ನು ಕೇವಲ ಪುರಾಣ ಕತೆಗಳಲ್ಲಿ ಕಾಣಬಹುದು. ಇವುಗಳನ್ನು ಸಾಧಿಸುತ್ತೇವೆ ಎಂದು ಹೇಳಿಕೊಳ್ಳುವ ಯೋಗಿಗಳದ್ದು ಕೇವಲ ಢೋಂಗಿಯ ಮಾತು ಎಂಬುದು 1970ರ ತನಕ ಜನಸಾಮಾನ್ಯರಲ್ಲಿ ಪ್ರಚಲಿತವಾಗಿದ್ದ ಭಾವನೆ. ಈ ಕ್ರಿಯೆಗಳೆಲ್ಲ ನಮ್ಮ ನಿಯಂತ್ರಣದ ಪರಿಧಿಯ ಆಚೆ ಇರುವಂಥದ್ದು (ಇನ್ವಾಲೆಂಟರಿ ಫಂಕ್ಷನ್ಸ್) ಎಂಬುದು ವೈಜ್ಞಾನಿಕ ಸಮೂಹದ ತಿಳಿವಳಿಕೆಯಾಗಿತ್ತು.

ಆದರೆ 1970ರಲ್ಲಿ ಆಗಿದ್ದೇನು? ಹಿಮಾಲಯದ ಗುಹೆಗಳಲ್ಲಿ ಸಾಧು-ಸಂತರ ಪಾಲನೆಯಲ್ಲಿ ಮಹಾನ್ ಯೋಗಿಯಾಗಿ ಬೆಳೆದಿದ್ದ ಶ್ರೀ ಸ್ವಾಮಿರಾಮರು ಅಮೆರಿಕಕ್ಕೆ ಬಂದರು. ಸುಸಜ್ಜಿತ ಪ್ರಯೋಗಾಲಯದಲ್ಲಿ ಖ್ಯಾತ ವೈದ್ಯ-ವಿಜ್ಞಾನಿಗಳ ಸಮ್ಮುಖದಲ್ಲಿ ತಮ್ಮನ್ನು ಅನೇಕ ಕಠಿಣ ಸಂಶೋಧನೆಗಳಿಗೆ ಒಳಪಡಿಸಿಕೊಂಡರು. ವೈಜ್ಞಾನಿಕ ಉಪಕರಣಗಳ ಮಾಪನೆಗೆ ತಮ್ಮನ್ನು ತೆರೆದುಕೊಳ್ಳುವ ಮೂಲಕ ಶಾರೀರಿಕ ಕ್ರಿಯೆಗಳ ಬಗ್ಗೆ ಆಧುನಿಕ ವಿಜ್ಞಾನಕ್ಕೆ ಇದ್ದ ತಿಳಿವಳಿಕೆ ಎಷ್ಟು ಸಂಕುಚಿತ, ಅಪೂರ್ಣ ಎಂದು ತೋರಿ ಒಂದು ಹೊಸ ಅಲೆಯನ್ನು ಸೃಷ್ಟಿಸಿದರು. ವಿಜ್ಞಾನ ಹಾಗೂ ಯೋಗದ ನಡುವೆ ಸೇತುವೆ ನಿರ್ಮಿಸಿ, ಯೋಗ ಕೇವಲ ಅಂಗಾಂಗಗಳ ಕಸರತ್ತಲ್ಲ, ಒಂದು ಅತ್ಯದ್ಭುತ ವಿಜ್ಞಾನ ಎಂದು ಸಾರಿದರು.

ಇವರು ಮಾಡಿದ್ದು ಏನು? ಕೆಲವು ಉದಾಹರಣೆಗಳು ಇಲ್ಲಿವೆ. ತಮ್ಮ ಒಂದೇ ಹಸ್ತದ ಎರಡು ಬೇರೆ ಬೇರೆ ಭಾಗಗಳ ಚರ್ಮದ ಉಷ್ಣಾಂಶವನ್ನು ವ್ಯತ್ಯಾಸ ಮಾಡಿದರು. ಒಂದು ಭಾಗ ಬಿಸಿಯಾಗಿ ಕೆಂಪಾದರೆ ಇನ್ನೊಂದು ಭಾಗ ಶೈತ್ಯತೆಯಿಂದ ಬಿಳಿಚಿಕೊಂಡಿತ್ತು. ಎರಡೂ ಭಾಗಗಳಲ್ಲಿ 10 ಡಿಗ್ರಿ ಫ್ಯಾರನ್‌ಹೀಟ್‌ಗಳಷ್ಟು ವ್ಯತ್ಯಾಸ! ಇನ್ನೊಮ್ಮೆ ತಮ್ಮ ಹೃದಯಬಡಿತವನ್ನು ಸ್ವ ಇಚ್ಛೆಯಿಂದ ಒಂದು ನಿಮಿಷಕ್ಕೆ 70 ಬಡಿತಗಳಿಂದ 300ಕ್ಕೆ ಏರಿಸಿದರು. 17 ಕ್ಷಣಗಳ ಕಾಲ ಹೃದಯಬಡಿತವನ್ನು ನಿಲ್ಲಿಸಿದರು. ಇಷ್ಟೇ ಅಲ್ಲದೆ ತಮ್ಮ ಬ್ರೇನ್-ವೇವ್‌ಗಳನ್ನು ನಿಲ್ಲಿಸಿಯೂ ತಮ್ಮ ಸುತ್ತಲಿನ ಆಗುಹೋಗುಗಳ ಸಂಪೂರ್ಣ ಅರಿವಿನ ಎಚ್ಚರದ ಸ್ಥಿತಿಯನ್ನು ನಿರೂಪಿಸಿದರು. ಈ ಎಲ್ಲಾ ಕ್ರಿಯೆಗಳನ್ನು ನಾವು ಸ್ವ-ಇಚ್ಛೆಯಿಂದ ನಿಯಂತ್ರಿಸಲು ಸಾಧ್ಯವಿಲ್ಲವೆಂದು ನಂಬಿದ್ದ ವಿಜ್ಞಾನಿಗಳು ಸ್ವಾಮಿರಾಮರ ಈ ಸಾಧನೆಯನ್ನು ಕಂಡು ದಂಗಾದರು.

ಇದೆಲ್ಲಾ ಅವರಿಗೆ ಸಾಧ್ಯವಾಗಿದ್ದಾದರೂ ಹೇಗೆ? ಕೇವಲ ಒಂದೇ ಉತ್ತರ- 'ಪ್ರಾಣವಿದ್ಯೆಯ ಸಾಧನೆ'- ದಿ ಸೈನ್ಸ್ ಆಫ್ ಬ್ರೆತ್! ಉಸಿರಾಟದ ನಿಯಂತ್ರಣ, ತನ್ಮೂಲಕ ಪ್ರಾಣಶಕ್ತಿಯ ಮೇಲಿನ ಹಿಡಿತ ಸಾಧಿಸುವುದೇ ಇದರ ಹಿಂದಿನ ರಹಸ್ಯ. ಉಸಿರಾಟ, ಹೃದಯಬಡಿತ, ಮಿದುಳಿನ ಕ್ರಿಯೆ, ದೇಹದ ಉಷ್ಣತೆ ಇತ್ಯಾದಿಗಳು ಆಟೊನೊಮಿಕ್ ನರ್ವಸ್ ಸಿಸ್ಟಮ್ (ಸ್ವ-ನಿಯಂತ್ರಿತ ನರಮಂಡಲ)ನ ಕಾರ್ಯಗಳು. ಇದರ ಐಚ್ಛಿಕ ನಿಯಂತ್ರಣ/ಏರಿಳಿತ ನಮ್ಮಿಂದ ಅಸಾಧ್ಯ ಎಂಬುದು ಪಾಶ್ಚಾತ್ಯ ವಿಜ್ಞಾನದ ದೃಢ ನಂಬಿಕೆ. ಆದರೆ, ಸ್ವಾಮಿರಾಮರು ತಮ್ಮ ಉಸಿರಾಟದ (ಪ್ರಾಣ) ರೀತಿ-ಗತಿಗಳನ್ನು ನಿಯಂತ್ರಿಸುವ ಮೂಲಕ ಇಡೀ ನರಮಂಡಲದ ವ್ಯವಸ್ಥೆಯ ಮೇಲೆ ಹಿಡಿತ ಸಾಧಿಸಿದರು. ಹಾಗಾಗಿ ದೇಹದ ಎಲ್ಲಾ ಕಾರ್ಯಗಳು ಅವರ ಸ್ವಾಧೀನ! ಹಾಗಾದರೆ ನಮ್ಮ ಉಸಿರಾಟಕ್ಕೆ ಇದೆಯೇ ಇಷ್ಟೊಂದು ಶಕ್ತಿ?

ನಮ್ಮ ಶರೀರ, ಇಂದ್ರಿಯ, ಮನಸ್ಸು, ಆತ್ಮಗಳನ್ನು ಪೋಷಿಸುವ ಶಕ್ತಿಯನ್ನು 'ಪ್ರಾಣ' ಎಂದು ಕರೆಯಬಹುದು. ಈ ಪ್ರಾಣಶಕ್ತಿಯು ನಮ್ಮ ಶರೀರವೆಂಬ ವಾಹನ ನಡೆಯಲು ಬೇಕಾದ ಇಂಧನ. ಸೇವಿಸುವ ಆಹಾರ, ಯೋಚಿಸುವ ವಿಚಾರ, ತೊಡಗಿಕೊಳ್ಳುವ ವಿಹಾರ ಗಳು ಈ ಪ್ರಾಣಶಕ್ತಿಯನ್ನು ಪೋಷಿಸುತ್ತವೆ. ನಮ್ಮ ದೇಹದ ಎಲ್ಲಾ ಕ್ರಿಯೆಗಳ ಹಿಂದಿನ ಪ್ರೇರಕ ಶಕ್ತಿಯೇ ಈ 'ಪ್ರಾಣ'. ಯೋಗಸಾಧನೆಯ ಬಹು ಮುಖ್ಯ ಅಂಶ ಈ ಪ್ರಾಣಶಕ್ತಿಯ ಅರಿವು ಹಾಗೂ ಅದರ ನಿಯಂತ್ರಣ (not controlling, but regulating). ಆದರೆ ಈ ಸೂಕ್ಷ್ಮರೂಪಿ ಶಕ್ತಿಯ ಮೇಲೆ ನೇರವಾಗಿ ನಿಯಂತ್ರಣ ಸಾಧಿಸುವುದು ಅಸಾಧ್ಯ. ಅದರ ಮೇಲೆ ಹಿಡಿತ ಸಾಧಿಸಲು ಒಂದೇ ಮಾರ್ಗ. ಅದು- ನಮ್ಮ ಉಸಿರಾಟದ ಮೂಲಕ! ಏಕೆಂದರೆ ಉಸಿರಾಟವೇ ಪ್ರಾಣದ ವಾಹನ. ವಾಹನ ಚೆನ್ನಾಗಿದ್ದರೆ ಪ್ರಯಾಣವು ಸುಖಕರವಾಗುವಂತೆ, ಉಸಿರಾಟ ಸರಿಯಾದರೆ ಪ್ರಾಣದ ಸಂಚಾರವೂ ಸುಗಮ.

ಉಸಿರಾಟವು ದೇಹ-ಮನಸ್ಸುಗಳ ನಡುವಿನ ಸೇತುವೆ. ಮನಸ್ಸಿನಲ್ಲಾಗುವ ಏರಿಳಿತಗಳ ಪರಿಣಾಮ ಉಸಿರಾಟದ ಮೇಲಾಗುವುದನ್ನು ಕಾಣಬಹುದು. ಉಸಿರಾಟವನ್ನು ವ್ಯತ್ಯಾಸ ಮಾಡುವ ಮೂಲಕ ಮನಸ್ಸಿನ ಸ್ಥಿತಿಯನ್ನು ಬದಲಾಯಿಸಬಹುದು. ಉದಾಹರಣೆಗೆ ಅತ್ಯಂತ ಕ್ರೋಧಿತ ಅವಸ್ಥೆಯಲ್ಲಿ ಉಸಿರಾಟವು ವೇಗವಾಗಿ, ಲಯರಹಿತವಾಗಿ ಹಾಗೂ ಹ್ರಸ್ವವಾಗಿರುತ್ತದೆ. ಅದೇ ನಾವು ಸಂತೋಷವಾಗಿದ್ದಾಗ ದೀರ್ಘ, ಲಯಬದ್ಧ ಹಾಗೂ ನಿಧಾನಗತಿಯ ಉಸಿರಾಟವನ್ನು ಗಮನಿಸಬಹುದು. ನಾವು ದುಃಖ, ಕೋಪದಲ್ಲಿದ್ದಾಗ ನಮ್ಮ ಉಸಿರಾಟದ ಕಡೆ ಗಮನ ಹರಿಸಿ ಅದನ್ನು ಲಯಬದ್ಧವಾಗಿ, ದೀರ್ಘವಾಗುವಂತೆ ಮಾಡಿದರೆ ಕ್ಷಣಮಾತ್ರದಲ್ಲಿ ಶಾಂತಚಿತ್ತರಾಗಬಹುದು. ಈ ನಿದರ್ಶನವೇ ಸಾಕು ಉಸಿರಾಟದ ಮೂಲಕ ಮನಸ್ಸನ್ನು ನಿಯಂತ್ರಿಸಬಹುದು ಎಂದು ತಿಳಿಯಲು.

ಈ ಸತ್ಯವನ್ನು ಕಂಡುಕೊಂಡ ಯೋಗಿಗಳು ಮನಸ್ಸನ್ನು ಹತೋಟಿಗೆ ತರಲು, ಅದರಲ್ಲಿ ಓಡುವ ಅಸಂಖ್ಯಾತ ವೃತ್ತಿಗಳನ್ನು(ಮನಸ್ಸಿನಲ್ಲಿ ಏಳುವ ವಿಚಾರದ ಅಲೆಗಳು) ಶಾಂತವಾಗಿಸಲು, ಮನಸ್ಸಿಗಿರುವ ಅಗಾಧ ಶಕ್ತಿಯನ್ನು ಅನುಭವಿಸಲು 'ಪ್ರಾಣಾಯಾಮ'ವೆಂಬ ಸಾಧನವನ್ನು ಜಗತ್ತಿಗೆ ನೀಡಿದರು. ಉಸಿರಾಟವನ್ನು ಮಾಧ್ಯಮವಾಗಿಸಿಕೊಂಡು ತನ್ಮೂಲಕ ಪ್ರಾಣಶಕ್ತಿಯ ಸಂಚಾರವನ್ನು ಸುಗಮಗೊಳಿಸಿ, ಅದರ ಗುಣಮಟ್ಟವನ್ನು ಸುಧಾರಿಸಿ, ವ್ಯಾಪ್ತಿಯನ್ನು ವಿಸ್ತಾರಗೊಳಿಸುವ ಸಾಧನೆಯೇ ಪ್ರಾಣಾಯಾಮ

ಪ್ರಾಣಾಯಾಮದ ಸರಿಯಾದ ಅಭ್ಯಾಸದಿಂದ ಪ್ರಾಣಶಕ್ತಿಯು ಶರೀರದ ಪ್ರತಿಯೊಂದು ಸೂಕ್ಷ್ಮ ಸ್ರೋತಸ್ಸಿನಲ್ಲಿಯೂ ಸಂಚರಿಸಿ, ಅಂಗಾಂಗಗಳನ್ನು ಪೋಷಿಸಿ, ಅಲ್ಲಿರುವ ನೋವು ಬೇನೆಗಳನ್ನು ದೂರಮಾಡುತ್ತದೆ. ಮನಸ್ಸಿನ ವೇಗವನ್ನು ಕಡಿಮೆ ಮಾಡಿ ಸಮಾಧಾನವನ್ನು ನೀಡುವುದರ ಮೂಲಕ ಆಳವಾದ ಧ್ಯಾನಸ್ಥಿತಿಯನ್ನು ತಲುಪಲು ಅದು ಸಹಾಯಕಾರಿ. ಪ್ರಾಣಾಯಮ ಜೀವನಪರ್ಯಂತ ಮಾಡಬೇಕಾದ ಅಭ್ಯಾಸ. ಇದರ ಬಗೆ ನೂರಾರು, ಮಾಡುವ ರೀತಿ ಹಲವಾರು. ಕಠಿಣ ಪ್ರಾಣಾಯಮದ ಅಭ್ಯಾಸಕ್ಕೆ ಶರೀರವನ್ನು ಸಜ್ಜುಗೊಳಿಸಲು ನಿತ್ಯ ಅಭ್ಯಾಸಮಾಡಬೇಕಾದ ಅತ್ಯಂತ ಸುಲಭ, ಅಷ್ಟೇ ಪರಿಣಾಮಕಾರಿಯಾದ ತ್ರಿಸೂತ್ರವನ್ನು ತಿಳಿಯೋಣ.

1. ಉಸಿರಾಟದ ಅರಿವು
(Breath Awareness)

ಇದು ಪ್ರಾಣಾಯಾಮದ ಅಡಿಪಾಯ. ನಮ್ಮ ಉಸಿರಾಟವನ್ನು ಸರಿಪಡಿಸಿಕೊಳ್ಳದೆ ಯಾವ ಪ್ರಾಣಾಯಾಮವೂ ಅಸಫಲ. 'ಬ್ರೆತ್ ಅವೇರ್ನೆಸ್' ಎಂದರೆ ಪ್ರಜ್ಞಾಪೂರ್ವಕವಾಗಿ ಉಸಿರಾಡುವುದು. ಪ್ರತಿ ಗಂಟೆಗೆ 2 ನಿಮಿಷದಂತೆ, ನಮ್ಮ ಗಮನವನ್ನು ಉಸಿರಾಟದ ಮೇಲೆ ಕೊಂಡೊಯ್ದು, ಗಾಳಿಯು ಮೂಗಿನಿಂದ ಒಳಗೆ ಹೋಗುವ ಮತ್ತು ಹೊರಗೆ ಬರುವ ಕ್ರಿಯೆಯನ್ನು ಏಕಾಗ್ರತೆಯಿಂದ ಪರಿಶೀಲಿಸುವುದು. ನಂತರ ನಿಧಾನವಾಗಿ ಗಮನವನ್ನು ನಾಭಿಯತ್ತ ಹರಿಸಿ, ಪ್ರತಿ ಉಸಿರಾಟಕ್ಕೂ ಉದರಭಾಗದ ಒಳ-ಹೊರಗಿನ ಚಲನೆಯನ್ನು ಗಮನಿಸುವುದು. ಇದನ್ನು ಶವಾಸನ ಅಥವಾ ಮಕರಾಸನದಲ್ಲಿ (ಹೊಟ್ಟೆಯ ಮೇಲೆ ಮಲಗಿ) ಅಥವಾ ಸುಖಾಸನದಲ್ಲಿ ಕುಳಿತು ಮಾಡಬಹುದು. ಇದನ್ನು ನಾವು ಬಸ್ಸಿಗಾಗಿ ಕಾಯುತ್ತಿದ್ದಾಗ, ಬ್ಯಾಂಕಿನ ಸಾಲಿನಲ್ಲಿ ನಿಂತಾಗ, ನಡೆಯುವಾಗ, ಅಡುಗೆ ಮಾಡುವಾಗ, ಟಿ.ವಿ ನೋಡುವಾಗ ಯಾವಾಗ ಬೇಕಾದರೂ ಅಭ್ಯಾಸಮಾಡಬಹುದು. ಇದು ಗಂಟೆಗೊಮ್ಮೆ ನಮ್ಮನ್ನು ರೀಚಾರ್ಜ್ ಮಾಡಿಕೊಳ್ಳುವ ಸುಲಭೋಪಾಯ. ಮಲಗುವ ಮುನ್ನ ಇದನ್ನು ಮಾಡಿದರೆ ಸುಖನಿದ್ದೆಯನ್ನು ಸವಿಯಬಹುದು. ಇದರ ನಿರಂತರ ಅಭ್ಯಾಸದಿಂದ ಉಸಿರಾಟವು ದೀರ್ಘ, ಲಯಬದ್ಧ, ಶಬ್ದರಹಿತ, ತಡೆರಹಿತ ಹಾಗೂ ಸುಗಮವಾಗುತ್ತದೆ.

2. ಜಲನೇತಿ

ಮೂಗಿನ ಹೊಳ್ಳೆಗಳನ್ನು ಸ್ವಚ್ಛವಾಗಿಸಿ ಉಸಿರಾಟವನ್ನು ಸುಗಮಗೊಳಿಸುವ ಕ್ರಿಯೆಯಿದು. ಕಫಸಂಚಯದಿಂದ ಉಂಟಾಗುವ ನೆಗಡಿ, ಮೂಗು ಕಟ್ಟುವಿಕೆ, ಅಲರ್ಜಿ, ಸೈನುಸೈಟಿಸ್ ಇತ್ಯಾದಿಗಳ ಸುಲಭ ನಿವಾರಣೋಪಾಯ. ಬೆಚ್ಚಗಿನ, ಲಘುವಾಗಿ ಉಪ್ಪು ಮಿಶ್ರಿತವಾದ ಜಲವನ್ನು ನೇತಿ ಉಪಕರಣದಲ್ಲಿ ತುಂಬಿ, ತಲೆಯನ್ನು ಎಡಗಡೆಗೆ ಸ್ವಲ್ಪ ಬಾಗಿಸಿ ಮೂಗಿನ ಬಲಹೊಳ್ಳೆಯ ಒಳಗೆ ನಿಧಾನವಾಗಿ ಬಿಡುವುದು, ಮತ್ತೊಂದು ಹೊಳ್ಳೆಯಿಂದ ಹೊರಗೆ ಹರಿಯುವಂತೆ ಮಾಡುವುದು. ಇದನ್ನು ಮತ್ತೊಂದು ಕಡೆ ಪುನರಾವರ್ತಿಸುವುದು. ಮೊದಲಿಗೆ ವಾರಕ್ಕೊಮ್ಮೆ ಖಾಲಿಹೊಟ್ಟೆಯಲ್ಲಿ ಮಾಡಿದರೆ ಸಾಕು. ಗಮನಿಸಿ- ಜಲವು ಕಣ್ಣೀರಿನಷ್ಟೇ ಉಪ್ಪು, ದೇಹದಷ್ಟೇ ಉಷ್ಣ ವಿರಬೇಕು.

3. ನಾಡಿಶೋಧನ

ದೇಹದಲ್ಲಿ ಪ್ರಾಣಶಕ್ತಿಯ ಸಂಚಾರವಾಗುವುದು 'ನಾಡಿಗಳೆಂಬ' ಸೂಕ್ಷ್ಮ ಮಾರ್ಗಗಳ ಮೂಲಕ. ಇವುಗಳು ಸ್ವಚ್ಛವಾಗಿರದಿದ್ದರೆ ಪ್ರಾಣದ ಸಂಚಾರ ಅವರೋಧವಾಗುತ್ತದೆ. ಸಮ್ಯಕ್ ಆಹಾರ-ವಿಹಾರ-ವಿಚಾರಗಳಿಂದ ಈ ನಾಡಿಗಳನ್ನು ಶುದ್ಧವಾಗಿರಿಸಿಕೊಳ್ಳಬಹುದು. ಜತೆಗೆ ನಾಡಿಶೋಧನ ಪ್ರಾಣಾಯಾಮದ ಅಭ್ಯಾಸ ಅತ್ಯವಶ್ಯಕ. ಈ ಪ್ರಾಣಾಯಾಮದ ಮುಖ್ಯ ಉದ್ದೇಶ ಬಲ ಹಾಗೂ ಎಡ ಹೊಳ್ಳೆಗಳಲ್ಲಿ ಉಸಿರಾಟದ ಸಂತುಲನ. ತನ್ಮೂಲಕ ಇಡ-ಪಿಂಗಲಗಳೆಂಬ ಮುಖ್ಯ ನಾಡಿಗಳಲ್ಲಿ ಪ್ರಾಣದ ಸಂತುಲನ. ಇದನ್ನು ಮಾಡುವ ವಿಧಾನ ಅನೇಕ. ಅದರಲ್ಲಿ ಒಂದು ವಿಧಾನ ಹೀಗಿದೆ: ಸುಖಸ್ಥಿತಿಯಲ್ಲಿ ಕುಳಿತು, ಬೆನ್ನು-ಕತ್ತು-ತಲೆಯನ್ನು ನೇರವಾಗಿಸಿ, ಕಣ್ಣು ಮುಚ್ಚಿ, ಮೊದಲಿಗೆ ಮೂಗಿನ ಬಲಹೊಳ್ಳೆಯನ್ನು ಹೆಬ್ಬೆಟ್ಟಿನಿಂದ ಮುಚ್ಚಿ, ಎಡಹೊಳ್ಳೆಯಿಂದ ಉಸಿರನ್ನು ಬಿಡುವುದು. ಅದೇ ಹೊಳ್ಳೆಯಿಂದ ಉಸಿರನ್ನು ಒಳಗೆ ತೆಗೆದುಕೊಂಡು, ಮಧ್ಯಬೆರಳಿನಿಂದ ಆ ಹೊಳ್ಳೆಯನ್ನು ಮುಚ್ಚಿಕೊಂಡು, ಬಲ ಹೊಳ್ಳೆಯಿಂದ ಉಸಿರನ್ನು ಬಿಡುವುದು. ಮತ್ತೆ ಬಲ ಹೊಳ್ಳೆಯಿಂದ ಉಸಿರನ್ನು ಎಳೆದುಕೊಂಡು, ಹೆಬ್ಬೆಟ್ಟಿನಿಂದ ಮುಚ್ಚಿ, ಎಡಹೊಳ್ಳೆಯಿಂದ ಉಸಿರನ್ನು ಬಿಡುವುದು. ಈ ರೀತಿ 3 ಬಾರಿ ಮಾಡುವುದು. ನಂತರ ಇನ್ನೊಂದು ಕಡೆ ಪುನರಾವರ್ತಿಸುವುದು. ಎರಡೂ ಕಡೆ ಮಾಡಿದಾಗ ಒಂದು ಆವರ್ತನ.



ಶ್ರೀ ಸ್ವಾಮಿ ರಾಮ

ಈ ರೀತಿ 9 ಆವರ್ತನಗಳನ್ನು ಮಾಡುವುದು. ದಿನಕ್ಕೆ 3 ಸಂಧ್ಯಾಕಾಲಗಳಲ್ಲಿ ಮಾಡುವುದು ಉತ್ತಮ. ಇದನ್ನು ಮಾಡುವಾಗ ಉಸಿರಾಟ ನಿಧಾನವಾಗಿ ತಡೆರಹಿತವಾಗಿರಬೇಕು! ಸಾಮಾನ್ಯ ಸೂಚನೆ- ಇದನ್ನು ಯೋಗಾಚಾರ್ಯರ ಬಳಿ ಕಲಿತು ಅಭ್ಯಾಸ ಮಾಡುವುದು ಉತ್ತಮ.

ಈ ತ್ರಿಸೂತ್ರವು ಹೆಚ್ಚಿನ ಪ್ರಾಣಾಯಾಮಕ್ಕೆ ಅತ್ಯವಶ್ಯಕ. ನಮ್ಮ ಉಸಿರಾಟವನ್ನು ಸರಿಪಡಿಸಿಕೊಳ್ಳದೆ ಮಾಡುವ ಪ್ರಾಣಾಯಾಮ/ಆಸನಗಳಿಂದ ಉಪಯೋಗಕ್ಕಿಂತ ಅಪಾಯವೇ ಹೆಚ್ಚು! ಸ್ನೇಹಿತರೇ, ಆಯುರ್ವೇದದ ಪ್ರಕಾರ ನಿತ್ಯ ವ್ಯಾಯಾಮವು ನಮ್ಮ ಸ್ವಾಸ್ಥ್ಯ ರಕ್ಷಣೆಗೆ ಮಾಡಲೇಬೇಕಾದ ದಿನಚರ್ಯೆ. ಕ್ರಮಬದ್ಧ ವ್ಯಾಯಾಮವು ನಮಗೆ ನೂರು ವರುಷಗಳ ಆಯಸ್ಸನ್ನು ಧಾರೆಯೆರೆಯುವುದರಲ್ಲಿ ಯಾವ ಸಂಶಯವೂ ಇಲ್ಲ, ಆದರೆ, ಕ್ರಮತಪ್ಪಿದ ವ್ಯಾಯಾಮವು ನಮ್ಮ ಆಯುವನ್ನು ಕ್ಷೀಣಿಸುವುದೂ ಅಷ್ಟೇ ಸತ್ಯ. ವ್ಯಾಯಾಮ ಮಾಡುವಾಗ ಸಂಗೀತವನ್ನು ಕೇಳುವುದೋ, ಪಕ್ಕದವರ ಜತೆ ಹರಟೆ ಹೊಡೆಯುವುದೋ, ಮನಸ್ಸನ್ನು ಯಾವುದೋ ಯೋಚನೆಯಲ್ಲಿ ತೊಡಗಿಸುವುದೋ ಅಥವಾ ಫೋನ್ ಕಾಲ್‌ನಲ್ಲಿ ಬ್ಯುಸಿ ಇರುವುದೋ ಇಂದು ಸರ್ವೇಸಾಮಾನ್ಯವಾಗಿಬಿಟ್ಟಿದೆ. ವ್ಯಾಯಾಮವು ಕೇವಲ ದೇಹಕ್ಕೆ, ಮನಸ್ಸನ್ನು ಹೇಗೆ ಬೇಕಾದರೆ ಹಾಗೆ ಹರಿಯಲು ಬಿಡಬಹುದು ಎಂಬ ಭಾವನೆ! ಆದರೆ, ಬೇರೆ ಕಾರ್ಯಗಳನ್ನು ನಿರ್ವಹಿಸುತ್ತಾ ವ್ಯಾಯಾಮ ಮಾಡುವಾಗ ನಮ್ಮ ಅರಿವು ಸಂಪೂರ್ಣವಾಗಿ ಹೊರಮುಖವಾಗಿರುತ್ತದೆ. ನಮ್ಮ ದೇಹದ ಮೇಲಾಗಲಿ ಅಥವಾ ನಮ್ಮ ಉಸಿರಾಟದ ಮೇಲಾಗಲಿ ಅರಿವಿಲ್ಲದೆ ಮಾಡುವ ವ್ಯಾಯಾಮವು ನಿಷ್ಪ್ರಯೋಜಕ. ನಾವು ವ್ಯಾಯಾಮ ಮಾಡುವಾಗ ಮನಸ್ಸನ್ನು ಉಸಿರಾಟದ ಜತೆ ಜೋಡಿಸಲೇಬೇಕು. ಸದಾ ಉಸಿರಾಟವನ್ನು ಗಮನಿಸುತ್ತಾ ವ್ಯಾಯಾಮ ಅಭ್ಯಾಸ ಮಾಡಬೇಕು. ಯೋಗಶಾಸ್ತ್ರ ಹೇಳುವಂತೆ ಪ್ರಾಣಾಯಾಮ ಸಹಿತ ವ್ಯಾಯಾಮವು ಎಂದಿಗೂ ಪ್ರಶಸ್ತ.

ವ್ಯಾಯಾಮ ಮಾಡುವಾಗ ನಮ್ಮ ಉಸಿರಾಟದ ಹರಿವನ್ನು ಗಮನಿಸುತ್ತಾ, ಪ್ರತಿಯೊಂದು ಚಲನೆಯನ್ನೂ ಉಸಿರಾಟದ ಜತೆ ಜೋಡಿಸುತ್ತಾ ಮಾಡಬೇಕು. ಉದಾಹರಣೆಗೆ ಆಸನಗಳಲ್ಲಿ ಕೈಯನ್ನು ಎತ್ತುವಾಗ ಉಸಿರನ್ನು ಒಳಗೆ ತೆಗೆದುಕೊಳ್ಳುತ್ತಾ, ಕೈಯನ್ನು ಕೆಳಗೆ ಇಳಿಸುವಾಗ ಉಸಿರನ್ನು ಹೊರಗೆ ಬಿಡುತ್ತಾ ಮಾಡತಕ್ಕದ್ದು. ಇದೇ ರೀತಿ, ಬಗ್ಗುವಾಗ, ಏಳುವಾಗ, ಕಾಲುಗಳ ಚಲನೆಯಲ್ಲಿ, ಮಲಗುವಾಗ, ಕುಳಿತುಕೊಳ್ಳುವಾಗ- ಹೀಗೆ ವ್ಯಾಯಾಮದ ಪ್ರತಿಯೊಂದು ಚಲನೆಯನ್ನು ಸಹ ನಮ್ಮ ಉಸಿರಾಟದ ಜತೆಗೆ ಸಂಯೋಜಿಸಿಕೊಂಡು ಮಾಡಿದರೆ ವ್ಯಾಯಾಮದ ಸಂಪೂರ್ಣ ಲಾಭವನ್ನು ತೆಗೆದುಕೊಳ್ಳಬಹುದು. ಇದೇ ರೀತಿ, ವ್ಯಾಯಾಮದ ನಡುವೆ ಸ್ವಲ್ಪ ಸಮಯ ಕಣ್ಣು ಮುಚ್ಚಿ ಉಸಿರಾಟವನ್ನು ಗಮನಿಸಿ, ಉಸಿರಾಟವು ಸಹಜ ಸ್ಥಿತಿಗೆ ಮರಳುವ ತನಕ ವಿಶ್ರಮಿಸಿ ನಂತರ ವ್ಯಾಯಾಮ ಮುಂದುವರಿಸುವುದು ಕ್ಷೇಮ. ಅಂತೆಯೇ, ಸಂಪೂರ್ಣ ವ್ಯಾಯಾಮದ ಅಭ್ಯಾಸವಾದ ನಂತರ ವಿಶೇಷವಾಗಿ ಮಾಡುವ ಪ್ರಾಣಾಯಾಮದ ಮೂಲಕ ಶರೀರ-ಇಂದ್ರಿಯ-ಮನಸ್ಸುಗಳನ್ನು ಶಾಂತ ಸ್ಥಿತಿಗೆ ಮರಳುವಂತೆ ಮಾಡಿದ ನಂತರ, ದಿನನಿತ್ಯದ ಚಟುವಟಿಕೆಗಳನ್ನು ಪ್ರಾರಂಭಿಸುವುದು ಒಳ್ಳೆಯದು. ಈ ರೀತಿ ನಮ್ಮ ವ್ಯಾಯಾಮದ ದಿನಚರ್ಯೆಯನ್ನು ಪ್ರಾಣಾಯಾಮದ ಜತೆಗೆ ಅಭ್ಯಾಸ ಮಾಡಿದಾಗ ನಮ್ಮ ಆಯುವಿನ ನಾಲ್ಕು ಘಟಕಗಳಾದ ಶರೀರ-ಇಂದ್ರಿಯ-ಮನಸ್ಸು ಮತ್ತು ಆತ್ಮಗಳಿಗೆ ಸ್ವಾಸ್ಥ್ಯದ ಸಂಪತ್ತನ್ನು ತುಂಬಬಹುದು. ಆದ್ದರಿಂದ, ವ್ಯಾಯಾಮ ಮಾಡುವುದು ಮುಖ್ಯ. ಸರಿಯಾದ ರೀತಿಯಲ್ಲಿ ವ್ಯಾಯಾಮ ಮಾಡುವುದು ಅದಕ್ಕಿಂತ ಮುಖ್ಯ. ಆದರೆ, ಉಸಿರಾಟವನ್ನು ಗಮನಿಸುತ್ತಾ ಪ್ರಾಣಾಯಾಮ ಸಹಿತವಾದ ವ್ಯಾಯಾಮವನ್ನು ಮಾಡುವುದು ಅತಿಮುಖ್ಯ.

ಮೊದಲಿಗೆ, ನಮ್ಮ ದಿನನಿತ್ಯದ ಚಟುವಟಿಕೆಗಳಲ್ಲಿ ಮತ್ತು ನಮ್ಮ ವ್ಯಾಯಾಮದ ಅಭ್ಯಾಸದಲ್ಲಿ ಉಸಿರಾಟದ ಅರಿವನ್ನು ಬೆಳೆಸಿಕೊಳ್ಳೋಣ. ನಂತರ ಉಸಿರಾಟದ ಜತೆಗೆ ಸಂಯೋಜಿಸಿದ ಆಸನಗಳ ಅಭ್ಯಾಸವನ್ನು ಮಾಡಿ ಶರೀರವನ್ನು ಸಜ್ಜುಗೊಳಿಸೋಣ. ನಂತರ, ವಿಶಿಷ್ಟ ರೀತಿಯ ಪ್ರಾಣಾಯಾಮಗಳ ಅಭ್ಯಾಸವನ್ನು ಮಾಡಿ ತನ್ಮೂಲಕ ಸ್ವಾಸ್ಥ್ಯದ ಅತ್ಯುನ್ನತ ಅನುಭವವನ್ನು ಪಡೆದುಕೊಳ್ಳೋಣ. ಈ ನಿರ್ದಿಷ್ಟ ಗುರಿಸಾಧನೆಯ ಮೊದಲ ಹೆಜ್ಜೆಯೇ ನಾನು ಮೇಲೆ ಹೇಳಿದ ತ್ರಿಸೂತ್ರದ ಅಭ್ಯಾಸ. ಇದರೊಂದಿಗೆ ಇಂದೇ ಪ್ರಾರಂಭಿಸೋಣ ಪ್ರಾಣಾಯಾಮದ ಪ್ರಯಾಣ!

ನಿತ್ಯನೂತನವಾಗುತ್ತ ಸಾಗಿಬಂದಿರುವ ಮೂಲ ಸಂಸ್ಕೃತಿ: ವೀರಶೈವ ಸಂಸ್ಕೃತಿ

ಬಸವ ಮಂಟಪ

ರವಿ ಹಂಜ್
vveditoped@gmail.com

'ಹುಟ್ಟಿನಿಂದ ಜಾತಿ' ಎಂಬುದು ಆಗಷ್ಟೇ ಅಳವಡಿಸಿಕೊಂಡದ್ದು ಎಂಬ ವಿಶ್ಲೇಷಣೆಗೆ ಪೂರಕವಾಗಿ ಅಲ್ಲಮನು ಈ ವಚನದಲ್ಲಿ 'ಪುರಾತನ' ಚಾರಿತ್ರ್ಯದಲ್ಲಿ ಅಂದರೆ ಹಳೆಯ ವೃತ್ತಿಯಿಂದ ಜಾತಿ ವ್ಯವಸ್ಥೆಯನ್ನು ಪುರಸ್ಕರಿಸುತ್ತಾನೆ: ''ಆವ ಜಾತಿಯಾದಡೂ ಆಗಲಿ; ಪುರಾತನ ಚಾರಿತ್ರ್ಯದಲ್ಲಿ ನಡೆದು, ಗುರುಲಿಂಗ ಜಂಗಮಕ್ಕೆ ಅರ್ಥಪ್ರಾಣಾಭಿಮಾನಮಂ ಕೊಟ್ಟು, ಅಹಂಕಾರವಳಿದಿಹಂತಹ ಮಹಾತ್ಮರ ಬಾಯ ತಂಬುಲವ ಮೆಲುವೆ, ಬೀಳುಡಿಗೆಯ ಹೊದಿವೆ. ಅವರ ಪಾದರಕ್ಷೆಗಳೆರಡನೂ, ಮಂಡೆಯ ಮೇಲೆ ಹೊತ್ತುಕೊಂಡು ಬದುಕುವೆನಯ್ಯಾ. ಆ ಗಣಂಗಳ ದಾಸನ ದಾಸ ನಾನು, ಜನ್ಮ ಜನ್ಮದಲ್ಲಿ ಆಗುವೆ ಕಾಣಾ ಗುಹೇಶ್ವರಾ॥'' (ಸಮಗ್ರ ವಚನ ಸಂಪುಟ: 2, ವಚನದ ಸಂಖ್ಯೆ: 919).

ಸೊಡ್ಡಳ ಬಾಚರಸ ಸಹ ಈವರೆಗೆ ಎಲ್ಲಾ ಜಾತಿಯವರ ನಡುವೆ ವೈವಾಹಿಕ ಸಂಬಂಧಗಳಾಗುತ್ತಿದ್ದುದನ್ನು ಎತ್ತಿ ಹಿಡಿದು ಜಾತಿಯೊಳಗೇ ಮದುವೆಯಾಗಬೇಕೆಂಬ 'ಹುಟ್ಟಿನಿಂದ ಜಾತಿ'ಯ ಇನ್ನೊಂದು ಸ್ವರೂಪವನ್ನು ಹೀಗೆ ಪ್ರಶ್ನಿಸಿದ್ದಾನೆ: ''ಶಿಖಿ ಬ್ರಾಹ್ಮಣ, ನಯನ ಕ್ಷತ್ರಿಯ, ನಾಶಿಕ ಬಣಜಿಗ, ಅಧರ ಒಕ್ಕಲಿಗ, ಕರ್ಣ ಗೊಲ್ಲ, ಕೊರಳು ಕುಂಬಾರ, ಬಾಹು ಪಂಚಾಳ, ಅಂಗೈ ಉಪ್ಪಾರ, ನಖ ನಾಯಿಂದ, ಒಡಲು ಡೊಂಬ, ಬೆನ್ನು ಅಸಗ, ಚರ್ಮ ಬೇಡ, ಪೃಷ್ಠಸ್ಥಾನ ಕಬ್ಬಿಲಿಗ, ಒಳದೊಡೆ ಹೊಲೆಯ, ಮೊಣಕಾಲು ಈಳಿಗ, ಕಣಕಾಲು ಸಮಗಾರ, ಮೇಗಾಲು ಮಚ್ಚಿಗ, ಚಲಪಾದವೆಂಬ ಅಂಗಾಲು ಶುದ್ಧ ಮಾದಿಗ ಕಾಣಿರೊ! ಇಂತೀ ಹದಿನೆಂಟುಜಾತಿ ತನ್ನಲಿ ಉಂಟು. ಇವು ಇಲ್ಲಾಯೆಂದು ಜಾತಿಗೆ ಹೋರುವ ಅಜ್ಞಾನಿಗಳ ನಮ್ಮ ಸೊಡ್ಡಳದೇವರು ಮೆಚ್ಚನಯ್ಯಾ'' (ಸಮಗ್ರ ವಚನ ಸಂಪುಟ: 9, ವಚನದ ಸಂಖ್ಯೆ: 812).

ಚೆನ್ನಬಸವಣ್ಣ ಇನ್ನೂ ಸ್ಪಷ್ಟವಾಗಿ 'ಹುಟ್ಟಿನಿಂದ ಜಾತಿ' ಎಂಬುದು ಆಗಷ್ಟೇ ಹುಟ್ಟಿದ ನಿಯಮ ಎನ್ನುವಂತೆ ಅದನ್ನು ಜಾತಿ ಪರಿಕಲ್ಪನೆ ಎಂದು ಸ್ಪಷ್ಟವಾಗಿ ಹೇಳುತ್ತಾನೆ: ''ಸಾಧಕದೆಸೆಯಲ್ಲಿ ಕುಲವನರಸಬಹುದಲ್ಲದೆ, ಸಿದ್ಧದೆಸೆಯಲ್ಲಿ ಅರಸಲಹುದೆ? ಹಲವು ಜಾತಿಯ ಕಟ್ಟಿಗೆಯ ಸುಟ್ಟಲ್ಲಿ ಅಗ್ನಿಯೊಂದಲ್ಲದೆ ಅಲ್ಲಿ ಕಟ್ಟಿಗೆಗಳ ಕುರುಹು ಕಾಂಬುದೆ? ಶಿವಭಕ್ತಸಮಾವೇಶೇನ ಜಾತಿಪರಿಕಲ್ಪನಾ ಇಂಧನೇಷ್ವಗ್ನಿದಗ್ಧೇಷು ಕೋ ವಾ ಭೇದಃ ಪ್ರಕೀರ್ತ್ಯತೇ ಎಂದುದಾಗಿ, ಶಿವಜ್ಞಾನಸಿದ್ಧರಾದ ಶಿವಭಕ್ತರಲ್ಲಿ ಪೂರ್ವಜಾತಿಯನರಸುವ ಅರೆಮರುಳರನೇನೆಂಬೆ ಕೂಡಲಚೆನ್ನಸಂಗಮದೇವಾ'' (ಸಮಗ್ರ ವಚನ ಸಂಪುಟ: 3, ವಚನದ ಸಂಖ್ಯೆ: 1656).

ಹೀಗೆ ವೀರಶೈವ ಸಂಕಥನವು ವಚನ ಸಾಹಿತ್ಯದಲ್ಲಿ ಸ್ಪಷ್ಟವಾಗಿ ಅನಾವರಣಗೊಳ್ಳುತ್ತದೆ. ಇಂಥ ಸ್ಪಷ್ಟ ಚಿತ್ರಣವಿದ್ದರೂ ಇಲ್ಲಿಯವರೆಗೆ ಅದನ್ನು ಸಂಶೋಧಕರು ಏಕೆ ಕಂಡಿಲ್ಲವೋ ನಾನರಿಯೆ! ಕಾಯಕ ಮಹತ್ವ, ಸಾಮೂಹಿಕ ಲಿಂಗಧಾರಣೆ, ಶಿವದೀಕ್ಷೆ, ದಾಸೋಹದಂಥ ಸಮಾಜ, ಸಮೂಹದ ಕಾರ್ಯಕ್ರಮಗಳನ್ನು ಹಾಕಿಕೊಂಡು ಸಮರೋಪಾದಿಯಲ್ಲಿ ಪಂಥ ವಿಜಯ ಮೆರೆಯುತ್ತಿದ್ದ ಇಂಥ ಶರಣ ಸೇನೆಗೆ ತಮ್ಮ ಪಂಥದ ಹಿರಿಯರ ಹುಟ್ಟಿನಿಂದ ಜಾತಿ ನಿಯಮ ಬರಸಿಡಿಲಿನಂತೆ ಬಂದೆರಗಿರಬೇಕು. ಹುಟ್ಟಿನಿಂದ ಮಾತ್ರ ಪಂಥ ವಿಸ್ತರಣೆಯಾದರೆ ತಮ್ಮೆಲ್ಲಾ ಹೋರಾಟಗಳು, ರೂಪುರೇಷೆಗಳು, ನಂಬಿಕೆಗಳೇ ಬುಡಮೇಲಾದಂತಾಗಿ ಈ ನವನೀತಿಯ ವಿರುದ್ಧ ಅವರೆಲ್ಲಾ ಒಗ್ಗಟ್ಟಾಗಿ ಸಿಡಿದು ನಿಂತಿದ್ದಾರೆ. ಆ ಹಿನ್ನೆಲೆಯಲ್ಲಿ 'ಹುಟ್ಟಿನಿಂದ ಜಾತಿ' ನಿಯಮವನ್ನು ಅವಹೇಳಿಸುವ ವಚನಗಳು ಹೀಗಿವೆ:

''ಮಾಯಾಯೋನಿಯಲ್ಲಿ ಹುಟ್ಟುವ ಮರುಳರೆಲ್ಲರು ಮಹಾಜ್ಞಾನಿಗಳಪ್ಪರೆ? ಕಾಮವಿಕಾರಕ್ಕೆ ತಿರುಗುವ ಜೀವಗಳ್ಗಳು ಅನಾದಿವಸ್ತುವನರಿವರೆ? ಮಾತಿನಲ್ಲಿ ಮಹಾಜ್ಞಾನಿಗಳೆಂಬ ವೇಷಧಾರಿಗಳ ಕಂಡು ನಾಚುವೆ ಕಾಣಾ ಅಮುಗೇಶ್ವರಾ''- ಅಮುಗೆ ರಾಯಮ್ಮ (ಸಮಗ್ರ ವಚನ ಸಂಪುಟ: 5, ವಚನದ ಸಂಖ್ಯೆ: 678).

ಅಕ್ಕಮಹಾದೇವಿಯು ಶೈವ ಎರಡಾಯಿತು ಎಂಬ ತನ್ನ ವಚನದಲ್ಲಿ ಶೈವಪಂಥ ಕೂಡಾ ಹುಟ್ಟಿನಿಂದ ಜಾತಿಯನ್ನು ಅಪ್ಪಿಕೊಂಡುದುದನ್ನು ಹೇಳಿದ್ದಾಳೆ (ವರ್ತಮಾನಕಾಲ ಸೂಚಕವನ್ನು ವಿಶೇಷವಾಗಿ ಗಮನಿಸಿ): ''ಜಾತಿಶೈವ-ಅಜಾತಿಶೈವವೆಂದೆರಡು ಪ್ರಕಾರವಾಗಿಹುದಯ್ಯ ಜಾತಿಶೈವರೆಂಬವರು ಶಿವಂಗೆ ಭೋಗಸ್ತ್ರೀಯರಯ್ಯ ಅಜಾತಿಶೈವರೆಂಬವರು ಶಿವಂಗೆ ಕುಲಸ್ತ್ರೀಯರಯ್ಯ...'' 'ಹುಟ್ಟಿನಿಂದ ಜಾತಿ' 12ನೇ ಶತಮಾನದ ಉತ್ತರಾರ್ಧದಲ್ಲಿಯೇ ಆರಂಭವಾಯಿತೆನ್ನುವುದನ್ನು ಈ ವಚನ ದೃಢಪಡಿಸುತ್ತದೆ. ಇದೇ ಅಭಿಪ್ರಾಯದ ವಚನವನ್ನು ರೇಚದ ಬಂಕಣ್ಣ ಹೀಗೆ ಹೇಳಿದ್ದಾನೆ: ''ಜಾತಿ ಶೈವರು ಅಜಾತಿ ಶೈವರೆಂದು ಎರಡು ಪ್ರಕಾರವಾಗಿಹರಯ್ಯಾ. ಜಾತಿ ಶೈವರೆಂಬವರು ಶಿವಂಗೆ ಭೋಗಸ್ತ್ರೀಯರಯ್ಯಾ. ಅಜಾತಿ ಶೈವರೆಂಬವರು ಶಿವಂಗೆ ಕುಲಸ್ತ್ರೀಯರಯ್ಯಾ. ಜಾತಿ ಶೈವರೆಂಬವರು ಸರ್ವಭೋಗಂಗಳ ಬಯಸಿ ಮಾಡುವರಾಗಿ, ದ್ವಾರೇ ಯಸ್ಸಚ ಮಾತಂಗೋ ವಾಯುವೇಗ ತುರಂಗಮಃ । ಪೂರ್ಣೇಂದು ವದನಾ ನಾರೀ ಶಿವಪೂಜಾ ವಿಧೇಃ ಫಲಂಃ ॥ ಎಂದುದಾಗಿ, ಇವು ಜಾತಿಶೈವರಿಗೆ ಕೊಟ್ಟ ಭೋಗಂಗಳಯ್ಯಾ. ಅಜಾತಿಶೈವರು ಗುರುಲಿಂಗ ಜಂಗಮಕ್ಕೆ ತನುಮನಧನವ ನಿವೇದಿಸಿ, ಸರ್ವಸೂತಕರಹಿತರಾಗಿಹರಯ್ಯಾ. ಅಹಂ ಮಾಹೇಶ್ವರ ಪ್ರಾಣೇ ಮಾಹೇಶ್ವರೋ ಮಮ ಪ್ರಾಣಃ । ತಥೈಕಂ ನಿಷ್ಕ್ರೀಯಂ ಭೂಯಾದನ್ಯಲ್ಲಿಂಗೈಕ್ಯಮೇವ ಚ ॥ ಇದು ಕಾರಣ, ಸರ್ವೇಶ್ವರ ಚೆನ್ನಮಲ್ಲಿಕಾರ್ಜುನಯ್ಯನು ಭಕ್ತಿಕಾಯನೆಂಬೈಕ್ಯಪದವನು ಅಜಾತಿಶೈವರಿಗೆ ಕೊಡುವನಯ್ಯಾ'' (ಸಮಗ್ರ ವಚನ ಸಂಪುಟ: 9, ವಚನದ ಸಂಖ್ಯೆ: 1153).

ಈ ಎಲ್ಲಾ ವಚನಗಳು ಬಹುಪಾಲು ವರ್ತಮಾನ ಕಾಲ ಸೂಚಕದಲ್ಲಿರುವುದು ಏನನ್ನು ಹೇಳುತ್ತವೆ ಎನ್ನುವುದು ಸುಸ್ಪಷ್ಟ. ಹೀಗೆ ಬಸವಣ್ಣ, ಅಕ್ಕಮಹಾದೇವಿ, ಅಲ್ಲಮ, ಉರಿಲಿಂಗಪೆದ್ದಿ, ಅಂಬಿಗರ ಚೌಡಯ್ಯ ಮುಂತಾದವರ ಉತ್ತರಾರ್ಧದ ವಚನ 'ಗಳೆಲ್ಲಾ ಕಾಯಕ ಮಹತ್ವ, ಹುಟ್ಟಿನಿಂದಾದ ಜಾತಿ, ಗೋಮಾಂಸಭಕ್ಷಕರನ್ನು ಕೀಳುಜಾತಿಯವರನ್ನಾಗಿ ವರ್ಗೀಕರಿಸಿದ ವರ್ಗೀಕರಣ, ಜಾತಿವ್ಯವಸ್ಥೆಗಳು ಸೃಷ್ಟಿಸಿದ ಅಸಮಾನತೆ, ಹೇರಲ್ಪಟ್ಟ ಉದ್ಯೋಗಗಳು, ಮೀಸಲಾದ ಉದ್ಯೋಗಗಳು, ಸೀಮಿತಗೊಂಡ ಅವಕಾಶಗಳು, ಕಾಯಕದಿಂದ ಅಸ್ಮಿತೆ ಕಂಡುಕೊಳ್ಳುತ್ತಿದ್ದುದು ನಿಕಾಯವಾದದ್ದು ಮುಂತಾದ ಸಾಮಾಜಿಕ ಸ್ಥಿತ್ಯಂತರಗಳ ಕುರಿತಾಗಿವೆ.

ಒಟ್ಟಾರೆ ಶರಣ ಚಳವಳಿಯನ್ನು ಹೀಗೆ ಎರಡು ಭಾಗಗಳಾಗಿ ನೋಡಬಹುದು. ಚಳವಳಿಯ ಪೂರ್ವಾರ್ಧ ಪಂಥ ವಿಸ್ತರಣೆ, ಜೈನಪಂಥ ವಿರೋಧವಾದರೆ, ಉತ್ತರಾರ್ಧದ ಕಲ್ಯಾಣಕ್ರಾಂತಿಯ ಭಾಗ ಆಗಷ್ಟೇ ಹೇರಿದ್ದ ಹುಟ್ಟಿನಿಂದ ಜಾತಿಯನ್ನು ವಿರೋಧಿಸುವುದಾಗಿದ್ದಿತು. ಹಾಗಾಗಿಯೇ ಕಲ್ಯಾಣ ಕ್ರಾಂತಿ ಪಂಥವೊಂದರ ಅಂತರಿಕ ಕ್ರಾಂತಿಯಾದರೂ ಸಾಮಾಜಿಕ ಕ್ರಾಂತಿ ಎಂದೆನಿಸುವುದು. ಅಂಥ ಪ್ರಬಲ ಕಾರಣವಿದ್ದುದರಿಂದಲೇ ಕ್ರಾಂತಿಯೆನ್ನಿಸುವ ಸಾಮೂಹಿಕ ಸಂಘಟನೆ ಮತ್ತು ಬೆಂಬಲ ಅದಕ್ಕೆ ಸಾಧ್ಯವಾಗಿದ್ದುದು. ಹುಟ್ಟಿನಿಂದ ಜಾತಿ ಸಲ್ಲದೆಂಬುದನ್ನು ವಿರೋಧಿಸಲೆಂದೇ ಸಾಮೂಹಿಕ ಲಿಂಗ ಕಟ್ಟುವ, ಕಾಯಕವೇ ಕೈಲಾಸವೆನ್ನುವ, ಅಂತ್ಯಜರನ್ನು ಆದಿಮರೆಂಬುವ, ಊರ ಹೊರಗಿರಬೇಕೆನಿಸಿಕೊಂಡವರನ್ನು ಒಳಗೊಳ್ಳುವ, ಮೋಕ್ಷಕ್ಕೆ ಅರ್ಹರಲ್ಲವೆನಿಸಿಕೊಂಡವರನ್ನು ಆರಾಧಿಸುವಂಥ ಕ್ರಿಯಾತ್ಮಕ ಪ್ರತಿಭಟನೆಗಳು ಚಳವಳಿಯ ಭಾಗಗಳಾದವು.

ಭಾಗ 2

ಇನ್ನು ಅಂತರ್ಜಾತಿ ವಿವಾಹವಾಗುವುದನ್ನು ನಿರ್ಬಂಧಿಸಿ ಅಂಥ ಸಂಬಂಧಗಳೇರ್ಪಟ್ಟಾಗ ಅವರ ಮಕ್ಕಳನ್ನು ಅಂತ್ಯಜರೆಂದು ವರ್ಗೀಕರಿಸುವುದನ್ನು ವಿರೋಧಿಸುವುದೇ ಬಸವಣ್ಣನ ಖ್ಯಾತ ವಚನದ ಹಿನ್ನೆಲೆಯಾಗಿದೆ: ''ಚೆನ್ನಯ್ಯನ ಮನೆಯ ದಾಸನ ಮಗನು, ಕಕ್ಕಯ್ಯನ ಮನೆಯ ದಾಸಿಯ ಮಗಳು, ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ, ಸಂಗವ ಮಾಡಿದರು. ಇವರಿಬ್ಬರಿಗೆ ಹುಟ್ಟಿದ ಮಗ ನಾನು, ಕೂಡಲ ಸಂಗಮದೇವ ಸಾಕ್ಷಿಯಾಗಿ'' (ಸಮಗ್ರ ವಚನ ಸಂಪುಟ: 1, ವಚನದ ಸಂಖ್ಯೆ: 346). ಈ ವಚನದಲ್ಲಿ ಬಸವಣ್ಣ, ಹೀಗೆ ಚೆನ್ನಯ್ಯನ ದಾಸನ ಮಗನಿಗೂ ಕಕ್ಕಯ್ಯನ ದಾಸಿಯ ಮಗಳಿಗೂ ಸಂಬಂಧವುಂಟಾಗಿ ನಾನು ಹುಟ್ಟಿದ್ದೇನೆ, ಹಾಗಾಗಿ ನನ್ನನ್ನು ಹುಟ್ಟಿನ ಕಾರಣ ಅಂತ್ಯಜನೆನ್ನುವಿರೇ? ಎಂಬರ್ಥದಲ್ಲಿ ಪ್ರಶ್ನಿಸಿದ್ದಾನೆ.

ಈ ನೂತನ ವೈವಾಹಿಕ ಕಟ್ಟಳೆಯನ್ನು ವಿರೋಧಿಸುವ ಪ್ರತಿಭಟನೆಯ ಅಂಗವಾಗಿ ಶರಣರು ಮಧುವಯ್ಯನ ಮಗಳು ಮತ್ತು ಹರಳಯ್ಯನ ಮಗನ ಮದುವೆಯನ್ನು ಹಮ್ಮಿಕೊಂಡರು. ಈ ಕುರಿತು ಸಿದ್ಧರಾಮೇಶ್ವರನ ಈ ವಚನದಲ್ಲಿ 'ಹುಟ್ಟಿನಿಂದ ಜಾತಿ'ಯೇ ಅಧಿಕವೆಂದು ಹೋರಾಡುವ ಆದ್ಯರೇ ಕೇಳಿರಿ ಎಂಬ ಮತ್ತದೇ ವರ್ತಮಾನಕಾಲದಲ್ಲಿರುವ ವಾಚ್ಯವನ್ನು ಗಮನಿಸಬಹುದು: ''ಕುಲದಿಂದಧಿಕವೆಂದು ಹೋರಾಡುವ ಅಣ್ಣಗಳಿರಾ, ಕೇಳಿರಯ್ಯಾ. ಬ್ರಾಹ್ಮಣನವ ಮಧುವಯ್ಯ, ಚಂಡಾಲನವ ಹರಳಯ್ಯ, ದೂರ್ವಾಸನವ ಮಚ್ಚಿಗ, ಊರ್ವಶಿಯಾಕೆ ದೇವಾಂಗನೆ, ಚಂಡಾಲನವ ಪರಾಶರ, ಕುಸುಮಗಂಧಿಯಾಕೆ ಕಬ್ಬಿಲಗಿತ್ತಿ. 'ಜಪತಸ್ತಪತೋ ಗುಣತಃ' ಕಪಿಲಸಿದ್ಧಮಲ್ಲಿಕಾರ್ಜುನಾ ಕೇಳಾ, ಕೇದಾರಯ್ಯ'' (ಸಮಗ್ರ ವಚನ ಸಂಪುಟ: ವಚನದ ಸಂಖ್ಯೆ: 1933).

ಹೀಗೆ ಹಮ್ಮಿಕೊಂಡ ಈ ಕಲ್ಯಾಣವು ಕಲ್ಯಾಣ ಕ್ರಾಂತಿಗೆ ಮಂಗಳ ಹಾಡಿತು. ತಮ್ಮ ಸಾಮಾಜಿಕ ಹೋರಾಟದೊಂದಿಗೆ ರಾಜಕೀಯ ಹೋರಾಟವನ್ನೂ ತಳುಕು ಹಾಕಿಕೊಂಡು ಬಿಜ್ಜಳನನ್ನು ಕೊಂದಿದ್ದ ಶರಣರಿಗೆ ತಕ್ಕ ಶಾಸ್ತಿ ಮಾಡಲು ಇದು ಬಿಜ್ಜಳನ ಮಗನಿಗೆ ಅವಕಾಶವನ್ನೂ ಒದಗಿಸಿತು. ಶರಣರನ್ನು ಸೋವೇಶನ ಸೈನ್ಯ ಮತ್ತು ಆದ್ಯರ ನವನಿಯಮಗಳ ಒತ್ತಡಗಳು ಸಂಪೂರ್ಣವಾಗಿ ಆಕ್ರಮಿಸಿಕೊಂಡು ಬಿಟ್ಟವು. ಜಗತ್ತಿನ ಎಲ್ಲಾ ಕ್ರಾಂತಿಕಾರಿಗಳೂ ತಮ್ಮ ಕ್ರಾಂತಿಯ ವೈರುಧ್ಯ ಫಲವನ್ನು ಕಂಡಾಗ ಉಂಟಾಗುವ ಹತಾಶೆ, ನೋವು ಮತ್ತು ಅವರುಗಳು ತೆಗೆದುಕೊಳ್ಳುವ ಅಂತಿಮ ನಿರ್ಣಯದಂತೆಯೇ, ''ಅವಧಿ ಅಳಿಯಿತ್ತು ವ್ಯವಧಾನ ಉಳಿಯಿತ್ತು. ನಿಜವೆ ನಿಜವ ನೊಡಗೂಡಿತ್ತು ಕೇಳಾ ಬಸವಣ್ಣ. ಕಲಿಯುಗದಲ್ಲಿ ಮುಂದೆ ಇರಬಾರದು ನಿಜ ಶರಣಂಗೆ ನಡೆ ನೀನು ಕಪ್ಪಡಿಯ ಸಂಗಯ್ಯನಲ್ಲಿ ಒಡಗೂಡು. ಉಳುಮೆಯಲ್ಲಿ ನಿಜವನೆಯ್ದು ನಡೆ, ಚೆನ್ನಬಸವಣ್ಣಾ. ಮಹವ ನೊಡಗೂಡು ಮಡಿವಾಳಯ್ಯ. ಸೊಡ್ಡಳ ಬಾಚರಸರು ಮೊದಲಾದ ಪ್ರಮಥರೆಲ್ಲರು ನಿಜವನೆಯ್ದುವುದು ನಿರ್ವಯಲ ಸಮಾಧಿಯಲ್ಲಿ. ಬಗಿದು ಹೋಗಿ ಲಿಂಗದೊಳಗೆ ಹೊಗುವರೆಲ್ಲರೂ! ನಡೆಯಿರಿ ಕಾಯವೆರಸಿ ಕೈಲಾಸಕ್ಕೆ, ಕಾಯಸಹಿತ ಎಯ್ದುವುದು. ನಿಮಗೆಲ್ಲರಿಗೆಯೂ ಉಪದೇಶಮಂತ್ರ ತಪ್ಪದು. ನಮಗೆ ಕದಳಿ ಯಲ್ಲಿ ಹೊಕ್ಕು ನಿಜದಲ್ಲಿ ಒಡಗೂಡುವ ಪರಿಣಾಮ. ಇದು ನಮ್ಮ ಗುಹೇಶ್ವರಲಿಂಗದ ಅಣತಿ ನಿಮಗೆಲ್ಲರಿ ಗೆಯೂ'' (ಸಮಗ್ರ ವಚನ ಸಂಪುಟ: 2, ವಚನದ ಸಂಖ್ಯೆ: 847).

ಅಲ್ಲಮನು ಶೂನ್ಯಪೀಠಾಧ್ಯಕ್ಷನಾಗಿ ತನ್ನ ಶಿವಗಣಂಗಳಿಗೆ ಬಯಲಾಗಲು ನೇರ ನಿರ್ದೇಶನವನ್ನು ಕೊಟ್ಟು ಚಳವಳಿಯನ್ನು ಬರಖಾಸ್ತುಗೊಳಿಸುವಲ್ಲಿಗೆ ಕಲ್ಯಾಣಕ್ರಾಂತಿ ಪರಿಸಮಾಪ್ತಿಗೊಳ್ಳುತ್ತದೆ. ಅಲ್ಲಿಂದ ಮುಂದಾದ ಘಟನಾವಳಿಗಳೊಂದಿಗೆ ಶರಣ ಕ್ರಾಂತಿಯು ಅಷ್ಟೇ ಕ್ಷಿಪ್ರವಾಗಿ ಅವಸಾನಗೊಂಡು ಭಿನ್ನರೊಂದಿಗೆ ಒಂದಾಗಿ 'ಹುಟ್ಟಿನಿಂದ ಜಾತಿ'ಯನ್ನು ಅಪ್ಪಿಕೊಂಡು ಮತ್ತೆ ಮೂಲಸ್ಥಿತಿಗೆ ಮರಳಿ ಜೈನರನ್ನು ಗುರಿಯಾಗಿಸಿಕೊಂಡಿತು.

ಹೀಗೆ ವಚನಗಳು ಕೇವಲ ನೀತಿಯನ್ನಲ್ಲದೆ ಅಂದಿನ ಕಾಲಘಟ್ಟದ ಪ್ರಾಗೈತಿಹಾಸಿಕ, ಸಾಮಾಜಿಕ, ರಾಜಕೀಯದ ಕುರುಹು ಪುರಾವೆಗಳನ್ನು ಸ್ಪಷ್ಟವಾಗಿ ಕಟ್ಟಿಕೊಡುತ್ತವೆ. ಸರಳವಾಗಿರುವ ಇಂಥ ವಚನ ಸಾಹಿತ್ಯದ ಜಾಡನ್ನು ಹಿಡಿದು ಸಾಗಿದರೆ ವಚನಕಾರರ ಮನಸ್ಥಿತಿಯನ್ನೂ ಅರಿಯಬಹುದಾದಷ್ಟು ಸುಸ್ಪಷ್ಟವಾದ ಚಿತ್ರಣ ಸಿಗುತ್ತದೆ. ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು ಎಂಬುದರ ಸ್ಫಟಿಕ ಸದೃಶ ಸ್ಪಷ್ಟತೆ, ನುಡಿದರೆ ಮುತ್ತಿನಹಾರದಂತಿರಬೇಕು ಎಂಬುದರ ಮುತ್ತಿನಹಾರವ ಪೋಣಿಸಿದಂತಿರುವ ಸಂಕಥನದ ಸಾಹಿತ್ಯ ಪ್ರಕಾರವು ವಚನಸಾಹಿತ್ಯವಾಗಿದೆ. ಇಂಥ ಸ್ಪಷ್ಟ ಸಂಕಥನವನ್ನು ನಾವೇಕೆ ಈ ಮೊದಲೇ ಅರಿಯಲಿಲ್ಲ?! ಏಕೆಂದರೆ ಎಲ್ಲಾ ಕನ್ನಡ ಭಾಷಾ ಪಂಡಿತ ಸಂಶೋಧಕರೂ ರವಿಯಾಗದೆ ಕವಿಗಳಾಗಿದ್ದರು. ಉದಾಹರಣೆಗೆ ತುರುಗಾಹಿ ರಾಮಣ್ಣನ, ''ಬಂದಿತ್ತು ದಿನ ಬಸವಣ್ಣ ಕಲ್ಲಿಗೆ ಚನ್ನಬಸವಣ್ಣ ಉಳುವೆಯಲ್ಲಿಗೆ ಪ್ರಭು ಅಕ್ಕ ಕದಳಿದ್ವಾರಕ್ಕೆ ಮಿಕ್ಕಾದ ಪ್ರಮಥರೆಲ್ಲರೂ ತಮ್ಮ ಲಕ್ಷ್ಯಕ್ಕೆ ನಾ ತುರುವಿನ ಬೆಂಬಳಿಯಲ್ಲಿ ಹೋದ ಮರೆಯಲ್ಲಿ ಅಡಗಿಹರೆಲ್ಲರು ಅಡಗಿದುದ ಕೇಳಿ ನಾ ಗೋಪತಿನಾಥ ವಿಶ್ವೇಶ್ವರಲಿಂಗದಲ್ಲಿಯೆ ಉಡುಗುವೆನು'' ವಚನದಲ್ಲಿ 'ಬಸವಣ್ಣ ಕಲ್ಲಿಗೆ' ಎಂಬ ಸಾಲಿನ ಅರ್ಥ ಬಸವಣ್ಣ ಸಮಾಧಿಗೆ ಎಂದು. ಆದರೆ ಇದನ್ನು ಖ್ಯಾತ ವಚನಯಾನ ಸಂಶೋಧಕರೊಬ್ಬರು ಕಲ್ಲಿಗೆ ಎಂಬುದು ಇನ್ನೂ ಯಾರೂ ಒಡೆಯಲಾಗದ ಒಡಪು ಎಂದು ಭಾವುಕ ಕವಿಯಾಗಿಬಿಟ್ಟಿದ್ದಾರೆ. ಸಮಾಧಿ ಮಾಡಿ ಗುರುತಿಗೆ ಕಲ್ಲಿಡುವುದನ್ನು ದನಗಾಹಿಯ ಆಡುನುಡಿಯಲ್ಲಿ ಕಲ್ಲಿಗೆ ಎಂಬುದು ಅದ್ಯಾವ ಅಮಲಿನ ಒಡೆಯ ಲಾಗದ ಒಗಟೋ ನಾನರಿಯೆ!

ಇರಲಿ, ಶರಣರ ಕ್ರಾಂತಿಯನ್ನು ಮತ್ತು ವಚನಗಳನ್ನು ಇತಿಹಾಸದ ಒಂದು ಕಾಲದ ಪರಿಮಿತಿಗೆ ಸೀಮಿತಗೊಳಿಸಿ ಅಥವಾ ಪೂರ್ವಗ್ರಹಗಳ ದೃಷ್ಟಿಕೋನದಿಂದ ಮಾತ್ರ ಈವರೆಗೆ ನೋಡಲಾಗಿದೆ. ಇತಿಹಾಸವನ್ನು ಸಮಗ್ರವಾಗಿ ಗ್ರಹಿಸಿ ತೂಲಿಸಿ ವಿಶ್ಲೇಷಿಸಿ ಒರೆಗೆ ಹಚ್ಚುವ ಸಂಶೋಧನೆಗಳು ಈ ವಿಷಯದಲ್ಲಿ ನಡೆದೇ ಇಲ್ಲವೆನ್ನಬಹುದು. ವಚನ ಮತ್ತು ಶರಣ ಸಂಸ್ಕೃತಿಯ ಬಗ್ಗೆ ಈವರೆಗೆ ನಡೆದಿರುವ ಯಾವುದೇ ಸಂಶೋಧನೆಗಳಲ್ಲಿಯೂ ಈ ರೀತಿಯ ಹೊಳಹು ಸಿಕ್ಕಿಲ್ಲದಿರುವುದಕ್ಕೆ ನಮ್ಮ ಸಂಶೋಧನೆಗಳ ವೈಧಾನಿಕತೆಯ ತೊಡಕುಗಳ ಕಾರಣವಿರಬಹುದು. ಸ್ವಾತಂತ್ರ್ಯಪೂರ್ವ ಭಾರತದಲ್ಲಿನ ಸಂಶೋಧಕರು ಸಮಗ್ರವಾಗಿ ಆಕರಗಳನ್ನು ಪರಿಗಣಿಸಿ ಸಂಶೋಧನ ವೈಧಾನಿಕತೆಗಳನ್ನು ಅಳವಡಿಸಿಕೊಂಡಿರುವುದು ಗೋವಿಂದ ಪೈಗಳಂಥ ಪಂಡಿತರ ಸಂಶೋಧನೆಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಆದರೆ ಸ್ವಾತಂತ್ರ್ಯೋತ್ತರ ಸಂಶೋಧಕರಲ್ಲಿ 'ಹೀಗಿದ್ದರೆ ಹೇಗೆ' (What if) ಎಂಬ ವೈಧಾನಿಕತೆ ಕ್ಷೀಣಿಸುತ್ತ 'ಅದು ಹೀಗೆಯೇ' ಎಂದು ಸಾಗಿಬಂದಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಕನ್ನಡ ಸಂಶೋಧನ ನೆಲೆಯಲ್ಲಿ ಬಿ.ಎಲ್.ರೈಸ್ ನಂತರದ ಗೋವಿಂದ ಪೈ, ವೆಂಕಣ್ಣಯ್ಯ, ಶಂ.ಬಾ.ಜೋಷಿ, ಆರ್.ಜಿ.ದೀಕ್ಷಿತ್, ರಾಮಸ್ವಾಮಿ ಐಯಂಗಾರ್ ಮುಂತಾದವರ ಪರಂಪರೆಯನ್ನು ಸಮರ್ಥವಾಗಿ ಮುನ್ನಡೆಸುವಲ್ಲಿ ಸ್ವತಂತ್ರ ಭಾರತದಲ್ಲಿ ಏಕೀಕರಣಗೊಂಡ ಕರ್ನಾಟಕದ ಸಂಶೋಧನ ಪರಂಪರೆ ನಿಸ್ಸಂಶಯವಾಗಿ ಶೂನ್ಯ ಸಂಶೋಧನೆಯಾಗಿದೆ.

ಎಲ್ಲಾ ಪ್ರಕ್ಷಿಪ್ತ, ವಿಕ್ಷಿಪ್ತ, ವಿಪ್ಲವಗಳ ನಡುವೆಯೂ ವಚನ ಸಾಹಿತ್ಯವು ತನ್ನ ವರ್ತಮಾನದ ಇತಿಹಾಸವನ್ನು ಸ್ಪಷ್ಟವಾಗಿ ಕಟ್ಟಿಕೊಟ್ಟಿದೆ. ಅದನ್ನು ಗುರುತಿಸುವಲ್ಲಿ ಸಂಶೋಧಕರು ಸೋತಿದ್ದಾರೆ. ಅನುಭವ ಮಂಟಪದ ಚರ್ಚೆಯ ದಾಖಲೆಗಳೇ ವಚನಗಳು ಎಂಬ ಸ್ಪಷ್ಟ ತಿಳಿವಳಿಕೆ ಇದ್ದರೂ ಅವುಗಳನ್ನು ಹಾಗೆ ಪರಿಗಣಿಸಿ ಚರ್ಚೆಯ ವಿಷಯವನ್ನು ಅರಿಯದೆ ಧರ್ಮ, ಧರ್ಮಗ್ರಂಥ ಇತ್ಯಾದಿಯಾಗಿ ಸಂಶೋಧಕರು ದಿಕ್ಕು ತಪ್ಪಿರುವುದು ಸಹ ಸ್ಫಟಿಕಸದೃಶ ಸೋಲಾಗಿದೆ.

ಒಟ್ಟಾರೆ ಬಸವಣ್ಣ ಮತ್ತವರ ಸಮಕಾಲೀನ ಶರಣರು ಸನಾತನವಾಗಿ ಬಂದಿದ್ದ ಕರ್ಮ (ಕಾಯಕ) ಮತ್ತು ಜ್ಞಾನ (ಅರಿವು) ಆಧಾರಿತವಾಗಿ ನಿರ್ಧಾರವಾಗುತ್ತಿದ್ದ ಜಾತಿಯನ್ನು ಬೆಂಬಲಿಸಿ ಹುಟ್ಟಿನಿಂದ ಜಾತಿ ಎಂಬ ನೂತನ ಬದಲಾವಣೆಯನ್ನು ವಿರೋಧಿಸಿದ್ದರು. ಆದರೆ ಅದನ್ನು ಇಲ್ಲಿಯವರೆಗಿನ ಸಂಶೋಧನೆಗಳು ಬಸವಣ್ಣನವರು ಸನಾತನವಾಗಿ ಬಂದಿದ್ದ 'ಹುಟ್ಟಿನಿಂದ ಜಾತಿ' ಪದ್ಧತಿಯನ್ನು ವಿರೋಧಿಸಿದ್ದರು ಎನ್ನುತ್ತವೆ. ಕ್ಷಿಪ್ರ ಕ್ರಾಂತಿಗಳಿಗೆ ಕ್ಷಿಪ್ರವಾಗಿ ತರಲಾಗುವ ಬದಲಾವಣೆಗಳು ಪ್ರಮುಖ ಕಾರಣವಾಗಿರುತ್ತವೆಯೇ ಹೊರತು ಶತಮಾನಗಳಿಂದ ಆಚರಣೆಯಲ್ಲಿರುವ ಆಚರಣೆಗಳಲ್ಲ, ಹಾಗಾಗಿ ಕಲ್ಯಾಣ ಕ್ರಾಂತಿ ಎಂಬ ಕ್ಷಿಪ್ರಕ್ರಾಂತಿ ಉಂಟಾಗಿದ್ದು 'ಹುಟ್ಟಿನಿಂದ ಜಾತಿ' ಎಂಬ ಕ್ಷಿಪ್ರ ಬದಲಾವಣೆಯ ಕಾರಣದಿಂದಲೇ! ತನ್ನ ಪಂಥದ ಯಾವ ಮೌಲ್ಯಗಳನ್ನು ಮೆಚ್ಚಿ ವೀರಶೈವ ಪಂಥವನ್ನು ಪಸರಿಸುತ್ತಿದ್ದನೋ, ಅದೇ ಪಂಥವೀಗ ತಮ್ಮ ವಿರೋಧಿಗಳಂತೆಯೇ 'ಹುಟ್ಟಿನಿಂದ ಜಾತಿ'ಯನ್ನು ಅಳವಡಿಸಿಕೊಂಡಿದ್ದುದು ಬಸವಣ್ಣನಿಗೆ ಮರ್ಮಾಘಾತವನ್ನುಂಟುಮಾಡಿದ್ದಿತು.

'ಹುಟ್ಟಿನಿಂದ ಜಾತಿ'ಯನ್ನು ವಚನಚಳವಳಿಯಷ್ಟು ಪ್ರಬಲವಾಗಿ ವಿರೋಧಿಸಿ ಸನಾತನವಾಗಿದ್ದ 'ವೃತ್ತಿಯಿಂದ ಜಾತಿ'ಯ ನಿಯಮವೇ ಬೇಕೆಂದು 'ಕಾಯಕವೇ ಕೈಲಾಸ'ವೆಂಬ ಉದ್ಘೋಷದೊಂದಿಗೆ ಉಗ್ರವಾಗಿ ಹೋರಾಡಿದಷ್ಟು ಇನ್ಯಾವ ಚಳವಳಿಯೂ ಭಾರತದ ಇತಿಹಾಸದಲ್ಲಿಯೇ ಹೋರಾಡಿಲ್ಲ ಎಂಬುದು ಗಮನಾರ್ಹ. ಸನಾತನ ವರ್ಣಾಶ್ರಮ ಪದ್ಧತಿಯೇ ಸರಿಯೆಂದು ಹೋರಾಡಿದ ಈ ಏಕೈಕ ಚಳವಳಿ ಇಡೀ ದೇಶಕ್ಕೆ ಮಾದರಿ! ಆದರೆ ಇದನ್ನು ಕುದುರೆಯ ಕಣ್ಪಟ್ಟಿ ತೊಟ್ಟಿದ್ದ ಸಂಶೋಧಕರು ಜನಾಂಗೀಯ ದ್ವೇಷಕ್ಕೆ ತಿರುಗಿಸಿ ಶೂನ್ಯವಾಗಿಸಿಬಿಟ್ಟಿದ್ದಾರೆ.

ವೀರಶೈವದ ಈ ಸಮಾಜೋಧಾರ್ಮಿಕ ಸ್ಥಿತ್ಯಂತರದ ಸಾಕ್ಷ್ಯ ಸುಸ್ಪಷ್ಟವಾಗಿ ವಚನಗಳಲ್ಲಿ ಅಡಕವಾಗಿದೆ. ಪಂಥ ಶ್ರೇಷ್ಠತೆ, ಪರಪಂಥ ದ್ವೇಷ, ವೃತ್ತಿಯಿಂದ ಜಾತಿಪರತೆ ಮತ್ತು ಹುಟ್ಟಿನಿಂದ ಜಾತಿ ವಿರೋಧ, ಗೋಮಾಂಸ ನಿಷೇಧದ ವಿರೋಧ, ಅಂತರ್ಜಾತಿ ವಿವಾಹ ನಿರ್ಬಂಧದ ವಿರೋಧಗಳಂಥ ಸ್ಥಿತ್ಯಂತರಗಳು ಹೇಗೆ ಒಂದು ಧಾರ್ಮಿಕ ಪಂಥವನ್ನು ಸಾಮಾಜಿಕ ಪಂಥವಾಗಿ ರೂಪಿಸಿದವು ಎಂಬುದು ವಚನಗಳಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ವಿದೇಶಿ ದಾಳಿಗಳಿಂದುಂಟಾದ ಇಂಥ ಸ್ಥಿತ್ಯಂತರಗಳನ್ನು ವಿರೋಧಿಸಲು ಎಲ್ಲೆಡೆ ನವಪಂಥಗಳು ಉದಯವಾದರೆ ವೀರಶೈವವು ತನ್ನ ಸ್ವರೂಪವನ್ನೇ ಬದಲಾಯಿಸಿಕೊಂಡಿತು. ಹೀಗೆ ಕಾಲಕ್ಕನುಗುಣವಾಗಿ ಶಿಶ್ನಾರಾಧನೆಯಿಂದ ರೂಪಾಂತರಗೊಳ್ಳುತ್ತ ಕಡೆಗೆ ಹುಟ್ಟಿನಿಂದ ಜಾತಿಯಂಥ ಸ್ಥಿತ್ಯಂತರಗಳನ್ನು ಒಪ್ಪಿಕೊಂಡರೂ ತನ್ನ ಸಾಮಾಜಿಕ ಕಳಕಳಿಯನ್ನು ಬಿಟ್ಟುಕೊಡದೆ ಹಿಂದೂ ಸಂಸ್ಕೃತಿಯಂತೆಯೇ ನಿತ್ಯನೂತನವಾಗುತ್ತ ಸಾಗಿಬಂದಿರುವ ಮತ್ತೊಂದು ಮೂಲ ಸಂಸ್ಕೃತಿಯೆಂದರೆ ಅದು ವೀರಶೈವ ಸಂಸ್ಕೃತಿ!

(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 313

ಸಮಾಚಾರ ಸಣ್ಣದಲ್ಲ

19 ಕೆ.ಜಿ ವಾಣಿಜ್ಯ ಬಳಕೆ ಸಿಲಿಂಡರ್ ₹62 ತುಟ್ಟಿ

ದೆಹಲಿ: ತೈಲೋತ್ಪನ್ನ ಕಂಪನಿಗಳು ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆಯನ್ನು ಸತತವಾಗಿ ಏರಿಸುತ್ತಲೇ ಇವೆ. ಕಳೆದ 4 ತಿಂಗಳಿಂದ ಮಹಾ

ನಗರಗಳಲ್ಲಿ ವಾಣಿಜ್ಯ ಬಳಕೆಯ 19 ಕಿಲೊ ಗ್ಯಾಸ್ ಸಿಲಿಂಡರ್ ದರ 4 ಬಾರಿ ಏರಿಕೆಯಾಗಿದೆ. ಸದ್ಯ ನ.1ರಿಂದ 19 ಕೆಜಿ ವಾಣಿಜ್ಯ ಬಳಕೆ ಗ್ಯಾಸ್ ಸಿಲಿಂಡರ್ ಬೆಲೆ 62 ರು.ಗಳಷ್ಟು ಹೆಚ್ಚಳವಾಗಿದೆ. ಈ ಮೊದಲು ಅ.1ರಂದು 48.50 ರು., ಸೆಪ್ಟೆಂಬರ್‌ನಲ್ಲಿ 39 ರು. ಆಗಸ್ಟ್‌ನಲ್ಲಿ 8.50 ರು. ಏರಿಕೆಯಾಗಿತ್ತು. ದೆಹಲಿಯಲ್ಲಿ 19 ಕೆಜಿ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ದರ 62 ರು. ಹೆಚ್ಚಳವಾಗಿ 1,802 ರು.ಗಳಿಗೆ ಮುಟ್ಟಿದೆ. ಮುಂಬೈ, ಚೆನ್ನೈ, ಕೋಲ್ಕತ್ತ, ಬೆಂಗಳೂರು ಮಹಾ ನಗರಗಳಲ್ಲಿ 19 ಕೆಜಿ ವಾಣಿಜ್ಯ ಬಳಕೆ ಗ್ಯಾಸ್ ಸಿಲಿಂಡರ್ ತುಟ್ಟಿಯಾಗಿದೆ. ಮುಂಬೈನಲ್ಲಿ ನ.1ರಿಂದ 1,754.50 ರು., ಚೆನ್ನೈನಲ್ಲಿ 1,964.50 ರು. ಮತ್ತು ಕೋಲ್ಕತ್ತದಲ್ಲಿ 1,911.50 ರು.ಗೆ ಏರಿಕೆಯಾಗಿದೆ.

ಬೆಂಗಳೂರು ಸಿಲಿಂಡರ್ ದರ ರು.: • ಗೃಹಬಳಕೆ 14.2ಕೆಜಿ-805.50 • ಗೃಹ ಬಳಕೆ 5 ಕೆಜಿ-300.50 • ವಾಣಿಜ್ಯ ಬಳಕೆ 19 ಕೆಜಿ-1,879.

ದೀಪಾವಳಿ ಸಂಭ್ರಮದಲ್ಲಿ ಮಿನುಗಿದ ಬುರ್ಜ್ ಖಲೀಫಾ

ದುಬೈ: ವಿಶ್ವದ ಅತ್ಯಂತ ಎತ್ತರದ ನಿರ್ಮಾಣವಾದ ಬುರ್ಜ್ ಖಲೀಫಾ ಬಹುಮಹಡಿ ಕಟ್ಟಡ ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ವರ್ಣಮಯ ವಿದ್ಯುತ್

ಬೆಳಕಿನ ಅಲಂಕಾರದಲ್ಲಿ ಗ'ಂ ರ'ಂ ವಾ ರ' ಮುಳುಗೆದ್ದಿದೆ. ಇದರ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, 3.45 ಲಕ್ಷ ವೀಕ್ಷಣೆಗೆ ಒಳಗಾಗಿದೆ. ವರ್ಣಮಯ ಬೆಳಕಿನ ಚಿತ್ತಾರದ ಜತೆಗೇ ಕಟ್ಟಡದ ಮೇಲೆ 'ಸೆಲೆಬ್ರೇಟಿಂಗ್ ದ ಫೆಸ್ಟಿವಲ್ ಆಫ್ ಲೈಟ್, ವಿಶಿಂಗ್ ಯು ಜಾಯ್, ಹೆಲ್ತ್ ಅಂಡ್ ಪ್ರಾಸ್ಪರಿಟಿ. ಹ್ಯಾಪಿ ದಿವಾಳಿ'(ಬೆಳಕಿನ ಹಬ್ಬದ ಸಂಭ್ರಮಾಚರಣೆ. ನಿಮಗೆಲ್ಲಾ ಖುಷಿ, ಆರೋಗ್ಯ, ಉತ್ತಮ ಭವಿಷ್ಯದ ಹಾರೈಕೆಗಳು. ಸಂಭ್ರಮದ ದೀಪಾವಳಿ ನಿಮ್ಮದಾಗಲಿ) ಎಂಬ ಸಂದೇಶವೂ ಮಿರುಗುಟ್ಟಿದೆ. ಅತ್ಯಂತ ಎತ್ತರದ ಕಟ್ಟಡವನ್ನು ನಿರ್ಮಿಸಿದ 'ದಿ ಎಮ್ಮಾರ್ ಗ್ರೂಪ್' ವತಿಯಿಂದ ದೀಪಾವಳಿಗೆ ಈ ಸಂದೇಶ ರವಾನೆಯಾಗಿದೆ. ಹಸ್ಸನ್ ಸಜ್ವಾನಿ ಅವರು 'ಎಕ್ಸ್' ಖಾತೆಯಲ್ಲಿ ಈ ಸಂದೇಶದ ವಿಡಿಯೊವನ್ನು ಗುರುವಾರ ಹಂಚಿಕೊಂಡಿದ್ದಾರೆ.

ಬಸ್‌ನಲ್ಲಿ ಪಟಾಕಿ ಸ್ಫೋಟ, ಇಬ್ಬರಿಗೆ ಗಾಯ

ದೆಹಲಿ: ದೆಹಲಿಯಲ್ಲಿ ಬಸ್‌ನಲ್ಲಿ ಪಟಾಕಿ ಕೊಂಡೊಯ್ಯುತ್ತಿದ್ದಾಗ ಬೆಂಕಿ ತಗುಲಿ ಸ್ಫೋಟವಾಗಿದ್ದು, ಇಬ್ಬರು ಪ್ರಯಾಣಿಕರಿಗೆ ಗಾಯಗಳಾಗಿವೆ. ದ್ವಾರಕಾದ ಛಾವಾಲಾ ಪ್ರದೇಶದಲ್ಲಿ ಪಟಾಕಿ ಇದ್ದ ಬ್ಯಾಗ್‌ಗೆ ಸಿಗರೇಟ್ ಕಿಡಿ ತಗುಲಿದ್ದರಿಂದ ಸರಣಿ ಸ್ಫೋಟವಾಗಿದೆ. ಪಟಾಕಿ ಕೊಂಡೊಯ್ಯುತ್ತಿದ್ದ ವ್ಯಕ್ತಿ, ಆತನ ಪಕ್ಕದಲ್ಲೇ ನಿಂತಿದ್ದ ಪ್ರಯಾಣಿಕ ಗಾಯಗೊಂಡಿದ್ದಾರೆ. ಇಬ್ಬರನ್ನೂ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶ್ರೀನಗರ ಲಾಲ್‌ಚೌಕ್ ದೀಪಾವಳಿ ಸಂಭ್ರಮ!

ಶ್ರೀನಗರ: ಜಮ್ಮು-ಕಾಶ್ಮೀರದ ಶ್ರೀನಗರದ ಲಾಲ್ ಚೌಕ್‌ನಲ್ಲಿ ಗುರುವಾರ ಸಂಜೆ ಸಂಭ್ರಮದಿಂದ ದೀಪಾವಳಿ ಆಚರಿಸಲಾಗಿದೆ. ಪಶ್ಚಿಮಾಮ್ನಾಯ ಶಾರದ ಪೀಠ ಆಯೋಜಿಸಿದ್ದ 'ದೀಪಾವಳಿ ಸಂಭ್ರಮ' ಕಾರ್ಯಕ್ರಮದಲ್ಲಿ ಸ್ಥಳೀಯರು ಹಾಗೂ ಪ್ರವಾಸಿಗರು ಭಾಗವಹಿಸಿದ್ದರು. ಮಹಿಳೆಯರೂ, ಮಕ್ಕಳೂ ಸೇರಿದಂತೆ ನೂರಾರು ಮಂದಿ ಕೆಂಪು ಚೌಕದ ಆವರಣದಲ್ಲೆಲ್ಲಾ ಸಾವಿರಾರು ಹಣತೆಗಳನ್ನು ಬೆಳಗಿಸಿ, ಪಟಾಕಿ ಸಿಡಿಸಿ, ಹೂಕುಂಡ-ಸುಸರ್‌ಬತ್ತಿ ಬೆಳಗಿಸಿ ಬೆಳಕಿನ ಹಬ್ಬವನ್ನು ಸಂಭ್ರಮದಿಂದ ಆಚರಿಸಿದ್ದಾರೆ. ಲಾಲ್ ಚೌಕ್ ಪ್ರದೇಶದಲ್ಲಿನ ಹಿಂದೂಗಳು ತಮ್ಮ ಮನೆಗಳಲ್ಲಿಯೂ ಮೇಣದ ಬತ್ತಿ, ಮಣ್ಣಿನ ದೀಪ ಮತ್ತು ವಿದ್ಯುತ್ ದೀಪಗಳನ್ನೂ ಬೆಳಗಿಸಿ ದೀಪಾವಳಿ ಆಚರಿಸಿ ಖುಷಿ ಪಟ್ಟಿದ್ದಾರೆ. ಜನರು ಬಂಧು-ಮಿತ್ರರು, ನೆರೆಹೊರೆಯವರಿಗೆ ಸಿಹಿ ತಿನಿಸು ಮತ್ತು ಉಡುಗೊರೆಗಳನ್ನು ನೀಡಿ ಹಬ್ಬದ ಸಂಭ್ರಮವನ್ನು ಹೆಚ್ಚಿಸಿದ್ದಾರೆ. ಕೇಂದ್ರಾಡಳಿತ ಪ್ರದೇಶವಾದ ಜಮ್ಮು-ಕಾಶ್ಮೀರದಲ್ಲಿ ದೀಪಾವಳಿ ಹಿನ್ನೆಲೆಯಲ್ಲಿ ಬಿಗಿ ಭದ್ರತೆ ಒದಗಿಸಲಾಗಿತ್ತು.

ಮಾವಿನ ಓಟೆಯಿಂದ ಆಹಾರ; ಇಬ್ಬರ ಸಾವು

ಒಡಿಶಾ: ಒಡಿಶಾದ ಕಂಧಮಲ್ ಜಿಲ್ಲೆಯಲ್ಲಿ ಮಾವಿನ ಗೊರಟೆಯಿಂದ ಮಾಡಿದ ಗಂಜಿ ಸೇವಿಸಿ



ಇಬ್ಬರು ಮಹಿಳೆಯರು ಮೃತಪಟ್ಟು, ಆರು ಮಂದಿ ಅಸ್ವಸ್ಥಗೊಂಡಿದ್ದಾರೆ. ದರಿಂಗ್‌ಬಾಡಿ ವ್ಯಾಪ್ತಿಯ ಮಂಡಿಪಂಕ ಗ್ರಾಮದಲ್ಲಿ ಘಟನೆ ನಡೆದಿದೆ. ಒಬ್ಬ ಮಹಿಳೆ ಆರೋಗ್ಯ ಕೇಂದ್ರದಲ್ಲಿ ಸಾವನ್ನಪ್ಪಿದರೆ, ಇನ್ನೊಬ್ಬ ಮಹಿಳೆ ಆಂಬ್ಯುಲೆನ್ಸ್‌ನಲ್ಲಿ ಬ್ರಹ್ಮಪುರಕ್ಕೆ ಕರೆದೊಯ್ಯುವಾಗ ಕೊನೆಯುಸಿರೆಳೆದರು.

ಡೆಮ್‌ಚೋಕ್ ಗಡಿ ಭಾರತ ಗಸ್ತು

ವಾಸ್ತವ ಗಡಿ ನಿಯಂತ್ರಣ ರೇಖೆಯ ಎರಡು ಪ್ರಮುಖ ಪಾಯಿಂಟ್

ಲಡಾಖ್: ಭಾರತ-ಚೀನಾ ಗಡಿ ಉದ್ವಿಗ್ನತೆ ಪೂರ್ಣ ಶಮನಗೊಂಡು ಎರಡೂ ದೇಶಗಳೂ ವಾಸ್ತವ ಗಡಿ ನಿಯಂತ್ರಣ ರೇಖೆಯ(ಎಲ್‌ಸಿಎ) ಬಳಿಯ ಎರಡು ಪ್ರಮುಖ ಪಾಯಿಂಟ್‌ಗಳಿಂದ ಸೇನಾಪಡೆಗಳನ್ನು ಪೂರ್ಣ ಪ್ರಮಾಣದಲ್ಲಿ ಹಿಂತೆಗೆದುಕೊಂಡಿವೆ. ಅದರ ಬೆನ್ನಲ್ಲೇ ಪೂರ್ವ ಲಡಾಖ್‌ನ ಎಲ್‌ಸಿಎ ಉದ್ದಕ್ಕೂ 5 ಪಾಯಿಂಟ್‌ಗಳಲ್ಲಿ ಉಭಯ ದೇಶಗಳ ಸೈನಿಕರು ದೀಪಾವಳಿ ಸಿಹಿ ವಿನಿಮಯ ಮಾಡಿಕೊಂಡು ಸಂಭ್ರಮಿಸಿದ್ದಾರೆ. ಅದರ ಮರುದಿನವೇ ಪೂರ್ವ ಲಡಾಖ್‌ನ ಎಲ್‌ಸಿಎಯಲ್ಲಿ ಬರುವ ಡೆಮ್‌ಚೋಕ್ ಗಡಿಯಲ್ಲಿ ಭಾರತದ ಸೈನಿಕರು ಶುಕ್ರವಾರದಿಂದಲೇ ಗಸ್ತು ಆರಂಭಿಸಿದ್ದಾರೆ.

- **ಡೆಪ್ಸಾಂಗ್ ಗಡಿ ಭಾಗದಲ್ಲಿ ಭಾರತ ಸೇನೆ ಗಸ್ತು ಶೀಘ್ರ ಆರಂಭ**
- **ಅಕ್ಟೋಬರ್‌ನಲ್ಲಿ ಭಾರತ-ಚೀನಾ ಉನ್ನತ ಮಟ್ಟದಲ್ಲಿ ಒಪ್ಪಂದ**
- **ಆ ಬಳಿಕವೇ ಎಲ್‌ಸಿಎ 2 ಪಾಯಿಂಟ್‌ಗಳಿಂದ ಸೇನೆ ಹಿಂತೆಗೆತ**

ಭಾರತ-ಚೀನಾ ನಡುವೆ ಇತ್ತೀಚೆಗೆ ನಡೆದ ಒಪ್ಪಂದದ ಪ್ರಕಾರವೇ ಎರಡೂ ದೇಶಗಳು ವಾಸ್ತವ ಗಡಿ ನಿಯಂತ್ರಣ ರೇಖೆಯಲ್ಲಿ ಬರುವ ಲಡಾಖ್‌ನ ಎರಡು ಪ್ರಮುಖ ಪಾಯಿಂಟ್‌ಗಳಿಂದ ಸೇನಾಪಡೆಗಳನ್ನು ಪೂರ್ಣವಾಗಿ ಹಿಂತೆಗೆದುಕೊಂಡ ಬಳಿಕ ಗಸ್ತು ಪ್ರಕ್ರಿಯೆ ಆರಂಭಗೊಂಡಿದೆ.

ಡೆಮ್‌ಚೋಕ್ ಗಡಿ ಭಾಗದಲ್ಲಿ ಭಾರತೀಯ ಯೋಧರ ಶುಕ್ರವಾರದಿಂದಲೇ ಗಸ್ತು ನಡೆಸಲು ಆರಂಭಿಸಿದ್ದಾರೆ. ಇನ್ನೊಂದೆಡೆ, ಡೆಪ್ಸಾಂಗ್ ಗಡಿ ಭಾಗದಲ್ಲೂ ಭಾರತೀಯ ಸೇನೆಯಿಂದ ಗಸ್ತು ಆರಂಭಗೊಳ್ಳಲಿದೆ ಎಂದು ಭಾರತೀಯ ಸೇನೆಯ ಮೂಲಗಳು ತಿಳಿಸಿವೆ.

ಈ ಎರಡೂ ಪಾಯಿಂಟ್‌ಗಳ ಇನ್ನೊಂದು ಮಗ್ಗಲಲ್ಲಿ ಚೀನಾ ಸೇನೆಯಿಂದಲೂ ಗಸ್ತು ನಡೆಯಲಿದೆ. ಆ ಮೂಲಕ ಎರಡೂ ದೇಶಗಳು 2020ರ ಏಪ್ರಿಲ್‌ಗೂ ಮುಂಚಿನ ಸ್ಥಿತಿಯನ್ನು ಈ ಗಡಿ ಪ್ರದೇಶದಲ್ಲಿ ಕಾಯ್ದುಕೊಳ್ಳಲು ಒಪ್ಪಂದ ಮಾಡಿಕೊಂಡಿವೆ. ಸಂಘಟಿತ ಜಂಟಿ ಗಸ್ತು ಒಪ್ಪಂದವೂ ಅದರಲ್ಲೇ ಸೇರಿಕೊಂಡಿದೆ.

ಗುರುವಾರ ಎರಡೂ ದೇಶಗಳ ಸೈನಿಕರೂ ಈ ಪೂರ್ವ ಲಡಾಖ್ ಗಡಿ ಭಾಗದಲ್ಲಿ 5 ಪಾಯಿಂಟ್‌ಗಳಲ್ಲಿ ಪರಸ್ಪರ ಸಿಹಿ ವಿನಿಮಯ ಮಾಡಿಕೊಂಡು ದೀಪಾವಳಿ ಹಬ್ಬದ ಸಂಭ್ರಮ ಆಚರಿಸಿದ್ದರು ಎಂಬುದು ಉಲ್ಲೇಖಾರ್ಹ.

ಸ್ಪಷ್ಟ ಉತ್ತರ ನೀಡದ ಚೀನಾ

ಭಾರತ-ಚೀನಾ ನಡುವಿನ ವಾಸ್ತವ ನಿಯಂತ್ರಣ ರೇಖೆ(ಎಲ್‌ಸಿಎ)ಯಲ್ಲಿ ಬರುವ ಪೂರ್ವ ಲಡಾಕ್‌ನ 2 ಪ್ರಮುಖ ಪಾಯಿಂಟ್‌ಗಳಲ್ಲಿದ್ದ ತನ್ನ ಸೇನೆಯನ್ನು ಪೂರ್ಣ ಪ್ರಮಾಣದಲ್ಲಿ ಹಿಂತೆಗೆದುಕೊಂಡಿರುವ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಲು ಚೀನಾ ನಿರಾಕರಿಸಿದೆ. ಅಕ್ಟೋಬರ್ 21ರಲ್ಲಿ ಭಾರತ-ಚೀನಾದ ಉನ್ನತ ಮಟ್ಟದ ಅಧಿಕಾರಿಗಳ ನಡುವೆ ನಡೆದ ಒಪ್ಪಂದದ ಪ್ರಕಾರವೇ ಚೀನಾ ಕೂಡಾ ನಡೆದುಕೊಳ್ಳಲಿದೆ. ಡೆಮ್‌ಚೋಕ್ ಮತ್ತು ಡೆಪ್‌ಸ್ಯಾಂಗ್ ಗಡಿ ಭಾಗದಿಂದ ಸೇನೆಯನ್ನು ಕ್ರಮಬದ್ಧವಾಗಿಯೇ ಕರೆಸಿಕೊಳ್ಳಲಾಗಿದೆ. ಎರಡೂ ದೇಶಗಳ ನಡುವಿನ ಗಡಿ ಬಿಕ್ಕಟ್ಟು ವಿಚಾರದಲ್ಲಿ ರಾಜತಾಂತ್ರಿಕ ಮತ್ತು ಸೇನಾ ಮಾರ್ಗದಲ್ಲಿಯೇ ಉಭಯ ದೇಶಗಳೂ ಪರಿಹಾರವನ್ನು ಕಂಡುಕೊಳ್ಳಲಿವೆ ಎಂದು ಚೀನಾ ರಾಷ್ಟ್ರೀಯ ರಕ್ಷಣಾ ಸಚಿವಾಲಯದ ವಕ್ತಾರ ಝೂಂಗ್ ಕ್ಷಿಯೊಗಾಂಗ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದಾರೆ. ಎರಡೂ ಪಾಯಿಂಟ್‌ಗಳಲ್ಲಿದ್ದ ಮುಂಚೂಣಿ ಪಡೆಗಳನ್ನು ಒಪ್ಪಂದದಲ್ಲಿನ ನಿಯಮಗಳ ಪ್ರಕಾರವೇ ಹಿಂತೆಗೆದುಕೊಳ್ಳುವ ಪ್ರಕ್ರಿಯೆ ಕ್ರಮಬದ್ಧವಾಗಿಯೇ ನಡೆದಿದೆ ಎಂದು ಹೇಳಿದ್ದಾರೆ. ಆದರೆ, ಪೂರ್ಣ ಪ್ರಮಾಣದಲ್ಲಿ ಸೇನೆಯನ್ನು ಹಿಂತೆಗೆದುಕೊಳ್ಳಲಾಗಿದೆಯೇ ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರ ನೀಡದೇ ಜಾರಿಕೊಂಡಿದ್ದಾರೆ.

ಚೆನಾಬ್ ರೈಲ್ವೆ ಸೇತುವೆ: ಪಾಕ್-ಚೀನಾ ವಕ್ರದೃಷ್ಟಿ

ದೆಹಲಿ: ಜಮ್ಮು-ಕಾಶ್ಮೀರದಲ್ಲಿನ ವಿಶ್ವದ ಅತಿ ಎತ್ತರದ ರೈಲ್ವೆ ಸೇತುವೆ, ರಿಯಾಸಿ ಮತ್ತು ರಾಂಬನ್ ಜಿಲ್ಲೆಗಳನ್ನು ಸಂಪರ್ಕಿಸುವ 'ಚೆನಾಬ್' ಸೇರುವೆ ಮೇಲೆ ನೆರೆಯ ಪಾಕಿಸ್ತಾನ ಮತ್ತು ಚೀನಾದ ವಕ್ರದೃಷ್ಟಿ ಬಿದ್ದಿದೆ. ಚೀನಾ ನಿರ್ದೇಶನದ ಮೇರೆಗೆ ಚೆನಾಬ್ ರೈಲ್ವೆ ಸೇತುವೆ ಬಗ್ಗೆ ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಮಾಹಿತಿ ಸಂಗ್ರಹ ಮಾಡುತ್ತಿದೆ ಎಂದು ವರದಿಯಾಗಿದೆ. ವಿಶ್ವದ ಅತಿ ಎತ್ತರದ ರೈಲ್ವೆ ಸೇತುವೆ ಎಂಬ ಖ್ಯಾತಿಗೆ ಒಳಗಾಗಿರುವ ಚೆನಾಬ್ ಸೇತುವೆಯಲ್ಲಿ ರೈಲುಗಳ ಸಂಚಾರ ಪ್ರಾಯೋಗಿಕವಾಗಿ ಆರಂಭಗೊಂಡಿದೆ. ಈ ಸೇತುವೆ ಜಮ್ಮು-ಕಾಶ್ಮೀರವನ್ನು ದೇಶದ ಇತರೆ ಭಾಗಗಳ ಜತೆಗಿನ ಸಂಪರ್ಕವನ್ನು ಹೆಚ್ಚಿಸಿದೆ. ಈ ಸೇತುವೆ ನಿರ್ಮಾಣ ಪೂರ್ಣಗೊಳ್ಳಲು 20 ವರ್ಷಗಳೇ ಹಿಡಿದಿದೆ. ಚಳಿಗಾಲದಲ್ಲಿ ಭಾರಿ ಹಿಮಪಾತವಾಗುವುದರಿಂದ ಕಾಶ್ಮೀರ ಭಾಗದಲ್ಲಿ ರಸ್ತೆಗಳು ಬಂದ್ ಆಗಿಬಿಡುತ್ತವೆ. ರಸ್ತೆ ಮಾರ್ಗವಾಗಿ ಕಾಶ್ಮೀರ ಸಂಪರ್ಕ ಕಷ್ಟವಾಗುತ್ತದೆ. ಹಾಗಾಗಿಯೇ ಸರ್ವಋತುಗಳಲ್ಲೂ ಕಾಶ್ಮೀರವನ್ನು ಸಂಪರ್ಕಿಸಲೆಂದೇ ಸಾವಿರಾರು ಕೋಟಿ ರು. ವೆಚ್ಚದಲ್ಲಿ ಚೆನಾಬ್ ಸೇತುವೆ ನಿರ್ಮಿಸಲಾಗಿದೆ. ಗಡಿ ಪ್ರದೇಶಗಳ ಸಂಪರ್ಕಕ್ಕೂ ಈ ಸೇತುವೆ ಅತ್ಯಗತ್ಯವಾಗಿದೆ. ಗಡಿ ಭಾಗದಲ್ಲಿ ಸೇನಾಪಡೆಗಳಿಗೆ ಅಗತ್ಯ ಶಸ್ತ್ರಾಸ್ತ್ರ ಸಾಗಣೆಗೆ ಈ ಸೇತುವೆ ಅನುಕೂಲಕಾರಿಯಾಗಿದೆ. ಯುದ್ಧ ಟ್ಯಾಂಕರ್‌ಗಳು, ದೊಡ್ಡ ಫಿರಂಗಿಗಳನ್ನೂ, ಸೈನಿಕರನ್ನೂ ರೈಲುಗಳಲ್ಲಿ ಕರೆದೊಯ್ಯಲು ಈ ಸೇತುವೆ ನೆರವಾಗಲಿದೆ. ಈ ಎಲ್ಲಾ ಕಾರಣಗಳಿಂದಾಗಿಯೇ ಚೀನಾ ಮತ್ತು ಪಾಕಿಸ್ತಾನದ ವಕ್ರದೃಷ್ಟಿ ಈ ಸೇತುವೆ ಮೇಲೆ ಬಿದ್ದಿದೆ.

ಪ್ರಧಾನಿ ಆರ್ಥಿಕ ಸಲಹೆಗಾರ ಬಿಬೇಕ್ ದೆಬರಾಯ್ ವಿಧಿವಶ

ದೆಹಲಿ: ಖ್ಯಾತ ಅರ್ಥಶಾಸ್ತ್ರಜ್ಞ, ಪ್ರಧಾನಿ ನರೇಂದ್ರ ಮೋದಿ ಅವರ ಆರ್ಥಿಕ ಸಲಹಾ ಮಂಡಳಿ ಅಧ್ಯಕ್ಷ ಡಾ.ಬಿಬೇಕ್ ದೆಬರಾಯ್(69) ವಿಧಿವಶರಾದರು. ಕರುಳಿಗೆ ಸಂಬಂಧಿಸಿದ ಆರೋಗ್ಯ ಸಮಸ್ಯೆಗೆ ಒಳಗಾಗಿದ್ದ ದೆಬರಾಯ್ ಶುಕ್ರವಾರ ಬೆಳಗ್ಗೆ 7 ಗಂಟೆಗೆ ಕೊನೆಯುಸಿರೆಳೆದರು.

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ದೆಬರಾಯ್ ಹಿಂದೆ ಪುಣೆಯ ಗೋಖಲೆ ಇನ್‌ಸ್ಟಿಟ್ಯೂಟ್ ಆಫ್ ಪಾಲಿಟಿಕ್ಸ್ ಅಂಡ್ ಎಕನಾಮಿಕ್ಸ್ (ಜಿಐಪಿಇ) ಕುಲಪತಿಯಾಗಿದ್ದರು.

ದೆಬರಾಯ್ ಹೆಸರಾಂತ ಭಾರತೀಯ ಅರ್ಥಶಾಸ್ತ್ರಜ್ಞ, ಲೇಖಕ ಮತ್ತು ವಿದ್ವಾಂಸರು. ಆರ್ಥಿಕ ನೀತಿ ಮತ್ತು ಸಂಸ್ಕೃತ ಪಠ್ಯಗಳಿಗೆ ನೀಡಿದ ಕೊಡುಗೆಗಳಿಂದಾಗಿ ಖ್ಯಾತಿ ಪಡೆದಿದ್ದರು. ಭಾರತದ ನವ ಆರ್ಥಿಕ ನೀತಿ ರೂಪಿಸುವಲ್ಲಿ ಅವರ ಪಾತ್ರ ನಿರ್ಣಾಯಕ. ಮೂಲಸೌಕರ್ಯ, ಸ್ಥೂಲ ಅರ್ಥಶಾಸ್ತ್ರ, ಸಾರ್ವಜನಿಕ ಹಣ ಕಾಸು ಸೇರಿ ವಿವಿಧ ಕ್ಷೇತ್ರಗಳಲ್ಲಿ ಪರಿಣತಿಯಿದ್ದ ದೆಬರಾಯ್ ಆರ್ಥಿಕ ಸುಧಾರಣೆಗಳು, ಆಡಳಿತ ಮತ್ತು ಭಾರತೀಯ ರೈಲ್ವೆ ವಿಷಯಗಳ ಕುರಿತು ಪ್ರಬಂಧ ಮಂಡಿಸಿದ್ದಾರೆ.

ಪ್ರಧಾನಿ ಸಂತಾಪ: ಅರ್ಥಶಾಸ್ತ್ರ, ಇತಿಹಾಸ, ಸಂಸ್ಕೃತಿ, ರಾಜಕೀಯ, ಅಧ್ಯಾತ್ಮ ಸಹಿತ ವೈವಿಧ್ಯಮಯ ಕ್ಷೇತ್ರಗಳಲ್ಲಿ ಪರಿಣತರಾಗಿದ್ದ ದೆಬರಾಯ್ ಶ್ರೇಷ್ಠ ವಿದ್ವಾಂಸರು. ಸಾರ್ವಜನಿಕ ನೀತಿಗೆ ಅವರ ಕೊಡುಗೆ ಅಪಾರ. ಪ್ರಾಚೀನ ಗ್ರಂಥಗಳ ಕೆಲಸ ಕೈಗೆತ್ತಿಕೊಂಡಿದ್ದರು. ಆಮೂಲಕ ಯುವಜನರನ್ನು ಪ್ರಾಚೀನ ಗ್ರಂಥಗಳತ್ತ ಸೆಳೆಯುವುದರಲ್ಲಿ ಯಶಸ್ವಿಯಾಗಿದ್ದರು ಎಂದು ಸ್ಮರಿಸಿರುವ ಪ್ರಧಾನಿ ನರೇಂದ್ರ ಮೋದಿ ಸಂತಾಪ ಸೂಚಿಸಿದ್ದಾರೆ. ಬಿಬೇಕ್ ಅವರ ಒಳನೋಟ, ಶೈಕ್ಷಣಿಕ ಪ್ರವಚನವನ್ನು ಪ್ರೀತಿಯಿಂದ ನೆನಪಿಸಿಕೊಳ್ಳುವೆ. ಅವರ ನಿಧನದಿಂದ ಬಹಳ ದುಃಖವಾಗಿದೆ. ಅವರ ಕುಟುಂಬ ಮತ್ತು ಸ್ನೇಹಿತರಿಗೆ ಸಂತಾಪ ಸೂಚಿಸುತ್ತೇನೆ ಎಂದಿರುವ ಪ್ರಧಾನಿ ನರೇಂದ್ರ ಮೋದಿ, 'ಎಕ್ಸ್' ಖಾತೆಯಲ್ಲಿ ಬಿಬೇಕ್ ಜತೆಗಿನ ತಮ್ಮ ಫೋಟೊಗಳನ್ನು ಹಂಚಿಕೊಂಡಿದ್ದಾರೆ.

ಜಮ್ಮು-ಕಾಶ್ಮೀರ ಬಿಜೆಪಿ ಶಾಸಕ ದೇವೇಂದರ್ ಸಿಂಗ್ ರಾಣಾ ನಿಧನ

ಶ್ರೀನಗರ: ಇತ್ತೀಚೆಗಷ್ಟೇ ನಡೆದ ಜಮ್ಮು-ಕಾಶ್ಮೀರ ವಿಧಾನಸಭೆ ಚುನಾವಣೆಯಲ್ಲಿ ನಾಗ್ರೊತಾ ಕ್ಷೇತ್ರದಿಂದ ವಿಜೇತರಾಗಿದ್ದ ಬಿಜೆಪಿ ಶಾಸಕ ದೇವೇಂದರ್ ಸಿಂಗ ರಾಣಾ(59) ಗುರುವಾರ ರಾತ್ರಿ ನಿಧನರಾದರು.

ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರ ಸೋದರನಾದ ರಾಣಾ, ಜಮ್ಮು ಪ್ರದೇಶದಲ್ಲಿ ಜನಪ್ರಿಯ ನಾಯಕರಾಗಿದ್ದರು. ಅನಾರೋಗ್ಯದ ಕಾರಣ ಅವರನ್ನು ಹರಿಯಾಣದ ಫರೀದಾಬಾದ್‌ನಲ್ಲಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಿಸದೇ ರಾಣಾ ಆಸ್ಪತ್ರೆಯಲ್ಲಿಯೇ ಕೊನೆಯುಸಿರೆಳೆದರು ಎಂದು ಪಕ್ಷದ ವಕ್ತಾರರು ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಉಪ ಮುಖ್ಯಮಂತ್ರಿ ಸುರೀಂದರ್ ಕುಮಾರ್ ಚೌಧರಿ ಸಂತಾಪ ಸೂಚಿಸಿದ್ದಾರೆ. ಕೇಂದ್ರ ಸಚಿವ ಜಿತೇಂದ್ರ ಸಿಂಗ್, ಸೋದರನ ಸಾವು ವೈಯಕ್ತಿಕವಾಗಿ ದೊಡ್ಡ ನಷ್ಟ ಎಂದು ಕಂಬನಿ ಮಿಡಿದಿದ್ದಾರೆ.

ಪಟಾಕಿ ಧೂಮ ಕಾರಣ ದೆಹಲಿ ಗಾಳಿ ವಿಷಮಯ

ದೆಹಲಿ: ದೆಹಲಿಯಲ್ಲಿ ದೀಪಾವಳಿ ಪ್ರಯುಕ್ತ ಗುರುವಾರ ಪಟಾಕಿ ಸಿಡಿಸಲಾಗಿದ್ದು, ಶುಕ್ರವಾರ ಬೆಳಗ್ಗೆ 6ರ ವೇಳೆ ರಾಷ್ಟ್ರ ರಾಜಧಾನಿಯ ವಾಯು ಗುಣಮಟ್ಟ ಸೂಚಿ(ಎಕ್ಯುಐ) ಗರಿಷ್ಠ 395ರಲ್ಲಿ ದಾಖಲಾಗಿದೆ. ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಕಾರ ಇದು ಅತ್ಯಂತ ಕಳಪೆ ಮಟ್ಟಕ್ಕೆ ಸೇರುತ್ತದೆ.

ಲಜಪತ್ ನಗರ, ಕಲ್ಕಾಜಿ, ಛತ್ತರ್‌ಪುರ, ಜೌನಾಪುರ್, ಕೈಲಾಶ್ ಪೂರ್ವ, ಸಾಕೇತ್, ರೋಹಿಣಿ, ದ್ವಾರಕಾ, ಪಂಜಾಬಿ ಬಾಗ್, ವಿಕಾಸಪುರಿ, ದಿಲ್ಶಾದ್ ಗಾರ್ಡನ್, ಬುರಾರಿ ಮತ್ತು ಪೂರ್ವ ಮತ್ತು ಪಶ್ಚಿಮ ದೆಹಲಿಯ ಹಲವಾರು ಪ್ರದೇಶಗಳಲ್ಲಿ ಪಟಾಕಿ ಸಿಡಿಸಲಾಗಿದೆ ಎಂದು ಮಾಲಿನ್ಯ ನಿಯಂತ್ರಣ ಮಂಡಳಿ ಹೇಳಿದೆ.

ಶುಕ್ರವಾರ ಬೆಳಗ್ಗೆ 6ರ ವೇಳೆ ಬುರಾರಿ ಕ್ರಾಸಿಂಗ್ ಆರ್‌ಕೆ ಪುರಂ 395, ಆನಂದ್ ವಿಹಾರ್ 395, ಎಕ್ಯುಐ 394, ಸೋನಿಯಾ ವಿಹಾರ್ 392, ಪಂಜಾಬಿ ಬಾಗ್ 391, ಜಹಾಂಗೀರ್‌ಪುರಿ 387, ರೋಹಿಣಿ 385, ಅಶೋಕ್ ವಿಹಾರ್ 384, ದ್ವಾರಕಾ ಸೆಕ್ಟರ್ 8- 375, ಐಜಿಐ ವಿಮಾನ ನಿಲ್ದಾಣ 375, ಸಿರಿಫೋರ್ಟ್ 373 ಮತ್ತು ಮಂದಿರ ಮಾರ್ಗ 369 ಎಕ್ಯುಐ ದಾಖಲಾಗಿದೆ.

ಬಣ್ಣಗಳ ಸಮೇತ ಎಚ್ಚರಿಕೆ ಸಂದೇಶ

ಗಾಳಿಯ ಗುಣಮಟ್ಟ ಸೂಚಿ(ಎಕ್ಯುಐ) 50 ಅಂಕಗಳ ಒಳಗಿದ್ದರೆ 'ಅತ್ಯುತ್ತಮ' ಎಂಬ ಹಸಿರು ಸಂಕೇತ, 51ರಿಂದ 100ರ ಮಿತಿಯಲ್ಲಿದ್ದರೆ 'ಸಾಧಾರಣ' ಎಂಬ ಹಳದಿ ವರ್ಣ, 101ರಿಂದ 150ರಲ್ಲಿದ್ದರೆ 'ಅನಾರೋಗ್ಯಕಾರಿ' ಎಂಬ ಕೇಸರಿ ವರ್ಣ, 151ರಿಂದ 200ರಲ್ಲಿದ್ದರೆ 'ಅಪಾಯಕಾರಿ' ಎಂಬ ಕೆಂಪು ಬಣ್ಣ, 201ರಿಂದ 300 ಅಂಕಗಳಿಗೇರಿದರೆ 'ಅತ್ಯಂತ ಅನಾರೋಗ್ಯಕಾರಿ' ಎಂದು ಎಚ್ಚರಿಸುವ ನೇರಳೆ ವರ್ಣ, 301 ಅಂಕಗಳ ಮೇಲಿದ್ದರೆ 'ವಿಷಮಯ' ಎಂದು ಕಳವಳ ಮೂಡಿಸುವ ಚಾಕೊಲೆಟ್ ಬಣ್ಣ ನೀಡಲಾಗಿದೆ.

ಕರಾಳದಿನ ಆಚರಿಸಿದ ಗಿಗ್ ಸ್ತ್ರೀ ಉದ್ಯೋಗಿ

ದೆಹಲಿ: ಅಸುರಕ್ಷಿತ ಕೆಲಸದ ವಾತಾವರಣ, ಕಡಿಮೆ ವೇತನ, ದೀರ್ಘಾವಧಿ ಕೆಲಸ ವಿರೋಧಿಸಿ ಗಿಗ್ ಮತ್ತು ಪ್ಲಾಟ್‌ಫಾರ್ಮ್ ಸರ್ವೀಸ್ ವರ್ಕರ್ಸ್ ಯೂನಿಯನ್ (ಜಿಐಪಿಎಸ್‌ಡಬ್ಲ್ಯುಯು) ಉಸ್ತುವಾರಿಯಲ್ಲಿ ಮಹಿಳೆಯರ ನೇತೃತ್ವದ ಗಿಗ್ ವರ್ಕರ್ಸ್ ರಾಷ್ಟ್ರೀಯ ಟ್ರೇಡ್ ಯೂನಿಯನ್ ಗುರುವಾರ ಡಿಜಿಟಲ್ ಮುಷ್ಕರ ನಡೆಸಿ ದೀಪಾವಳಿ ಹಬ್ಬದ ಬದಲು 'ಕರಾಳ ದಿನ' ಆಚರಿಸಿದೆ. 11 ಪ್ರಮುಖ ನಗರಗಳಲ್ಲಿನ ಮಹಿಳಾ ಗಿಗ್ ಕೆಲಸಗಾರರು ತಮ್ಮ ಸ್ಮಾರ್ಟ್‌ಫೋನ್ ಸ್ವಿಚ್ ಆಫ್ ಮಾಡುವ ಮೂಲಕ ಕೆಲಸ ಮಾಡಲು ನಿರಾಕರಿಸಿ ಮುಷ್ಕರ ನಡೆಸಿದ್ದಾರೆ. ಕಂಪನಿಗಳು ಮತ್ತು ಭಾರತ ಸರಕಾರದಿಂದ ನಿರಾಕರಿಸಲಾದ ಹಕ್ಕುಗಳನ್ನು ಮರಳಿ ಗುರುತಿಸಲು ಒತ್ತಾಯಿಸಿ ದೇಶಾದ್ಯಂತ ವಿವಿಧ 'ಗಿಗ್' ಕೆಲಸಗಾರರನ್ನು ಒಗ್ಗೂಡಿಸುವ ಪ್ರಯತ್ನವಾಗಿದೆ ಎಂದು ಜಿಐಪಿಎಸ್‌ಡಬ್ಲ್ಯುಯು ಪ್ರಧಾನ ಕಾರ್ಯದರ್ಶಿ ಸೀಮಾ ಸಿಂಗ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕೈ ಗ್ಯಾರಂಟಿ ವಿವಾದಕ್ಕೆ ಮೋದಿ ಖಂಡನೆ

ಅವಾಸ್ತವಿಕ ಭರವಸೆ ನೀಡುವುದು ಸುಲಭ, ಜಾರಿ ಕಷ್ಟ | ಕರ್ನಾಟಕ ಡಿಸಿಎಂ-ಸಿಎಂ ವೈರುಧ್ಯ ಹೇಳಿಕೆಗೆ ಟೀಕೆ

ದೆಹಲಿ: 'ಶಕ್ತಿ' ಯೋಜನೆ ಪರಿಷ್ಕರಣೆ ವಿವಾದ ಸಂಬಂಧ ಕರ್ನಾಟಕ ಸರಕಾರದ ನಡೆಯನ್ನು ಪ್ರಧಾನಿ ನರೇಂದ್ರ ಮೋದಿ ತೀವ್ರವಾಗಿ ಖಂಡಿಸಿ ತರಾಟೆ ತೆಗೆದುಕೊಂಡಿದ್ದಾರೆ. ಅವಾಸ್ತವಿಕ ಭರವಸೆಗಳನ್ನು ನೀಡುವುದು ಸುಲಭ. ಆದರೆ, ಅವುಗಳನ್ನು ಸಮರ್ಪಕವಾಗಿ ಜಾರಿಗೊಳಿಸುವುದು ಬಹಳ ಕಷ್ಟ ಎಂದು ಟೀಕಿಸಿದ್ದಾರೆ.

ಶಕ್ತಿ ಯೋಜನೆ ಪರಿಷ್ಕರಣೆ ಬಗ್ಗೆ ಕರ್ನಾಟಕ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆ ನೀಡಿದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅದನ್ನು ಅಲ್ಲಗಳೆದಿದ್ದರು. ಬಳಿಕ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಆರ್ಥಿಕ ಪರಿಸ್ಥಿತಿ ನೋಡಿಕೊಂಡು ಗ್ಯಾರಂಟಿ ಘೋಷಿಸಲು ಸಲಹೆ ನೀಡಿದ್ದರು. ಅದರ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ಮತ್ತು ಕರ್ನಾಟಕದ ಸರಕಾರದ ವಿರುದ್ಧ 'ಎಕ್ಸ್' ಖಾತೆಯಲ್ಲಿ ಹರಿಹಾಯ್ದಿದ್ದಾರೆ.

ಚುನಾವಣೆ ವೇಳೆ 5 ಗ್ಯಾರಂಟಿಗಳನ್ನು ಸರಾಗವಾಗಿ ಘೋಷಿಸಿದ ಕಾಂಗ್ರೆಸ್‌ಗೆ, ಅವುಗಳ ಜಾರಿ ವಿಚಾರ ಬಂದಾಗ ಬಹಳ ಕಠಿಣ ಮಾರ್ಗ ಎಂಬುದು ಅರಿವಾಗಿದೆ. ಜನರಿಗೆ ಭರವಸೆ ಮಾತ್ರ ನೀಡುತ್ತಾರೆ. ಅದನ್ನು ಈಡೇರಿಸುವುದು ಕಷ್ಟ ಎಂಬುದು ಕಾಂಗ್ರೆಸ್‌ಗೆ ತಿಳಿದಿದೆ. ಹಿಮಾಚಲ ಪ್ರದೇಶ, ಕರ್ನಾಟಕ ಮತ್ತು ತೆಲಂಗಾಣದಲ್ಲಿ ಅವರು ಜನರ ಮುಂದೆ ಈಗ ಕೆಟ್ಟ ಪರಿಸ್ಥಿತಿಯಲ್ಲಿ ನಿಂತಿದ್ದಾರೆ. ಅವರು ಚುನಾವಣೆ ವೇಳೆ ಕೊಟ್ಟ ಭರವಸೆಗಳು ಈಡೇರಿಲ್ಲ. ಜನರಿಗೆ ಕಾಂಗ್ರೆಸ್ ಮಾಡಿದ ಮೋಸ ಗೊತ್ತಾಗಿದೆ ಎಂದು ಮೋದಿ ವಾಗ್ದಾಳಿ ನಡೆಸಿದ್ದಾರೆ.

ಕರ್ನಾಟಕದಲ್ಲಿ ಕಾಂಗ್ರೆಸ್ ಒಳರಾಜಕೀಯ ನಡೆಸುತ್ತಿದೆ. ಅಭಿವೃದ್ಧಿ ಬಗ್ಗೆ ಕಾಳಜಿ ತೋರುವ ಬದಲು ಲೂಟಿ ನಿರತವಾಗಿದೆ. ಅಷ್ಟೇ ಅಲ್ಲ, ಗ್ಯಾರಂಟಿ ಯೋಜನೆಗಳನ್ನೂ ಹಿಂಪಡೆಯಲು ಮುಂದಾಗಿದೆ. ಹಿಮಾಚಲ ಪ್ರದೇಶದಲ್ಲಿ ಸರಕಾರಿ ನೌಕರರಿಗೆ ಸರಿಯಾದ ಸಮಯಕ್ಕೆ ಸಂಬಳ ನೀಡಲಾಗುತ್ತಿಲ್ಲ. ತೆಲಂಗಾಣದಲ್ಲಿ ರೈತರು ಸಾಲ ಮನ್ನಾಕ್ಕಾಗಿ ಕಾಯುತ್ತಿದ್ದಾರೆ. ಕಾಂಗ್ರೆಸ್ ಹೇಗೆ ಕೆಲಸ ಮಾಡುತ್ತದೆ ಎಂಬುದಕ್ಕೆ ಇವು ಉದಾಹರಣೆಗಳು ಎಂದು ಮೋದಿ ಚಾಟಿ ಬೀಸಿದ್ದಾರೆ. ನಕಲಿ ಭರವಸೆ ಸಂಸ್ಕೃತಿ ಬಗ್ಗೆ ದೇಶದ ಜನತೆ ಎಚ್ಚೆತ್ತುಕೊಳ್ಳಬೇಕಾಗಿದೆ ಎಂದೂ ಮೋದಿ ಹೇಳಿದ್ದಾರೆ.

ಲಡಾಖ್‌ನಲ್ಲಿ ಇಸ್ರೊ ಅನಲಾಗ್ ಪ್ರಯೋಗ

ಲಡಾಖ್: ಭಾರತದ ಹೆಮ್ಮೆಯ ಸಂಸ್ಥೆಯಾದ 'ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ' (ಇಸ್ರೊ), ಪ್ರಧಾನಿ ನರೇಂದ್ರ ಮೋದಿ ಸರಕಾರದ ಮಹತ್ವಾಕಾಂಕ್ಷೆಯ 'ಭಾರತ ಬಾಹ್ಯಾಕಾಶ ಕೇಂದ್ರ ನಿರ್ಮಾಣ'ಕ್ಕೆ ಅಧ್ಯಯನ ಆರಂಭಿಸಿದೆ.

ಬಾಹ್ಯಾಕಾಶ ಕೇಂದ್ರದ ವಸ್ತುಸ್ಥಿತಿ ಮತ್ತು ಸವಾಲುಗಳ ಅಂದಾಜು ಮಾಡುವ ಅನಲಾಗ್ ಕಾರ್ಯಾಚರಣೆಯ ಪ್ರಯೋಗ ಮತ್ತು ಅಧ್ಯಯನವನ್ನು ಲಡಾಖ್ ಪ್ರದೇಶದ ಲೇಹ್‌ನಲ್ಲಿ 'ಇಸ್ರೊ' ಆರಂಭಿಸಿದೆ.

ಈ ಸಂಬಂಧ ಚಿತ್ರ ಮಾಹಿತಿಯನ್ನು ಇಸ್ರೊ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದೆ. ಭಾರತದ ಪ್ರಥಮ ಅನಲಾಗ್ ಬಾಹ್ಯಾಕಾಶ ಯೋಜನೆ ಲೇಹ್‌ನಲ್ಲಿ ಆರಂಭವಾಗಿದೆ. ಭೂಮಿಯಾಚೆಗಿನ

ಕಕ್ಷೆಯಲ್ಲಿ ಬಾಹ್ಯಕಾಶ ಕೇಂದ್ರ ಹೇಗೆ ಕಾರ್ಯನಿರ್ವಹಿಸಲಿದೆ, ಅದಕ್ಕೆ ಎದುರಾಗುವ ಸವಾಲುಗಳನ್ನು ಎದುರಿಸುವ ಬಗೆ ಹೇಗೆ? ಎಂಬೆಲ್ಲಾ ಅಧ್ಯಯನಗಳನ್ನು ಇಲ್ಲಿ ನಡೆಸಲಾಗುವುದು ಎಂದು ಇಸ್ರೊ ತಿಳಿಸಿದೆ.

ಸ್ಪೇನ್ ಪ್ರವಾಹ; ಸಾವಿನ ಸಂಖ್ಯೆ 202ಕ್ಕೆ

ವೆಲೆನ್ಸಿಯಾ: ಸ್ಪೇನ್ ದೇಶದ ವೆಲೆನ್ಸಿಯ ಭಾಗದಲ್ಲಿ ಹಿಂದೆಂದೂ ಕಾಣದಷ್ಟು ಪ್ರಮಾಣದಲ್ಲಿ ಕುಂಭದ್ರೋಣ ಮಳೆ ಸುರಿದು, ಭಾರೀ ಪ್ರವಾಹ ಉಂಟಾಗಿದೆ. ಜತೆಗೆ ಹಲವೆಡೆ ಭೂ ಕುಸಿತವೂ ಉಂಟಾಗಿದೆ, ನೂರಾರು ಮನೆಗಳು ಜಖಂಗೊಂಡಿವೆ. ಸಾವಿರಾರು ವಾಹನಗಳು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿವೆ. ಪರಿಣಾಮ ಶುಕ್ರವಾರದ ವೇಳೆಗೆ ಸಾವಿನ ಸಂಖ್ಯೆ 202ಕ್ಕೇರಿದೆ. ಈವರೆಗೆ ಪ್ರವಾಹಕ್ಕೆ ಸಿಲುಕಿದ್ದವರಲ್ಲಿ 270 ಮಂದಿಯನ್ನು ರಕ್ಷಿಸಲಾಗಿದೆ ಎಂದು ಸರಕಾರದ ಮೂಲಗಳು ತಿಳಿಸಿವೆ.

ವೆಲೆನ್ಸಿಯಾದ ಪಶ್ಚಿಮ ದಿಕ್ಕಿಗಿರುವ ಪರ್ವತ ನಗರಿ ಛಿವಾದಲ್ಲಿ ಕೇವಲ 8 ಗಂಟೆಗಳ ಅವಧಿಯಲ್ಲೇ 19.33 ಇಂಚುಗಳಷ್ಟು ಮಳೆ ಸುರಿದಿದೆ. ಪರ್ವತ ಭಾಗದಿಂದ ಜಲರಾಶಿ ಪ್ರವಾಹದೋಪಾದಿಯಲ್ಲಿ ಜನವಸತಿ ಪ್ರದೇಶಕ್ಕೆ ವೇಗವಾಗಿ ಧಾವಿಸಿದ್ದರಿಂದ ಭಾರೀ ಪ್ರಮಾಣದಲ್ಲಿ ಭೂಕುಸಿತವಾಗಿದೆ. ಮನೆಗಳು ಜಖಂಗೊಂಡಿವೆ. ನೂರಾರು ಕಾರು ಪ್ರವಾಹದಲ್ಲಿ ಕೊಚ್ಚಿ ಹೋಗಿವೆ. ಸರಕಾರಕ್ಕೆ ಪರಿವಾರ ರಕ್ಷಣಾ ಕಾರ್ಯಾಚರಣೆ ನಡೆಸುವುದೇ ದೊಡ್ಡ ಸವಾಲಾಗಿ ಪರಿಣಮಿಸಿದೆ.

ಯುಸಿಸಿ ಜಾರಿ ಬಗೆ: ಪ್ರ.ಕಿಶೋರ್ ಸಲಹೆ

ದೆಹಲಿ: ಕೇಂದ್ರ ಸರಕಾರ ಮುಸ್ಲಿಂ ಸಮುದಾಯವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಇದ್ದರೆ ಏಕರೂಪ ನಾಗರಿಕ ಸಂಹಿತೆ(ಯುಸಿಸಿ) ಜಾರಿ ಸಾಧ್ಯವಿಲ್ಲ ಎಂದು 'ಜನ್ ಸೂರಜ್ ಪಕ್ಷ' ಮುಖ್ಯಸ್ಥ ಪ್ರಶಾಂತ್ ಕಿಶೋರ್ ಶುಕ್ರವಾರ ಹೇಳಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಕಾನೂನನ್ನು ಜಾರಿಗೆ ತರುವ ಮೊದಲು ಅದರಿಂದ ಪ್ರಭಾವಿತರಾಗುವ ಜನರ ವಿಶ್ವಾಸವನ್ನು ಸರಕಾರ ಪಡೆಯಬೇಕು. ದೇಶದ ಜನಸಂಖ್ಯೆಯ ಶೇ.20ರಷ್ಟಿರುವ ಮುಸ್ಲಿಮರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದ ಹೊರತು ಈ ರೀತಿಯ ಮೂಲಭೂತ ಕಾನೂನನ್ನು ಜಾರಿಗೆ ತರಲು ಸಾಧ್ಯವಿಲ್ಲ ಎಂದಿದ್ದಾರೆ.

ಭಾರತ, ಮೋದಿ ಜತೆ ಬಾಂಧವ್ಯ ಬಲಪಡಿಸುವೆ: ಟ್ರಂಪ್

ಕಮಲಾ ಹ್ಯಾರಿಸ್‌ರಿಂದ ಅಮೆರಿಕ ಹಿಂದೂಗಳ ಕಡೆಗಣನೆ ಆರೋಪ

ವಾಷಿಂಗ್ಟನ್: ಅಮೆರಿಕದ ಅಧ್ಯಕ್ಷೀಯ ಚುನಾವಣೆಗೆ ದಿನಗಣನೆ ಆರಂಭವಾಗಿದೆ. ನ.5ರಂದು ಚುನಾವಣೆ ನಡೆಯಲಿದ್ದು, 4 ದಿನಗಳಷ್ಟೇ ಬಾಕಿ ಇವೆ. ಕಡೆಯ ಕ್ಷಣದ ಪ್ರಯತ್ನವಾಗಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ, ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅನಿವಾಸಿ ಭಾರತೀಯರ(ಎನ್ನಾರೈ) ಮತಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಪಡೆಯುವ ಪ್ರಯತ್ನ ನಡೆಸಿದ್ದಾರೆ.

ಅದೇ ಕಾರಣವಾಗಿ, 'ನಾನು ಅಧ್ಯಕ್ಷನಾದ ಬಳಿಕ ಭಾರತದ ಜತೆಗಿನ ಅಮೆರಿಕ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುವೆ' ಎಂದು ಡೊನಾಲ್ಡ್ ಟ್ರಂಪ್ ಪ್ರತಿಜ್ಞೆ ಮಾಡಿದ್ದಾರೆ. ಅಲ್ಲದೇ, ಬಾಂಗ್ಲಾದೇಶದಲ್ಲಿ ಹಿಂದೂಗಳು, ಸಿಖ್, ಬೌದ್ಧರು, ಕ್ರೈಸ್ತರು ಸೇರಿದಂತೆ ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ಹಿಂಸಾಚಾರ ನಡೆಸಿರುವುದನ್ನು ಟ್ರಂಪ್ ಬಲವಾಗಿ ಖಂಡಿಸಿದ್ದಾರೆ.

ಭಾರತೀಯರಿಗೆ ದೀಪಾವಳಿ ಶುಭಾಶಯ ಕೋರಿದ ಟ್ರಂಪ್, ನನ್ನ ಉತ್ತಮ ಸ್ನೇಹಿತರಾಗಿರುವ ಭಾರತದ ಪ್ರಧಾನಿ ನರೇಂದ್ರ ಮೋದಿ ಜತೆ ಮುಂದಿನ ದಿನಗಳಲ್ಲಿ ಪಾಲುದಾರಿಕೆ ಹೆಚ್ಚಿಸುವ ಬಯಕೆ ಇದೆ ಎಂದಿದ್ದಾರೆ.

ಎಡಪಂಥೀಯರ ಧರ್ಮ-ವಿರೋಧಿ ಕಾರ್ಯಸೂಚಿಗೆ ನಮ್ಮ ವಿರೋಧವಿದೆ ಎಂದಿರುವ ಟ್ರಂಪ್, ನನ್ನ ಆಡಳಿತ ಕಾಲದಲ್ಲಿ ಹಿಂದೂ ಅಮೆರಿಕನ್ನರನ್ನು ರಕ್ಷಿಸುತ್ತೇನೆ. ಅವರ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತೇನೆ. ಭಾರತ ಮತ್ತು ಪ್ರಧಾನಿ ಮೋದಿ ಜತೆಗಿನ ಸಂಬಂಧವನ್ನು ಮತ್ತಷ್ಟು ಬಲಪಡಿಸುತ್ತೇವೆ ಎಂದು ಎನ್‌ಆರ್‌ಐಗಳಿಗೆ ಭರವಸೆ ನೀಡಿದ್ದಾರೆ.

ಬಾಂಗ್ಲಾದೇಶ ಪೂರ್ಣ ಅವ್ಯವಸ್ಥೆಯಲ್ಲಿದೆ. ಡೆಮಾಕ್ರೆಟಿಕ್ ಪಕ್ಷದ ಅಭ್ಯರ್ಥಿ ಕಮಲಾ ಹ್ಯಾರಿಸ್ ಮತ್ತು ಜೊ ಬೈಡನ್ ಪ್ರಪಂಚದ ವಿವಿಧೆಡೆಯ ಹಾಗೂ ಅಮೆರಿಕದಲ್ಲಿನ ಹಿಂದೂಗಳನ್ನು ನಿರ್ಲಕ್ಷಿಸಿದ್ದಾರೆ ಎಂದು ಟ್ರಂಪ್ ಟೀಕಿಸಿದ್ದಾರೆ.

ಟ್ರಂಪ್ ಪರ ಭಾರತೀಯರ ಪ್ರಚಾರ!

ಅನಿವಾಸಿ ಭಾರತೀಯರಿಗೆ ಟ್ರಂಪ್ ನೀಡಿದ ಭರವಸೆಯ ಮಾತಿಗೆ ಜಾಲತಾಣದಲ್ಲಿ ಭಾರತೀಯರಿಂದ ಮೆಚ್ಚುಗೆ ವ್ಯಕ್ತವಾಗಿದೆ. ಜನಪ್ರಿಯ ನೆಟ್ಟಿಗ ರಿಷಿ ಬಗ್ರೀ ಸೇರಿದಂತೆ ಹಲವರು 'ಶ್ವೇತಭವನಕ್ಕೆ ಟ್ರಂಪ್ ಮರಳಿದರೆ ಬಾಂಗ್ಲಾದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮತ್ತೆ ನೋಡಬಹುದಾಗಿದೆ' ಎಂದು ಪ್ರತಿಕ್ರಿಯಿಸಿದ್ದಾರೆ. ರಿತು ರಾಥೋಡ್ ಎಂಬಾಕೆ 'ಅಮೆರಿಕದಲ್ಲಿನ ಹಿಂದೂಗಳು ಟ್ರಂಪ್ ಮತ ಹಾಕುವುದಕ್ಕೆ ಈ ಭರವಸೆಯೇ ಸಾಕಿದೆ' ಎಂದು 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ. ಸ್ಟಾರ್ ಬಾಯ್ ತರುಣ್ ಎಂಬವರು 'ಧನ್ಯವಾದ ಪ್ರೆಸೆಂಡೆಂಟ್ ಟ್ರಂಪ್' ಎಂದೇ ಸಂಬೋಧಿಸಿ, 'ಕಮಲಾ ಹ್ಯಾರಿಸ್ ಗೆದ್ದು ಮಹಮದ್ ಯೂನುಸ್ ಪ್ರಬಲವಾಗುತ್ತಾರೆ. ಯೂನುಸ್ ಬಲಿಷ್ಠರಾದಷ್ಟೂ ಬಾಂಗ್ಲಾದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಹೆಚ್ಚುತ್ತದೆ. ಹಾಗಾಗಿ ಅಮೆರಿಕದಲ್ಲಿನ ಹಿಂದೂಗಳೆಲ್ಲರೂ ರಿಯಲ್ ಡೊನಾಲ್ಡ್ ಟ್ರಂಪ್‌ಗೆ ಮತ ನೀಡಬೇಕೆಂದು ಮನವಿ ಮಾಡುವೆ' ಎಂದು ಬರೆದಿದ್ದಾರೆ. ಜತೆಗೆ 'ಎಕ್ಸ್' ಗುರುತು ಹಾಕಿದ ಬೈಡನ್-ಯೂನುಸ್ ಅಪ್ಪಿಕೊಂಡಿರುವ ಫೋಟೋವನ್ನೂ ಲಗತ್ತಿಸಿದ್ದಾರೆ. ಇನ್ನೊಂದೆಡೆ, ಶ್ವೇತಭವನದಲ್ಲಿನ ದೀಪಾವಳಿ ಕಾರ್ಯಕ್ರಮದಲ್ಲಿ ಭಾಗವಹಿಸದೇ ಇದ್ದುದಕ್ಕೆ ಡೆಮಾಕ್ರೆಟಿಕ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿ ಕಮಲಾ ಹ್ಯಾರಿಸ್ ತೀವ್ರ ಟೀಕೆಗೆ ಒಳಗಾಗಿದ್ದಾರೆ.

ಶಿವಸೇನೆ ವಿರುದ್ಧ ಶಿವಸೇನೆ ಪೊಲೀಸ್ ದೂರು ದಾಖಲು

ಮುಂಬೈ: ಮಹಾರಾಷ್ಟ್ರ ವಿಧಾನಸಭೆ ಚುನಾವಣೆಯಲ್ಲಿ ಶಿವಸೇನೆ(ಶಿಂದೆ ಬಣ)ದಿಂದ ಕಣಕ್ಕಿಳಿದಿರುವ ಎನ್.ಸಿ.ಶೈನಾ, ಶಿವಸೇನೆ(ಉದ್ಧವ್ ಬಣ) ಸಂಸದ ಅರವಿಂದ್ ಸಾವಂತ್ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಿದ್ದಾರೆ.

ಕೆಲ ದಿನಗಳ ಹಿಂದಿನವರೆಗೂ ಬಿಜೆಪಿ ವಕ್ತಾರೆಯಾಗಿದ್ದ

ಶೈನಾ, ವಿಧಾನಸಭೆ ಚುನಾವಣೆಗೆ ಟಿಕೆಟ್ ಸಿಗದೇ ಇದ್ದುದಕ್ಕೆ ಪಕ್ಷ ತೊರೆದಿದ್ದರು. ಆ ಬಳಿಕ ಬಿಜೆಪಿ ಮಿತ್ರಪಕ್ಷವೇ ಆಗಿರುವ ಶಿವಸೇನೆ(ಶಿಂದೆ ಬಣ) ಸೇರಿ ಚುನಾವಣೆ ಕಣಕ್ಕಿಳಿದರು. ಈ ಹಿನ್ನೆಲೆಯಲ್ಲಿ ಶಿವಸೇನೆ(ಉದ್ಧವ್ ಬಣ) ಸಂಸದ ಅರವಿಂದ್ ಸಾವಂತ್, 'ಆಮದು ಮಾಲು' ಎಂದು 'ಎಕ್ಸ್' ಸಂದೇಶದಲ್ಲಿ ಟೀಕಿಸಿದ್ದರು. ಹಾಗಾಗಿಯೇ ಶೈನಾ ಅವರು ಸಂಸದ ಅರವಿಂದ್ ವಿರುದ್ಧ ಮಾನಹಾನಿ ಕ್ರಿಮಿನಲ್ ದೂರನ್ನು ಮುಂಬೈನ ನಾಗ್‌ಪಡಾ ಠಾಣೆಯಲ್ಲಿ ಶುಕ್ರವಾರ ದಾಖಲಿಸಿದ್ದಾರೆ. ಮಹಿಳೆಯ ಘನತೆಗೆ ಧಕ್ಕೆ, ಬಹಿರಂಗವಾಗಿ ಮಾನಹಾನಿ ಆರೋಪಗಳಡಿ ಸಂಸದ ಅರವಿಂದ್ ಸಾವಂತ್ ವಿರುದ್ಧ ಬಿಎನ್‌ಎಸ್ ಸೆಕ್ಷನ್ 79 ಮತ್ತು 356 (2) ಅನ್ವಯ ಎಫ್‌ಐಆರ್ ದಾಖಲಿಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಶೈನಾ, 'ನಮಗೆಲ್ಲಾ ಗೊತ್ತಿರುವಂತೆ ಮಹಾ ವಿನಾಶ್ ಅಘಾಡಿ ಮಹಿಳೆಯರನ್ನು ಎಂದೂ ಗೌರವಿಸುವುದೇ ಇಲ್ಲ. ನಾನು ಮಹಿಳೆ, ಮಾಲ್ ಅಲ್ಲ, ಮಾ ಮುಂಬಾ ದೇವಿಯ ಆಶೀರ್ವಾದ ನನಗಿದೆ. ಚುನಾವಣೆಯಲ್ಲಿ ಶಿವಸೇನೆ ಉದ್ಧವ್ ಠಾಕ್ರೆ ಬಣಕ್ಕೆ ತಕ್ಕ ಪಾಠ ಕಲಿಸುವೆ' ಎಂದಿದ್ದಾರೆ.

ವಿಶ್ವವಾಣಿ

@vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಬೆಂಗಳೂರು
ಶನಿವಾರ
02 | 11 | 2024

ಚಿತ್ತ ವಿಹಾರ

ಅನುಮಾನ ಪ್ರವೃತ್ತಿಯ ಹಿಂದೆ ಮುಂದೆ

ಅನುಮಾನದ ಸ್ವಭಾವ ಮನುಷ್ಯನ ಸಲ್ಲದ ನಡತೆ. ಕಾಮಾಲೆ ಕಣ್ಣಿಗೆ ಕಾಣುವುದೆಲ್ಲವೂ ಹಳದಿಯೇ ಎನ್ನುವಂತೆ ಅನುಮಾನ ಪಡುವ ವ್ಯಕ್ತಿಗೆ ಸತ್ಯದ ಅನಾವರಣವಾಗುವುದು ಸುಲಭವಲ್ಲ. ಇದೇ ಕಾರಣಕ್ಕಾಗಿ ಅನುಮಾನದಿಂದ ಉಂಟಾಗುವ ಅನಾಹುತಗಳನ್ನು ಕೆಲವು ಬಾರಿ ಕಲ್ಪಿಸಿಕೊಳ್ಳುವುದು ಕೂಡ ಅಸಾಧ್ಯ. ಅನುಮಾನದ ಗುಣ ಮನುಷ್ಯನ ಚಿತ್ತವೃತ್ತಿಗಳಲ್ಲಿ ಒಂದು ಎಂಬುದು ನಿಜವಾದರೂ ಅದು ಅತಿಯಾದಾಗ ಅಮಾನುಷ ಕೃತ್ಯಗಳಿಗೆ ಕಾರಣವಾಗುವುದನ್ನು ಅಲ್ಲಗಳೆಯಲಾಗುವುದಿಲ್ಲ.

ನೈಜ ಅರ್ಥದಲ್ಲಿ ಅನುಮಾನ ಎಂಬ ಪದವು ಪ್ರಮಾಣ, ಪುನಃ ಅಳೆಯುವುದು, ಪುನರ್ ವಿಮರ್ಶೆ ಎಂಬ ಅರ್ಥವನ್ನು ಕೊಡುತ್ತದೆ. ಮನುಷ್ಯ ತನ್ನ ತಿಳಿವಿಗಾಗಿ, ವಿಷಯದ ಸ್ಪಷ್ಟತೆಗಾಗಿ, ತನ್ನಲ್ಲಿ ಉಂಟಾಗಿರುವ ಸಂದೇಹಗಳಿಗೆ ಉತ್ತರ ಕಂಡುಕೊಳ್ಳುವ ಹಿನ್ನೆಲೆಯಲ್ಲಿ ಪ್ರಶ್ನಿಸುವುದು ಸಹಜವಾಗಿದೆ. ಇದು ನಮ್ಮ ಅರಿವಿನ ಪರಿಧಿಯನ್ನು ವಿಸ್ತರಿಸುವುದಕ್ಕೆ ಸಹಾಯ ಮಾಡುತ್ತದೆ. ಕಲಿಕೆಯಲ್ಲಿ ಉಂಟಾಗುವ ಹಿನ್ನಡೆಗಳಿಗೆ ಅನುಮಾನಿಸದಿರುವುದು, ಪ್ರಶ್ನೆಗಳನ್ನು ಕೇಳದಿರುವುದು ಬಹುಮುಖ್ಯ ಕಾರಣವಾಗಿರುತ್ತದೆ. ಬಾಲಕ ನರೇಂದ್ರನಿಗೆ ತನ್ನ ಮನಸ್ಸಿನಲ್ಲಿ ಉಂಟಾದ ಸಂಶಯವನ್ನು ನಿವಾರಿಸಿಕೊಳ್ಳಲು ತನಗೆ ಭೇಟಿಯಾದ ಪಂಡಿತರನ್ನೆಲ್ಲ ದೇವರು ನೀವು ನೋಡಿದ್ದೀರಾ ಎಂದು ಪ್ರಶ್ನಿಸುತ್ತಲೇ ಹೋಗುತ್ತಾನೆ. ಕೊನೆಗೊಮ್ಮೆ ರಾಮಕೃಷ್ಣ ಪರಮಹಂಸರ ಬಳಿ ಅವನ ಅನುಮಾನಕ್ಕೆ ಪರಿಹಾರ ಕೊಡುತ್ತದೆ. ಸತ್ಯವನ್ನು ದರ್ಶಿಸಲು ಕಾರಣವಾಗುತ್ತದೆ.

ನ್ಯೂಟನ್ ಹಣ್ಣಿನ ಮರದ ಕೆಳಗೆ ಕುಳಿತುಕೊಂಡ ಸಂದರ್ಭದಲ್ಲಿ ಮರದಿಂದ ಬಿದ್ದ ಹಣ್ಣು ಮೇಲಕ್ಕೆ ಹೋಗದೆ, ಅಲ್ಲಿಯೂ ನಿಲ್ಲದೇ ಕೆಳಕ್ಕೆ ಬಿದ್ದದ್ದು ಏಕೆ ಎಂಬ ಅನುಮಾನ ಭೂಮಿಯ ಗುರುತ್ವಾಕರ್ಷಣೆಯ ಶಕ್ತಿಯ ಕುರಿತಾಗ ಸಂಶೋಧನೆ ಮುಂದಾಗಲು ದಾರಿ ತೋರಿಸಿತು. ಇಂಥದೊಂದು ಸಂಶೋಧನೆಯೇ ವಿಜ್ಞಾನದ ಕ್ಷೇತ್ರದಲ್ಲಿ ಅಗಾಧ ಬೆಳವಣಿಗೆಗೆ ಕಾರಣವಾಯಿತು. ನಮ್ಮಲ್ಲಿ ಉಂಟಾಗುವ ಅನುಮಾನಗಳಿಂದಲೇ ಹೊಸ ಸಂಗತಿಗಳ ಅರಿವಿಗೆ ದಾರಿ ತೆರೆದುಕೊಳ್ಳುತ್ತದೆ. ಅನುಮಾನದಿಂದ ಹುಟ್ಟಿಕೊಳ್ಳುವ ಅನ್ವೇಷಣೆಯ ಕಾರಣದಿಂದಾಗಿ ವಾಸ್ತವಿಕತೆಯ ತಿಳಿವಳಿಕೆ ಮೂಡುತ್ತದೆ. ನಮ್ಮಲ್ಲಿ ಇರುವ ಅಜ್ಞಾನದ ಪರಿಧಿಯಾಚೆ ನಿಂತು ಸುಜ್ಞಾನದ ಬೆಳಕು ಪಸರಿಸಲು ಕಾರಣವಾಗುತ್ತದೆ. ಹಾಗಾಗಿಯೇ ನಾವು ಒಂದಷ್ಟು ಅನುಮಾನಿಸುವುದನ್ನೂ ಕೂಡ ರೂಢಿಸಿಕೊಳ್ಳಬೇಕು.

ಆದರೆ, ಇದಕ್ಕೊಂದು ಮಿತ ಇರಬೇಕು. ಅತಿಯಾದರೆ ಅಮೃತವೂ ವಿಷ ಎನ್ನುವ ಗಾದೆಯಂತೆ ಅನುಮಾನ ಅತಿಯಾಗದೇ ಮಿತ ಪ್ರಮಾಣದಲ್ಲಿ ಇದ್ದರೆ ಖಂಡಿತವಾಗಿಯೂ ಅದು ಹೊಸ ಹೊಸ ಅನ್ವೇಷಣೆಗಳಿಗೆ, ರಚನಾತ್ಮಕ ಕಾರ್ಯಗಳಿಗೆ ನಾಂದಿಯಾಗುತ್ತದೆ.

• ಮಹಾದೇವ ಬಸರಕೋಡ

ಹನಿಮಳೆ

ನಮ್ಮ ನಾಡು

ಕನ್ನಡ ನುಡಿ ಇದು
ಸುಲಿದ ಬಾಳೆಹಣ್ಣು
ಕನ್ನಡ ನಾಡು ಇದು
ಒಲಿದ ಸತ್ವ ಮಣ್ಣು

• ಮಹಾಂತೇಶ ಮಾಗನೂರ

ನಮ್ಮ ರೂವಾರಿ ನಾವೇ!

ನಮ್ಮನ್ನು ರಕ್ಷಿಸಿಕೊಳ್ಳುವ ಕಲೆಯನ್ನು ನಾವೇ ಬೆಳೆಸಿಕೊಳ್ಳಬೇಕು. ಕ್ಲಿಷ್ಟ ಪರಿಸ್ಥಿತಿಗಳಲ್ಲಿ ಬೇರೆಯವರಿಂದ ಸಹಾಯ ಹಸ್ತದ ನಿರೀಕ್ಷೆ ನಿರಾಶೆ ತರುವ ಸಾಧ್ಯತೆ ಇರುತ್ತದೆ. ಅಮೆರಿಕದಲ್ಲಿ, ಮೈನಸ್ 40 ಡಿಗ್ರಿ ತಾಪಮಾನ ತಲುಪುವ ಚಳಿಗಾಲದಲ್ಲಿ, ತೀವ್ರ ಚಳಿಗಾಳಿ ಬೀಸುವ ಸಂದರ್ಭದಲ್ಲಿ, ಕಾಡುಕೋಣ ಒಂದೇ ಬಿರುಗಾಳಿಗೆ ಎದುರಾಗಿ ಮುಖ ಕೊಟ್ಟು, ಅದೇ ಗಾಳಿಯನ್ನು ಸೇವಿಸುತ್ತಾ ನಿಲ್ಲುತ್ತದೆ. ಬಿರುಗಾಳಿಯನ್ನು ಮುಖಾಮುಖಿಯಾಗಿ ಎದುರಿಸಿ ಗೆಲುವು ಸಾಧಿಸುತ್ತದೆ. ಉಳಿದೆಲ್ಲ ಪ್ರಾಣಿಗಳು ಆಶ್ರಯ ಹುಡುಕಿಕೊಂಡು ಹೋಗಿ, ತಮ್ಮನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಿದರೆ, ಕಾಡುಕೋಣ, ಬಿರುಗಾಳಿಗೆ ಅಭಿಮುಖವಾಗಿ ಯಶಸ್ಸನ್ನು ಪಡೆಯುವ ಏಕೈಕ ಪ್ರಾಣಿಯಾಗಿ ನಿಲ್ಲುತ್ತದೆ.

ಜೀವನದಲ್ಲಿ ಅನಿರೀಕ್ಷಿತವಾಗಿ ಬೀಸುವ ಬಿರುಗಾಳಿಯನ್ನು

ಎದುರಿಸುವುದನ್ನು ನಾವು ಅಭ್ಯಾಸ ಮಾಡಿಕೊಳ್ಳಬೇಕು. ಜೀವನದ ಆಗು - ಹೋಗುಗಳ, ಒಳಿತು - ಕೆಡುಕುಗಳ ಜವಾಬ್ದಾರಿಯನ್ನು ನಾವೇ ತೆಗೆದುಕೊಂಡು, ಒಂದಿಷ್ಟು ಸವಾಲುಗಳಿಗೆ ಒಡ್ಡಿಕೊಳ್ಳಬೇಕು. ನಾವಿರುವ ಪರಿಸ್ಥಿತಿಗೆ ಹೊಂದಿಕೊಳ್ಳುವ ಕ್ಷಮತೆಯನ್ನು ನಾವೇ ಬೆಳೆಸಿಕೊಳ್ಳಬೇಕು. ಕೆಲವೊಮ್ಮೆ ಪರಿಸ್ಥಿತಿಯನ್ನು ಎದುರಿಸುತ್ತಾ, ಕೆಲವೊಮ್ಮೆ ಹೊಂದಿಕೊಳ್ಳುತ್ತಾ, ನಾವು ಸಾಗಬೇಕಾದ ದಾರಿಯನ್ನು ಸ್ಪಷ್ಟವಾಗಿ ಗುರುತಿಸುವುದು ನಮ್ಮ ಜಾಣ್ಮೆಗೆ ಸಂಬಂಧಿಸಿದ ವಿಷಯ.

ಎಷ್ಟೋ ಬಾರಿ ನಮ್ಮ ಸಾಧನೆಗೆ ಬೇಕಾದ ಸಂಪನ್ಮೂಲಗಳು ನಮ್ಮ ಕಣ್ಣ ಮುಂದೆಯೇ ಇದ್ದರೂ ಕಾಣದಾಗಿ ಬಿಡುತ್ತವೆ. ನಮಗೆ ಸುಲಭವಾಗಿ ಸಿಗುವ ಸಂಪನ್ಮೂಲಗಳ ಮೌಲ್ಯವನ್ನು ನಾವು ತಿಳಿಯದಿರುವುದೇ ಇದಕ್ಕೆ ಕಾರಣ. ನಾವು ತಲುಪಬೇಕಾದ ಗುರಿ ಎಷ್ಟೇ ದೂರದ್ದಾಗಿದ್ದರೂ, ರಸ್ತೆ ಎಂದಿಗೂ ನಮ್ಮ ಕಾಲ ಕೆಳಗೇ ಇರುತ್ತದೆ. ಹಾಗೆಯೇ, ಎಷ್ಟೇ ಉನ್ನತ ಗುರಿಯಾಗಿದ್ದರೂ, ಸಾಧನಗಳು ನಮ್ಮ ಹತ್ತಿರದಲ್ಲೇ ಇರುತ್ತವೆ. ಸಂಪನ್ಮೂಲಗಳನ್ನು ಸರಿಯಾಗಿ ಗುರುತಿಸಿ, ಅವುಗಳ ಮೌಲ್ಯವನ್ನು ಗಮನಿಸಿ, ಬಳಸಿಕೊಂಡು, ನಮ್ಮನ್ನು ಉದ್ಧರಿಸಿಕೊಳ್ಳಬೇಕಾದ ಜವಾಬ್ದಾರಿಯೂ ನಮ್ಮದೇ. ಯಾರೋ ಬಂದು ನಮ್ಮನ್ನು ಉದ್ಧರಿಸುತ್ತಾರೆ ಎಂದು ಕಾಯುತ್ತಾ ಕೂರುವುದು ಮೂರ್ಖತನವಾಗುತ್ತದೆ. ನಮ್ಮ ಯಶೋಗಾಥೆಯ ಬರಹಗಾರರು ನಾವೇ.

• ಮಾಯಾ ಬಾಲಚಂದ್ರ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine@gmail.com





ಕನ್ನಡದ ಅಕ್ಷರಗಳನ್ನು ವಿಶಿಷ್ಟವಾದ ವಿನ್ಯಾಸಕ್ಕೆ ಒಳಪಡಿಸಿ, ಕ್ಯಾಲಿಗ್ರಫಿ ಮೂಲಕ ಕನ್ನಡದ ಜ್ಞಾನಪೀಠ ಪ್ರಶಸ್ತಿ ವಿಜೇತರ ಸಾಹಿತಿಗಳಿಗೆ ಅರ್ಥಪೂರ್ಣ ನುಡಿನಮನ ಸಲ್ಲಿಸುವ ಕಲಾಕೃತಿಗಳ ಪ್ರದರ್ಶನ ಈಗ ನಡೆಯುತ್ತಿದೆ.

ಅಕ್ಷರ ಸಿಂಗಾರೋತ್ಸವ

• ಪ್ರೊ. ವಿ. ಎಸ್. ನಾಯಕ ಬಳಕೂರು

ಈಗ ಕನ್ನಡ ರಾಜ್ಯೋತ್ಸವದ ಸಂಭ್ರಮ. ಇದೇ ಸಂದರ್ಭದಲ್ಲಿ ನಮ್ಮ ನಾಡಿನ ಕಲಾವಿದರು ವಿಭಿನ್ನ ರೀತಿಯಲ್ಲಿ ರಾಜ್ಯೋತ್ಸವದ ಆಚರಣೆ ಮಾಡಲು ಹೊರಟಿದ್ದಾರೆ. ಇಲ್ಲಿನ ಸಪ್ತ ಕಲಾವಿದರು ಕನ್ನಡದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಕಲಾಕೃತಿಗಳನ್ನು ಮತ್ತು ಕನ್ನಡ ಅಕ್ಷರಗಳ ಕೆಲಿಗ್ರಫಿಯಲ್ಲಿ ರಚಿತ ಕಲಾಕೃತಿಗಳ ಪ್ರದರ್ಶನ ನಡೆಸಿದ್ದಾರೆ.

ಕಲಾವಿದರಾದ ಟಿ. ಡಿ. ಸುರೇಶ್‌ರವರು ರಾಷ್ಟ್ರಕವಿ ಕುವೆಂಪು, ದ ರಾ ಬೇಂದ್ರೆ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ವಿನಾಯಕ ಕೃಷ್ಣ ಗೋಕಾಕ್, ಯು. ಆರ್.ಅನಂತ ಮೂರ್ತಿ,



ಗಿರೀಶ್ ಕಾರ್ನಾಡ್, ಮತ್ತು ಚಂದ್ರಶೇಖರ್ ಕಂಬಾರ್ ಅವರ ರಚಿಸಿದ ಭಾವಚಿತ್ರಗಳ ಸರಣಿ ಗಮನ ಸೆಳೆಯುತ್ತಿದೆ. ಇದು ನಮ್ಮ ಸಾಹಿತಿಗಳಿಗೆ ನೀಡುತ್ತಿರುವ ಅಕ್ಷರ ನಮನ.

ಕನ್ನಡ ಕ್ಯಾಲಿಗ್ರಫಿಯಲ್ಲಿ (ವರ್ಣಲಿಪಿ) ಕಲಾತ್ಮಕವಾಗಿ ಕನ್ನಡ ಸಾಹಿತಿಗಳ ಕವನ, ಕಥೆಗಳಲ್ಲಿ ಬರುವ ನಾಡು ನುಡಿಯ ಮಹತ್ವವನ್ನು ಸಾರುವ ಹಿತ ನುಡಿಗಳು, ವಿಭಿನ್ನ ಸಂದೇಶಗಳು ಎಲ್ಲವನ್ನು ಈಕಲಾ ಪ್ರದರ್ಶನದಲ್ಲಿ ವೀಕ್ಷಿಸಬಹುದು. ಕನ್ನಡ ನಾಡಿನ ಕವಿ ಸಾಹಿತಿಗಳ ಮೌಲಿಕ ವಿಚಾರಧಾರೆಗಳನ್ನು ಕ್ಯಾಲಿಗ್ರಪಿ ಮಾಧ್ಯಮದಲ್ಲಿ ರಚಿಸಿ ಜನಮನ ಗೆದ್ದಿರುವುದು ವಿಶೇಷ. ಇದರಿಂದ ಕನ್ನಡದ ಬಗ್ಗೆ ಅಪಾರ ಅಭಿಮಾನ ಮೂಡಿಸುವಲ್ಲಿ, ಕನ್ನಡ ಭಾಷೆಯನ್ನು ಉಳಿಸುವ ನಿಟ್ಟಿನಲ್ಲಿ ಇವರ ಕಾರ್ಯ ಶ್ಲಾಘನೀಯ.

ಕ್ಯಾಲಿಗ್ರಫಿ ಒಂದು ಅಪರೂಪದ ಕಲೆ; ಅಕ್ಷರಗಳಲ್ಲೇ ವಿನ್ಯಾಸ ಮೂಡಿಸಿ, ಚಿತ್ರದಂತೆ ಪ್ರಸ್ತುತಪಡಿಸುವುದು ಈ ಕಲೆಯ ಅನನ್ಯತೆ. ವಿಶೇಷವೇನೆಂದರೆ ಕನ್ನಡ ಭಾಷೆಯಲ್ಲಿ ಕ್ಯಾಲಿಗ್ರಪಿ ಮಾಡುವುದು ಬಹಳ ವಿರಳ; ಇದನ್ನು ಅಭ್ಯಸಿಸಿದವರೂ ತುಸು ಕಡಿಮೆ ಎಂದೇ ಹೇಳಬಹುದು. ಆದರೆ ಇಲ್ಲಿನ ಕಲಾವಿದರು ಕನ್ನಡ ರಾಜ್ಯೋತ್ಸವದ ಸುಸಂದರ್ಭದಲ್ಲಿ ಕನ್ನಡ ಭಾಷೆಯ ಹಿರಿಮೆ ಗರಿಮೆಯನ್ನು ಸಾರಲು ಈ ರೀತಿಯ ಅದ್ಭುತ ಕಾರ್ಯವನ್ನು ಮಾಡಿದ್ದಾರೆ.

ಪ್ರದರ್ಶನದ ಸ್ಥಳ

- ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪಾರಸ್ತೆ, ಬೆಂಗಳೂರು
- ಪ್ರದರ್ಶನದ ದಿನಾಂಕ: ಅಕ್ಟೋಬರ್ 31 ರಿಂದ ನವಂಬರ್ 5ರವರೆಗೆ
- ಸಮಯ: ಬೆಳಿಗ್ಗೆ 10 ರಿಂದ ಸಂಜೆ 7 ಗಂಟೆಯವರೆಗೆ

ಈ ಅಕ್ಷರ ಸಿಂಗರೋತ್ಸವದಲ್ಲಿ ಕಲಾವಿದರ ಕೈಚಳಕದಲ್ಲಿ ಕನ್ನಡದ ಅಕ್ಷರಗಳು ಕಲಾಕೃತಿಗಳಾಗಿ ಎಲ್ಲರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಒಬ್ಬ ಕಲಾವಿದ ರಚಿಸಿದ, ಕನ್ನಡಕ್ಕೆ ಬಂದ ಎಂಟು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕಲಾಕೃತಿಗಳು ಅದ್ಭುತವಾಗಿ ಎಲ್ಲರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಇಲ್ಲಿನ ಕಲಾಕೃತಿಗಳಲ್ಲಿ ಅರ್ಥಪೂರ್ಣ ವಿಷಯ ವಸ್ತು, ನೆರಳು ಮತ್ತು ಬೆಳಕಿನ ಪ್ರತಿಫಲನ, ಕಲಾಕೃತಿಗಳಿಗೆ ತಕ್ಕಂತೆ ಬಣ್ಣಗಳ ಲೇಪನ, ವರ್ಣ ರಂಜಿತ ಅಕ್ಷರಗಳ ಮೋಡಿ, ಆಕರ್ಷಕ ವಿನ್ಯಾಸ, ಮನ ಸೆಳೆಯುವ ರೇಖೆಗಳ ಚಲನೆ ಇವೆಲ್ಲವೂ ಕಲಾಸಕ್ತರ ಗಮನ ಸೆಳೆಯುತ್ತದೆ.

ಜಾಗತಿಕ ಸಿನಿಮೋತ್ಸವದಲ್ಲಿ ಕನ್ನಡ ಚಿತ್ರಗಳು

• ಕುಮಾರ ಬೇಂದ್ರೆ

ನವೆಂಬರ್ 20ರಿಂದ 28ರ ವರೆಗೆ 55ನೇ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ಗೋವಾದ ಪಣಜಿಯಲ್ಲಿ ನಡೆಯಲಿದ್ದು, ಈ ಚಿತ್ರೋತ್ಸವದ ಪನೋರಮಾ ಫೀಚರ್ ಫಿಲ್ಮ್ ವಿಭಾಗಕ್ಕೆ ಕನ್ನಡದ 'ವೆಂಕ್ಯಾ' ಹಾಗೂ 'ಕೆರೆಬೇಟೆ' ಚಿತ್ರಗಳು ಆಯ್ಕೆಯಾಗಿವೆ. ಈ ಚಿತ್ರೋತ್ಸವದಲ್ಲಿ ಭಾರತೀಯ ಪನೋರಮಾ ವಿಭಾಗ ಪ್ರಮುಖವಾಗಿದೆ. ಇದರಲ್ಲಿ 25 ಫೀಚರ್ ಫಿಲ್ಮ್‌ಗಳು ಹಾಗೂ 20 ನಾನ್-ಫೀಚರ್ ಫಿಲ್ಮ್‌ಗಳು ಪ್ರದರ್ಶನಕ್ಕೆ ಆಯ್ಕೆಯಾಗಿವೆ. ಭಾರತೀಯ ಪನೋರಮಾ ವಿಭಾಗದ ಆರಂಭಿಕ ಸಿನಿಮಾವಾಗಿ ಬಾಲಿವುಡ್‌ನ ಸ್ವಾತಂತ್ರ್ಯ ವೀರ 'ವೀರ್ ಸಾವರ್ಕರ್' ಸಿನಿಮಾ ಪ್ರದರ್ಶನವಾಗಲಿದೆ. ಎರಡನೇ ಸಿನಿಮಾವಾಗಿ ಕನ್ನಡದ 'ಕೆರೆಬೇಟೆ' ಆಯ್ಕೆಯಾಗಿದೆ. ಅಲ್ಲದೇ ಆಯ್ಕೆಯಾದ ಸಿನಿಮಾಗಳ ಪಟ್ಟಿಯಲ್ಲಿ 'ವೆಂಕ್ಯಾ' ಚಿತ್ರ ಕೂಡ 3ನೇ ಸ್ಥಾನದಲ್ಲಿದೆ. ಇದು ಕನ್ನಡಿಗರಿಗೆ ನಿಜಕ್ಕೂ ಹೆಮ್ಮೆಯ ವಿಚಾರವಾಗಿದೆ! ಇವುಗಳೊಂದಿಗೆ ಮಲಯಾಳಂ, ತಮಿಳು, ಮರಾಠಿ, ಬೆಂಗಾಲಿ, ತೆಲುಗು ಭಾಷೆಯ ಸಿನಿಮಾಗಳನ್ನು ಕೂಡ ಆಯ್ಕೆ ಮಾಡಲಾಗಿದೆ.

ವೆಂಕ್ಯಾ

ಅಪೇಕ್ಷಾ ಒಡೆಯರ್ ಮತ್ತು ಪವನ್ ಒಡೆಯರ್ ನಿರ್ಮಾಣದಲ್ಲಿ ಸಾಗರ್ ಪುರಾಣಿಕ್ ನಿರ್ದೇಶಿಸಿ ನಟಿಸಿರುವ ವೆಂಕ್ಯಾ ಚಿತ್ರ ಉತ್ತರ ಕರ್ನಾಟಕದ ಕಥೆ ಆಧರಿಸಿದ್ದು, ಪ್ರಾದೇಶಿಕ ಸೊಗಡಿನ ಕಲಾತ್ಮಕ ನಿರೂಪಣೆಯಿಂದ ಗಮನ ಸೆಳೆಯುತ್ತದೆ. 'ಡೊಳ್ಳು' ಚಿತ್ರದ ಮೂಲಕ ನಿರ್ಮಾಣಕ್ಕಿಳಿದು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಪಡೆದಿದ್ದ ಪವನ್ ಒಡೆಯರ್ ಹಾಗೂ ಸಾಗರ್ ಪುರಾಣಿಕ್ ಅವರ ತಂಡದಿಂದ 'ವೆಂಕ್ಯಾ' ಚಿತ್ರ ಮೂಡಿಬಂದಿದೆ.

ಕೆರೆಬೇಟೆ

ಕೆರೆಬೇಟೆ ಎಂದರೆ ಮಲೆನಾಡ ಭಾಗದದಲ್ಲಿ ಮೀನು ಬೇಟೆಯಾಡುವ ಒಂದು ಪದ್ಧತಿ. ಮಲೆನಾಡ ಭಾಗದಲ್ಲಿ ವರ್ಷಕ್ಕೊಮ್ಮೆ ದೊಡ್ಡ ಕೆರೆಗಳಲ್ಲಿ ಕೆರೆಬೇಟೆ ಆಡುತ್ತಾರೆ. ಸೊರಬ ಸುತ್ತಮುತ್ತ ಇದರ ಆಚರಣೆಯನ್ನು ದೊಡ್ಡಮಟ್ಟದಲ್ಲಿ ಮಾಡಲಾಗುತ್ತದೆ. ಈ 'ಕೆರೆಬೇಟೆ' ಚಿತ್ರದಲ್ಲಿ ಈ ಅಂಶವನ್ನೇ ಮುಖ್ಯವಾಗಿ ಇಟ್ಟುಕೊಂಡ ಕತೆಯಿದೆ. ಅಪ್ಪಟ ಗ್ರಾಮೀಣ ಸೊಗಡಿನ ಸಿನಿಮಾ ಇದಾಗಿದ್ದು, ನಿರ್ದೇಶಕ ರಾಜ್ ಗುರು ಮಲೆನಾಡ ಭಾಗದ ಸೊಡಗನ್ನು ಈ ಚಿತ್ರದ ಮೂಲಕ ಹೇಳಿದ್ದಾರೆ. ಕನ್ನಡದ 'ಜೋಕಾಲಿ' 'ರಾಜಹಂಸ' ಸಿನಿಮಾಗಳಲ್ಲಿ ನಟಿಸಿರುವ ಗೌರಿ ಶಂಕರ್ ಈ ಸಿನಿಮಾದಲ್ಲಿ ನಾಯಕ ಆಗಿ ನಟಿಸಿದ್ದು, ಜೈ ಶಂಕರ್ ಪಟೇಲ್ ಹಾಗೂ ಗೌರಿ ಶಂಕರ್ ಇಬ್ಬರೂ 'ಜನಮನ ಸಿನಿಮಾ' ಬ್ಯಾನರ್ ಅಡಿಯಲ್ಲಿ ನಿರ್ಮಾಣ ಮಾಡಿದ್ದಾರೆ. ಗಗನ್ ಬಡೇರಿಯಾ ಸಂಗೀತ ಸಂಯೋಜನೆ ಮಾಡಿದ್ದಾರೆ. ನಿರ್ದೇಶಕ ರಾಜ್‌ಗುರು ಅವರು ಕಳೆದ ಹತ್ತು ವರ್ಷಗಳಿಂದ

ಕನ್ನಡ ಚಿತ್ರರಂಗದಲ್ಲಿ ಎ. ಆರ್. ಬಾಬು, ಪವನ್ ಒಡೆಯರ್ ಮುಂತಾದ ನಿರ್ದೇಶಕರ ಜೊತೆ ಸಹ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಇದೇ ಮೊದಲ ಬಾರಿಗೆ ಅವರು ಸ್ವತಂತ್ರ ನಿರ್ದೇಶಕರಾಗಿದ್ದು, ತಮ್ಮ ಮೊದಲ ಪ್ರಯತ್ನದ ಚಿತ್ರವೇ 55ನೇ ಭಾರತೀಯ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಪನೋರಮಾ ಫೀಚರ್ ಫಿಲ್ಮ್ ವಿಭಾಗಕ್ಕೆ ಆಯ್ಕೆಯಾಗಿದೆ.

ಹಿಮಾಚಲ ಪ್ರದೇಶದ ಮನಾಲಿಯು ಒಂದು ಪ್ರಸಿದ್ಧ ಪ್ರವಾಸಿ ತಾಣ. ಅದೇ ರೀತಿ, ಇದು ಪುರಾತನ ಸ್ಥಳವೂ ಹೌದು. ಬಹಳ ಹಳೆಯದು ಎನ್ನಬಹುದಾದ ಕೆಲವು ದೇವಾಲಯಗಳು ಮನಾಲಿಯಲ್ಲಿದ್ದು, ಇಂದು ಅವು ಸಹ ಪ್ರವಾಸಿಗಳ ಗಮನ ಸೆಳೆಯುತ್ತಿವೆ. ಇವುಗಳನ್ನು ಹಿಮ ಶಿಖರಗಳ ಮಧ್ಯೆ ಇರುವ ದೇಗುಲಗಳು ಎನ್ನಬಹುದು.

ಮನಾಲಿಯ ಪುರಾತನ ದೇವಾಲಯಗಳು

• ವೀಣಾ ಭಟ್

ಹಿಮಾಚಲ ಪ್ರದೇಶದ ಮನಾಲಿಗೆ ಪ್ರವಾಸಕ್ಕೆ ಬರುವವರು ಅಲ್ಲಿನ ಪುರಾತನ ಮತ್ತು ವಿಶಿಷ್ಟ ದೇವಾಲಯಗಳನ್ನು ಕೂಡ ನೋಡಲು ಇಷ್ಟಪಡುತ್ತಾರೆ. ಹಿಮಾಚಲಿಗಳು ಇನ್ನೂ ಹಳೆಯ ಸಂಪ್ರದಾಯದಲ್ಲಿ ಆ ದೇಗುಲಗಳನ್ನು, ಹಳೆಯ ಸಂಪ್ರದಾಯವನ್ನು ಉಳಿಸಿಕೊಂಡು ಬೆಳೆಸುತ್ತಿದ್ದಾರೆ.

ಹಿಡಿಂಬಾ ದೇವಿ ದೇವಾಲಯ

ಹಿಡಿಂಬಾ ದೇವಿ ದೇವಾಲಯವನ್ನು ಸ್ಥಳೀಯವಾಗಿ ಧುಂಗಾರಿ ದೇವಾಲಯ ಎಂದು ಕರೆಯುತ್ತಾರೆ, ಹಡಿಂಬಾ ದೇವಾಲಯ ಎಂದೂ ಕರೆಯುತ್ತಾರೆ. ಈ ದೇವಾಲಯವು ಹಿಮಾಲಯದ ತಪ್ಪಲಿನಲ್ಲಿರುವ ಧುಂಗಿರಿ ವಾನ್ ವಿಹಾರ್ ಎಂಬ ದೇವದಾರು ವನದಿಂದ ಆವೃತವಾಗಿದೆ. ಈ ದೇವಾಲಯವನ್ನು 1553 ರಲ್ಲಿ ಮಹಾರಾಜ ಬಹದ್ದೂರ್ ಸಿಂಗ್ ನಿರ್ಮಿಸಿದನು. ದೇವಿ ಹಿಡಿಂಬೆ ಧ್ಯಾನ ಮಾಡಿದ ಗುಹೆಯ ಸುತ್ತಲೂ ಈ ದೇವಾಲಯವನ್ನು ನಿರ್ಮಿಸಲಾಗಿದೆ. ಈ ದೇವಾಲಯವನ್ನು ಬಂಡೆಯ ಮೇಲೆ ನಿರ್ಮಿಸಲಾಗಿದ್ದು, ಬೇರೆ ದೇವಾಲಯಗಳಿಗೆ ಹೋಲಿಕೆ ಮಾಡಿದರೆ ಇದು ಬಹಳ ವಿಶಿಷ್ಟವಾಗಿದೆ. ಮರದ ಬಾಗಿಲುಗಳು, ಗೋಡೆಗಳು ಮತ್ತು ಪಗೋಡ ಶೈಲಿಯ ಛಾವಣಿಯನ್ನು ಹೊಂದಿದೆ. ಗೋಪುರವು ಮರದ ಹೆಂಚುಗಳಿಂದ ಮುಚ್ಚಲ್ಪಟ್ಟ ಮೂರು ಛಾವಣಿಗಳನ್ನು ಮತ್ತು ಮೇಲ್ಭಾಗದಲ್ಲಿ ನಾಲ್ಕನೇ ಹಿತ್ತಾಳೆಯ ಕೋನ್-ಆಕಾರದ ಛಾವಣಿಯನ್ನು

ದೇವಾಲಯ ಎಂದು ಹೇಳಲಾಗುತ್ತದೆ. ದೇವಾಲಯವಿರುವ ಸ್ಥಳವು ತನ್ನ ಪ್ರಾಕೃತಿಕ ದೃಶ್ಯಗಳಿಂದ ಪ್ರವಾಸಿಗರಿಗೆ ತನ್ನತ್ತ ಸೆಳೆಯುತ್ತದೆ. ಪ್ರಶಾಂತವಾದ ವಾತಾವರಣ, ಶುದ್ಧವಾದ ಗಾಳಿ, ಆಹ್ಲಾದಕರವಾದ ಹವಾಮಾನವನ್ನು ಈ ದೇವಾಲಯದ ಬಳಿ ಆಸ್ವಾದಿಸಬಹುದು. ಮನು ದೇವಾಲಯವು ಹಳೆಯ ಮನಾಲಿಯಲ್ಲಿದೆ, ಮುಖ್ಯ ಮಾರುಕಟ್ಟೆಯಿಂದ ಮೂರು ಕಿಲೋಮೀಟರ್ ದೂರದಲ್ಲಿದೆ.

ವಶಿಷ್ಠ ದೇವಾಲಯ

ಒಳಗೊಂಡಿದೆ. ಭೂಮಾತೆ ದುರ್ಗಾ ಮುಖ್ಯ ಬಾಗಿಲಿನ ಕೆತ್ತನೆಗಳ ವಿಷಯವಾಗಿದೆ. ದೇವಾಲಯದ ತಳಭಾಗವು ಸುಣ್ಣಬಣ್ಣದ, ಮಣ್ಣಿನಿಂದ ಆವೃತವಾದ ಕಲ್ಲಿನಿಂದ ಮಾಡಲ್ಪಟ್ಟಿದೆ. ದೇವಾಲಯದ ಒಳಭಾಗದಲ್ಲಿ ಅಗಾಧವಾದ ಬಂಡೆಯು ಆಕ್ರಮಿಸಿಕೊಂಡಿದೆ; ಕೇವಲ 3 ಇಂಚು ಎತ್ತರದ ಹಿತ್ತಾಳೆ ಚಿತ್ರವು ಹಿಡಿಂಬಾ ದೇವಿಯನ್ನು ಪ್ರತಿನಿಧಿಸುತ್ತದೆ.

ದೇವಾಲಯದ ಒಳಗೆ ಕಲ್ಲಿನ ಮೇಲೆ ಕೆತ್ತಿದ ದೇವಿಯ ಪಾದಗಳ ಮುದ್ರೆಯನ್ನು ಪೂಜಿಸಲಾಗುತ್ತದೆ. ದೇವಸ್ಥಾನದಿಂದ ಸುಮಾರು ಎಪ್ಪತ್ತು ಮೀಟರ್ ದೂರದಲ್ಲಿ ಹಿಡಿಂಬೆಯ ಮಗ ಘಟೋತ್ಕಚನ ದೇವಾಲಯವಿದೆ.

ಮನುಋಷಿ ದೇವಾಲಯ

ಇದು ಮನು ಋಷಿಗೆ ಅರ್ಪಿತವಾದ ಏಕೈಕ

ವಶಿಷ್ಠ ಭಾರತದ ಹಿಮಾಚಲ ಪ್ರದೇಶದ ಕುಲು ಜಿಲ್ಲೆಯ ಒಂದು ಹಳ್ಳಿ . ಮನಾಲಿಯಿಂದ 3 ಕಿ.ಮೀ ದೂರದಲ್ಲಿ ಬಿಯಾಸ್ ನದಿ ತಟದಲ್ಲಿದೆ. ಈ ಗ್ರಾಮವು ಗಂಧಕಯುಕ್ತ ಬಿಸಿನೀರಿನ ಬುಗ್ಗೆಗಳಿಗೆ ಹೆಸರುವಾಸಿಯಾಗಿದೆ ಮತ್ತು ಬುಗ್ಗೆಗಳ ಪಕ್ಕದಲ್ಲಿ ನಿರ್ಮಿಸಲಾದ ಭಗವಾನ್ ವಶಿಷ್ಠ, ಭಗವಾನ್ ಶಿವ ಮತ್ತು ಭಗವಾನ್ ರಾಮನಿಗೆ ಸಮರ್ಪಿತವಾದ ಮೂರು ಪ್ರಮುಖ ದೇವಾಲಯಗಳಿವೆ. ಈ ಚಿಲುಮೆಯ ಬಿಸಿ ನೀರು ಚರ್ಮ ರೋಗಗಳನ್ನು ಶಕ್ತಿಯನ್ನು ಹೊಂದಿದೆ ಎಂದು ನಂಬಲಾಗಿದೆ. ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕ ಸ್ನಾನಗೃಹಗಳಿವೆ. ಈ ಗ್ರಾಮದ ಮುಖ್ಯ ಭಾಗದಲ್ಲಿ ಮನೆಗಳು ಮತ್ತು ಸೇಬು ತೋಟಗಳಿವೆ.

ವಶಿಷ್ಠ ದೇವಾಲಯದ ಪಕ್ಕದಲ್ಲಿ ರಾಮ ದೇವಾಲಯ ಎಂದು ಕರೆಯಲ್ಪಡುವ ಮತ್ತೊಂದು ಪ್ರಾಚೀನ ಕಲ್ಲಿನ ದೇವಾಲಯವೂ ಇದೆ. ಇಲ್ಲಿಂದ ಬಿಯಾಸ್ ನದಿ ಮತ್ತು ಹಳೆಯ ಮನಾಲಿಯ ಅತ್ಯುತ್ತಮ ನೋಟ ಲಭ್ಯ. ಛಾಯಾಗ್ರಹಣಕ್ಕೆ ಉತ್ತಮವಾಗಿದೆ.

ದುರ್ಗಾ ದೇವಾಲಯ

ಮನಾಲಿಯ ಜನನಿಬಿಡ ಮಾಲ್ ರಸ್ತೆಯಲ್ಲಿರುವ ಒಂದು ಸಣ್ಣ ದೇಗುಲವೇ ದುರ್ಗಾ ದೇವಸ್ಥಾನ. ಜನನಿಬಿಡ ಮಾಲ್ ರಸ್ತೆಯಲ್ಲಿ ಪ್ರವಾಸಿಗರೇ ಹೆಚ್ಚು. ಶಾಪಿಂಗ್ ಬಂದವರು ದೇವಿಯ ದರ್ಶನವನ್ನು ಮಾಡಿಕೊಂಡು ಹೋಗುತ್ತಾರೆ.

ಸಮಾಚಾರ ಸಣ್ಣದಲ್ಲ

ಏಕೀಕರಣ ಫಲದಿಂದ ಕನ್ನಡ ರಾಜ್ಯೋತ್ಸವ

ಜಗಳೂರು: ಹರಿದು ಹಂಚಿ ಹೋಗಿದ್ದ, ಕರ್ನಾಟಕ ಏಕೀಕರಣಗೊಂಡ ಪ್ರತಿಫಲವಾಗಿ ಕನ್ನಡ ರಾಜ್ಯೋತ್ಸವ ಆಚರಿಸುತ್ತಿದ್ದೇವೆ ಎಂದು ಶಾಸಕ ಬಿ ದೇವೇಂದ್ರಪ್ಪ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಪಟ್ಟಣದ ಬಯಲು ರಂಗಮಂದಿರದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ, ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ಪಟ್ಟಣ ಪಂಚಾಯತಿ ಸಹಯೋಗದಲ್ಲಿ 69 ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿಜಯನಗರ ಪತನಗೊಂಡ ನಂತರ 1565 ರಲ್ಲಿ ಹರಿದು ಹಂಚಿ ಹೋಗಿದ್ದ ಕರ್ನಾಟಕ ನಂತರ 391 ವರ್ಷಗಳಲ್ಲಿ ಒಂದಾಗಿದ್ದರ ಫಲವಾಗಿ ನಾವು ಪ್ರತಿ ವರ್ಷ ಅದರ ಸವಿ ನೆನಪಿಗಾಗಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ನವೆಂಬರ್ 1ರಂದು ಮಾಡುತ್ತಿದ್ದು, ಕರ್ನಾಟಕ ಒಂದು ಪ್ರದೇಶ ಆದರೆ ಹಲವು ಜಗತ್ತಗಳನ್ನು ಒಳಗೊಂಡಿದೆ ಇಂತಹ ಅತ್ಯುದ್ಬುತವಾದ ಕನ್ನಡ ನಾಡನ್ನು ಕರ್ನಾಟಕದ ಪ್ರತಿಯೊಬ್ಬ ಕನ್ನಡಿಗರು ಅಂತರಾಳದಿಂದ ಪ್ರೀತಿಸಿದಾಗ ಮಾತ್ರವಲ್ಲದೆ ಅಂದವಾದ ಕನ್ನಡವನ್ನು ಪ್ರತಿಯೊಬ್ಬ ಕನ್ನಡಿಗರು ಪರ ಭಾಷೆಯ ವ್ಯಾಮೋಹ ಬಿಟ್ಟು ಚಂದವಾಗಿ ಮಾತನಾಡಿದಾಗ ಮಾತ್ರ ಕನ್ನಡ ಭಾಷೆ, ನೆಲ,ಜಲ ಕನ್ನಡ ಪ್ರೇಮ ಉಳಿಯುವುದಕ್ಕೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು. ತಹಸೀಲ್ದಾರ್ ಸೈಯದ್ ಕಲೀಂ ಉಲ್ಲಾ ಮಾತನಾಡಿದರು.

ಈ ಸಂದರ್ಭದಲ್ಲಿ ಪಪಂ ಅಧ್ಯಕ್ಷ ನವೀನ್ ಕುಮಾರ್, ಕಾಂಗ್ರೆಸ್ ಮುಖಂಡ ಮಹೇಶ್ವರಪ್ಪ ತಾಪಂ ಇಓ ಕೆಂಚಪ್ಪ,ಪಪಂ ಮುಖ್ಯಾಧಿಕಾರಿ ಲೋಕ್ಯನಾಯ್ಕ ಸಿಪಿಐ ಶ್ರೀನಿವಾಸ್‌ರಾವ್,ಬಿಇಓ ಹಾಲುಮೂರ್ತಿ, ಸಮಾಜ ಕಲ್ಯಾಣಧಿಕಾರಿ ಪರಮೇಶ್ವರಪ್ಪ, ಬೀರೇಂದ್ರಕುಮಾರ್, ಡಿಎಸ್‌ಎಸ್ ಸತೀಶ್,ರ್ರಿಸ್ವಾಮಿ,ಶಿಕ್ಷಕರಾದ ಸುರೇಶ್‌ರೆಡ್ಡಿ, ಓ ತಿಪ್ಪೇಸ್ವಾಮಿ ಸೇರಿದಂತೆ ಹಲವರಿದ್ದರು.

ಕನ್ನಡದ ಬಾವುಟ ಸ್ವಾಭಿಮಾನದ ಸಂಕೇತ

ಚನ್ನಗಿರಿ: ಸಮಸ್ತ ಕನ್ನಡಿಗರ ಸ್ವಾಭಿಮಾನದ ಸಂಕೇತ ವಾದ ಕನ್ನಡದ ಬಾವುಟವನ್ನು ನವೆಂಬರ್ 1 ರ ರಾಜ್ಯೋತ್ಸವದ ಸಂಭ್ರಮದಂದು ಎಲ್ಲ ಕನ್ನಡಿಗರು

ತಮ್ಮ ಮನೆಯ ಮೇಲೆ ಹಾರಿಸುವ ಮೂಲಕ ಕನ್ನಡದ ಕಣ್ವ ಎಂದೇ ಪ್ರಖ್ಯಾತರಾದ ಬಿ.ಎಂ.ಶ್ರೀಕಂಠಯ್ಯನವರು ರಚಿಸಿದ ''ಏರಿಸಿ ಹಾರಿಸಿ ಕನ್ನಡದ ಬಾವುಟ, ಹಾರಿಸಿ ತೋರಿಸಿ ಕೆಚ್ಚೆದೆಯ ಬಾವುಟ ಎನ್ನುವಂತೆ ಅರ್ಥಪೂರ್ಣವಾಗಿ ಕನ್ನಡ ಪ್ರೇಮವನ್ನು ಮೆರೆಯೋಣ ಎಂದು ಚನ್ನಗಿರಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಬಸವಾಪಟ್ಟಣದ ಎಲ್.ಜಿ.ಮಧುಕುಮಾರ್ ಕರೆ ನೀಡಿದ್ದಾರೆ. ನವೆಂಬರ್ 1 ರಂದು ರಾಜ್ಯೋತ್ಸವವನ್ನು ಪ್ರತಿಯೊಬ್ಬ ಕನ್ನಡಿಗರು ಕರ್ನಾಟಕ ಅಷ್ಟೇ ಅಲ್ಲದೇ ಗಡಿನಾಡಿನಾಚೆಗೂ ಸಂಭ್ರಮದಿಂದ ಆಚರಿಸುತ್ತಾರೆ. ಅದರೊಂದಿಗೆ ಈ ಬಾರಿ ಪ್ರತಿಯೊಬ್ಬ ಕನ್ನಡಿಗನೂ ನಮ್ಮ ಭಾಷೆ, ಸಂಸ್ಕೃತಿ, ಪರಂಪರೆಯ ಧ್ಯೋತಕವಾದ ಕನ್ನಡದ ಧ್ವಜವನ್ನು ಸ್ವ-ಇಚ್ಛೆಯಿಂದ, ಹೆಮ್ಮೆಯಿಂದ ಪ್ರತಿಯೊಬ್ಬರ ಮನೆಯ ಮೇಲೆ ಹಾರಿಸುವ ಮೂಲಕ ಕನ್ನಡದ ಹಬ್ಬವನ್ನು ಆಚರಿಸಬೇಕಾಗಿದೆ. ಈಗಿರುವ ಕನ್ನಡ ಬಾವುಟದ ಹಳದಿ ಬಣ್ಣವು ಕನ್ನಡಿಗರ ಸ್ವಾಭಿಮಾನ, ಶಾಂತಿ ಮತ್ತು ರಕ್ಷಣೆಯ ಪ್ರತೀಕ. ಜತೆಗೆ ಕನ್ನಡ ನಾಡು ಚಿನ್ನದ ಬೀಡು ಎಂಬುದನ್ನು ಪ್ರತಿಪಾದಿಸುತ್ತದೆ. ಕೆಂಪು ಬಣ್ಣವು ಕನ್ನಡಿಗರ ಕ್ಷಾತ್ರತೇಜ, ತ್ಯಾಗ ಮತ್ತು ಕ್ರಾಂತಿಯ ಪ್ರತೀಕವಾಗಿದೆ .ಆಗಾಗಿ ಎಲ್ಲೆಡೆಯೂ ಹಳದಿ ಕೆಂಪು ಬಣ್ಣಗಳ ಬಾವುಟ ರಾರಾಜಿಸಲಿ. ಸ್ಫೂರ್ತಿಯ ಸೆಲೆ ಎಲ್ಲೆಡೆಯೂ ಪಸರಿಸಲಿ.ಎಲ್ಲರ ಮನ-ಮನೆಗಳಲ್ಲೂ ಕನ್ನಡತನ ಮೆರೆಯಲಿ ಎಂದು ಎಲ್.ಜಿ.ಮಧುಕುಮಾರ್ ಆಶಯ ವ್ಯಕ್ತಪಡಿಸಿದ್ದಾರೆ.

ಪರವಾನಗಿ ರಹಿತ ಪಟಾಕಿ ಮಾರಾಟ

ಹೊಸದುರ್ಗ: ಪರವಾನಗಿ ಪಡೆಯದೇ ಪಟಾಕಿ ಮಾರಾಟ ಮಾಡುವುದನ್ನು ನಿಷೇಧಿಸಿದ್ದು, ಮಾರಾಟ ಮಾಡುವುದು ಏನಾದರೂ ಕಂಡುಬಂದಲ್ಲಿ ಕಾನೂನು ಕ್ರಮಕ್ಕೆಗೊಳ್ಳಲಾಗುವುದು ಎಂದು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಚಿತ್ರದುರ್ಗ ಜಿಲ್ಲಾ ಅಧಿಕಾರಿ ನಾಸಿಫ್ ಖಾನ್ ಎಚ್ಚರಿಕೆ ನೀಡಿದರು. ಪಟ್ಟಣದ ಸರಕಾರಿ ಮಾದರಿ ಶಾಲೆಯ ಆವರಣದಲ್ಲಿ ದೀಪಾವಳಿ ಪಟಾಕಿ ಮಾರಾಟ ಮಾಡುತ್ತಿರುವ ಮಳಿಗೆಗಳಿಗೆ ಬುಧವಾರ ಅವರು ಭೇಟಿ ನೀಡಿ, ಪಟಾಕಿಗಳನ್ನು ಪರಿಶೀಲಿಸಿ ಮಾತನಾಡಿ, ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಪಟಾಕಿಗಳ ಮಾರಾಟ, ಬಳಕೆ ನಿಯಂತ್ರಿಸುವ ಸಲುವಾಗಿ ಹೊಸದುರ್ಗ ಪುರಸಭಾ ವ್ಯಾಪ್ತಿಯಲ್ಲಿ ಪರಿಸರಸ್ನೇಹಿ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಹಸಿರು ಪಟಾಕಿಗಳನ್ನು ಹೊರತುಪಡಿಸಿ ಇತರೆ ಪಟಾಕಿಗಳ ಮಾರಾಟ ಮಾಡುವುದು, ಸ್ಫೋಟಿಸುವುದು ಹಾಗೂ 135 ಡೆಸಿಬಲ್ ಗಿಂತ ಹೆಚ್ಚಿನ ಶಬ್ಧ ಮಾಡುವ ಪಟಾಕಿಗಳನ್ನು ನಿಷೇಧಿಸಿದೆ. ಒಂದು ವೇಳೆ ನಿಯಮ ಉಲ್ಲಂಘಿಸಿದಲ್ಲಿ ಸ್ಫೋಟಕ ಕಾಯ್ದೆ ಅಡಿಯಲ್ಲಿ ಸಂಬಂಧಪಟ್ಟವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಪುರಸಭೆಯಿಂದ ಕ್ರಮಕ್ಕೆಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ತಹಶೀಲ್ದಾರ್ ತಿರುಪತಿ ಪಾಟೀಲ್, ಕಂದಾಯ ಅಧಿಕಾರಿ ಹರೀಶ್, ಗ್ರಾಮ ಆಡಳಿತಾಧಿಕಾರಿ ರಘು, ಪುರಸಭೆ ಮುಖ್ಯ ಅಧಿಕಾರಿ ತಿಮ್ಮರಾಜ್, ವ್ಯವಸ್ಥಾಪಕ ಯೋಗೇಶ್ ಆರೋಗ್ಯ ನಿರೀಕ್ಷಕರಾದ ಬಸವರಾಜ್, ಕಲ್ಪನಾ ಸೇರಿ ಇತರರು ಹಾಜರಿದ್ದರು.

ವಿ+ ಸೋಮವಾರ

69ನೇ ಕನ್ನಡ ರಾಜ್ಯೋತ್ಸವ ಸಮಾರಂಭ | ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಚಾಲನೆ

ಎಲ್ಲ ಸಮುದಾಯದ ಅಭಿವೃದ್ಧಿಗೆ ಸರಕಾರ ಬದ್ಧ

ದಾವಣಗೆರೆ: ಕರ್ನಾಟಕ ರಾಜ್ಯ ವೈವಿಧ್ಯತೆಗಳನ್ನು ಹೊಂದಿರುವ ಹಲವು ಜಗತ್ತುಗಳ ಒಂದು ರಾಜ್ಯ, ಇಲ್ಲಿನ ಸರ್ವ ಜನಾಂಗದ ಅಭಿವೃದ್ಧಿಗೆ ಸರಕಾರ ಬದ್ಧವಾಗಿದೆ ಎಂದು ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಎಸ್.ಮಲ್ಲಿಕಾರ್ಜುನ್ ತಿಳಿಸಿದರು.

ಅವರು ಜಿಲ್ಲಾಡಳಿತದಿಂದ ನವೆಂಬರ್ 1 ರಂದು ಜಿಲ್ಲಾ ಕ್ರೀಡಾಂಗಣದಲ್ಲಿ ಏರ್ಪಡಿಸಲಾದ 69 ನೇ ಕರ್ನಾಟಕ ರಾಜ್ಯೋತ್ಸವದಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಪಥಸಂಚಲನದಲ್ಲಿ ಗೌರವ ವಂದನೆ ಸ್ವೀಕರಿಸಿ ಮಾತನಾಡಿದರು.

1956 ರಲ್ಲಿ ಏಕೀಕರಣಗೊಂಡ ಮೈಸೂರು ರಾಜ್ಯವನ್ನು 1973 ರಲ್ಲಿ ಕರ್ನಾಟಕ ಎಂದು ಮರುನಾಮಕರಣ ಮಾಡಲಾಯಿತು. ಈಗಾಗಲೇ ನಾಮಕರಣವಾಗಿ 50 ವರ್ಷಗಳನ್ನು ಪೂರೈಸಿದ್ದು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಮೊಟ್ಟ ಮೊದಲ ಹಲ್ಮಿಡಿ ಶಿಲಾಶಾಸನದ ಪ್ರತಿಕೃತಿಯನ್ನು ಪ್ರತಿಷ್ಟಾಪಿಸಲಾಗಿದೆ. ಕರ್ನಾಟಕ ನಾಮಕರಣ ಸುವರ್ಣ ಸಂಭ್ರಮದ ಅಂಗವಾಗಿ ನಾಡಿನಾದ್ಯಂತ ಹಲವಾರು ಕನ್ನಡ ಪರ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದು ದಾವಣಗೆರೆ ನಗರದ ಗಾಜಿನಮನೆಯ ಆವರಣದಲ್ಲಿ ನವೆಂಬರ್ ತಿಂಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಕರ್ನಾಟಕ ರಾಜ್ಯೋತ್ಸವ ಸಮಸ್ತ ಕನ್ನಡಿಗರ ಹಬ್ಬ, ಇದು ನಮ್ಮ ನಾಡು-ನುಡಿ, ಹಿರಿಮೆ-ಗರಿಮೆ ಗಳನ್ನು ಮೆಲುಕು ಹಾಕುವ ಸಾಂಸ್ಕೃತಿಕ ಉತ್ಸವವಾಗಿದೆ. ಕಾವೇರಿಯಿಂದ ಗೋದಾವರಿವರೆಗೆ ವಿಸ್ತಾರವಾಗಿ ಹರಡಿದ್ದ ನಾಡು ಎರಡೂವರೆ ಸಾವಿರ ವರ್ಷಗಳಿಗೂ ಹೆಚ್ಚಿನ ಇತಿಹಾಸ ಹೊಂದಿದೆ. ಸಾಮ್ರಾಟ ಅಶೋಕ

ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಪಥ ಸಂಚಲನದಲ್ಲಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ಗೌರವ ವಂದನೆ ಸ್ವೀಕರಿಸಿದರು.

ಹಾಗೂ ಶಾತವಾಹನರ ಆಳ್ವಿಕೆಯಲ್ಲಿಯೂ ಕನ್ನಡ ಭಾಷೆಯ ಬಳಕೆಯನ್ನು ಕಾಣಬಹುದು. ರಾಜಮನೆತನಗಳಾದ ಕದಂಬ, ಗಂಗರು, ಚಾಲುಕ್ಯ, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು ಮತ್ತು ಮೈಸೂರು ಒಡೆಯರ ಕಾಲದಲ್ಲಿ ಕನ್ನಡ ಭಾಷೆಯು ಸಾಹಿತ್ಯಿಕವಾಗಿ ಹಾಗೂ ಜನಮನದ ಭಾಷೆಯಾಗಿ ಹುಲುಸಾಗಿ ಬೆಳೆದು ಬಂದಿತು.

ಸಾಧಕರಿಗೆ ಸನ್ಮಾನ: ಕನ್ನಡ ರಾಜ್ಯೋತ್ಸವದ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ 33 ಗಣ್ಯರನ್ನು ಇದೇ ಸಂದರ್ಭದಲ್ಲಿ ಸ್ಮರಣಿಕೆ ನೀಡಿ ಸನ್ಮಾನಿಸಿ ಗೌರವಿಸಲಾಯಿತು. ನಿಟ್ಟುವಳ್ಳಿಯ ಟಿ.ಶ್ರೀನಿವಾಸ್ ಶಿಲ್ಪಕಲೆ, ದಾವಣಗೆರೆ ಮೇಘಾಚಾರಿ.ವಿ., ನಗರದ ಬಂಬೂ ಬಜಾರ್‌ನ ಕೆ.ಆರ್.ಮೌನೇಶ್ವರ್ ಶಿಲ್ಪಿ, ಇವರುಗಳು ಶಿಲ್ಪಕಲೆ ಕ್ಷೇತ್ರ, ಜಗಳೂರಿನ ಬಸವರಾಜು.ಟಿ, ಚನ್ನಗಿರಿಯ ಎ.ಎನ್ ಶಶಿಕಿರಣ್, ದಾವಣಗೆರೆಯ ಎಂ. ಬಸಣ್ಣ ಇವರುಗಳು ಸಂಗೀತ ಕ್ಷೇತ್ರದಲ್ಲಿ, ಮಾಯಕೊಂಡ ಪೀರಿಬಾಯಿ ಕೋಂ ಉಮ್ಲನಾಯ್ಕ, ಹರಿಹರದ ಹೆಚ್.ಪಿ. ನಾಗೇಂದ್ರಪ್ಪ, ಗುತ್ತೂರಿನ ಎಸ್.ಕೆ.ವೀರೇಶ್ ಕುಮಾರ್, ನಗರದ ಶೇಖರಪ್ಪ ನಗರದ ಪಿ.ಮೀನಾಕ್ಷಿ ಇವರುಗಳು ಜಾನಪದ ಕ್ಷೇತ್ರ, ದಾವಣಗೆರೆಯ ಎ.ಎಂ.ಪ್ರಕಾಶ್ ಮುದ್ರಣಾ ಕ್ಷೇತ್ರ, ವಿನೋಬನಗರದ ಎಂ. ಮನು ಮತ್ತು ಹೊನ್ನಾಳಿಯ ಬಿ.ತಿಮ್ಮನಗೌಡ ಸಂಕೀರ್ಣ ಕ್ಷೇತ್ರದಲ್ಲಿ, ನಿಜಲಿಂಗಪ್ಪ ಬಡಾವಣೆಯ ಶ್ರೀನಾಥ.ಪಿ.ಅಗಡಿ ಛಾಯಾಗ್ರಹಣ, ಜಾಲಿನಗರದ ಎಸ್.ಪಿ.ಲಾವಣ್ಯ ಶ್ರೀಧರ್ ಯೋಗ, ಜಗಳೂರಿನ ಬಡಪ್ಪ ಬಯಲಾಟ, ಯಲ್ಲಮ್ಮ ನಗರದ ವಿನಾಯಕ ನಾಕೋಡ, ಎಸ್.ಎಂ.ಕೃಷ್ಣ ನಗರದ ಕೆ.ಎಸ್.ಕೊಟ್ರೇಶ್ ಇವರುಗಳು ರಂಗಭೂಮಿ ಕ್ಷೇತ್ರ, ಜಗಳೂರು ತಾಲ್ಲೂಕಿನ ದೊಣ್ಣೆಹಳ್ಳಿ ಗ್ರಾಮದ ಎಸ್.ವಿ.ವಿಶ್ವನಾಥ ಬಯಲಾಟ, ದೊಡ್ಡಾಟ, ನಿಜಲಿಂಗಪ್ಪ ಬಡಾವಣೆಯ ರವಿಕುಮಾರ್.ಎ.ಜೆ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಎಲ್.ಹೆಚ್.ಅರುಣಕುಮಾರ್ ಇವರುಗಳು ಸಮಾಜ ಸೇವೆ, ರವಿಕುಮಾರ್ ಕನ್ನಡಪ್ರಭ ಪತ್ರಿಕೆಯ ವರದಿಗಾರರು, ಎಂ.ಬಿ.ನವೀನ್, ವಿಜಯವಾಣಿ ಸ್ಥಾನಿಕ ಸಂಪಾದಕರು, ಹೆಚ್.ಟಿ ಪರಶುರಾಮ ಪಬ್ಲಿಕ್ ಟಿ.ವಿ ಕ್ಯಾಮರಾಮ್ಯಾನ್, ಓ.ಎನ್ ಸಿದ್ದಯ್ಯ ಜನತಾವಾಣಿ ಪತ್ರಿಕೆ, ಕೆ.ಎಸ್ ಚನ್ನಬಸಪ್ಪ ಆಕಾಶವಾಣಿ-ನಗರವಾಣಿ, ಮಂಜುನಾಥ. ಎಂ.ಎಸ್ ಪತ್ರಿಕಾ ವಿತರಕರು ಇವರುಗಳು ಪತ್ರಿಕೋದ್ಯಮ ಕ್ಷೇತ್ರ, ವಿನೋಬನಗರದ ಸಂತೋಷ್ ದೊಡ್ಮನಿ, ಶುಭಮಂಗಳ ಬಿ.ಎಸ್, ನಾಗರಾಜ ಜಮ್ನಳ್ಳಿ, ಚನ್ನಗಿರಿಯ ಎಲ್.ಜಿ.ಮಧುಕುಮಾರ್ ಇವರುಗಳು ಕನ್ನಡ ಪರ ಹೋರಾಟ, ಚನ್ನಗಿರಿ ತಾಲ್ಲೂಕಿನ ಸಂತೆಬೆನ್ನೂರಿನ ಕೆ.ಸಿದ್ದಲಿಂಗಪ್ಪ ಸಾಹಿತ್ಯ ಕ್ಷೇತ್ರ, ಕುಕ್ಕವಾಡ ಗ್ರಾಮದ ಕೆ.ಟಿ.ಚಂದ್ರಶೇಖರಪ್ಪ ಕೃಷಿ ಕ್ಷೇತ್ರ ಕಣ್ಮನ ಸೆಳೆದ ಸಾಂಸ್ಕೃತಿಕ ನೃತ್ಯ: ನಗರದ ನಿಟ್ಟುವಳ್ಳಿಯ ನಿಂಚನ ಪಬ್ಲಿಕ್ ಶಾಲೆ, ನಿಜಲಿಂಗಪ್ಪ ಬಡಾವಣೆಯ ಗುರುಕುಲ ಪಬ್ಲಿಕ್ ಶಾಲೆ, ಶಾಮನೂರು ಜೈನ್ ವಿದ್ಯಾಲಯ ಸಿಬಿಎಸ್‌ಇ ಶಾಲೆಯ ವಿದ್ಯಾರ್ಥಿಗಳು ಕನ್ನಡ ರಾಜ್ಯೋತ್ಸವದ ಕನ್ನಡ ಹಾಡುಗಳಿಗೆ ಹೆಜ್ಜೆ ಹಾಕಿದರು. ಹಾಗೂ ಕೊಡಗನೂರು ನಾಗರಾಜ್ ಇವರು ಹುಟ್ಟಿದರೆ ಕನ್ನಡ ನಾಡಿನಲ್ಲಿ ಹುಟ್ಟಬೇಕು ಎಂಬ ಗೀತೆಗೆ ಹೆಜ್ಜೆ ಹಾಕಿದರು.

> ಕಳೆದ 5 ದಶಕಗಳಲ್ಲಿ ರಾಜ್ಯದ ಬೆಳವಣಿಗೆಯನ್ನು ಅವಲೋಕಿಸಿದರೆ ಆಡಳಿತ, ಸಂಸ್ಕೃತಿ, ಸಾಹಿತ್ಯ, ಶಿಕ್ಷಣ, ವಿಜ್ಞಾನ, ಲಲಿತಕಲೆ, ಜಾನಪದ, ಕೃಷಿ, ನೀರಾವರಿ, ಪ್ರವಾಸೋದ್ಯಮ, ತಂತ್ರಜ್ಞಾನ, ಕೈಗಾರಿಕೆ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಮಹತ್ತರ ಸಾಧನೆ ಮಾಡುವ ಮೂಲಕ ಅಂತರರಾಷ್ಟ್ರೀಯ ಮನ್ನಣೆ ಪಡೆಯಲಾಗಿದೆ. ನಾಡು ಹಲವು ಕ್ಷೇತ್ರಗಳಲ್ಲಿ ಅಭಿವೃದ್ದಿ ಹೊಂದುತ್ತಿದ್ದು ಈಗಿನ ಯುವ ಜನರಿಗೆ ಪ್ರೇರಣಾದಾಯಕವಾಗಿದೆ. ಅವರೂ ಸಹ ಕನ್ನಡ ನಾಡಿನ ಅಭಿವೃದ್ದಿಯಲ್ಲಿ ತೊಡಗಿಸಿಕೊಂಡು ರಚನಾತ್ಮಕ ಸಾಧನೆಗಳನ್ನು ಮಾಡುವಂತಾಗಲಿ.
> ಎಸ್.ಎಸ್.ಮಲ್ಲಿಕಾರ್ಜುನ್, ಸಚಿವ

ಸಮಾರಂಭದಲ್ಲಿ ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ್, ಶಾಸಕರಾದ ಕೆ.ಎಸ್.ಬಸವಂತಪ್ಪ, ಮೇಯರ್ ಚಮನ್ ಸಾಬ್.ಕೆ, ದೂಡಾ ಅಧ್ಯಕ್ಷರಾದ ದಿನೇಶ್ ಕೆ.ಶೆಟ್ಟಿ, ಉಪ ಮೇಯರ್ ಸೋಗಿ ಶಾಂತಕುಮಾರ್, ಜಿಲ್ಲಾಧಿಕಾರಿ ಗಂಗಾಧರಸ್ವಾಮಿ, ಜಿ.ಪಂ ಸಿಇಓ ಸುರೇಶ್ ಇಟ್ನಾಳ್, ಎಸ್ಪಿ ಉಮಾ ಪ್ರಶಾಂತ್ ಹಾಗೂ ಇನ್ನಿತರೆ ಗಣ್ಯರು ಭಾಗವಹಿಸಿದ್ದರು.

ಕನ್ನಡದ ನೆಲ, ಜಲ ರಕ್ಷಣೆಗೆ ಕಂಕಣ

ಹರಿಹರ: ನಮ್ಮ ನೆರೆಹೊರೆ ರಾಜ್ಯದ ಕನ್ನಡ ಭಾಷಿಕರು ಕರ್ನಾಟಕ ರಾಜ್ಯ ಸೇರಲು ಉತ್ಸುಕರಾಗಿದ್ದಾರೆ ಎಂದು ಶಾಸಕ ಬಿ.ಪಿ.ಹರೀಶ್ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ತಾಲೂಕ ಕ್ರೀಡಾಂಗಣ (ಗಾಂಧಿ ಮೈದಾನ)ದಲ್ಲಿ ರಾಷ್ಟ್ರೀಯ ಮತ್ತು ನಾಡಹಬ್ಬ ಆಚರಣಾ ಸಮಿತಿಯಿಂದ ಆಯೋಜಿಸಿದ್ದ 69ನೇ ಕನ್ನಡ ರಾಜ್ಯೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕರು, ಚುನಾವಣೆ ಸಂದರ್ಭದಲ್ಲಿ ನಮ್ಮ ನೆರೆಹೊರೆಯ ರಾಜ್ಯಗಳು ನಮ್ಮ ರಾಜ್ಯಕ್ಕೆ ಸೇರಿದ ಕೆಲವು ನಗರ ಪ್ರದೇಶಗಳನ್ನು ನಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳುತ್ತೇವೆ ಎಂದು ಭಾಷಣ ಮಾಡುತ್ತಾರೆ. ಆದರೆ ಆ ಭಾಗದ ಕನ್ನಡಭಾಷಿಕರು ಕರ್ನಾಟಕ ರಾಜ್ಯಕ್ಕೆ ಸೇರಲು ಉತ್ಸುಕರಾಗಿದ್ದಾರೆ ಎಂದು ಹೇಳಿದರು.

ಕರ್ನಾಟಕ ಎಂದು ನಾಮಕರಣವಾಗಲೂ ಆ ಕಾಲದ ಅನೇಕ ಸಾಹಿತಿಗಳು,ಹೋರಾಟಗಾರರು,ಜೊತೆಗೆ ಡಾ.ರಾಜ್ ಕುಮಾರ್ ರಂತಹ ಸಿನಿಮಾ ನಟರ ಬೆಂಬಲದಿಂದ ಮುಂದೆ ಕರ್ನಾಟಕ ರಾಜ್ಯವೆಂದು ನಾಮಕರಣ ಮಾಡಲಾಯಿತು. ಯಾರು ಏನೇ ಮಾಡಿದರು ಕನ್ನಡ ಭಾಷೆ ನೆಲ ಜಲ ಮತ್ತು ಧರ್ಮಕ್ಕೆ ಕುತ್ತು ಬರದೇ ಇರಲಿ ಎಂಬ ಆತ್ಮವಿಶ್ವಾಸ ಇಟ್ಟುಕೊಳ್ಳೋಣ ಎಂದು ಹೇಳಿದರು.

ಸಮಾರಂಭದಲ್ಲಿ ತಹಸಿಲ್ದಾರ್ ಕೆ.ಎಮ್.ಗುರುಬಸವರಾಜ್ ಕನ್ನಡ ಧ್ವಜಾರೋಹಣ ನೆರವೇರಿಸಿ ತಮ್ಮ ಧ್ವಜ ಸಂದೇಶದಲ್ಲಿ ಮಾತನಾಡಿ 2,000 ವರ್ಷಗಳ ಇತಿಹಾಸವಿರುವ ವೈಜ್ಞಾನಿಕವಾಗಿ ಸುಂದರವಾಗಿರುವ ಭಾಷೆ ಎಂದರೆ ನಮ್ಮ ಕನ್ನಡ ಭಾಷೆ ನಮ್ಮದಾಗಿದ್ದು ವಿನೋಭಾ ಭಾವೆ ಯವರಿಂದ ಇದು ಲಿಪಿಗಳ ರಾಣಿ ಎಂದು ಕರೆಸಿಕೊಂಡಿದೆ. ವರಕವಿ ಬೇಂದ್ರೆಯವರಿಂದ ಭಾವನಾತ್ಮಕ ಕವನಗಳ ರಚನೆಗೆ ಕನ್ನಡ ಭಾಷೆಯೇ ಸೂಕ್ತ ಮತ್ತು ಹೃದಯಕ್ಕೆ ಹತ್ತಿರವಾದ ಭಾಷೆ ಎಂದೆಣಿಸಿದೆ.

ಈ ಸಮಯದಲ್ಲಿ ಶ್ರೀಗುರು ತಿಪ್ಪೇರುದ್ರಸ್ವಾಮಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಬಿಬಿ ರೇವಣ್ಣ ನಾಯಕ್, ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ ಬೇಡರ್, ಕ್ಷೇತ್ರ ಶಿಕ್ಷಣಾಧಿಕಾರಿ ಡಿ.ದುರುಗಪ್ಪ,ತಾ.ಪಂ.ಕಾರ್ಯನಿರ್ವಾಹಣಾಧಿಕಾರಿ ಎಸ್.ಪಿ.ಸುಮಲತಾ, ಪೌರಾಯುಕ್ತ ಸುಬ್ರಹ್ಮಣ್ಯ ಶ್ರೇಷ್ಠಿ, ಆರಕ್ಷಕ ನಿರೀಕ್ಷಕ ಎಸ್.ದೇವಾನಂದ್, ಕೃಷಿ ಇಲಾಖೆಯ ಎ.ನಾರನ ಗೌಡ, ತೋಟಗಾರಿಕೆ ಇಲಾಖೆಯ ಶಶಿಧರಯ್ಯ ಪಶು ಸಂಗೋಪನ ಇಲಾಖೆಯ ಸಿದ್ದೇಶ್, ತಾಲೂಕ ಆರೋಗ್ಯ ಅಧಿಕಾರಿ ಡಾ. ಅಬ್ದುಲ್ ಖಾದರ್,ಶಿಶು ಅಭಿವೃದ್ಧಿ ಅಧಿಕಾರಿ ಪೂರ್ಣಿಮಾ,ಗ್ರಾಮೀಣ ನೀರು ಸರಬರಾಜು ಇಲಾಖೆಯ ಗಿರೀಶ್,ಕಂದಾಯ ಇಲಾಖೆ ಸಮೀರ್ ಅಹ್ಮದ್, ಹೆಚ್.ಜಿ ಹೇಮಂತ್ ಕುಮಾರ್, ಕನ್ನಡ ಹೋರಾಟಗಾರ ರಾದ ಎಚ್.ಸುಧಾಕರ್,ರಮೇಶ್ ಮಾನೆ,ಪ್ರೀತಂ ಬಾಬು, ಶ್ರೀನಿವಾಸ್, ಮಹಮ್ಮದ್ ಇಲಿಯಾಸ್ ಸೇರಿದಂತೆ ಹಲವಾರು ಕನ್ನಡಪರ ಹೋರಾಟಗಾರರು,ತಾಲೂಕಿನ ಎಲ್ಲಾ ಶಾಲೆಗಳ ಶಿಕ್ಷಕರು ವಿದ್ಯಾರ್ಥಿಗಳು, ಕನ್ನಡ ಅಭಿಮಾನಿಗಳು ಭಾಗವಹಿಸಿದ್ದರು.

ಕನ್ನಡ ರಾಜ್ಯೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಶಾಸಕ ಬಿ.ಪಿ.ಹರೀಶ್ ಅವರು ಮಾತನಾಡಿದರು.

> ಕನ್ನಡ ನಾಡು ರಾಜ್ಯದ ಬಗ್ಗೆ ಪ್ರಥಮ ಹೋರಾಟ ಆಲೂರು ವೆಂಕಟರಾಯರ ನೇತೃತ್ವದಲ್ಲಿ 1904-05 ರಿಂದ ಆರಂಭವಾದ ಅಂದಿನ ಹೋರಾಟಕ್ಕೆ ಅನೇಕ ಕನ್ನಡ ಪರ ಹೋರಾಟಗಾರರು, ಸಾಹಿತಿಗಳು, ಸಾರ್ವಜನಿಕರ ಬೆಂಬಲದ ಪರವಾಗಿ 1956ರಲ್ಲಿ ರಾಜ್ಯಕ್ಕೆ ಮೈಸೂರು ರಾಜ್ಯ ಎಂದು ನಾಮಕರಣ ಮಾಡಲಾಯಿತು. ಅಂದು ಉದಯವಾದ ನಮ್ಮ ರಾಜ್ಯ ಮುಂದೆ ಕರ್ನಾಟಕವೆಂದು ಕರೆಯಲ್ಪಟ್ಟಿತು.
> ಬಿ.ಪಿ.ಹರೀಶ್, ಶಾಸಕ

ಶಿಕ್ಷಣ,ಉದ್ಯೋಗಕ್ಕೆ ಭಾಷಾ ಕಾಯಿದೆ: ಸಚಿವ

ಚಿತ್ರದುರ್ಗ: ರಾಜ್ಯದಲ್ಲಿ ಕನ್ನಡಿಗರಿಗೆ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಉತ್ತಮ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಸರಕಾರ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ ಜಾರಿಗೊಳಿಸಿದೆ ಎಂದು ಯೋಜನೆ ಮತ್ತು ಸಾಂಖ್ಯಿಕ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಹೇಳಿದರು.

ಜಿಲ್ಲಾಡಳಿತ ವತಿಯಿಂದ ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಶುಕ್ರವಾರ ಕನ್ನಡ ರಾಜ್ಯೋತ್ಸವದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ, ರಾಜ್ಯೋತ್ಸವ ಸಂದೇಶ ನೀಡಿದರು.

ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮದಡಿ ರಾಜ್ಯದಲ್ಲಿ ದೇಶಿಯ ಹಾಗೂ ವಿದೇಶಿಯ ಕಂಪನಿಗಳಲ್ಲಿ ಉದ್ದಿಮೆ ಸ್ಥಾಪಿಸಬೇಕಾದರೆ, ಕನ್ನಡಿಗರಿಗೆ ಕಡ್ಡಾಯ ಉದ್ಯೋಗದ ಅವಕಾಶಗಳನ್ನು ಕಲ್ಪಿಸಬೇಕು. ಅಂತಹ ಕಂಪನಿಗಳಿಗೆ ಮಾತ್ರ ಸರ್ಕಾರದಿಂದ ಉದ್ದಿಮೆ ಸ್ಥಾಪನೆಗೆ ಅನುಮತಿ ನೀಡಲಾಗುವುದು. ಕನ್ನಡ ಭಾಷೆಯ ಉಳಿವಿಗಾಗಿ ಬೆಳವಣಿಗೆಗಾಗಿ ನಮ್ಮ ಸರಕಾರ ನಾನಾ ರೀತಿಯಲ್ಲಿ ಕೆಲಸ ಮಾಡುತ್ತಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಕಾವಲು ಸಮಿತಿ ನೇಮಿಸಿ ಆಡಳಿತ ಭಾಷೆಯಾಗಿ ಕನ್ನಡ ಕಡ್ಡಾಯ ಮಾಡಿದೆ. ಹಾಗೆಯೇ ''ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ'' ಅಭಿಯಾನದಡಿ ಎಲ್ಲಾ ಸರಕಾರಿ ನೌಕರರಿಗೆ ಕೆಂಪು-ಹಳದಿ ಬಣ್ಣದ ಗುರುತಿನ ಚೀಟಿಯ ಟ್ಯಾಗ್ ಧರಿಸುವಂತೆ ಸೂಚಿಸುವುದರ ಮೂಲಕ ಕನ್ನಡಕ್ಕೆ ಹೆಮ್ಮೆ ತಂದಿದೆ ಎಂದು ಹೇಳಿದರು.

ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ: ಕನ್ನಡ ರಾಜ್ಯೋತ್ಸವದ ಅಂಗವಾಗಿ ಜಿಲ್ಲಾಡಳಿತದ ವತಿಯಿಂದ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮೊಳಕಾಲ್ಮುರು ತಾಲ್ಲೂಕಿನ ಸಿದ್ದಯ್ಯನಕೋಟೆ ಪಿ.ಆರ್. ಕಾಂತರಾಜ್ ಸೇರಿದಂತೆ 29 ಮಂದಿ ಸಾಧಕರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಸಂಸದ ಗೋವಿಂದ ಎಂ ಕಾರಜೋಳ, ಆದಿಜಾಂಬವ ಅಭಿವೃದ್ಧಿ ನಿಗಮ ಮಂಡಳಿ ಅಧ್ಯಕ್ಷ ಜಿ.ಎಸ್. ಮಂಜುನಾಥ, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ತಾಜ್‌ಪೀರ್, ನಗರಸಭೆ ಅಧ್ಯಕ್ಷೆ ಬಿ.ಎನ್.ಸುಮಿತ ರಾಘವೇಂದ್ರ, ಜಿಲ್ಲಾಧಿಕಾರಿ ಟಿ.ವೆಂಕಟೇಶ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಜೆ.ಸೋಮಶೇಖರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು, ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಉಪವಿಭಾಗಾಧಿಕಾರಿ ಎಂ.ಕಾರ್ತಿಕ್, ತಹಶೀಲ್ದಾರ್ ಡಾ.ನಾಗವೇಣಿ, ನಗರಸಭೆ ಪೌರಾಯುಕ್ತೆ ಎಂ. ರೇಣುಕಾ, ಜಿಲ್ಲಾ ಕಸಾಪ ಅಧ್ಯಕ್ಷ ಕೆ.ಎಂ.ಶಿವಸ್ವಾಮಿ ಸೇರಿದಂತೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು, ಶಾಲಾ ವಿದ್ಯಾರ್ಥಿಗಳು, ಸಾರ್ವಜನಿಕರು ಇದ್ದರು.

ಕಾರ್ಯಕ್ರಮದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

> ಕನ್ನಡಕ್ಕೆ ಜಿಲ್ಲೆಯ ಕೊಡುಗೆ ಅಪಾರ: ಮೊಟ್ಟ ಮೊದಲು ಕನ್ನಡ ಸಾಮ್ರಾಜ್ಯದ ಸ್ಥಾಪನೆಗೆ ಅಡಿಪಾಯ ಹಾಕಿದ ನೆಲ ಚಿತ್ರದುರ್ಗ. ಕದಂಬರ ಮಯೂರ ವರ್ಮ ಬನವಾಸಿ ಪ್ರದೇಶದಿಂದ ಉನ್ನತ ವಿದ್ಯಾಭ್ಯಾಸಕ್ಕೆ ಕಂಚಿಗೆ ಹೋಗಿ ಅಲ್ಲಿ ತಮಿಳು ಪಲ್ಲವರಿಂದ ಅವಮಾನಿತರಾಗಿ ನಾನು ಒಂದು ಕನ್ನಡ ಸಾಮ್ರಾಜ್ಯವನ್ನು ಕನ್ನಡಿಗರಿಗಾಗಿ ಕಟ್ಟುತ್ತೇನೆ. ನಿಮ್ಮಂತೆ ಆಳುತ್ತೇನೆ ಎಂದು ಪ್ರತಿಜ್ಞೆ ಮಾಡಿ ಸಾಮ್ರಾಜ್ಯ ಕಟ್ಟಲು ಬಂದಿದ್ದು, ಚಿತ್ರದುರ್ಗದ ಚಂದ್ರವಳ್ಳಿಯಲ್ಲಿ ದಟ್ಟವಾದ ಅಡವಿ ಧವಳಪ್ಪ ಗುಡ್ಡದಲ್ಲಿ ಇಲ್ಲಿನ ಕನ್ನಡಿಗರ ಸಹಾಯದಿಂದ ಸೈನ್ಯಕಟ್ಟಿ ಸಾವಿರಾರು ಸೈನಿಕರನ್ನು ಗೆರಿಲ್ಲಾ ತಂತ್ರದಿಂದ ಕಟ್ಟಿಹಾಕಲಾಯಿತು. ಇದರಿಂದಾಗಿ ಕೊನೆಗೆ ಸ್ವತಃ ಪಲ್ಲವರೇ ಇಲ್ಲಿಂದ ಇಲ್ಲಿಯವರೆಗೆ ನಿನ್ನದೇ ರಾಜ್ಯ ಎಂದು ಕೈಯಾರೆ ಕಿರೀಟಧಾರಣೆ ಮಾಡಿದರು ಎಂದು ತಿಳಿಸಿದ ಅವರು, ಅಲ್ಲಿಂದ ಉದಯವಾದ ಕನ್ನಡ ಸಾಮ್ರಾಜ್ಯಕ್ಕೆ ನಂತರ ಕದಂಬ ರಾಜರು ಕನ್ನಡ ಭಾಷೆ, ಸಂಸ್ಕೃತಿ, ಇತಿಹಾಸಕ್ಕೆ ಪ್ರೋತ್ಸಾಹ ನೀಡಿದರು.
> ಡಿ.ಸುಧಾಕರ್, ಸಚಿವ

ನಾಡು ನುಡಿ ರಕ್ಷಣೆಗೆ ಸರಕಾರ ಸಹಕಾರ

ಹಿರಿಯೂರು: ಕನ್ನಡ ನಾಡಿನ ಭಾಷೆ, ನೆಲ ಜಲ ಹಾಗೂ ಕನ್ನಡ ಭಾಷೆಯ ಅಭಿವೃದ್ಧಿಗೆ ಮತ್ತು ಹಲವಾರು ಯೋಜನೆಗಳನ್ನು ರೂಪಿಸಿ ಕಲಾವಿದರಿಗೆ ಸಂಭಾವನೆ, ಪಿಂಚಣಿ ನೀಡಿ ಗೌರವಿಸಲಾಗುತ್ತಿದೆ, ಕನ್ನಡ ನಾಡು ನುಡಿ ಮತ್ತು ಸಂಸ್ಕೃತಿ ರಕ್ಷಣೆಗೆ ಸರಕಾರ ಸಂಪೂರ್ಣ ಸಹಕಾರ ನೀಡುತ್ತಿದೆ ಎಂದು ತಹಸೀಲ್ದಾರ್ ರಾಜೇಶ್ ಕುಮಾರ್ ಅವರು ತಿಳಿಸಿದರು.

ನಗರದ ನೆಹರೂ ಮೈದಾನದಲ್ಲಿ 69ನೇ ಕನ್ನಡ ರಾಜ್ಯೋತ್ಸವ ಆಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ರಾಜ್ಯ ಸರಕಾರವು ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಸಾರ್ವಜನಿಕರಲ್ಲಿ ಬೆಳೆಸಲು ಮುಂದಾಗಿದ್ದು 69 ನೇ ರಾಜ್ಯೋತ್ಸವ ದಿನದಂದು ಕನ್ನಡ ನಾಡು ನುಡಿ ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸಾಧನೆ ಮಾಡಿದ್ದಂತಹ ಸಾಧಕರನ್ನು ಗುರುತಿಸಿ ಸನ್ಮಾನಿಸಿ ರಾಜ್ಯೋತ್ಸವ ಪ್ರಶಸ್ತಿಗಳನ್ನ ಪ್ರಧಾನ ಮಾಡುತ್ತಿದೆ ಎಂದು ತಿಳಿಸಿದರು.

ಶಾಲಾ ವಿದ್ಯಾರ್ಥಿಗಳು ಕನ್ನಡದ ನೃತ್ಯ ಪ್ರದರ್ಶನ ನೆಡೆಸಿ ಅಭಿಮಾನಿಗಳ ಗಮನ ಸೆಳೆದರು. ಪ್ರಥಮ ಬಹುಮಾನ ಗಂಗಾ ಸೆಂಟ್ರಲ್ ಸ್ಕೂಲ್ ವಿಧ್ಯಾರ್ಥಿ ಗಳು ಪಡೆದುಕೊಂಡರು.

69ನೇ ಕನ್ನಡ ರಾಜ್ಯೋತ್ಸವ ಆಚರಣೆ ಕಾರ್ಯಕ್ರಮದಲ್ಲಿ ತಹಸೀಲ್ದಾರ್ ರಾಜೇಶ್ ಕುಮಾರ್ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷ ಜೆ ಆರ್ ಅಜಯ್ ಕುಮಾರ್, ಉಪಾಧ್ಯಕ್ಷೆ ಅಂಬಿಕಾ ಆರಾಧ್ಯ, ಗ್ಯಾರಂಟಿ ಯೋಜನೆಯ ಉಪಾಧ್ಯಕ್ಷ ಖಾದಿ ರಮೇಶ್,ಬಿಇಓ ತಿಪ್ಪೇಸ್ವಾಮಿ, ಡಿವೈಎಸ್ಪಿ ಶಿವಕುಮಾರ್, ಪೌರಾಯುಕ್ತ ವಾಸಿಂ, ರಕ್ಷಣಾ ವೇದಿಕೆಯ ರಾಮಕೃಷ್ಣಪ್ಪ, ನಗರಸೆ ಸದಸ್ಯೆ ವಿಶಾಲಕ್ಷಮ್ಮ, ಶಿವರಂಜಿನಿ, ಗಿರೀಶ್ ಕುಮಾರ್, ಅನಿಲ್, ತಾಲೂಕು ಮಟ್ಟದ ಅಧಿಕಾರಿಗಳು,ಕನ್ನಡ ಅಭಿಮಾನಿಗಳು ಶಾಲಾ ಶಿಕ್ಷಕರು ವಿದ್ಯಾರ್ಥಿಗಳು ಸೇರಿದಂತೆ ಇತರರಿದ್ದರು.

ಕನ್ನಡ ಜಗತ್ತಿನ ಶ್ರೇಷ್ಠ, ಶ್ರೀಮಂತ ಭಾಷೆ

ಹೊಸದುರ್ಗ: ನಮ್ಮ ಕನ್ನಡ ಭಾಷೆಗೆ 2 ಸಾವಿರ ವರ್ಷಗಳ ಇತಿಹಾಸ ಇದೆ. ಇದೊಂದು ಜಗತ್ತಿನ ಶ್ರೀಮಂತ ಹಾಗೂ ಶ್ರೇಷ್ಠ ಭಾಷೆ ಎಂದು ಶಾಸಕ, ಆಹಾರ ಹಾಗೂ ನಾಗರಿಕ ಸರಬರಾಜು ನಿಗಮದ ಅಧ್ಯಕ್ಷ ಬಿ.ಜಿ.ಗೋವಿಂದಪ್ಪ ತಿಳಿಸಿದರು.

ಪಟ್ಟಣದ ಪುರಸಭೆ ಆವರಣದಲ್ಲಿ ಶುಕ್ರವಾರ ನಡೆದ 69ನೇ ವರ್ಷದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಧ್ವಜಾರೋಹಣ ನೆರವೇರಿಸಿ ತಾಯಿ ಭುವನೇಶ್ವರಿ ದೇವಿಗೆ ಪುಷ್ಪಾರ್ಚನೆ ಮಾಡಿ ಮಾತನಾಡಿ, ಕನ್ನಡಿಗರಾದ ನಾವುಗಳು ಕನ್ನಡವನ್ನು ಹೆಚ್ಚು ಬಳಸುವ ಮೂಲಕ ಬೇರೆ ರಾಜ್ಯದಿಂದ ಬಂದು ಕರ್ನಾಟಕದಲ್ಲಿ ನೆಲೆ ನಿಂತಿರುವ ಜನರಿಗೆ ಕನ್ನಡ ಭಾಷೆ ಕಲಿಸಬೇಕು. ಕನ್ನಡ ರಾಜ್ಯೋತ್ಸವ ಆಚರಣೆ ಒಂದು ದಿನಕ್ಕೆ ಮಾತ್ರ ಸೀಮಿತ ಅಲ್ಲ. ಕನ್ನಡ ನಮ್ಮ ಉಸಿರಿನಲ್ಲಿ ಬೆರತು ಹೋಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷೆ ರಾಜೇಶ್ವರಿ ಆನಂದ್, ಉಪಾಧ್ಯಕ್ಷೆ ಗೀತಾ ಗಜೇಂದ್ರ, ಮುಖ್ಯಧಿಕಾರಿ ತಿಮ್ಮರಾಜು, ಸದಸ್ಯರಾದ ಶಂಕರಪ್ಪ, ಜಾಫರ್ ಸಾಧಿಕ್, ದೊಡ್ಡಯ್ಯ, ರಾಮಚಂದ್ರಪ್ಪ, ಶ್ರೀನಿವಾಸ್, ಜ್ಯೋತಿಕೆಂಚಪ್ಪ, ಡಾ.ಸ್ವಾತಿ, ಸರೋಜಮ್ಮ, ಬ್ರಹ್ಮಪಾಲ್, ತಿಪ್ಪೇಸ್ವಾಮಿ, ಮಾಷ, ಹನುಮಂತಪ್ಪ, ಪುರಸಭೆ ಸಿಬ್ಬಂದಿ ಹಾಜರಿದ್ದರು.

ಕಾರ್ಯಕ್ರಮದಲ್ಲಿ ಶಾಸಕ ಬಿ.ಜಿ.ಗೋವಿಂದಪ್ಪ ಅವರು ಧ್ವಜಾರೋಹಣ ನೆರವೇರಿಸಿ ದೇವಿಗೆ ಪುಷ್ಪಾರ್ಚನೆ ಮಾಡಿದರು.

ಶಾಸಕರಿಂದ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ

ಹೊಳಲ್ಕೆರೆ: ಪಟ್ಟಣದಲ್ಲಿ ತಾಲೂಕು ಆಡಳಿತದ ವತಿಯಿಂದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಪಟ್ಟಣದ ಸಂವಿಧಾನ ಸೌಧದಲ್ಲಿ ಶುಕ್ರವಾರ ಬೆಳಗ್ಗೆ 9 ಘಂಟೆಗೆ ಕನ್ನಡ ರಾಜ್ಯೋತ್ಸವ ಅಂಗವಾಗಿ ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಶಾಸಕ ಡಾ. ಎಂ ಚಂದ್ರಪ್ಪ ಅವರು ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿ ಧ್ವಜಾರೋಹಣ ನೆರವೇರಿಸಿದರು. ಪಟ್ಟಣದ ಅನೇಕ ಶಾಲೆಯ ಮಕ್ಕಳು ವಿವಿಧ ವೇಷ ಭೂಷಣ ತೊಟ್ಟು ಕನ್ನಡದ ಹಾಡುಗಳಿಗೆ ನೃತ್ಯ ಮಾಡಿ ರಂಜಿಸಿದರು. ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಅಧ್ಯಕ್ಷ ಶಿವಮೂರ್ತಿ, ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಅಧ್ಯಕ್ಷ ಹನುಮಂತಪ್ಪ, ತಹಶೀಲ್ದಾರ್ ಬಿ ಬಿ ಫಾತಿಮಾ, ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀನಿವಾಸ್.ಹೆಚ್, ಪುರಸಭೆ ಮುಖ್ಯಾಧಿಕಾರಿ ರೇಣುಕಾದೇಸಾಯಿ, ಪುರಸಭೆಯ ಸದಸ್ಯ ಆರ್. ಎ. ಅಶೋಕ್, ಮುರುಗೇಶ್, ಮಲ್ಲಿಕಾರ್ಜುನ ಸ್ವಾಮಿ, ಹೆಚ್ ಆರ್ ನಾಗರತ್ನ ಎಸ್ ವೇದಮೂರ್ತಿ, ಬಿ ಸಿ ಎಂ ಇಲಾಖೆ ಪ್ರಧೀಪ್ ಕುಮಾರ್. ಸಮಾಜ ಕಲ್ಯಾಣ ಇಲಾಖೆ ಚನ್ನಬಸಪ್ಪ, ಪತ್ರಕರ್ತರು ಆದ ಚಿತ್ತಪ್ಪ, ವೇಧಮೂರ್ತಿ, ಸುರೇಶ್, ನಾಗರಾಜ್, ಮದು, ತಾಲ್ಲೂಕು ಮಟ್ಟದ ಅಧಿಕಾರಿಗಳು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳ, ಸಾರ್ವಜನಿಕರು, ವಿದ್ಯಾರ್ಥಿಗಳು, ಶಾಲಾ ಶಿಕ್ಷಕರುಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕನ್ನಡ ಭಾಷೆ ಉಳಿಸಿ ಅನ್ಯಭಾಷೆ ಕಲಿಯಿರಿ

ಚಳ್ಳಕೆರೆ: ಕನ್ನಡ ಉಳಿವಿಗೆ ಪ್ರತಿಯೊಬ್ಬರೂ ಕಂಕಣ ಬದ್ದರಾಗಬೇಕು, ಇಂದಿನ ಆಧುನಿಕ ಯುಗದಲ್ಲಿ ತಂದೆ-ತಾಯಿಗಳಿಗೆ ನೀಡುವ ಗೌರವವನ್ನು ಕನ್ನಡ ಭಾಷೆಗೆ ನೀಡಬೇಕು ಎಂದು ನಿಕಟ ಪೂರ್ವ ತಹಸೀಲ್ದಾರ್ ಎನ್.ರಘುಮೂರ್ತಿ ಹೇಳಿದ್ದಾರೆ.

ನಗರದ ಹೊಂಗಿರಣ ಇಂಟರ್ನ್ಯಾಷನಲ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಆಯೋಜಿಸಿದ್ದ 69ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಭಾಗವಹಿಸಿ ಮಾತನಾಡಿದರು.

ದಶಕಗಳ ಇತಿಹಾಸವಿರುವ ಕನ್ನಡ ಭಾಷೆಯನ್ನು ಉಳಿಸಿ ಅನ್ಯಭಾಷೆಯನ್ನು ಕಲಿಯಬೇಕೆಂದು ಪರಕೀಯರು ತಮ್ಮ ವ್ಯಾಪಾರದ ಅಭಿವೃದ್ಧಿಗಾಗಿ ಅಖಂಡ ಭಾರತವನ್ನು ಹರಿದು ಹಂಚಿ ಹಲವಾರು ಪ್ರಾಂತ್ಯಗಳನ್ನಾಗಿ ಮಾಡಿಕೊಂಡು ತಮ್ಮ ದೇಶದ ಸಂಪತ್ತನ್ನು ಕೊಳ್ಳೆಹೊಡೆದರು ಇದನ್ನು ಮನಗಂಡ ನಮ್ಮ ಸಾಹಿತಿಗಳು, ಚಿಂತಕರು ಚಳುವಳಿ ಮೂಲಕ ಕನ್ನಡ ಭಾಷೆಯನ್ನಾಡುವ ಪ್ರದೇಶವನ್ನು ಪ್ರತ್ಯೇಕ ರಾಜ್ಯವನ್ನಾಗಿ ಮಾಡಲು ಸಾಧ್ಯವಾಯಿತು ಎಂದರು.

ಸಂಸ್ಥೆಯ ಕಾರ್ಯದರ್ಶಿ ದಯಾನಂದ ಪ್ರಹ್ಲಾದ ಮಾತನಾಡಿ, ಈಗಿನ ಯುವ ಪೀಳಿಗೆ ಕನ್ನಡದ ಅಸ್ಮಿತೆಯನ್ನು ಉಳಿಸಿ ಬೆಳೆಸುವಂತಹ ಕೆಲಸ ಮಾಡಬೇಕು, ಕೇವಲ ಕನ್ನಡದವನ್ನು ಕಥೆ ಕವನ ಕಾದಂಬರಿ ಮೂಲಕ ಬೆಳೆಸಿದರೆ ಸಲಾದು ಅದನ್ನು ಬಳಕೆ ಮಾಡಬೇಕು ಆಗ ಮಾತ್ರ ಕನ್ನಡ ಉಳಿಯುವುದು, ಕನ್ನಡ ಕೇವಲ ಕನ್ನಡ ರಾಜ್ಯೋತ್ಸವಕ್ಕೆ ಸೀಮಿತವಾಗದೆ ನಿರಂತರವಾಗಿ ಕನ್ನಡ ಎಲ್ಲಾರ ಮನೆ ಮಾತಗಲಿ ಎಂದು ಶುಭಾ ಕೋರಿದರು.

ಇದೇ ಸಂಧರ್ಭದಲ್ಲಿ ಗೌರವ ಅಧ್ಯಕ್ಷ ಡಿ.ನಾಗಪ್ಪ, ಸಂಸ್ಥೆಯ ಕಾರ್ಯದರ್ಶಿ ದಯಾನಂದ ಪ್ರಹ್ಲಾದ್, ಸಂಸ್ಥೆಯ ನಿರ್ದೇಶಕ ಡಿ.ಎನ್.ಶಿವಪ್ರಸಾದ್, ಡಿ.ಎನ್.ಮಧುಸೂದನ್, ಮುಖ್ಯ ಶಿಕ್ಷಕ ಡಿವಿ.ಪ್ರಸಾದ್, ಆಡಳಿತ ಅಧಿಕಾರಿ ಮಹಾದೇವಪ್ಪ, ಶಿಕ್ಷಕಿ ಶೈಲಜಾ, ಮಾಲಿನಿ, ಪ್ರೀಯಾಅರ್ಜುನ್, ಅನಿತಾ, ಶಿಲ್ಪ, ಹಾಗೂ ಇನ್ನಿತರೆ ಶಿಕ್ಷಕರು ಶಾಲಾ ಸಿಬ್ಬಂದಿ ಹಾಗೂ ಮಕ್ಕಳು ಹಾಜರಿದ್ದರು.

ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ತಹಸೀಲ್ದಾರ್ ಎನ್.ರಘುಮೂರ್ತಿ ಅವರು ಮಾತನಾಡಿದರು.

> ಕನ್ನಡ ನೆಲ,ಜಲ, ಭಾಷೆಗೆ ಒತ್ತು ನೀಡಬೇಕು, ವ್ಯಾಪಾರ ವಹಿವಾಟು ನಡೆಸುತ್ತಿರುವ ಅಂಗಡಿ ಮುಗ್ಗಟ್ಟುಗಳಲ್ಲಿ ಕಡ್ಡಾಯವಾಗಿ ಕನ್ನಡದ ನಾಮ ಫಲಕರಗಳನ್ನು ಹಾಕಬೇಕು, ಪ್ರತಿಯೊಬ್ಬರ ಮನೆ ಮನಗಳಲ್ಲಿ ಕನ್ನಡ ರಾಜ್ಯೋತ್ಸವ ಹಬ್ಬದ ವಾತಾವರಣ ನಿರ್ಮಿಸುವಂತಾಗಬೇಕು ಸರಕಾರಿ ಕಚೇರಿಗಳಲ್ಲಿ ಕನ್ನಡ ಭಾಷೆಯಲ್ಲಿ ಆಡಳಿತ ನಡೆಸುವಂತೆ ಆಗಬೇಕು ಎಂದು ತಿಳಿಸಿದರು.
> ಡಿ.ನಾಗಪ್ಪ, ಗೌರವ ಅಧ್ಯಕ್ಷ, ಹೊಂಗಿರಣ ಶಾಲೆ

ಸಾಸ್ವೆಹಳ್ಳಿಯಲ್ಲಿ ಕನ್ನಡ ರಾಜ್ಯೋತ್ಸವ

ಸಾಸ್ವೆಹಳ್ಳಿ: ಸಾಸ್ವೆಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಾಲಾ ಕಾಲೇಜುಗಳಲ್ಲಿ ವಿವಿಧ ಸ್ಥಳಗಳಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ನಡೆಯಿತು. ಸಾಸ್ವೆಹಳ್ಳಿ ಗ್ರಾಮ ಪಂಚಾಯತಿಯ ಆವರಣದಲ್ಲಿ ಶುಕ್ರವಾರ ನಡೆದ ಕನ್ನಡ ರಾಜ್ಯೋತ್ಸವದ ಧ್ವಜ ವಂದನೆಯನ್ನು ರಾಷ್ಟ್ರಧ್ವಜ ಹಾರಿಸುವುದರ ಮುಖಾಂತರ ಗ್ರಾಮ ಪಂಚಾಯತಿ ಅಧ್ಯಕ್ಷ ಜಬ್ಬಾರ್ ಅಲಿಖಾನ್ ನೆರವೇರಿಸಿದರು ಪಿಡಿಓ ಹನುಮಂತನಾಯ್ಕ, ಕಾರ್ಯದರ್ಶಿ ಹನುಮಂತಪ್ಪ. ಸದಸ್ಯರಾದ ಸುಲೇಮಾನ್ ಖಾನ್. ಶಾನ್ವಾಜ್ ,ಶಾಂತ ಸುರೇಶ್. ಸುಧಾ ಲೋಕೇಶ್. ಕರಿಬಸಪ್ಪ. ಇತರರು ಇದ್ದರು. ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಧ್ವಜ ವಂದನೆಯನ್ನು ಎಸ್ ಡಿ ಎಂ ಸಿ. ಅಧ್ಯಕ್ಷ ಸಂತೋಷ್ ನೆರವೇರಿಸಿದರು ಮಕ್ಕಳಿಂದ ಭುವನೇಶ್ವರಿ ಬಗ್ಗೆ ದೇಶಭಕ್ತಿ ಗೀತೆ ಭಾವಗೀತೆ ಕಾರ್ಯಕ್ರಮ ನಡೆಯಿತು. ಶಾಲಾ ಮುಖ್ಯ ಶಿಕ್ಷಕ ಜೀವನಾಯ್ಕ ಪ್ರಿನ್ಸಿಪಾಲ್ ದೇವಿರಪ್ಪ, ಶಿಕ್ಷಕರು ಉಪಸ್ಥಿತರಿದ್ದರು. ಕಂದಾಯ ಇಲಾಖೆಯ ನಾಡಕಛೇರಿಯಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಧ್ವಜ ವಂದನೆಯನ್ನು ಉಪ ತಹಶೀಲ್ದಾರ್ ಚಂದ್ರಪ್ಪ ನೆರವೇರಿಸಿದರು ಗ್ರಾಮ ಆಡಳಿತ ಅಧಿಕಾರಿ ಉಮೇಶ್, ಮಂಜುನಾಥ್. ಧರ್ಮರಾಜ್ ಹಾಗೂ ಇತರರು ಇದ್ದರು. ಸಾಸ್ವೆಹಳ್ಳಿ ಆನೇಕಲ್ ಬಡಾವಣೆಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ನಡೆಯಿತು ಎಸ್‌ಡಿಎಂಸಿ ಅಧ್ಯಕ್ಷರು ಮುಖ್ಯ ಶಿಕ್ಷಕರು ಉಪಸ್ಥಿತರಿದ್ದರು.

ಅವೆನ್ಯೂ ರೋಡ್

ನಿತ್ಯದ ವಿಂಡೋ ಶಾಪಿಂಗ್

ವಿಶ್ವವಾಣಿ

02.11.2024 ಶನಿವಾರ

vishwavani.news

ದಿನ ದರ್ಶಿಕೆ

ಕಾರ್ತಿಕ ಮಾಸ, ಶುಕ್ಲ ಪಕ್ಷ, ಪ್ರತಿಪದ ತಿಥಿ, ವಿಶಾಖ ನಕ್ಷತ್ರ, ಆಯುಷ್ಮಾನ ಯೋಗ, ಕಿಂಸ್ತುಘ್ನ ಕರಣ, ತುಲಾ ರಾಶಿ, ವೃಶ್ಚಿಕ ಲಗ್ನ, ಹೇಮಂತ್ ಋತು, 1946 ಕ್ರೋಧಿ ನಾಮ ಸಂವತ್ಸರ, ವಿಕ್ರಮ ಶಕ ಸಂವತ್ಸರ

ಮನೆಮದ್ದು

ಸೆಲರಿಯು ಯೂರಿಕ್ ಆಮ್ಲವನ್ನು ನಿಯಂತ್ರಿಸಲು ಸಹಾಯ ಮಾಡುವ ಆಂಟಿ-ಆಕ್ಸಿಡೆಂಟ್ ಮತ್ತು ಉರಿಯೂತದ ಗುಣಲಕ್ಷಣಗಳನ್ನು ಹೊಂದಿದೆ. ಸೆಲರಿಯಲ್ಲಿರುವ ಲುಟಿಯೋಲಿನ್, 3-ಎನ್-ಬ್ಯುಟೈಲ್ಫ್ತಲೈಡ್ ಮತ್ತು ಬೀಟಾ-ಸೆಲಿನೆನ್ ಎಂಬ ಗಮನಾರ್ಹ ಸಂಯುಕ್ತಗಳು ರಕ್ತದಲ್ಲಿನ ಯೂರಿಕ್ ಆಮ್ಲದ ಮಟ್ಟವನ್ನು ಕಡಿಮೆ ಮಾಡುತ್ತದೆ ಮತ್ತು ಗೌಟ್ ದಾಳಿಯನ್ನು ಪ್ರಚೋದಿಸುವ ಉರಿಯೂತದ ನೈಟ್ರಿಕ್ ಆಕ್ಸೈಡ್ ಉತ್ಪಾದನೆಯನ್ನು ಕಡಿಮೆ ಮಾಡುತ್ತದೆ.

ಸೌಂದರ್ಯ ಸೂತ್ರ

ತ್ರಿಫಲ ಚೂರ್ಣ 1 ಚಮಚ, ಮನೆಯಲ್ಲಿ ತಯಾರಿಸಿದ ಮಜ್ಜಿಗೆ ಸ್ವಲ್ಪ, ಹೇರ್ ಮಾಸ್ಕ್ ತಯಾರಿಸುವ ವಿಧಾನ: ಒಂದು ಬೌಲ್‌ನಲ್ಲಿ ತ್ರಿಫಲ ಚೂರ್ಣ ಹಾಗೂ ಮಜ್ಜಿಗೆಯನ್ನು ಸೇರಿಸಿ ಚೆನ್ನಾಗಿ ಮಿಕ್ಸ್ ಮಾಡಿ. ಇದನ್ನು ನೆತ್ತಿ ಹಾಗೂ ಕೂದಲಿಗೆ ಹಚ್ಚಿ. 5-10 ನಿಮಿಷ ಬಿಟ್ಟು ಕೂದಲನ್ನು ಸೌಮ್ಯ ಶಾಂಪೂ ಬಳಸಿ ತೊಳೆಯಿರಿ. ಇದರಿಂದ ತಲೆಹೊಟ್ಟು ನಿವಾರಣೆಯಾಗುತ್ತದೆ.

ದಿನ ಭವಿಷ್ಯ

ಮೇಷ: ಆತ್ಮೀಯರ ಹಾಗೂ ಹಿತೈಷಿಗಳ ಸಹಕಾರದಿಂದ ಅದೆಷ್ಟೋ ಕಾರ್ಯಗಳಲ್ಲಿ ಸಫಲ ರಾಗುವಿರಿ. ಮನಸ್ಸಿಗೆ ಸಮಾಧಾನ, ಸಂತೃಪ್ತಿ ತುಂಬಿಕೊಂಡಿರುವ ದಿನ.

ವೃಷಭ: ಪ್ರಯತ್ನ ಮಾಡುವ ಮೊದಲೇ ಫಲದ ಬಗ್ಗೆ ಚಿಂತಿಸದಿರಿ. ನಿಮ್ಮ ಕೆಲಸವನ್ನು ಶ್ರದ್ಧೆಯಿಂದ ಮಾಡಿರಿ. ಕೆಲಸ ಕಾರ್ಯಗಳೆಲ್ಲ ಮಂದ ಗತಿಯಲ್ಲಿ ಸಾಗಲಿವೆ.

ಮಿಥುನ: ಒಂದಲ್ಲ ಒಂದು ಸಮಸ್ಯೆಯಿಂದ ಹೈರಾಣರಾಗು ವಿರಿ. ಮಾಡುವ ಪ್ರತೀ ಕೆಲಸದಲ್ಲೂ ವಿಷಯ ದಲ್ಲೂ ಮುಂಜಾಗ್ರತೆಯ ಅಗತ್ಯವಿದೆ.

ಕಟಕ: ಆರೋಗ್ಯದ ಕುರಿತು ಜಾಗ್ರತೆ ಇರಲಿ. ಮಾನಸಿಕ ಒತ್ತಡವಿದ್ದರೂ ನೆಮ್ಮದಿಗೆ ಭಂಗವಿರುವುದಿಲ್ಲ.

ಸಿಂಹ: ವಿನಾಕಾರಣ ಓಡಾಟದಿಂದ ಪ್ರಯಾಸ ಹೆಚ್ಚಾಗಲಿದೆ. ಅನಾರೋಗ್ಯದಿಂದ ಬಳಲುತ್ತಿರುವವರು ವೈದ್ಯರೊಂದಿಗೆ ಸಮಾಲೋಚಿಸಿರಿ.

ಕನ್ಯಾ: ಎಲ್ಲ ಕೆಲಸ ಕಾರ್ಯಗಳಲ್ಲಿ ಸಫಲತೆಯನ್ನು ಕಾಣುವಿರಿ. ವ್ಯಾಪಾರ, ವ್ಯವಹಾರದಲ್ಲಿ ಲಾಭವಿರುವುದು. ವ್ಯವಹಾರಗಳಲ್ಲಿ ಚರ್ಚೆಗೆ ಅವಕಾಶ ನೀಡದಿರಿ.

ತುಲಾ: ಅವಿವಾಹಿತರಿಗೆ ಕಂಕಣಬಲ ಇರುವುದು. ಸಮಯ ನಿಮಗೆ ಪೂರಕವಾಗಿರುವುದರಿಂದ ಕೆಲಸ ಕಾರ್ಯದಲ್ಲಿ ಪ್ರಗತಿ ಸಾಧಿಸುವಿರಿ.

ವೃಶ್ಚಿಕ: ಪ್ರಗತಿಯ ಹಾದಿ ಸುಗಮವಾಗಿರುತ್ತದೆ. ನಿಮ್ಮ ಪ್ರಯತ್ನಕ್ಕೆ ಹಲವರ ಸಹಕಾರದಿಂದ ಫಲ ದೊರಕಲಿದೆ.

ಧನು: ಒತ್ತಡ ಆವರಿಸುವುದರಿಂದ ಮನಸ್ಸು ಅಶಾಂತಿಯೆಡೆಗೆ ಮುಖ ಮಾಡುವುದು. ನಿಮ್ಮ ನಿರ್ಲಕ್ಷ್ಯವೇ ನಿಮ್ಮನ್ನು ಸಂಕಷ್ಟಕ್ಕೆ ಗುರಿ ಮಾಡುವುದು.

ಮಕರ: ಸಂತಾನದ ಬಗ್ಗೆ ನಿಮಗೆ ಚಿಂತೆ ಕಾಡಲಿದೆ. ಕೆಲಸ ಕಾರ್ಯದಲ್ಲಿ ಪ್ರಗತಿ ಕಾಣುವ ಮುನ್ಸೂಚನೆ ಕಂಡಂತೆ ಭಾಸವಾದರೂ ಮರೀಚಿಕೆಯಾಗಲಿದೆ.

ಕುಂಭ: ವಿನಾಕಾರಣ ಓಡಾಟವು ತೋರಿಬಂದು ಅಸೌಖ್ಯ ಉಂಟಾಗಲಿದೆ. ಯಾರೊಂದಿಗೂ ಕಾರಣವಿಲ್ಲದೆ ವಾಗ್ವಾದಕ್ಕೆ ಇಳಿಯ ಬೇಡಿ.

ಮೀನ: ಯಶಸ್ಸು ದೊರಕುವುದು. ಕುಟುಂಬದಲ್ಲಿ ಸಂತಸವಿರುವುದು. ಧಾರ್ಮಿಕ ಕಾರ್ಯದಲ್ಲಿ ಜವಾಬ್ದಾರಿ. ಗುರುಹಿರಿಯರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ



- ಖ್ಯಾತ ಬಾಲಿವುಡ್ ಶಾರುಖ್ ಖಾನ್ ಹುಟ್ಟುಹಬ್ಬ
- 2020: ಪ್ರಿಯಾಂಕಾ ರಾಧಾಕೃಷ್ಣನ್‌ವರು ಭಾರತ ಮೂಲದ ಮೊದಲ ನ್ಯೂಜಿಲೆಂಡ್ ಸಚಿವೆಯಾದರು.
- ಗೋವರ್ಧನ ಪೂಜಾ, ದೀಪಾವಳಿ ಪಾಡ್ಯ

ಚಿತ್ರಸ್ಫೂರ್ತಿ

ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ಭರ್ಜರಿ ಪಟಾಕಿ ಹಾರಿಸುವ ಮೂಲಕ ದೀಪಾವಳಿಯನ್ನು ಆಚರಿಸಿದರು. ಅಲ್ಲಿ ಪಟಾಕಿ ಹಾರಿಸದರೆ, ವಾಯುಮಾಲಿನ್ಯ ಆಗಲ್ಲ ಎಂದೆನಿಸುತ್ತದೆ. ಚಿತ್ರ: ದಮಿಯನ್ ದೋವರ್‌ಗೇನ್ಸ್

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● 'ವೈ ಭಾರತ್ ಮ್ಯಾಟರ್ಸ್' ಎಂಬ ಶೀರ್ಷಿಕೆಯ ಕೃತಿಯನ್ನು ಇತ್ತೀಚೆಗೆ ಬಿಡುಗಡೆ ಮಾಡಿದ ಲೇಖಕರು ಯಾರು?

- ಎ. ನರೇಂದ್ರ ಮೋದಿ.
- ಬಿ. ಎಸ್.ಜೈಶಂಕರ್.
- ಸಿ. ರಾಜೇಂದ್ರ ಸಿಂಗ್.
- ಡಿ. ನಿರ್ಮಲಾ ಸೀತಾರಾಮನ್.

ಉತ್ತರ: ಬಿ. ಎಸ್. ಜೈಶಂಕರ್.

ಮಾಹಿತಿ

ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ಅವರು ತಮ್ಮ ಹೊಸ ಕೃತಿ 'ವೈ ಭಾರತ್ ಮ್ಯಾಟರ್ಸ್' ಅನ್ನು ದೆಹಲಿಯಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಬಿಡುಗಡೆ ಮಾಡಿದರು. ಪ್ರಧಾನಿ ಮೋದಿಯವರ ಅಡಿಯಲ್ಲಿ ಕಳೆದ ಒಂದು ದಶಕದಲ್ಲಿ ವಿದೇಶಾಂಗ ನೀತಿಯಲ್ಲಿ ಭಾರತದ ಪರಿವರ್ತನೆಯನ್ನು ಈ ಕೃತಿ ತಿಳಿಸುತ್ತದೆ. ಇದು ರಾಮಾಯಣದೊಂದಿಗೆ ಭಾರತದ ವಿಕಾಸವನ್ನು ಸಹ ಜೋಡಿಸುತ್ತದೆ. ಭೌಗೋಳಿಕ ರಾಜಕೀಯದಿಂದಾಗಿ 2024 ಹೇಗೆ ಪ್ರಕ್ಷುಬ್ಧವಾಗಿರುತ್ತದೆ, ಆದರೆ ಭಾರತವು ತನ್ನ ಶಕ್ತಿಯನ್ನು ನೀಡಿದರೆ ಸವಾಲುಗಳನ್ನು ಎದುರಿಸಬಹುದು ಎಂದು ಜೈಶಂಕರ್ ವಿವರಿಸಿದ್ದಾರೆ.

ಹೃದಯ ಶ್ರೀಮಂತಿಕೆ ಮೆರೆದ ಬಡವ ಸುಧಾಸ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದು ಸಣ್ಣ ಪಟ್ಟಣದಲ್ಲಿ ಸುಧಾಸ ಎಂಬ ಬಡವನಿದ್ದ. ಅವನ ಗುಡಿಸಲಿನ ಹಿಂಭಾಗದಲ್ಲಿ, ಒಂದು ಸಣ್ಣ ಕೊಳವಿತ್ತು. ಕೊಳದಲ್ಲಿ ಕಮಲದ ಹೂವೊಂದು ಅರಳಿರುವುದನ್ನು ನೋಡಿದ. ಅದು ಕಮಲದ ಹೂ ಬಿಡುವ ಕಾಲವಾಗಿರಲಿಲ್ಲ, ಆದರೂ ಅಪರೂಪವಾಗಿ ಕಮಲದ ಹೂ ಅರಳಿರುವುದನ್ನು ನೋಡಿ ಅವನಿಗೆ ಬಹಳ ಸಂತೋಷವಾಯಿತು. ಏಕೆಂದರೆ ಈಗ ಈ ಹೂವನ್ನು ಮಾರುಕಟ್ಟೆಯಲ್ಲಿ ಮಾರಿದರೆ, ಯಾರಾದರೂ ಕೂಡ ಇದಕ್ಕೆ ಎರಡು ನಾಣ್ಯಗಳನ್ನಾದರೂ ಕೊಟ್ಟೇ ಕೊಡುತ್ತಾರೆ, ಆಗ ನಾನು ಅಂದುಕೊಂಡ ಹಾಗೆ ನನಗೆ ಅಷ್ಟು ಹಣ ಸಿಕ್ಕರೆ ನನಗಿಂತ ಅದೃಷ್ಟವಂತರು ಬೇರಾರು ಇಲ್ಲ, ಎಂದುಕೊಂಡು ಅದನ್ನು ತೆಗೆದುಕೊಂಡು ಮಾರುಕಟ್ಟೆಯತ್ತ ನಡೆದ.

ದಾರಿಯಲ್ಲಿ ಇವನು ಹೋಗುತ್ತಿದ್ದಾಗ, ಆ ಪಟ್ಟಣದ ಶ್ರೀಮಂತನೊಬ್ಬ, 'ಆ ಹೂವನ್ನು ನನಗೆ ಕೊಡು, ನಿನಗೆ ನಾನು ಐನೂರು ಚಿನ್ನದ ವರಹಗಳನ್ನು ಕೊಡುತ್ತೇನೆ' ಎಂದು ಹೇಳಿದ. ಇವನು ಈ ಮಾತನ್ನು ಇವನ ಬಳಿ ಹೇಳುತ್ತಿದ್ದಾಗಲೇ, ಅಲ್ಲಿಗೆ, ರಾಜ್ಯದ ಮಹಾದಂಡನಾಯಕನೊಬ್ಬ ಅಲ್ಲಿಗೆ ಬಂದ. ಆತ ತನ್ನ ಕುದುರೆಯಿಂದ ಇಳಿದು, 'ಈ ಕಮಲಕ್ಕೆ ನಾನು, ಈ ಶ್ರೀಮಂತ, ಎಷ್ಟು ಬೆಲೆ ಕೊಡಲು ತಯಾರಿದ್ದನೋ ಅದಕ್ಕಿಂತ ಹತ್ತರಷ್ಟು ಹೆಚ್ಚಿನ ಬೆಲೆಯನ್ನು ಕೊಡುತ್ತೇನೆ, ನನಗೇ ಈ ಕಮಲವನ್ನು ಕೊಡು' ಎಂದು ಕೇಳಿದ.

ಸುಧಾಸನಿಗೆ ಅನುಮಾನ ಬಂದು 'ನಿಮಗಿಬ್ಬರಿಗೂ ಹುಚ್ಚು ಹಿಡಿದಿದೆಯೇನು?' ಎಂದು ಕೇಳುತ್ತಿದ್ದ. ಅಷ್ಟರಲ್ಲಿ, ಆ ರಾಜ್ಯದ ರಾಜನ ರಥ ಅಲ್ಲಿಗೆ ಬಂದಿತು. ರಾಜ ಹೇಳಿದ, 'ಮಹಾದಂಡ ನಾಯಕ ಕೊಡುವ ಹತ್ತರಷ್ಟು ಹೆಚ್ಚಿನ ಬೆಲೆಯನ್ನು ಕೊಡಲು ನಾನು ತಯಾರಿದ್ದೇನೆ. ನನಗೇ ನೀನು ಈ ಕಮಲದ ಹೂವನ್ನು ಕೊಟ್ಟು ಬಿಡು' ಎಂದು ಕೇಳಿದ.

ಸುಧಾಸನಿಗೆ ಅತ್ಯಂತ ಆಶ್ಚರ್ಯವಾಯಿತು, 'ನಿಜವಾಗಿಯೂ ಇವರುಗಳಿಗೆ ಏನಾಗಿದೆ? ನಾನು ಈ ಕಮಲಕ್ಕೆ ಎರಡು ನಾಣ್ಯ ಸಿಕ್ಕರೆ ಹೆಚ್ಚೆಂದುಕೊಂಡಿದ್ದೆ, ಇವರುಗಳು ನೋಡಿದರೆ ಇಷ್ಟೊಂದು ಬೆಲೆಯನ್ನು ಕೊಡಲು ತಯಾರಾಗಿದ್ದಾರಲ್ಲ, ಏನು ವಿಷಯವಿರಬಹುದು?' ಎಂದು ಅವರನ್ನು ಕೇಳಿದ.

ಆಗ ರಾಜ, 'ಭಗವಾನ್ ಬುದ್ಧರು ಪಟ್ಟಣಕ್ಕೆ ಬಂದಿದ್ದಾರೆ, ಅವರನ್ನು ಎದುರುಗೊಳ್ಳಲು ನಾವೆಲ್ಲರೂ ಹೋಗುತ್ತಿದ್ದೇವೆ. ಸಾಮಾನ್ಯವಾಗಿ ಈ ಕಾಲದಲ್ಲಿ ಅರಳದ ಕಮಲದ ಹೂವನ್ನು ಅವರಿಗೆ ಅರ್ಪಿಸಲು ನಾನು ಇಚ್ಛಿಸುತ್ತೇನೆ, ಇದರಿಂದ ಅವರಿಗೆ ಬಹಳ ಸಂತೋಷವಾಗುತ್ತದೆ. ಏಕೆಂದರೆ ಈ ಋತುವಿನಲ್ಲಿ ತಮ್ಮ ಚರಣಗಳಲ್ಲಿ ಯಾರಾದರೂ ಕಮಲವನ್ನು ಅರ್ಪಿಸಬಹುದೆಂದು ಅವರು ಯೋಚಿಸಿಯೂ ಇರುವುದಿಲ್ಲ. ಇಂತಹ ಸದವಕಾಶವನ್ನು ಯಾರು ತಾನೆ ಬಳಸಿಕೊಳ್ಳಲು ಇಚ್ಛಿಸುವುದಿಲ್ಲ?' ಎಂದು ಹೇಳಿದ.

ಆಗ ಸುಧಾಸ, 'ಹಾಗಿದ್ದರೆ ಈ ಹೂವನ್ನು ನಾನು ಮಾರುವುದಿಲ್ಲ, ನಾನೇ ಬುದ್ಧರಲ್ಲಿಗೆ ಹೋಗಿ ಅವರ ಚರಣಕ್ಕೆ ಈ ಕಮಲವನ್ನು ಅರ್ಪಿಸುತ್ತೇನೆ' ಎಂದು ಹೇಳಿದ.

ಎಲ್ಲರೂ ಬುದ್ಧನ ಬಳಿಗೆ ತಲುಪಿದರು. ಆ ಬಡವ ಬುದ್ಧನಿಗೆ ಆ ಹೂವನ್ನು ಅವರಿಗೆ ಸಮರ್ಪಿಸುತ್ತಾ 'ಭಗವಾನ್ ಶ್ರೀಮಂತಿಕೆ, ಪ್ರೇಮಕ್ಕಿಂತ ಮಿಗಿಲಾದುದ್ದೇನಲ್ಲ. ಆತ್ಮ ಸುಖವನ್ನು ಹಣಕ್ಕಾಗಿ ಮಾರಲು ನನ್ನಿಂದ ಸಾಧ್ಯವಾಗದು, ಅದು ಬರೀ ಹೂವಾಗಿದ್ದರೆ ಅದನ್ನು ಮಾರಲು ನಾನು ತಯಾರಿದ್ದೆ, ಆದರೆ ನಿಮ್ಮ ಚರಣಗಳಿಗೆ ಅದನ್ನು ಅರ್ಪಿಸುವ ವಿಷಯ ಬಂದಾಗ, ಮಾರುವ ಪ್ರಶ್ನೆಯೇ ಬರುವುದಿಲ್ಲ, ಬಡವರಿಗೂ ಕೂಡಾ ಪ್ರೇಮಿಸಲು ಆಗುವುದು, ಬಡವರು ಸಹ ಗೌರವ ಸೂಚಿಸಲು ಅರ್ಹರು, ಅವರಲ್ಲೂ ಶ್ರದ್ದೆ ಇರುತ್ತದೆ, ಅವರಿಗೂ ಒಂದು ಆತ್ಮವಿರುತ್ತದೆ, ದಯವಿಟ್ಟು ಈ ಹೂವನ್ನು ಸ್ವೀಕರಿಸಿ ನನ್ನನ್ನು ಧನ್ಯನನ್ನಾಗಿಸಿ ದೇವಾ' ಎಂದು ಹೇಳಿದ.

ಬುದ್ಧ ಆ ಹೂವನ್ನು ಸ್ವೀಕರಿಸಿ ಬಹಳ ಆನಂದದಿಂದ ಅವನಿಗೆ ಆಶೀರ್ವದಿಸಿದರು.

ಬದುಕಿನಲ್ಲಿ ಸದಾ ಕಾಲಕ್ಕೂ ಹಣ ಮುಖ್ಯವಾಗುವುದಿಲ್ಲ. ಹಣಕ್ಕಿಂತ ಮೌಲ್ಯಗಳು, ಆತ್ಮ ಸಂತೃಪ್ತಿ ಸಂತೋಷ ಬಹಳ ಕೆಲವೊಮ್ಮೆ ಹಣ ಕೊಡಲಾಗದ ಸಮಾಧಾನವನ್ನು ಬೇರೆ ವಿಷಯಗಳು ನಮಗೆ ನೀಡುತ್ತವೆ. ಅದನ್ನು ಗುರುತಿಸಿ ಬದುಕುವ ರೀತಿಯನ್ನು ನಾವು ಕಲಿಯಬೇಕಷ್ಟೇ.

ಪದಬಂಧ



ಎಡದಿಂದ ಬಲಕ್ಕೆ

1. ನಯವಾಗಿರುವ ಕೆನ್ನೆ (3)
4. ನೀರು ಉಕ್ಕುವ ಸ್ಥಳ (3)
6. ಎಂದೂ ಕೈಗೂಡದ ಆಸೆ (5)
7. ಸುಕ್ಕಾಗು ಎನ್ನುವುದು ದಿಕ್ಕು ತಪ್ಪಿಸಿ ಬಂದಿದೆ (3)
9. ಹೊಗಳುವುದಲ್ಲ, ನಿಂದಿಸು (3)
11. ಕಪಾಳಮೋಕ್ಷಕ್ಕೆ ಮತ್ತೊಂದು ಹೆಸರು (4)
12. ಸೇಡು ತೀರಿಸಿಕೊಳ್ಳುವುದು (4)
14. ನಗುವಾಗ ಕಂಡ ಆಗಸ (3)
16. ಮಲಗಿ ನಿದ್ದೆ ಮಾಡಲು ಬೇಕಾಗುವ ಮೆತ್ತನೆಯ ಸಾಧನ (3)
18. ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವವನು (5)
19. ಹಣೆಗಿಟ್ಟುಕೊಳ್ಳುವ ಬೊಟ್ಟು (3)
20. ವಿವಿಧ ಮೂಲಿಕೆಗಳನ್ನು ಬಟ್ಟಿಯಿಳಿಸಿ ತೆಗೆದ ರಸ (3)

ಎಡದಿಂದ ಬಲಕ್ಕೆ

1. ಬಾಡು ಎಂದರ್ಥ (3)
2. ಕಡಿವಾಣಕ್ಕೆ ಮತ್ತೊಂದು ಪದ (3)
3. ಕಣ್ಣಿಗೆ ಕಾಣದ ಎಂದರ್ಥ (4)
4. ತನ್ನ ಮೈಮೇಲೆ ಚುಕ್ಕೆಗಳಿರುವ ಒಂದು ಕಾಡುಪ್ರಾಣಿ ವೇಗವಾಗಿ ಓಡುತ್ತದೆ (3)
5. ನಮ್ಮ ದೇಹದಲ್ಲಿರುವ ಯೋಚಿಸುವ ಅಂಗ (3)
8. ಕೆಟ್ಟ ರೀತಿಯಲ್ಲಿ ಬಳಸುವುದು (5)
10. ಮುಗಿಸು ಎನ್ನುವ ನುಡಿಗಟ್ಟು (5)
13. ತಿರುಗಿ ಬಂದಿರುವ ಕುಲ (4)
14. ಗತಿಯ ಮಧ್ಯೆ ಸಿಗುವ ಎಣಿಕೆ (3)
15. ಸ್ವರ್ಗದ ವಿರುದ್ಧ ಪದ (3)
16. ಒಂದು ಜಾತಿಯ ಧಾನ್ಯ (3)
17. ಸದಾ ನಮ್ಮ ಜೊತೆಗಿರುವ ಮಿತ್ರ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಅನವರತ 4. ಗುಮಾಸ್ತ 6. ಲೆಕ್ಕಿಗ 8. ಹಗೆತನ 10. ರಣಭೇರಿ 11. ಗಾರ್ದಭ 12. ತರಕಾರಿ 13. ಸರ್ಪರಾಜ 16. ರುಸುಮು 18. ದಣಿವು 19. ನಿರಪರಾಧಿ

ಮೇಲಿನಿಂದ ಕೆಳಕ್ಕೆ: 1. ಅಸ್ತ 2. ವರಾರ 3. ತಲೆ 5. ಮಾಳಿಗೆ 7. ಗಡಾರಿ 9. ನಗಾರಿ 10. ರಭಸ 12. ತಣ್ಣೀರು 14. ರಾಗಿಣಿ 15. ನಿರೂಪ 17. ಮುನಿ 18. ದಧಿ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಬೌದ್ಧ ಧರ್ಮದ ನರಕ

ಸಿಂಗಾಪುರದಲ್ಲಿರುವ ಟೈಗರ್ ಬಾಮ್ ಗಾರ್ಡನ್ಸ್ ಬೌದ್ಧ ಧರ್ಮದ ನರಕದ ಪರಿಕಲ್ಪನೆ. ಹಾವ್ ಪಾರ್ ವಿಲ್ಲಾ ಎಂದೂ ಕರೆಯಲಾಗುವ ಈ ಉದ್ಯಾನವನದಲ್ಲಿ ನರಕವನ್ನು ತಮ್ಮ ಕಲ್ಪನೆಗೆ ತಕ್ಕಂತೆ ಸೃಷ್ಟಿಸಲಾಗಿದೆ. ಈ ಉದ್ಯಾನವನವನ್ನು 1973ರಲ್ಲಿ ಸ್ಥಾಪಿಸಿದವರು, ಅವ್ ಬೂನ್ ಹಾವ್ ಮತ್ತು ಅವ್ ಬೂನ್ ಪರ್ ಎಂಬ ಬರ್ಮಾ ಸಹೋದರರು. ಟೈಗರ್ ಬಾಮ್ ಮುಲಾಮು ತಯಾರಿಸುತ್ತಿದ್ದ ಇವರು, ಮಾರಾಟದಿಂದ ಬಂದ ಹಣದಲ್ಲಿ ಒಂದು ಭಾಗ ಉದ್ಯಾನವನದ ನಿರ್ಮಾಣಕ್ಕೆ ಉಪಯೋಗಿಸಿದರು. ತಪ್ಪು ದಾರಿಯಲ್ಲೇ ಮುಂದುವರೆದರೆ ಸಾವಿನ ನಂತರ ನರಕದಲ್ಲಿ ಕಷ್ಟಗಳನ್ನು ಅನುಭವಿಸಬಹುದು ಎಂಬುದನ್ನು ಕಣ್ಣಾರೆ ಕಾಣುವಂತೆ ಈ ಉದ್ಯಾನವನದಲ್ಲಿ ಚಿತ್ರಿಸಲಾಗಿದೆ.

ಪುಸ್ತಕ ಲೋಕ

ಬಳ್ಳಿಕಾಳ ಬೆಳ್ಳಿ



ಡಾ. ಕೆ. ಎನ್ ಗಣೇಶಯ್ಯ ಅವರ 'ಬಳ್ಳಿಕಾಳ ಬೆಳ್ಳಿ' ಕಾದಂಬರಿ, ಕರ್ನಾಟಕದ ಕರಾವಳಿಯಲ್ಲಿನ ಪಶ್ಚಿಮ ಘಟ್ಟಗಳ ಚರಿತ್ರೆಯನ್ನು ಪರಿಚಯಿಸಿ, ಅಲ್ಲಿನ ಭವ್ಯ ಇತಿಹಾಸವನ್ನು ಹೇಳುತ್ತದೆ. ಭಾರತದ ಚರಿತ್ರೆಯನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಕೆಲವು ವಸ್ತು ವಿಷಯಗಳ ಸುತ್ತ ಕಥಾವಸ್ತುವನ್ನು ಹೆಣೆಯಲಾಗಿದೆ. ಈ ಮೂಲಕ ಪಶ್ಚಿಮದ ಕರಾವಳಿಯ ವೀರಗಾಥೆಗಳ ಒಂದು ಘಟ್ಟವನ್ನು ತೆರೆದಿಡುವ ಪ್ರಯತ್ನವನ್ನು ಈ ಕೃತಿ ಮಾಡಿದೆ. ತುಳುನಾಡಿನ ಭೂತಾರಾಧನೆಯ ಬಗ್ಗೆ ವಿಶೇಷವಾದ ಮಾಹಿತಿಗಳೊಂದಿಗೆ ತುಳುನಾಡಿನ ಪಾಡ್ದನಗಳು ಓದುಗರ ಆಸಕ್ತಿಯನ್ನು ಹೆಚ್ಚಿಸುತ್ತದೆ. ಲೇಖಕರು ನೀಡುವ ಪ್ರತಿ ಮಾಹಿತಿಗಳಿಗೂ ಆಕರಗಳನ್ನು ಒದಗಿಸಿರುವುದು ವಿಶಿಷ್ಟವಾಗಿದೆ.

ಟ್ವೀಟ್‌ಮೆಂಟ್

ಪ್ರಶಾಂತ್: ನನ್ನ ಕೈಯಲ್ಲ ದುಡ್ಡು ಉಳಿತಿಲ್ಲ, ಈ ದೀಪಾವಳಿ ನಂತರವಾದರೂ ಜಾಸ್ತಿ ದುಡ್ಡು ಬರುವಂತಾಗಲಿ

ಪ್ರಭು: ನಿನ್ನ ಕೈಯಲ್ಲಿ ದುಡ್ಡು ಉಳಿತಿಲ್ಲ ಅಂತಾನೇ ದೇವರು ತಮ್ಮ ಹತ್ತಿರ ಇಟ್ಟಕೊಂಡಿರೋದು!

ಗತ ಕಾಲಕ್ಕೆ ಮರಳೋಣ..

ಪಾಸ್ಟ್ ಲೈಫ್ ರಿಗ್ರೆಷನ್ ಟೆಕ್ನಿಕ್



● ಸಿಹಿಜೀವಿ ವೆಂಕಟೇಶ್ವರ

ಇಂದು ಬೆಳಿಗ್ಗೆ ಪತ್ರಿಕೆಯ ಒಂದು ಅಂಕಣ ಓದುವಾಗ ಅಮೆರಿಕದ ಲೇಖಕರಾದ ರಿಕ್ ವಾರೆನ್ ಅವರು ಹೇಳಿದ ಮಾತು ನನ್ನನ್ನು ಸೆಳೆಯಿತು. ಅದು ನಾವು ಭೂತಕಾಲದಿ ಉದಯಿಸಿದವರು ಆದರೆ ಅದೇ ಭೂತದಲ್ಲಿ ಬಂಧಿಯಾಗಬಾರದು, ಹೌದಲ್ಲವೇ ನಾವು ಇಂದು ಏನಾಗಿದ್ದೇವೋ ಅದಕ್ಕೆ ಗತಕಾಲದೊಂದಿಗೆ ಖಂಡಿತವಾಗಿಯೂ ಸಂಬಂಧವಿದೆ. ಆದರೆ ಅದನ್ನೇ ನೆನೆಪು ಮಾಡಿಕೊಂಡು ಪ್ರತಿದಿನ ಪ್ರತಿಕ್ಷಣ ಕುಳಿತರೆ ವರ್ತಮಾನದಲ್ಲಿ ಜೀವನ ಸಾಧ್ಯವೇ? ಭೂತವೂ ಬೇಕು, ವರ್ತಮಾನದಿ ಬದುಕಬೇಕು ಮತ್ತು ತನ್ಮೂಲಕ ಭವಿಷ್ಯವನ್ನು ಕಟ್ಟಿಕೊಳ್ಳಬೇಕು.

ಸವಿನೆನಪುಗಳು ಬೇಕು ಸವಿಯಲೀ ಬದುಕು ಎಂಬ ಕವಿವಾಣಿಯಂತೆ ಸವಿ ನೆನಪುಗಳು ನಮ್ಮನ್ನು ಸಂತಸವಾಗಿಡಲು ನಮ್ಮ ಆನಂದವನ್ನು ಇಮ್ಮಡಿಗೊಳಿಸಲು ಖಂಡಿತವಾಗಿಯೂ ಬೇಕು. ಆದರೆ ಬಹುತೇಕ ಬಾರಿ ಬೇಡವೆಂದರೂ ನಮಗಾದ ನೋವು, ಅವಮಾನ, ತೊಂದರೆಗಳೇ ಧುತ್ತೆಂದು ಬಂದು ನಮ್ಮ ಮೇಲೆಯೇ ಎರಗಿ ನಮ್ಮ ಮನೋಬಲವನ್ನು ಕುಗ್ಗಿಸಿ ನಮ್ಮ ಕಡೆ ಕುಹಕದ ನಗೆ ಬೀರಿ ಹಂಗಿಸುತ್ತವೆ.

ವರ್ತಮಾನದಲ್ಲಿ ಜೀವಿಸಿ ಎಂದು ಸಾಧು ಸಂತರು, ಹಿರಿಯರು, ತಿಳಿದವರು, ಹಿತೈಷಿಗಳು, ವ್ಯಕ್ತಿತ್ವ ವಿಕಸನದ ಗುರುಗಳು ದಿನಗಟ್ಟಲೆ ಉಪನ್ಯಾಸ ನೀಡಿದರೂ ಅವರೇಳಿದಷ್ಟು ಸಲೀಸಾಗಿ ವರ್ತಮಾನದಲ್ಲಿ ಜೀವಿಸಲು ಸಾಧ್ಯವೇ? ಕಷ್ಟ ಸಾಧ್ಯ. ಅವರ ಮಾತುಗಳಲ್ಲಿ ಸತ್ಯವಿದೆ ಆದರೂ ಆಚರಣೆಯಲ್ಲಿ ಅಷ್ಟು ಸುಲಭವಲ್ಲ. ವರ್ತಮಾನದಲ್ಲಿ ಜೀವಿಸುವ ಪ್ರಯತ್ನ ಜಾರಿಯಲ್ಲಿರಲಿ.

ಕೆಲವೊಮ್ಮೆ ನಮ್ಮ ಹಳೆಯ ನೆನಪುಗಳು ಮಧುರವೂ ಹೌದು .ಇತ್ತೀಚಿನ ದಿನಗಳಲ್ಲಿ ಪಾಸ್ಟ್ ಲೈಫ್ ರಿಗ್ರೆಷನ್ ಟೆಕ್ನಿಕ್ ಎಂಬ ಚಿಕಿತ್ಸಾ ಪದ್ಧತಿಯು ಬಹಳ ಜನಪ್ರಿಯವಾಗುತ್ತಿದೆ. ನಮ್ಮ ಕೆಲ ಅನಾರೋಗ್ಯದ ಸಮಸ್ಯೆಗಳಿಗೆ ಅಲೋಪತಿ, ಹೋಮಿಯೋಪತಿ ಮುಂತಾದ ಚಿಕಿತ್ಸಾ ಪದ್ಧತಿಯಲ್ಲಿ ಗುಣವಾಗದ ಖಾಯಿಲೆಗಳು ನಮ್ಮ ಗತಕಾಲದ ನೆನಪುಗಳು ಮರುಕಳಿಸುವ ಚಿಕಿತ್ಸೆಯ ಮೂಲಕ ಗುಣಪಡಿಸುವುದನ್ನು ಕಂಡಿದ್ದೇವೆ. ಈ ಕೇಂದ್ರಗಳು ಮೊದಲು ವಿದೇಶಗಳಲ್ಲಿ ಜನಪ್ರಿಯವಾಗಿ ಈಗ ಬೆಂಗಳೂರಿನಂತಹ ನಗರಗಳಲ್ಲೂ ತಲೆಎತ್ತಿವೆ.

ಇಂದಿನ ಆಧುನಿಕತೆಯ ಭರಾಟೆ, ಮಾಲಿನ್ಯ, ದಿನಕ್ಕೊಂದು ರೋಗದ ಜನನ, ಸಂಬಂಧಗಳಲ್ಲಿ ಬಿರುಕು, ಅತಿಯಾದ ಯಾಂತ್ರೀಕರಣ, ಎಲ್ಲದರಲ್ಲೂ ಕೃತಕತೆ, ಹಣವೇ ಶ್ರೇಷ್ಠ ಎಂಬ ಭಾವನೆಗಳನ್ನು ನೋಡಿದಾಗ ನಮ್ಮ ಸುಮಧುರ ಬಾಲ್ಯ, ನಮ್ಮ ಕಾಲೇಜು ದಿನಗಳು, ಮೊದಲ ಕ್ರಷ್, ಗೆಳೆಯರೊಡನೆ ಮಾಡಿದ ಪ್ರವಾಸ ನೆನದಾಗ ಏನೋ ಒಂದು ರೀತಿಯ ಆನಂದ ನಮ್ಮನ್ನು ಆವರಿಸಿಕೊಳ್ಳುವುದು ಸುಳ್ಳಲ್ಲ. ಆದ್ದರಿಂದ ಗೆಳೆಯರೇ ದುಡ್ಡು ಕೊಟ್ಟು ಗತಕಾಲಕ್ಕೆ ಹಿಂದಿರುಗುವ ಥೆರಪಿಗೆ ಒಳಗಾಗದೆ ಪ್ರತಿದಿನ ಅಥವಾ ವಾರಕ್ಕೊಮ್ಮೆ ಕೆಲ ಕಾಲವಾದರೂ ನಮ್ಮ ಬಾಲ್ಯದ ಗತವೈಭವಕ್ಕೆ ಮರಳೋಣ ಸುಂದರ ಗತ ನೆನಪುಗಳ ನೆನೆಯೋಣ ಸಂತಸದ ಮಳೆಯಲಿ ನೆನೆಯೋಣ.

ನಗುವಿರದ ದಿನ; ಬರದು ಆ ಕ್ಷಣ

● ರೇಷ್ಮಾ

ಅಬ್ಬಾ ಮುಂದೊಂದು ದಿನ ನಗು ಅಂದರೆ ಏನು ಅಂತಾ ಕೇಳುವ ಸ್ಥಿತಿಗೆ ಬರತ್ತೀವೇನೋ ನಾವುಗಳು, ಏಕೆಂದರೆ ನಮಗೆ ಸಮಯವೇ ಇಲ್ಲ, ಅದೆಷ್ಟು ಒತ್ತಡದ ಬದುಕನ್ನ ಬದುಕತ್ತಿದ್ದೀವಿ, ಅಂದರೆ ಮನೆಯವರ ಜೊತೆಗೆ ಮನಸ್ಸು ಬಿಚ್ಚಿ ಮಾತಾಡಲ್ಲ, ನಾವು ಮಾತಾನಾಡೋದು ನಗೋದು ಸೋಷಲ್ ಮೀಡಿಯಾದಲ್ಲಿ ಇಮೋಜಿ ಅಲ್ವೇ. ಮತ್ತೇ ಪುರುಸೊತ್ತಿಲ್ಲ ಎಂದರೂ ಆಶ್ಚರ್ಯವಾಗದು. ಸದಾ ನಗುತ್ತಿರುವವರು ಆರೋಗ್ಯಪೂರ್ಣರಂತೆ ಗೋಚರಿಸುತ್ತಾರೆ. ನಗು ಒಂದು ರೀತಿಯ ಒತ್ತಡ ನಿವಾರಕವೂ ಹೌದು ದೇಹಕ್ಕೆ ವ್ಯಾಯಾಮ ಹೌದು.

ನಗುತ್ತಿರುವಾಗ ಒಬ್ಬ ವ್ಯಕ್ತಿಯ ಹೃದತದ ಬಡಿತ ನಿಮಿಷಕ್ಕೆ 120 ತಲುಪುತ್ತದೆ. ನಗುವಿನಿಂದ ನಮ್ಮ ರಕ್ತದ ಒತ್ತಡ ಕಡಿಮೆ ಆಗಿ ರಕ್ತ ಪರಿಚಲನೆ ಹೆಚ್ಚುತ್ತದೆ. ನಗುವಿನಿಂದ ಮಾಂಸಖಂಡ ಕುತ್ತಿಗೆಯ ನರಗಳ ಬಿಗಿತ ಕಡಿಮೆಯಾಗುತ್ತದೆ. ನಗು ಶಾಸ್ವಕೋಶವನ್ನು ಹಿಗ್ಗಿಸಿ ರಕ್ತದಲ್ಲಿ ಆಮ್ಲಜನಕ ವೃದ್ಧಿಯಾಗುವಂತೇ ಮಾಡುತ್ತದೆ ಹಾಗೆಯೇ ಶ್ವಾಸನಾಳಗಳನ್ನು ಸ್ವಚ್ಛಗೊಳಿಸುತ್ತದೆ. ನಗುವುದರಿಂದ ನಮ್ಮ ಮಿದುಳಿನಲ್ಲಿ ಎಂಡಾರ್ಫಿನ್



ಗಳೆಂಬ ನರವಾಹಗಳು ಬಿಡುಗಡೆಯಾಗುತ್ತದೆ. ಎಂಡಾರ್ಫಿನ್‌ಗಳು ಯಾವುದೇ ಅಡ್ಡ ಪರಿಣಾಮ ಉಂಟು ಮಾಡದೇ ನಮ್ಮನ್ನು ನಿದ್ರಾಸ್ಥಿತಿಗೆ ಒಯ್ಯುತ್ತವೆ. ನಗು ಮಾನಸಿಕ ಒತ್ತಡವನ್ನು ಕಡಿಮೆ ಮಾಡಿ ಮನಸ್ಸಿಗೆ ಸಮಾಧಾನ ನೀಡುತ್ತದೆ. ನಗುವಿನಲ್ಲಿ ಏನೋ ಒಂದು ರೀತಿಯ ಶಕ್ತಿ ಇದೆ. ನಗುವನ್ನು ಚಿಕಿತ್ಸೆಯಾಗಿ ಬಳಸಬಹುದು ಎಂದು ಪ್ರೊಫೆಸರ್ ಮಾಕೊರ್ ಸಫಿ ಸಲಹೆ ನೀಡಿದ್ದಾರೆ. ಹೃದಯ ಕಾಯಿಲೆ ಇರುವ ಜನರನ್ನು ಹಾಸ್ಯ ಸಂಜೆಗಳಿಗೆ ಆಹ್ವಾನಿಸಬಹುದು ಅಥವಾ ಸ್ನೇಹಿತರು ಮತ್ತು ಕುಟುಂಬದೊಂದಿಗೆ ಮೋಜಿನ ಸಂಜೆಗಳನ್ನು ಆನಂದಿಸಲು ಪ್ರೋತ್ಸಾಹಿಸಬಹುದು ಎಂದು ಅವರು ಹೇಳುತ್ತಾರೆ. ಡಾ.ಆನೆಟ್ ಗುಡ್ಹಾರ್ಟ್ ಅವರ ಪುಸ್ತಕ, ಲಾಫ್ಟರ್ ಥೆರಪಿನಲ್ಲಿ, ಇಡೀ ಅಧ್ಯಾಯವು ನಗುವಿನ ಭೌತಿಕ ಪ್ರಯೋಜನಗಳಿಗೆ ಸಮರ್ಪಿಸಲಾಗಿದೆ, ಏಕೆಂದರೆ ಇದು ದೇಹದಲ್ಲಿನ ಪ್ರತಿಯೊಂದು ಪ್ರಮುಖ ವ್ಯವಸ್ಥೆಯನ್ನು ತೊಡಗಿಸುತ್ತದೆ.

ನಗು ನಮ್ಮ ಮುಖದ ತೇಜಸ್ಸನ್ನು ಹೆಚ್ಚಿಸುತ್ತದೆ ನಗುವಿನಿಂದ ನಾವು ಜನರ ಪ್ರೀತಿ ಪ್ರೇಮವನ್ನು ಹೆಚ್ಚು ಸಂಪಾದಿಸಿಕೊಳ್ಳಬಹುದು. ನಾವು ನಗದೇ ಇದ್ದ ದಿನ ನಷ್ಟವಾದ ದಿನವೇ ಸರಿ. ಪ್ರತಿಯೊಬ್ಬರು ತಮ್ಮ ಸಿಡುಕು ಸ್ವಭಾವವನ್ನು ಕಡಿಮೆ ಮಾಡಿ ಹಾಸ್ಯ ಪ್ರವೃತ್ತಿಯನ್ನು ಬೆಳೆಸಿಕೊಂಡರೆ ಖಂಡಿತವಾಗಿ ತಮ್ಮ ಆರೋಗ್ಯವನ್ನು ಉತ್ತಮಪಡಿಸಬಹುದು.ನಗುವುದೇ ಸ್ವರ್ಗ ಅಳುವುದೇ ನರಕ ಎಂದಿದ್ದಾರೆ. ಆದ್ದರಿಂದ ಬಾಳಿನುದ್ದಕ್ಕೂ ನಾವು ನಗುತ್ತಲೇ ಇದ್ದು ನಮ್ಮ ಆರೋಗ್ಯವನ್ನು ವೃದ್ಧಿ ಮಾಡಿಕೊಳ್ಳೋಣ.

ನಗುವು ಸಹಜದ ಧರ್ಮ; ನಗಿಸುವುದು ಪರಧರ್ಮ । ನಗುವ ಕೇಳುತ ನಗುವುದತಿಶಯದ ಧರ್ಮ । ನಗುವ ನಗಿಸುವ ನಗಿಸಿ ನಗುತ ಬಾಳುವ ವರವ । ಮಿಗೆ ನೀನು ಬೇಡಿಕೊಳೊ – ಮಂಕುತಿಮ್ಮ

ಸಮಾಚಾರ ಸಣ್ಣದಲ್ಲ

ವಿಶ್ವ ಕುಸ್ತಿ ಚಾಂಪಿಯನ್ ಶಿಪ್: ಮಾನಸಿಗೆ ಕಂಚು

ಟಿರಾನಾ (ಅಲ್ಬೇನಿಯಾ), (ಪಿಟಿಐ): ಭಾರತದ ಮಾನಸಿ ಅಹ್ಲಾವತ್ ಅವರು ವಿಶ್ವ ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡರು. ಆದರೆ ಪುರುಷರ ಫ್ರೀಸ್ಟೈಲ್ ಮತ್ತು ಗ್ರೀಕೊ ರೋಮನ್ ಕುಸ್ತಿಪಟುಗಳು ನಿರಾಸೆ ಮೂಡಿಸಿ ಬರಿಗೈಲಿ ಮರಳುವಂತಾಯಿತು. ಮಹಿಳೆಯರ 59 ಕೆ.ಜಿ ವಿಭಾಗದಲ್ಲಿ ಕಣಕ್ಕಿಳಿದ ಮಾನಸಿ, ಕಂಚಿನ ಪದಕಕ್ಕಾಗಿ ನಡೆದ ಹಣಾಹಣಿ ಯಲ್ಲಿ ಕೆನಡಾದ ಲಾರೆನ್ಸ್ ಬಿಯುರ್ಗಾರ್ಡ್ ಅವರನ್ನು 5–0 ಯಿಂದ ಸೋಲಿಸಿದರು. ಮಾನಸಿ ಅವರು ಸರ್ ಚೋಟು ರಾಮ್ ಅಖಾಡದಲ್ಲಿ ಮನದೀಪ್ ಅವರಿಂದ ತರಬೇತಿ ಪಡೆಯುತ್ತಿದ್ದಾರೆ. ಇದಕ್ಕೆ ಮೊದಲು ಅವರು ಬುಧವಾರ ನಡೆದ ಸೆಮಿಫೈನಲ್ನಲ್ಲಿ 1–4ರಲ್ಲಿ ಮಂಗೋಲಿಯಾದ ಸುಖೀ ಸೆರೆನ್ಚಿಮೆಡ್ ಎದುರು ಸೋಲನುಭವಿಸಿದ್ದರು. ಮನಿಷಾ ಭಾನವಾಲಾ ಅವರು 65 ಕೆ.ಜಿ. ವಿಭಾಗದಲ್ಲಿ ಪದಕದ ಸನಿಹ ಬಂದಿದ್ದರು. ಆದರೆ ಕಂಚಿನ ಪದಕಕ್ಕೆ ನಡೆದ ಸ್ಪರ್ಧೆಯಲ್ಲಿ ಜಪಾನ್ನ ಮಿವಾ ಮೊರಿಕಾವಾ ಎದುರು 2–8 ರಲ್ಲಿ ಸೋಲನುಭವಿಸಿದರು. ಮನಿಷಾ, ರೆಪೆಷಾಜ್ ಸುತ್ತಿನಲ್ಲಿ 7–2 ರಿಂದ ಮಂಗೋಲಿಯಾದ ಎನ್ಕಿಜನ್ ಅವರನ್ನು ಮಣಿಸಿ ಪದಕದ ಸುತ್ತಿಗೆ ತಲುಪಿದ್ದರು.

ಮ್ಯಾಗ್ನಸ್ ಇಲ್ಲದ ಫೈನಲ್ ಇಲ್ಲ: ಗ್ಯಾರಿ

ದೆಹಲಿ: ಭಾರತದ ಡಿ.ಗುಕೇಶ್ ಮತ್ತು ಚೀನಾದ ಡಿಂಗ್ ಲಿರೆನ್ ನಡುವಣ ಈ ತಿಂಗಳ ಕೊನೆಯಲ್ಲಿ ಆರಂಭವಾಗುವ ವಿಶ್ವ ಚೆಸ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯವು ತಮಗೆ ಫೈನಲ್‌ನಂತೆ ಕಾಣಿಸುತ್ತಿಲ್ಲ. ಐದು ಬಾರಿಯ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್ಸನ್ ಗೈರುಹಾಜರಿಯಲ್ಲಿ ಇದನ್ನು ವಿಶ್ವ ಚಾಂಪಿಯನ್‌ಶಿಪ್ ಫೈನಲ್ ಎಂದು ತಾವು ಪರಿಗಣಿಸುವುದಿಲ್ಲ ಎಂದು ರಷ್ಯಾದ ಚೆಸ್ ದಂತಕತೆ ಗ್ಯಾರಿ ಕ್ಯಾಸ್ಪರೋವ್ ಹೇಳಿದ್ದಾರೆ. ನಾರ್ವೆಯ ಚೆಸ್ ಚತುರ ಕಾರ್ಲ್ಸನ್ ಅವರು ಹೋದ ವರ್ಷ ಪ್ರಶಸ್ತಿ ಪಂದ್ಯದಿಂದ ಹಿಂದೆಸರಿಯುವ ಮೂಲಕ ವಿಶ್ವ ಚಾಂಪಿಯನ್ನರ ದೀರ್ಘ ಪಟ್ಟಿ ಕೊನೆಗೊಂಡಿದೆ ಎಂದು ಕ್ಯಾಸ್ಪರೋವ್ ಅನಿಸಿಕೆ ವ್ಯಕ್ತಪಡಿಸಿದ್ದಾರೆ. ಕಳೆದ ವರ್ಷ ಕಾರ್ಲ್ಸನ್ ಫೈನಲ್‌ನಲ್ಲಿ ಆಡಿರಲಿಲ್ಲ. ಇಂಥ ದೀರ್ಘ ಮಾದರಿಯಲ್ಲಿ ಆಡಲು ಮೊದಲಿನ ಪ್ರೇರಣೆ ಕಳೆದುಕೊಂಡಿರುವುದಾಗಿ ಅವರು ಹೇಳಿದ್ದರು. ಅವರು ಹಿಂದೆಸರಿದ ಕಾರಣ ಲಿರೆನ್ ಮತ್ತು ರಷ್ಯಾದ ನಿಪೊಮ್ನಿಷಿ ನಡುವೆ ಕಳೆದ ವರ್ಷ ಫೈನಲ್ ನಡೆದಿತ್ತು. ಲಿರೆನ್ ಈ ಸೆಣಸಾಟದಲ್ಲಿ ಗೆದ್ದು ವಿಶ್ವ ಚಾಂಪಿಯನ್ ಆಗಿದ್ದರು. ವಿಶ್ವದ ಅತಿ ಶ್ರೇಷ್ಠ ಆಟಗಾರನನ್ನು ಒಳಗೊಂಡಿರುವ ಫೈನಲ್ ನನ್ನ ಪ್ರಕಾರ ವಿಶ್ವ ಚಾಂಪಿಯನ್‌ಶಿಪ್ ಫೈನಲ್ ಎನಿಸುತ್ತದೆ ಎಂದು ಕ್ಯಾಸ್ಪರೋವ್ ಅವರು ಸೇಂಟ್ ಲೂಯಿ ಚೆಸ್ ಕ್ಲಬ್‌ನ ಯು ಟ್ಯೂಬ್ ಚಾನೆಲ್‌ನಲ್ಲಿ ಹೇಳಿದ್ದಾರೆ.

ಇನ್ನೂ ಶುರುವಾಗದ ರನ್ ಮಷಿನ್‌ಗಳು!

ರೋಹಿತ್‌ಗೆ 18, ಕೊಹ್ಲಿಗೆ 4 ರನ್ ಮಾತ್ರ | 235 ರನ್‌ಗೆ ಆಲೌಟ್ ಆದ ನ್ಯೂಜಿಲೆಂಡ್ | ನಾಲ್ಕು ವಿಕೆಟ್ ಕಳೆದುಕೊಂಡ ಭಾರತಕ್ಕೆ 86 ಎನ್ | ಮತ್ತೊಂದು ಟೆಸ್ಟ್ ಸೋಲುವತ್ತ ಹೋಗುತ್ತಿದೆಯೇ ಭಾರತ?

ಮುಂಬಯಿ: ಸ್ಪಿನ್‌ದ್ವಯರಾದ ರವೀಂದ್ರ ಜಡೇಜಾ(65 ಕ್ಕೆ 5) ಮತ್ತು ವಾಷಿಂಗ್ಟನ್ ಸುಂದರ್(81 ಕ್ಕೆ 4) ದಾಳಿಗೆ ಕುಸಿದ ನ್ಯೂಜಿಲ್ಯಾಂಡ್ ತಂಡವು ಭಾರತ ವಿರುದ್ಧದ ಮೂರನೇ ಟೆಸ್ಟ್‌ನ ಮೊದಲ ದಿನ 235 ರನ್ ಗಳಿಸಿ ಆಲೌಟಾಯಿತು. ಇದಕ್ಕುತ್ತರವಾಗಿ ಇನ್ನಿಂಗ್ಸ್ ಆರಂಭಿಸಿದ ಭಾರತ ತಂಡವು ದಿನದಾಟದ ಅಂತ್ಯಕ್ಕೆ 4 ವಿಕೆಟ್ ಕಳೆದುಕೊಂಡಿದ್ದು 86 ರನ್ ಗಳಿಸಿ ಸಂಕಷ್ಟಕ್ಕೆ ಸಿಲುಕಿದೆ. ಶುಭಮನ್ ಗಿಲ್(31★) ಮತ್ತು ರಿಷಭ್ ಪಂತ್(1★) ರನ್ ಗಳಿಸಿ 2ನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲ್ಯಾಂಡ್ ಡೆವೋನ್ ಕಾನ್ವೆ(4) ವಿಕೆಟ್ ಕಳೆದುಕೊಂಡು ಆರಂಭಿಕ ಆಘಾತಕ್ಕೆ ಒಳಗಾದರೂ ಕೂಡ ಆ ಬಳಿಕ ವಿಲ್ ಯಂಗ್ ಮತ್ತು ನಾಯಕ ಟ್ಯಾಮ್ ಲ್ಯಾಥಮ್ ತಾಳ್ಮೆಯ ಆಟ ಆಡಿ ದ್ವಿತೀಯ ವಿಕೆಟಿಗೆ 57 ರನ್ ಪೇರಿಸಿದರು. ಉತ್ತಮವಾಗಿ ಆಡುತ್ತಿದ್ದ ಈ ಜೋಡಿಯನ್ನು ಬೇರ್ಪಡಿಸಿದ ಶ್ರೇಯಸ್ಸು ವಾಷಿಂಗ್ಟನ್ ಸುಂದರ್‌ಗೆ ಲಭಿಸಿತು. 28 ರನ್ ಬಾರಿಸಿದ್ದ ಲ್ಯಾಥಂ ಅವರನ್ನು ಕ್ಲೀನ್ ಬೌಲ್ಡ್ ಮಾಡಿದರು. ಈ ವಿಕೆಟ್ ಕಿತ್ತ ಬೆನ್ನಲ್ಲೇ ಅಪಾಯಕಾರಿ ರಚಿನ್ ರವೀಂದ್ರ(5)ಗೆ ಸುಂದರ್ ಹೆಚ್ಚು ಹೊತ್ತು ಕ್ರೀಸ್ ಆಕ್ರಮಿಸಲು ಬಿಡಲಿಲ್ಲ. ಅವರನ್ನು ಕೂಡ ಕ್ಲೀನ್ ಬೌಲ್ಡ್ ಮಾಡಿ ಪೆವಿಯನ್‌ಗೆ ಅಟ್ಟಿದರು. ಉಭಯ ಆಟಗಾರರ ವಿಕೆಟ್ ಕೀಳುವಲ್ಲಿ ಸುಂದರ್‌ಗೆ ಕೊಹ್ಲಿ ನೀಡಿದ ಸಲಹೆ ಪಂದ್ಯದಲ್ಲಿ ಗಮನಸೆಳೆಯಿತು.

ಮಿಚೆಲ್-ಯಂಗ್ ಅರ್ಧಶತಕ: ಚಹಾ ವಿರಾಮದ ತನಕ ಉತ್ತಮ ಸ್ಥಿತಿಯಲ್ಲಿದ್ದ ಕಿವೀಸ್ ವಿಲ್ ಯಂಗ್ ಮತ್ತು ಮಿಚೆಲ್ ಜೋಡಿ ಬೇರ್ಪಟ್ಟ ಬಳಿಕ ಹಠಾತ್ ಕುಸಿಯತೊಡಗಿತು. ರವೀಂದ್ರ ಜಡೇಜಾ ತಮ್ಮ ಕೈ ಚಳಕದ ಮೂಲಕ 5 ವಿಕೆಟ್ ಕಿತ್ತು ಭಾರತಕ್ಕೆ ಯಶಸ್ಸು ತಂದುಕೊಟ್ಟರು. ಇದು ಜಡೇಜಾ ಅವರ 14ನೇ ಐದು ವಿಕೆಟ್ ಗೊಂಚಲು. ಯಂಗ್ ಮತ್ತು ಮಿಚೆಲ್ ಸೇರಿಕೊಂಡು ನಾಲ್ಕನೇ ವಿಕೆಟ್‌ಗೆ 57 ರನ್ ಒಟ್ಟುಗೂಡಿಸಿದರು. ವಿಲ್ ಯಂಗ್ 4 ಬೌಂಡರಿ ಮತ್ತು 2 ಸಿಕ್ಸರ್ ನೆರವಿನಿಂದ 71 ರನ್ ಬಾರಿಸಿ ಔಟಾದರು.

ಯಂಗ್ ವಿಕೆಟ್ ಪತನದ ಬಳಿಕ ಮತ್ತೊಂದು ತುದಿಯಲ್ಲಿ ಬೇರೂರಿ ನಿಂತಿದ್ದ ಮಿಚೆಲ್‌ಗೆ ಸರಿಯಾದ ಜತೆಯಾಟ ಸಿಗದ ಕಾರಣ ತಂಡಕ್ಕೆ ದೊಡ್ಡ ಮೊತ್ತ ಹರಿದು ಬರಲಿಲ್ಲ. ಮಿಚೆಲ್ ಏಕಾಂಗಿ ಹೋರಾಟ ನಡೆಸಿ 82 ರನ್ ಗಳಿಸಿದ್ದ ವೇಳೆ ಸ್ಲಿಪ್‌ನಲ್ಲಿ ನಿಂತಿದ್ದ ರೋಹಿತ್ ಶರ್ಮಾ ಕೈಗೆ ಸುಲಭ ಕ್ಯಾಚ್ ನೀಡಿ ವಿಕೆಟ್ ಕಳೆದುಕೊಂಡರು. ಅವರ ಈ ಬ್ಯಾಟಿಂಗ್ ಇನಿಂಗ್ಸ್‌ನಲ್ಲಿ ತಲಾ 3 ಸಿಕ್ಸರ್ ಮತ್ತು ಬೌಂಡರಿ ದಾಖಲಾಯಿತು. ಕಿವೀಸ್ ಪರ ಟಾಮ್ ಬ್ಲಂಡೆಲ್ ಮತ್ತು ಮ್ಯಾಟ್ ಹೆನ್ರಿ ಶೂನ್ಯಕ್ಕೆ ಔಟಾದರು. ವಾಷಿಂಗ್ಟನ್ ಸುಂದರ್ 81 ರನ್ ವೆಚ್ಚದಲ್ಲಿ 4 ವಿಕೆಟ್ ಕಿತ್ತರು.

ರೋಹಿತ್- ಕೊಹ್ಲಿ ಮತ್ತೆ ವಿಫಲ: 11 ವರ್ಷಗಳ ಬಳಿಕ ಮುಂಬೈಯಲ್ಲಿ ಟೆಸ್ಟ್ ಆಡಲಿಳಿದ ರೋಹಿತ್ ಈ ಪಂದ್ಯದಲ್ಲಿಯೂ ಬ್ಯಾಟಿಂಗ್ ವೈಫಲ್ಯ ಕಂಡರು. ಕೇವಲ 3 ಬೌಂಡರಿಗೆ ಸೀಮಿತರಾಗಿ 18 ರನ್ ಬಾರಿಸಿ ಮ್ಯಾಟ್ ಹೆನ್ರಿಗೆ ವಿಕೆಟ್ ಒಪ್ಪಿಸಿದರು. 16 ರನ್ ಗಳಿಸಿದ್ದ ವೇಳೆ ಮಿಲಿಯಂ ಓರ್ಕೆ ಅವರಿಂದ ಕ್ಯಾಚ್ ಕೈಚೆಲ್ಲಿ ಜೀವದಾನ ಪಡೆದರೂ ಇದರ ಲಾಭವೆತ್ತಲು ಅವರಿಂದ ಸಾಧ್ಯವಾಗಲಿಲ್ಲ. ಯಶಸ್ವಿ ಜೈಸ್ವಾಲ್ 30 ರನ್ ಗಳಿಸಿದ್ದ ವೇಳೆ ರಿವರ್ಸ್ ಸ್ವೀಪ್ ಮಾಡುವ ಯತ್ನದಲ್ಲಿ ಅಜಾಜ್ ಪಟೇಲ್ ಎಸೆತದಲ್ಲಿ ಕ್ಲೀನ್ ಬೌಲ್ಡ್ ಸಂಕಟಕ್ಕೆ ಸಿಲುಕಿದರು. ಈ ವಿಕೆಟ್ ಪತನದ ಬಳಿಕ ನೈಟ್ ವಾಚ್‌ಮ್ಯಾನ್ ಆಗಿ ಮೈದಾನಕ್ಕಿಳಿದಿದ್ದ ಮೊಹಮ್ಮದ್ ಸಿರಾಜ್(0) ಮೊದಲ ಎಸೆತದಲ್ಲೇ ಎಲ್ ಬಿಡಬ್ಲ್ಯು ಬಲೆಗೆ ಬಿದ್ದರು. ಬಳಿಕ ಬಂದ ವಿರಾಟ್ ಕೊಹ್ಲಿ ಅವರು ಮ್ಯಾಟ್ ಹೆನ್ರಿ ಎಸೆತ ಡೈರೆಕ್ಟ್ ಥ್ರೋಗೆ ರನೌಟ್ ಆದರು. ಅವರ ಗಳಿಕೆ 4 ರನ್.

ಜಡೇಜಾ ದಾಖಲೆ

ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲೇ ಭಾರತದ ಪರ ಅತಿ ಹೆಚ್ಚು ವಿಕೆಟ್ ಗಳಿಸಿದ ಬೌಲರ್‌ಗಳ ಪಟ್ಟಿಯಲ್ಲಿ ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ ಅಗ್ರ ಐದರ ಪಟ್ಟಿಗೆ ಲಗ್ಗೆ ಇಟ್ಟಿದ್ದಾರೆ. ನ್ಯೂಜಿಲೆಂಡ್ ವಿರುದ್ಧ ಮುಂಬೈಯ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮೂರನೇ ಹಾಗೂ ಅಂತಿಮ ಟೆಸ್ಟ್ ಪಂದ್ಯದಲ್ಲಿ ಜಡೇಜ ಈ ಸ್ಮರಣೀಯ ಸಾಧನೆ ಮಾಡಿದ್ದಾರೆ. ಟೀ ವಿರಾಮದ ಹೊತ್ತಿಗೆ ಮೂರು ವಿಕೆಟ್ ಗಳಿಸಿರುವ ಜಡೇಜ, ಟೆಸ್ಟ್ ಕ್ರಿಕೆಟ್‌ನಲ್ಲಿ ಈವರೆಗೆ 312 ವಿಕೆಟ್‌ಗಳನ್ನು ಗಳಿಸಿದ್ದಾರೆ. ಆ ಮೂಲಕ ಮಾಜಿ ವೇಗಿಗಳಾದ ಜಹೀರ್ ಖಾನ್ (311) ಮತ್ತು ಇಶಾಂತ್ ಶರ್ಮಾ (311) ದಾಖಲೆಯನ್ನು ಮುರಿದಿದ್ದಾರೆ. ಭಾರತದ ಪರ ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದ ಬೌಲರ್‌ಗಳ ಪಟ್ಟಿಯಲ್ಲಿ ಅನಿಲ್ ಕುಂಬ್ಳೆ (619) ಮುಂಚೂಣಿಯಲ್ಲಿದ್ದಾರೆ. ರವಿಚಂದ್ರನ್ ಅಶ್ವಿನ್ (533), ಕಪಿಲ್ ದೇವ್ (434) ಮತ್ತು ಹರಭಜನ್ ಸಿಂಗ್ (417) ಅನುಕ್ರಮವಾಗಿ ನಂತರದ ಸ್ಥಾನದಲ್ಲಿದ್ದಾರೆ. ಈ ಪೈಕಿ ಟಾಪ್ ಐದರ ಪಟ್ಟಿಯಲ್ಲಿ ನಾಲ್ವರು ಸ್ಪಿನ್ ಬೌಲರ್‌ಗಳು ಕಾಣಿಸಿಕೊಂಡಿದ್ದಾರೆ.

ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ಬೌಲರ್‌ಗಳು

- ಅನಿಲ್ ಕುಂಬ್ಳೆ: 619
- ರವಿಚಂದ್ರನ್ ಅಶ್ವಿನ್: 533★
- ಕಪಿಲ್ ದೇವ್: 434
- ಹರಭಜನ್ ಸಿಂಗ್: 417
- ರವೀಂದ್ರ ಜಡೇಜ: 312★
- ಜಹೀರ್ ಖಾನ್: 311
- ಇಶಾಂತ್ ಶರ್ಮಾ: 311
- ಬಿಷನ್ ಸಿಂಗ್ ಬೇಡಿ: 266
- ಬಿ.ಎಸ್.ಚಂದ್ರಶೇಖರ್: 242
- ಜಾವಗಲ್ ಶ್ರೀನಾಥ್: 236

ಆಸ್ಟ್ರೇಲಿಯಾ ವಿರುದ್ಧ ದೇವದತ್ತ, ಸಾಯಿ ಸುದರ್ಶನ್ ಮಿಂಚು

ಸಾಯಿಗೆ 96, ಪಡಿಕ್ಕಲ್‌ಗೆ 80 ರನ್

ಮೆಕೆ, ಆಸ್ಟ್ರೇಲಿಯಾ: ಕನ್ನಡಿಗ ದೇವದತ್ತ ಪಡಿಕ್ಕಲ್ ಮತ್ತು ಸಾಯಿ ಸುದರ್ಶನ್ ಅವರ ಅಮೋಘ ಬ್ಯಾಟಿಂಗ್ ಬಲದಿಂದ ಭಾರತ ಎ ತಂಡವು ಇಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ ಎ ಎದುರಿನ ಪಂದ್ಯದ ಎರಡನೇ ದಿನವಾದ ಶುಕ್ರವಾರ 120 ರನ್‌ಗಳ ಮುನ್ನಡೆ ಸಾಧಿಸಿದೆ.

ಮೊದಲ ಇನಿಂಗ್ಸ್‌ನಲ್ಲಿ ಭಾರತ ಎ ತಂಡವು ಕೇವಲ 107 ರನ್‌ಗಳಿಗೆ ಆಲೌಟ್ ಆಗಿತ್ತು. ಅದಕ್ಕುತ್ತರವಾಗಿ ಆಸ್ಟ್ರೇಲಿಯಾ ಎ ತಂಡವು 62.4 ಓವರ್‌ಗಳಲ್ಲಿ 195 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಭಾರತ ಎ ತಂಡದ ಮುಕೇಶ್ ಕುಮಾರ್ (24ಕ್ಕೆ6) ಮತ್ತು ಪ್ರಸಿದ್ಧ ಕೃಷ್ಣ (59ಕ್ಕೆ3) ಅವರ ಬೌಲಿಂಗ್ ಪರಿಣಾಮಕಾರಿಯಾಗಿತ್ತು. ಆತಿಥೇಯ ತಂಡವು 88 ರನ್‌ಗಳ ಮುನ್ನಡೆ ಪಡೆಯಿತು.

ಇದಕ್ಕುತ್ತರವಾಗಿ ಎರಡನೇ ಇನಿಂಗ್ಸ್‌ನಲ್ಲಿ ಭಾರತ ಎ ತಂಡದ ಆರಂಭ ಚೆನ್ನಾಗಿರಲಿಲ್ಲ. ಆರಂಭಿಕ ಜೋಡಿ ಋತುರಾಜ್ ಗಾಯಕವಾಡ (5 ರನ್) ಮತ್ತು ಅಭಿಮನ್ಯು ಈಶ್ವರನ್ (12 ರನ್) ಅವರು ಬೇಗನೆ ಔಟಾದರು. ಆಗ ತಂಡದ ಮೊತ್ತವು ಕೇವಲ 30 ರನ್‌ಗಳಾಗಿದ್ದವು. ಮೊದಲ ಇನಿಂಗ್ಸ್‌ನಲ್ಲಿ ಋತುರಾಜ್ ಸೊನ್ನೆ ಸುತ್ತಿದ್ದರು. ಈಶ್ವರನ್ 7 ರನ್ ಗಳಿಸಿದ್ದರು. ಆಗ ತಂಡವು ಮೂರಂಕಿ ಮೊತ್ತ ಗಳಿಸಲು ನೆರವಾಗಿದ್ದ ಸಾಯಿ ಸುದರ್ಶನ್ ಮತ್ತು ದೇವದತ್ತ ಮತ್ತೊಮ್ಮೆ ಮಿಂಚಿದರು. ಎರಡನೇ ಇನಿಂಗ್ಸ್‌ನಲ್ಲಿ ಅವರಿಬ್ಬರೂ ಮುರಿಯದ 3ನೇ ವಿಕೆಟ್ ಜೊತೆಯಾಟದಲ್ಲಿ 178 ರನ್ ಸೇರಿಸಿದರು. ಇದರಿಂದಾಗಿ ದಿನದಾಟದ ಅಂತ್ಯಕ್ಕೆ ತಂಡವು 64 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 208 ರನ್ ಗಳಿಸಿತು.

ಚೆಂಡು ವೇಗವಾಗಿ ಪುಟಿದೇಳುವ ಪಿಚ್‌ನಲ್ಲಿ ಬೆಂಗಳೂರು ಹುಡುಗ ದೇವದತ್ತ ಆತ್ಮವಿಶ್ವಾಸ ಮತ್ತು ತಾಳ್ಮೆ ಮೇಳೈಸಿದ ಆಟವಾಡಿದರು. 167 ಎಸೆತಗಳಲ್ಲಿ 80 ರನ್ ಗಳಿಸಿದ್ದಾರೆ. ಅದರಲ್ಲಿ ಐದು ಬೌಂಡರಿಗಳಿವೆ. ಅವರಿಗೆ ಜೊತೆಗೂಡಿದ ಸುದರ್ಶನ್ ವೇಗವಾಗಿ ರನ್ ಗಳಿಸಲು ಆದ್ಯತೆ ನೀಡಿದರು. ಒಂಬತ್ತು ಬೌಂಡರಿ ಬಾರಿಸಿದರು. 185 ಎಸೆತಗಳಿಂದ 96 ರನ್ ಗಳಿಸಿ, ಶತಕದ ಸನಿಹ ಬಂದು ನಿಂತಿದ್ದಾರೆ. ಇಬ್ಬರೂ ಕ್ರೀಸ್‌ನಲ್ಲಿದ್ದಾರೆ.

ಸಂಕ್ಷಿಪ್ತ ಸ್ಕೋರು:

ಮೊದಲ ಇನಿಂಗ್ಸ್: ಭಾರತ ಎ: 47.4 ಓವರ್‌ಗಳಲ್ಲಿ 107, ಆಸ್ಟ್ರೇಲಿಯಾ ಎ: 62.4 ಓವರ್‌ಗಳಲ್ಲಿ 195 (ಟಾಡ್ ಮರ್ಫಿ 33, ಮುಕೇಶ್ ಕುಮಾರ್ 46ಕ್ಕೆ6, ಪ್ರಸಿದ್ಧ ಕೃಷ್ಣ 59ಕ್ಕೆ3)
ಎರಡನೇ ಇನಿಂಗ್ಸ್: ಭಾರತ ಎ: 64 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 208 (ಸಾಯಿ ಸುದರ್ಶನ್ ಬ್ಯಾಟಿಂಗ್ 96, ದೇವದತ್ತ ಪಡಿಕ್ಕಲ್ ಬ್ಯಾಟಿಂಗ್ 80)

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಸುಸ್ಥಿರ ಹಾಗೂ ಜಲಸಮೃದ್ಧ ಕರ್ನಾಟಕದತ್ತ ದಿಟ್ಟ ಹೆಜ್ಜೆ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯ ಮಂತ್ರಿಗಳು

ನಾಡಿನ ಸಮಸ್ತ ಜನತೆಗೆ ದೀಪಾವಳಿ ಹಾಗೂ ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಶ್ರೀ ಎನ್. ಎಸ್ ಭೋಸರಾಜು ಅವರು ಅಧಿಕಾರಿಗಳೊಂದಿಗೆ ಇಲಾಖೆಯ ಕಾಮಗಾರಿಗಳ ಪರಿಶೀಲನೆ ನಡೆಸುತ್ತಿರುವುದು


1690 ಕೋಟಿ ರೂ. ವೆಚ್ಚದ ಕಾಮಗಾರಿಗಳು

ರಾಯಚೂರು ಜಿಲ್ಲೆಯ ಚಿಕಲಪರ್ವಿ ಹತ್ತಿರದ ತುಂಗಭದ್ರಾ ನದಿಗೆ ಬಿ.ಸಿ.ಬಿ ನಿರ್ಮಾಣ, ಮಾನ್ವಿ ತಾಲ್ಲೂಕಿನ ಕುರ್ಡಿ ಕೆರೆ ನೀರು ತುಂಬಿಸುವ ಯೋಜನೆ, ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲ್ಲೂಕು ಕೆಸ್ತೂರು ಕೊಪ್ಪಲು ಏತ ನೀರಾವರಿ ಯೋಜನೆ, ನಂಜನಗೂಡು ತಾಲ್ಲೂಕಿನ ದೇವನೂರು ಗ್ರಾಮದ ಬಳಿ ಏತ ನೀರಾವರಿ, ಚಿತ್ತಾಪುರ ತಾಲ್ಲೂಕಿನ ಕೆರೆ ತುಂಬಿಸುವ ಯೋಜನೆ, ಸೊರಬ ತಾಲ್ಲೂಕಿನ ವರದ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ ಬ್ಯಾರೇಜ್, ಜೇವರ್ಗಿ ತಾಲ್ಲೂಕಿನಲ್ಲಿ ಬಾಂದಾರು ಹಾಗೂ ಕೆರೆ ತುಂಬಿಸುವ ಕಾಮಗಾರಿ ಮತ್ತು ಕುಕನೂರು ಹಾಗೂ ಯಲಬುರ್ಗಾ ತಾಲ್ಲೂಕಿನಲ್ಲಿ ಕೆರೆ/ ಬ್ರಿಡ್ಜ್–ಕಂ–ಬ್ಯಾರೇಜ್ ಯೋಜನೆಗಳು, ಮಧುಗಿರಿ, ಕೊರಟಗೆರೆ ಹಾಗೂ ಸೇಡಂ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆ ಸೇರಿದಂತೆ 1690 ಕೋಟಿ ರೂಪಾಯಿ ವೆಚ್ಚದಲ್ಲಿ ವಿವಿಧ ಯೋಜನೆಗಳಿಗೆ ಚಾಲನೆ ನೀಡಲಾಗಿದೆ.

579 ಕೆರೆಗಳಿಗೆ ಸಂಸ್ಕರಿಸಿದ ನೀರು

ಬೆಂಗಳೂರಿನಲ್ಲಿ ಉತ್ಪಾದನೆಯಾಗುವ ತ್ಯಾಜ್ಯ ನೀರನ್ನು ಎರಡು ಹಂತದಲ್ಲಿ ಸಂಸ್ಕರಿಸಲಾಗುತ್ತದೆ. ಈ ಸಂಸ್ಕರಿಸಿದ ನೀರನ್ನು ಹೆಚ್.ಎನ್ ವ್ಯಾಲಿ ಹಾಗೂ ಕೆ.ಸಿ ವ್ಯಾಲಿ ಯೋಜನೆಗಳ ಮುಖಾಂತರ ಬಯಲುಸೀಮೆಯ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಬೆಂಗಳೂರು ಗ್ರಾಮಾಂತರ ಮತ್ತು ಸುತ್ತಮುತ್ತಲಿನ ಒಟ್ಟು 579 ಕೆರೆಗಳಿಗೆ ತುಂಬಿಸಲಾಗುತ್ತಿದೆ. ಈ ಯೋಜನೆಯಿಂದಾಗಿ ಯಾವುದೇ ಶಾಶ್ವತ ನೀರಿನ ಮೂಲವಿಲ್ಲದೇ ಅಂತರ್ಜಲ ಕುಸಿತದಿಂದ ಬಳುತ್ತಿದ್ದ ಜಿಲ್ಲೆಗಳ ನೀರಿನ ಬವಣೆಯನ್ನು ಸುಧಾರಿಸುವಲ್ಲಿ ಯಶಸ್ವಿಯಾಗಿದ್ದೇವೆ. ಈ ಯೋಜನೆಯಿಂದಾಗಿ ಬಯಲುಸೀಮೆಯ ಪ್ರದೇಶಗಳಲ್ಲಿ ಅಂತರ್ಜಲ ಮಟ್ಟವನ್ನು ಗಣನೀಯವಾಗಿ ಹೆಚ್ಚಿಸುವಲ್ಲಿ ಸಫಲರಾಗಿದ್ದೇವೆ.

ರಾಜ್ಯವನ್ನು ಸಮೃದ್ಧಗೊಳಿಸುತ್ತಿರುವ ಏತ ನೀರಾವರಿ ಯೋಜನೆಗಳು

ಸಣ್ಣ ನೀರಾವರಿ ಇಲಾಖೆಯಿಂದ ಕರ್ನಾಟಕ ರಾಜ್ಯಾದ್ಯಂತ ಹರಿಯುವ ಪ್ರಮುಖ ನದಿಗಳಿಂದ ನೀರನ್ನು ಕೆರೆಗಳಿಗೆ ಹರಿಸುವ ಏತ ನೀರಾವರಿ ಯೋಜನೆಗಳನ್ನ ಕೈಗೊಂಡಿದ್ದೇವೆ. ಈ ಏತ ನೀರಾವರಿ ಯೋಜನೆಗಳ ಮೂಲಕ ನಮ್ಮ ಇಲಾಖೆಯು ನದಿಗಳಿಂದ ನೀರನ್ನು ಟ್ಯಾಪ್ ಮಾಡಿ ಕೆರೆಗಳಿಗೆ ಸರಬರಾಜು ಮಾಡುವ ಮೂಲಕ ಅಂತರ್ಜಲ ಮಟ್ಟವನ್ನು ಹೆಚ್ಚಿಸುತ್ತಿದೆ, ಈ ಏತ ನೀರಾವರಿ ಯೋಜನೆಗಳು ಕೃಷಿ ಕ್ಷೇತ್ರದ ಉತ್ಪಾದಕತೆಯನ್ನು ಹೆಚ್ಚಿಸುವುದರ ಜೊತೆಗೆ ರಾಜ್ಯವನ್ನು ಜಲಸಮೃದ್ಧಿಗೊಳಿಸುವಲ್ಲಿ ಪ್ರಮುಖ ಕೊಡುಗೆ ನೀಡಿವೇ.

ಎಸ್‌ಸಿಪಿ – ಟಿಎಸ್‌ಪಿ ಯೋಜನೆ ಅಡಿಯಲ್ಲಿ 1500ಕ್ಕೂ ಹೆಚ್ಚು ಫಲಾನುಭವಿಗಳ ಜಮೀನಿಗೆ ಬೋರ್‌ವೆಲ್

ಪ್ರಸಕ್ತ ಸಾಲಿನ ಹಣಕಾಸು ವರ್ಷದಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಎಸ್‌ಸಿಪಿ ಹಾಗೂ ಎಸ್‌ಟಿಸಿಪಿ ಯೋಜನೆಯ ಅಡಿಯಲ್ಲಿ 1500 ಕ್ಕೂ ಹೆಚ್ಚು ಫಲಾನುಭವಿಗಳ ಜಮೀನಿನಲ್ಲಿ ಕೊಳವೆಬಾವಿಗಳನ್ನು ಅಳವಡಿಸಲಾಗಿದೆ. ಈ ಮೂಲಕ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದ ರೈತರಿಗೆ ಹೆಚ್ಚಿನ ಕೃಷಿ ಉತ್ಪಾದನೆಗೆ ಹಾಗೂ ಆರ್ಥಿಕ ಲಾಭದ ಮೂಲಕ ಉತ್ತಮ ಜೀವನೋಪಾಯಕ್ಕೆ ಅನುವು ಮಾಡಿಕೊಡುವಲ್ಲಿ ಯಶಸ್ವಿಯಾಗಲಿದ್ದೇವೆ.

200 ಕೋಟಿ ರೂ ಮೊತ್ತದ ಕಾಮಗಾರಿಗಳನ್ನು ಕೈಗೆತ್ತಿಗೊಳ್ಳಲಾಗಿದೆ

ಕುಡಿಯುವ ನೀರು, ಕೃಷಿ ಹಾಗೂ ಕೈಗಾರಿಕೆಗಳಿಗೆ ನೀರನ್ನು ಸಮರ್ಪಕವಾಗಿ ಪೂರೈಸಲು ಹಾಗೂ ಅಂತರ್ಜಾಲ ಮಟ್ಟವನ್ನು ಹೆಚ್ಚಿಸಲು ಕೆರೆಗಳ ಅಭಿವೃದ್ಧಿ, ಚೆಕ್ ಡ್ಯಾಂ ಮತ್ತು ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಗಳನ್ನು 200 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ರಾಘವನ್, ಕೆ.ಇ.ಎಸ್
ಸರ್ಕಾರದ ಕಾರ್ಯದರ್ಶಿಗಳು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ